ಉಪಾಧ್ಯಕ್ಷರು:- ನಾಳೆ ಪ್ರಸ್ತಾಪ ಮಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ:- ನಾಳೆ ಪ್ರಸ್ತಾಪ ಮಾಡುತ್ತೇವೆ.

(7) ವಿತ್ತೀಯ ಕಾರ್ಯಕಲಾಪ

1996-97ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರಿದ ಚರ್ಚೆ)

+ ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್):- ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ, ಸಾಮಾನ್ಯ ಆಡಳಿತ ವ್ಯವಸ್ಥೆಯ ಹಾಗೂ ವಿಧಾನಮಂಡಲದ ಬಗ್ಗೆ ಮಾತನಾಡುತ್ತಾ, ಈ ಸಂದರ್ಭದಲ್ಲಿ ನ್ಯಾಯ ಪರಿಪಾಲನೆ, ನ್ಯಾಯಾಂಗದ ಬಗ್ಗೆಯೂ ಕೂಡ ಕೆಲವೊಂದು ವಿಷಯಗಳನ್ನು ಮಾತನಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇವತ್ತು ಈ ನ್ಯಾಯಾಂಗ ವ್ಯವಸ್ಥೆಯಲ್ಲಿ . . .

ಶ್ರೀ ವಾಟಾಳ್ ನಾಗರಾಜ್:- ಬರೀ ಹನ್ನೆರಡು ಜನ ಮಂತ್ರಿಗಳಿದ್ದಾರೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ:- ಇದಕ್ಕೆ ಯಾರು ಮನ್ನಣೆ ಕೊಡುತ್ತಾರೆ ಎಂಬುದು ನಮಗೆ ಗೊತ್ತಿಲ್ಲ 'ಏನು ಮಾಡುತ್ತೀರಿ' ಎನ್ನುವುದು ನಮಗೆ ಅರ್ಥವಾಗುವುದಿಲ್ಲ. ಅಲ್ಲಿ ಬೆಲ್ ಹೊಡೆದ ಕೂಡಲೇ ನಾವು ಓಡಿ ಬರಬೇಕು; ನೀವು ವರೆಂಡಾದಲ್ಲೇ ಇರುತ್ತೀರಿ . . .

ಶ್ರೀ ವಾಟಾಳ್ ನಾಗರಾಜ್:- ಕೊನೆಗೆ ಒಂದು ಇಪ್ಪತ್ತೈದು ಜನವಾದರೂ ಕುಳಿತುಕೊಳ್ಳಿ ಸ್ವಾಮಿ ಇದೇನಿದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅಲ್ಲ, ಮಂತ್ರಿಗಳೇ, ನಲವತ್ತೈದು ಜನರಿದ್ದೀರಿ. ಇಲ್ಲಿ ಹನ್ನೆರಡು ಜನರಿದ್ದಾರೆ ಏನು ಚರ್ಚೆ ಮಾಡುವುದು? ನಾವು ಸುಮ್ಮನೇ ಕುಳಿತುಕೊಳ್ಳುವುದರಲ್ಲಿ ಏನಾದರೂ ಅರ್ಥವಿದೆಯೇ?

ಉಪಾಧ್ಯಕ್ಷರು:- ಆಯಿತು; ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್:- ಸನ್ಮಾನ್ಯ ಉಪಾಧ್ಯಕ್ಷರೇ, ನಿನ್ನೆಯೂ ತಮ್ಮ ಎದುರಿಗೆ ನಾವೆಲ್ಲರೂ ಹೇಳಿದೆವು. . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅಲ್ಲ, ಇದು ಪ್ರತಿದಿವಸವೂ ಹೀಗಾದರೆ ನಾವು ಕೂಡ ಬಹಿಷ್ಕಾರ ಹಾಕಿ ಹೊರಗಡೆ ಹೋಗಿಬಿಡುತ್ತೇವೆ ಅಷ್ಟೆ.

ಶ್ರೀಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು):- ತಾವು ಒಂದು ಕೆಲಸ ಮಾಡಿ, ನಾವ್ಯಾರೂ ಮಾತನಾಡುವುದಿಲ್ಲ ಓಟಿಗೆ ಹಾಕಿಬಿಡಿ. ನಾನು ಒಬ್ಬ ವಿರೋಧ ಪಕ್ಷದವನಾಗಿ ಡಿಮ್ಯಾಂಡ್ ಮಾಡುತ್ತಿದ್ದೇನೆ. ಬೆಲ್ ಹಾಕಿಸಿ ಸರ್, ನೀವು ಡಿಮ್ಯಾಂಡ್ ಅನ್ನು ಓಟಿಗೆ ಹಾಕಿ. ಏಕೆಂದರೆ ಅವರಿಗೆ ಬೇಕಾದ ಇಪ್ಪತ್ತಮೂರು ಜನ ಇಲ್ಲದೆ ಇದ್ದರೆ ಇನ್ನು ಮೇಲೆ ನಾವು ಸಹಕಾರವನ್ನು ಕೊಡುವುದಕ್ಕೆ ಸಿದ್ದವಿಲ್ಲ. ನಾವು ಪ್ರೆಸ್ ಮಾಡುತ್ತಿದ್ದೇವೆ ಓಟಿಗೆ ಹಾಕಿ ಚರ್ಚೆಯ ಅಗತ್ಯವಿಲ್ಲ.

ಉಪಾಧ್ಯಕ್ಷರು:- ಇಲ್ಲ, ಈಗ ಸಚೇತಕರು ಕರೆದುಕೊಂಡು ಬರುವುದಕ್ಕೆ ಹೋಗಿದ್ದಾರೆ, ತಾವು ದಯಮಾಡಿ ಕೇಳಿ, ಈಗ ಬರುತ್ತಿದ್ದಾರೆ. . .

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಈಗ ಜವಾಬ್ದಾರಿ ಸ್ಥಾನದಿಂದ ಹೇಳುತ್ತಿದ್ದೇವೆ, ನಾವು ಚರ್ಚೆ ಮಾಡುವುದಿಲ್ಲ ನಾನು ಓಟಿಂಗ್‌ಗೆ ಪ್ರೆಸ್ ಮಾಡುತ್ತಿದ್ದೇನೆ. ಸರ್ಕಾರಕ್ಕೆ ಕಿಂಚಿತ್ತು ಸ್ವಾಭಿಮಾನ-ವಿಲ್ಲ, ಕುಳಿತುಕೊಳ್ಳುವುದಕ್ಕೆ ತಯಾರಿಲ್ಲ. . .

ಉಪಾಧ್ಯಕ್ಷರು:- ಈಗ ನಾನು ಅವರಿಗೆ ಒತ್ತಾಯ ಮಾಡಿ ಹೇಳಿದ್ದೇನೆ, ಬರುತ್ತಾರೆ, ನಾಗೇ-ಗೌಡರೇ, ತಾವು ಮಂತ್ರಿಗಳಿದ್ದೀರಿ ಹೇಳಿರಿ. . .

(ಗೊಂದಲ)

ಉಪಾಧ್ಯಕ್ಷರು:- ಇಲ್ಲ, ಚೀಫ್ ವಿಪ್ ಈಗಾಗಲೇ ಹೇಳಿದ್ದೇವೆ, ಚೀಫ್ ವಿಪ್ ಈಗಾಗಲೇ ಹೋಗಿದ್ದಾರೆ, ಮತ್ತೆ ಮಂತ್ರಿಗಳು ಬಂದರು, ಸದಸ್ಯರು ಬರುತ್ತಿದ್ದಾರೆ, ಕುನ್ನೂರ್‌ರವರು ತಾವು ಮಾತನ್ನು ಮುಂದುವರೆಸಿ, ತಾವು ದಯವಿಟ್ಟು ಸಹಕರಿಸಬೇಕು. . .

(ಗೊಂದಲ)

ಉಪಾಧ್ಯಕ್ಷರು:- ತಾವು ಹಿರಿಯ ಸದಸ್ಯರೆಲ್ಲಾ ರೀತಿ ಮಾಡಿದರೆ ಹೇಗೆ? ಡಿಮ್ಯಾಂಡ್ ಮೇಲೆ ಹೇಳುವುದು ಬಹಳ ಇದೆ. ತಾವು ಹೀಗೆಲ್ಲಾ ಹೇಳಿದರೆ ಹೇಗೆ?

ಶ್ರೀ ವೈ. ರಾಮಕೃಷ್ಣ:- ಸ್ವಾಮಿ, ವಿಧಾನಸಭೆಯಲ್ಲಿ ಇಪ್ಪತ್ತು ನಿಮಿಷ ಬೆಲ್ ಹೊಡೆದರು; ಹನ್ನೊಂದು ಜನ ಬರುತ್ತಾರೆ; ಒಂದು ದಿವಸವಾದರೆ ಅಥವಾ ಎರಡು ದಿವಸವಾದರೆ ಕ್ಷಮಿಸ-ಬಹುದು; ಪ್ರತಿನಿತ್ಯವೂ ಇದೇ ಕೆಲಸವಾದರೆ ನಾವೇನು ಮಾಡುವುದು?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್:- ಇಡೀ ರಾಜ್ಯದಿಂದ ಇಲ್ಲಿ ಏನೋ ಗಂಭೀರವಾಗಿ ನಡೆ-ಯುತ್ತದೆಂದು ಆ ಮಕ್ಕಳು ಇಲ್ಲಿ ನೋಡುವುದಕ್ಕೆ ಬಂದು ಕುಳಿತಿದ್ದಾರೆ; ಅವರಿಗೆ ಏನಾಗುತ್ತದೆ ಹೇಳಿ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಈ ಪ್ರಸ್ತಾಪ ಇದು ಮೊದಲನೆಯದಲ್ಲ ಅನೇಕ ಸಾರಿ ಹೇಳಿ-ದ್ದೇವೆ, ಮತ್ತು ತಮ್ಮ ಮೂಲಕ ಸಂಸದೀಯ ಸಚಿವರಿಗೆ ಅನೇಕ ಬಾರಿ ಹೇಳಿದರೂ ಕೂಡ ಇದು ಇದೇ ರೀತಿ ಪರಿಪಾಠವಾಗುವುದಾದರೆ, ಈ ಸದನಕ್ಕೂ ಗೌರವ ಕೊಡದೆ ಇದ್ದರೆ ಇದು ಒಳ್ಳೆಯದಲ್ಲ; ಇದು ಒಳ್ಳೆಯ ಸಂಪ್ರದಾಯವಲ್ಲ. ಇಲ್ಲವೆಂದರೆ ತಾವು ಸದನವನ್ನು ಮುಂದಕ್ಕೆ ಹಾಕಿ, ಇಲ್ಲವೆಂದರೆ ಬೇಡಿಕೆಗಳನ್ನು ಮತದಾನಕ್ಕೆ ಹಾಕಿ, ಇದೇನಿದು? ಇದು ಈ ರೀತಿಯಾದರೆ ಬೇಜವಾಬ್ದಾರಿ. ಮುಖ್ಯ ಮಂತ್ರಿಗಳಿಗೆ ಅನಾರೋಗ್ಯ ಎನ್ನುವುದನ್ನು ಒಪ್ಪುತ್ತೇನೆ, ಸಂತೋಷ ನಮಗೆ ಮುಖ್ಯಮಂತ್ರಿಗಳ ಬಗ್ಗೆ

ತಕರಾರಿಲ್ಲ, ಮುಖ್ಯಮಂತ್ರಿಗಳು ಅನಾರೋಗ್ಯದಲ್ಲಿದ್ದಾರೆ. ಅವರ ಬಗ್ಗೆ ನಮ್ಮದೇನೂ ಇಲ್ಲ, ಆದರೆ ಮಿಕ್ಕ ಮಂತ್ರಿಗಳು ಬರುವುದಕ್ಕೆ ಏನಾಗಿದೆ? ಏನು ಉದ್ದೇಶ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಇದನ್ನು ಪದೇ ಪದೇ ಎಷ್ಟು ಸಲ ಕೇಳು-ವುದು? ಏಕೆಂದರೆ, ಏನೋ ಒಂದು ಸಲ ಎರಡು ಸಲವಾದರೆ ಸರಿ. ಆದರೆ ಈ ಅಧಿವೇಶನಲ್ಲಂತೂ ಪ್ರತಿದಿವಸ ಮೂವತ್ತು ನಿಮಿಷ ಬೆಲ್ ಹಾಕಿದರೂ ಕೂಡ ಕೋರಂ ಆಗುವುದಿಲ್ಲ, ಆಮೇಲೆ ಅನೇಕ ಸಚಿವರಿರುವುದಿಲ್ಲ, ಕೋರಂಗೆ ಬೇಕಾದಷ್ಟು ಸದಸ್ಯರು ಇರುವುದಿಲ್ಲ, ಅವರಿಗೋಸ್ಕರ ನೀವು ನಾವು ಕಾಯಬೇಕೆಂದರೆ, ಇದರಿಂದ ಏನು ಸಂದೇಶ ಹೋಗುತ್ತದೆ, ಜನ ಏನು ತಿಳಿದುಕೊಳ್ಳುತ್ತಾರೆ, ಈ ಸದನದ ಬಗ್ಗೆ ಎಷ್ಟು ಹಗುರವಾಗಿ ತಿಳಿದುಕೊಳ್ಳುತ್ತಾರೆ ಎನ್ನುವುದು ತಮಗೆ ಬಿಟ್ಟಿದ್ದು. ಆದರೆ ನಾವು ಏನು ಮಾಡಬಹುದು? ಈ ರೀತಿಯಾದರೆ ನಮಗ್ಯಾರಿಗೂ ಗೌರವ ಬರುವುದಿಲ್ಲ, ಸರ್ಕಾರಕ್ಕೂ ಕೂಡ ಒಳ್ಳೆಯದಲ್ಲ. ಇದನ್ನು ಅವರೇ ಸ್ವತಃ ಒಪ್ಪಿಕೊಳ್ಳಬೇಕು, ಈ ರೀತಿಯಾಗಲು ಇನ್ನು ಮುಂದಾದರೂ ಅವರು ಅವಕಾಶ ಕೊಡಬಾರದು, ನಾವು ಇದನ್ನು ಹತ್ತು ಸಲ ಹೇಳಿದ್ದೇವೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಊಟಕ್ಕೆಂದು ಸದನವನ್ನು ಮುಂದೂಡಿದಂಥ ಸಂದರ್ಭದಲ್ಲಿ ಬೆಲ್ ಹಾಕಿದೆ. ಕೆಲವು ಸಂದರ್ಭಗಳಲ್ಲಿ ಊಟಕ್ಕೆ ಹೋಗುತ್ತಾರೆ ಬರುತ್ತಾರೆ, ಸ್ವಲ್ಪ ತಡವಾಗಿದೆ ಇಲ್ಲವೆಂದು ಹೇಳು-ವುದಿಲ್ಲ. ಈಗ ನಡೆಯುತ್ತಾ ಇರತಕ್ಕಂಥ ಸಂಪ್ರದಾಯವಂತೂ ಸರಿಯಲ್ಲ. ಈ ಸಂಪ್ರದಾಯವನ್ನು ಮುಂದುವರೆಸುವುದೂ ಸರಿಯಲ್ಲ. ನಮ್ಮ ಹಳೆಯ ಸಂಪ್ರದಾಯಗಳು ಯಾವುದಿತ್ತೋ, ಬಹುಶಃ ಅವುಗಳನ್ನು ಮುಂದುವರೆಸಿಕೊಂಡು ಹೋಗಲೇ ಬೇಕಾಗಿರತಕ್ಕಂಥದ್ದು, ಬಹುಶಃ ನೀವು ಎತ್ತಿರ-ತಕ್ಕಂಥ ವಿಚಾರವನ್ನು ನಾನೂ ಕೂಡ ಗಮನಿಸಿದ್ದೇನೆ. ಬಹುಶಃ ಈ ರೀತಿ ಆಗದೇ ಇರತಕ್ಕಂಥ ರೀತಿ, ಕೆಟ್ಟ ಸಂಪ್ರದಾಯ ಮುಂದುವರೆಯದಂತೆ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಎಷ್ಟು ಸಲ ಈ ರೀತಿ ಹೇಳಿದ್ದಾರೆ. . .

ಶ್ರೀ ಎಂ.ಸಿ. ನಾಣಯ್ಯ:- ಈಗ ಹೇಳಿದ್ದೇನೆ, ಇನ್ನು ಮುಂದೆ ನೋಡೋಣ; ಈಗಂತೂ ಇದು ಕೆಟ್ಟ ಸಂಪ್ರದಾಯ.

ಶ್ರೀ ಜಿ.ವಿ. ರಾಮರೆಡ್ಡಿ:- ಹಲವಾರು ಸಲ ಈ ಸದನಕ್ಕೆ ಅದೇ ಆಶ್ವಾಸನೆಯನ್ನು ಕೊಟ್ಟಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ:- ನೀನು ಹೇಳಿದ ಮೇಲೆ ಒಪ್ಪಿಕೊಂಡುಬಿಟ್ಟಿವಲ್ಲಾ, ಈ ಹೇಳಿದ್ದುದು ಒಪ್ಪಿಗೆಯಾದ ಮೇಲೆ ಮತ್ತೆ ಏತಕ್ಕೆ?

ಶ್ರೀ ವಾಟಾಳ್ ನಾಗರಾಜ್:- ನಾಣಯ್ಯನವರ ಮಾತಿನ ಬಗ್ಗೆ ಈಗ ನಾವು ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಇದೇ ಮುಂದುವರೆದರೆ ಪ್ರತಿಭಟನೆಗೋಸ್ಕರ ನಾವೆಲ್ಲಾ ಈ ಕಡೆ ಬಂದು ಕುಳಿತುಕೊಳ್ಳುತ್ತೇವೆ.

ಶ್ರೀ ಎಂ.ಸಿ. ನಾಣಯ್ಯ:- ಸಭಾಧ್ಯಕ್ಷರೆ, ವಾಟಾಳ್ ನಾಗರಾಜ್‌ರವರಿಗೆ ಈ ರೀತಿ ಒಂದು ಕಾಲ ಬಂದರೂ ಬರಲಿ, ಅದನ್ನು ನಾನು ಆತ್ಮೀಯತೆಯಿಂದ ಸ್ವಾಗತ ಮಾಡುತ್ತೇನೆ.

ಶ್ರೀ. ಮಂಜುನಾಥ ಸಿ. ಕುನ್ನೂರು:- ನ್ಯಾಯಾಂಗ ಇಲಾಖೆಯ ಬಗ್ಗೆ ಕೆಲವೊಂದು ಮಾತು-ಗಳನ್ನು ಹೇಳುವುದಕ್ಕೆ ನಾನು ಇಚ್ಛಿಪಡುತ್ತಿದ್ದೇನೆ. ನಾನು ಈ ಅಂಕಿಅಂಶಗಳನ್ನು ನೋಡಿದಾಗ ಈ ರಾಜ್ಯದಲ್ಲಿ ಸುಮಾರು 12,33,448 ಮೊಕದ್ದಮೆಗಳು ಬಾಕಿ ಇವೆ ಎನ್ನುವುದನ್ನು ನೋಡಿದಾಗ ಆದಷ್ಟು ಬೇಗನೆ ಇದನ್ನು ನಿಕಾಲಿಯಾಗುವಂತೆ ಪ್ರಯತ್ನ ಮಾಡತಕ್ಕಂಥದ್ದು ಸರ್ಕಾರದ ಆದ್ಯ-ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಇವತ್ತು ಸಾಮಾನ್ಯ ಜನರು, ಈ ನಮ್ಮ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ justice delayed is justice denied, ಎನ್ನುವಂತೆ ಇವತ್ತು ವಿಶ್ವಾಸವನ್ನು ಕಳೆದುಕೊಳ್ಳ-ತಕ್ಕಂಥ ಸಂದರ್ಭ ಬರುತ್ತಿದೆ. ಆದಕಾರಣ, ಆದಷ್ಟು ತೀವ್ರಗತಿಯಲ್ಲಿ ಇವನ್ನು ಮುಗಿಸತಕ್ಕ ಒಂದು ಪ್ರಯತ್ನ ಮಾಡುವುದು ಅತಿ ಅವಶ್ಯಕ ಇದೆ. ಇವತ್ತು ನಮ್ಮ ನ್ಯಾಯಾಂಗ ಇಲಾಖೆಯಲ್ಲಿ ಇವತ್ತು ನ್ಯಾಯಾಧೀಶರ ವಸತಿಗೃಹಗಳು ಮತ್ತು ನ್ಯಾಯಾಲಯಗಳ ಕಟ್ಟಡಗಳು, ಅದರ ಬಗ್ಗೆಯೂ ಕೂಡ ತಾವು ಕೇವಲ 6,50,13,000 ರೂಪಾಯಿಗಳ ಅನುದಾನವನ್ನು ಇಟ್ಟಿದ್ದು ಬಹಳ ಕಡಿಮೆಯಾಗು-ತ್ತದೆ. ಈ ದಿಸೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಎಲ್ಲಿ ನ್ಯಾಯಾಲಯಗಳಿದ್ದಾವೋ ಅಲ್ಲಿ ಇವತ್ತು ಈ ನ್ಯಾಯಾಧೀಶರ ವಸತಿಗೃಹಗಳಿಗಾಗಿ, ಅವರು ಉಳಿದ ಅಧಿಕಾರಿಗಳಿಗಿಂತ ವಿಭಿನ್ನ ಅಧಿ-ಕಾರಿಗಳಾಗಿರುವುದರಿಂದ ಅವರಿಗೆ ಅವರದೇ ಆದಂತ ಸ್ವಂತ ಕಟ್ಟಡಗಳ ಅವಶ್ಯಕತೆ ಇರುವುದರಿಂದ ಅದಕ್ಕೆ ಹೆಚ್ಚಿನ ಅನುದಾನವನ್ನು ಇವತ್ತು ಕೊಡತಕ್ಕಂಥ ಒಂದು ವ್ಯವಸ್ಥೆಯಾಗಬೇಕು. ಇವತ್ತು ನ್ಯಾಯಾಲಯಗಳ ಕಟ್ಟಡಗಳ ಬಗ್ಗೆ ಈ ರಾಜ್ಯದಲ್ಲಿ ಸುಮಾರು ನಲವತ್ತಾರು ಕಟ್ಟಡಗಳನ್ನು ತಾವು ಕಟ್ಟುವುದಕ್ಕೆ ತೆಗೆದುಕೊಂಡಿದ್ದೀರಿ; ಇದರಲ್ಲಿ ಇನ್ನೂ ಕೆಲವು ಹೆಚ್ಚಿನ ಕಟ್ಟಡಗಳನ್ನು ತಾವು ತೆಗೆದು-ಕೊಳ್ಳಬೇಕು. ನಮ್ಮ ಮತಕ್ಷೇತ್ರದಲ್ಲಿ ಈಗಾಗಲೇ ಮುನ್ಸೀಫ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಪ್ರಾರಂಭವಾಗಿ ಸುಮಾರು ಮೂರು ವರ್ಷಗಳಾದವು; ಅಲ್ಲಿಯೂ ಕೂಡ ಕಟ್ಟಡದ ಅವಶ್ಯಕತೆ ಇದೆ. ಆ ಕಟ್ಟಡಕ್ಕೆ ಬೇಕಾಗತಕ್ಕಂಥ ಜಮೀನನ್ನು ಒದಗಿಸಬೇಕಾಗುತ್ತದೆ. ಆ ಕಾರಣದಿಂದ ಇವತ್ತು ಹೆಚ್ಚು ಮುನ್ಸೀಫ್ ಕಟ್ಟಡವನ್ನೂ ಕಟ್ಟಲಿಕ್ಕೆ ತಾವು ಅನುಕೂಲತೆಯನ್ನು ಮಾಡಿಕೊಡಬೇಕು. ಇನ್ನು ಇವತ್ತು ಈ ಕಾನೂನು ನೆರವು ಮಂಡಳಿಯಿಂದ ಸಾಕಷ್ಟು ಕೆಲಸವನ್ನು ತಾವು ಮಾಡುತ್ತಿದ್ದೀರಿ. ಅದಕ್ಕೆ ಹೆಚ್ಚು ಚಾಲನೆಯನ್ನು ಕೊಡಬೇಕು, ಹೆಚ್ಚು ಹಣಕಾಸಿನ ನೆರವನ್ನು ಕೊಡಬೇಕು, ಹೆಚ್ಚು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಇಲಾಖೆಯಲ್ಲಿ ಸರ್ಕಾರಿ ನ್ಯಾಯಾಧೀಶರನ್ನು ತಾವು ನೇಮಕ ಮಾಡುತ್ತೀರಿ. ನಮ್ಮ ರಾಜ್ಯ ಸರ್ಕಾರದ ಆಸ್ತಿಗೆ ಆಗಲೀ ಅಥವಾ ಸರ್ಕಾರಕ್ಕೆ ಏನಾದರೂ ಧಕ್ಕೆ ಬಂದಿದ್ದರೆ ನೀವು ನೇಮಕ ಮಾಡಿದಂಥ ನ್ಯಾಯಾವಾದಿ-ಗಳಿಂದ ಆಗಿದೆ ಎಂಬುದನ್ನು ತಾವು ಮರೆಯಬಾರದು. ಇವತ್ತು ಬಿ.ಡಿ.ಎ. ದಲ್ಲಾಗಲಿ ಅಥವಾ ರಾಜ್ಯ-ದಲ್ಲಿರತಕ್ಕಂಥ ಹಲವಾರು ಕೋರ್ಟುಗಳಲ್ಲಿ ಈ ನ್ಯಾಯಾವಾದಿಗಳಿಂದ, ಅಂದರೆ ಸರ್ಕಾರಿ ನ್ಯಾಯಾ ವಾದಿಗಳನ್ನು ತಾವು ಏನು ನೇಮಕ ಮಾಡಿದ್ದೀರಿ, ಈ ಒಂದು ವ್ಯವಸ್ಥೆಯಿಂದ ಸಾಕಷ್ಟು ಕೇಸುಗಳಲ್ಲಿ

ಇವತ್ತು ಅವರು ತಮ್ಮ ವಾದವನ್ನು ಸರಿಯಾಗಿ ಮಂಡನೆ ಮಾಡದೆಯೇ ಇವತ್ತು ಅವುಗಳು ಸಂಪೂರ್ಣವಾಗಿ ಫೇಲಾಗಿದ್ದಾವೆ ಎನ್ನುವುದು ತಮ್ಮ ಗಮನಕ್ಕೂ ಕೂಡ ಬಂದಿರಬೇಕು. ಈ ವಿಚಾರದಲ್ಲಿ ನಾವು ಇವತ್ತು ಸರ್ಕಾರದಿಂದ, ಈ ಪ್ಯಾನಲ್ ಆಫ್ ಅಡ್ವೊಕೇಟ್ಸ್ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಹೆಚ್ಚು ಅನುಭವವಿರತಕ್ಕಂಥವರನ್ನು, ಪರಿಣಾಮಕಾರಿಯಾಗಿ ಕೆಲಸ ಮಾಡ-ತಕ್ಕಂಥ ನ್ಯಾಯವಾದಿಗಳ ಒಂದು ನೇಮಕವನ್ನು ನಾವು ಮಾಡಬೇಕು. ಅದರ ಬದಲಾಗಿ ಇವತ್ತು ಯಾವುದೇ ಒಂದು ಒತ್ತಡದಿಂದ, ನ್ಯಾಯವಾದಿಗಳನ್ನು ನೇಮಕ ಮಾಡಿಕೊಂಡು ಕೆಲಸಗಳನ್ನು ಮಾಡಿಸಿಕೊಂಡಿದ್ದಾದರೆ, ಇವತ್ತು ಅವರು ಖಂಡಿತವಾಗಿಯೂ ಸಮರ್ಪಕವಾಗಿ ಕೆಲಸವನ್ನು ಮಾಡುವುದಿಲ್ಲ. ಈ ಒಂದು ವಿಚಾರದಲ್ಲಿ ತಾವು, ಒಂದು ವೇಳೆ ಇವತ್ತು ಕಡ್ಡಾಯವಾಗಿ ಇಂತಹ ಪ್ಯಾನಲ್ ಆಫ್ ಅಡ್ವೊಕೇಟ್ಸ್ ಎನ್ನುವುದಕ್ಕಿಂತಲೂ, ಇವತ್ತು ನುರಿತಂಥ, ಅನುಭವವಿದ್ದಂಥ, ಹೆಚ್ಚು ಜ್ಞಾನವುಳ್ಳಂಥ ವಕೀಲರಿಗೂ ಕೂಡ ಸರ್ಕಾರದಿಂದ ನೇರವಾಗಿ ಇವತ್ತು ಕೆಲವು ಕೇಸುಗಳನ್ನು ಎಂಟ್ರಸ್ಟ್ ಮಾಡಿ ತಾವು ಅವರ ಮುಖಾಂತರ ಇವತ್ತು ಕೆಲಸಗಳನ್ನು ಮಾಡಿಸಿಕೊಂಡಿದ್ದಾದರೆ, ಸರ್ಕಾರ ಹೆಚ್ಚು ಕೆಲಸಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇವತ್ತು ನಾನು ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಇವತ್ತು ನ್ಯಾಯಾಂಗ ಇಲಾಖೆ ಯಾವ ರೀತಿಯಲ್ಲಿ ಕೆಲಸ ಮಾಡಿದೆ ಎನ್ನುವುದರ ಬಗ್ಗೆ ಒಂದು ಉದಾಹರಣೆ-ಯನ್ನು, ಒಂದು ಪ್ರಕರಣವನ್ನು ತಮ್ಮ ಮುಂದೆ ಇಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಇವತ್ತು ಆ ಪ್ರಕರಣ ಯಾವುದೆಂದರೆ ಒಬ್ಬ ದಾನಿಗಳು, ಭೂಮಾಲೀಕರು, ಸುಮಾರು 15 ಎಕರೆ ಜಮೀನನ್ನು 1956ನೇ ಇಸವಿಯಲ್ಲಿ ನಮ್ಮ ಸವಣೂರು ಪದವಿಪೂರ್ವ ಸರ್ಕಾರಿ ಕಾಲೇಜಿಗೆ ದಾನ-ವಾಗಿ ನೀಡಿದರು. ಇವತ್ತು ಆ 15 ಎಕರೆ ಜಮೀನಿನ ಕಿಮ್ಮತ್ತು ಒಂದು ಎಕರೆಗೆ ಹತ್ತು ಲಕ್ಷ ರೂಪಾಯಿಗಳ ಬೆಲೆ ಎಂದು ಇಟ್ಟುಕೊಂಡರೂ ಕೂಡ ಕನಿಷ್ಟ ಒಂದು ಕೋಟಿ ಐವತ್ತು ಲಕ್ಷ ರೂಪಾಯಿಗಳ ಒಂದು ಆಸ್ತಿ. ಈ ಆಸ್ತಿಯ ಪರಿಸ್ಥಿತಿ ಏನಾಗಿದೆ ಎಂದರೆ 1956ನೇ ಇಸವಿಯಲ್ಲಿ ದಾನ ಮಾಡಿದಂಥ ಆಸ್ತಿ ತಮ್ಮ ಸರ್ಕಾರದಲ್ಲಿ 1996ನೇ ಇಸವಿಯಲ್ಲಿ ನಲವತ್ತು ವರ್ಷಗಳ ನಂತರ ಆ ಜಮೀನನ್ನು ದಾನವಾಗಿ ಕೊಟ್ಟಿದ್ದನ್ನು ವಾಪಸ್ ಆಗಿ ಭೂಮಾಲೀಕರಿಗೆ ಕೊಡತಕ್ಕಂಥ ಒಂದು ನಿರ್ಣಯ ನಿಮ್ಮ ಸರ್ಕಾರದಲ್ಲಾಗಿದೆ ಎನ್ನುವುದನ್ನು ನಾನು ನೇರವಾಗಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಆ ಜಮೀನಿನ ಸರ್ವೇ ನಂಬರ್ 17:1, 15 ಎಕರೆ, ಈ ಒಂದು ಜಮೀನು ಇಲ್ಲಿಯವರೆವಿಗೂ ಕಾಲೇಜಿನ ವಶದಲ್ಲಿ ಇತ್ತು. ಆದರೆ ದುರ್ದೈವದಿಂದ ಇದಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯ ಸಚಿವರೂ ಕೂಡ ಇದರ ಬಗ್ಗೆ ಸ್ವಲ್ಪ ಕೇಳಬೇಕು, ನೇರವಾಗಿ ಈ ಜಮೀನು ಶಿಕ್ಷಣ ಕ್ಷೇತ್ರಕ್ಕೆ ಅನ್ವ-ಯಿಸುವುದರಿಂದ ಈ ಒಂದು ಇಲಾಖೆಯಲ್ಲಿ ಇಂತಹ ಪ್ರಕರಣವನ್ನು ಅವರು ಕೂಡ ಹೆಚ್ಚು ಫಾಲೊ ಅಪ್ ಮಾಡಿ ಈ ಒಂದು ಕೆಲಸವನ್ನು ಅವರು ಮಾಡಬೇಕಾಗಿದೆ, ಅದನ್ನು ಅವರು ಮಾಡಿಲ್ಲ. ತಮ್ಮ ಡೆಪ್ಯುಟಿ ಸೆಕ್ರೆಟರಿ ಟು ಗೌರ್ನಮೆಂಟ್, ಲಾ ಅಂಡ್ ಪಾರ್ಲಿಮೆಂಟರಿ ಅಫೇರ್ಸ್ ಒಂದು ನಿರ್ಣ-ಯವನ್ನು ತೆಗೆದುಕೊಂಡಿದ್ದನ್ನು ನಾನು ಈ ಸಭೆಯಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ರಿಟ್

ಪಿಟಿಷನ್ ನಂಬರ್ 5793:88, ಈ ಒಂದು ಪ್ರಕರಣದಲ್ಲಿ ದಾನವಾಗಿ ಕೊಟ್ಟಂಥ ಜಮೀನನ್ನು ನಮಗೆ ವಾಪಸ್ ಕೊಡಬೇಕೆಂದು ಭೂಮಾಲೀಕರು ಸರ್ಕಾರದ ವಿರುದ್ಧ ಒಂದು ರಿಟ್ ಅನ್ನು ದಾಖಲು ಮಾಡುತ್ತಾರೆ. ಕಾರಣವೇನೆಂದರೆ, ಅವರು ದಾನ ಪತ್ರವನ್ನು ಮಾಡಿ ಕೊಡುವಾಗ ಎರಡು ಕಂಡಿಷನ್ ಅನ್ನು ಇಟ್ಟಿದ್ದರು. ಒಂದು ಕಂಡಿಷನ್, ಅಲ್ಲಿ ವ್ಯವಸಾಯದ ಫಾರಂ ಅನ್ನು ಪ್ರಾರಂಭ ಮಾಡಬೇಕು ಜೊತೆಗೆ ಆ ಭೂಮಾಲೀಕರ ಹೆಸರನ್ನು ಆ ಫಾರಂಗೆ ಇಡಬೇಕೆಂದು ಕಂಡಿಷನ್ ಇಟ್ಟಿದ್ದರು. ಇವತ್ತು ಸರ್ಕಾರ ಆ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲ. ಇವತ್ತು ಅಲ್ಲಿ ಅಗ್ರಿಕಲ್ಚರ್ ಡಿಪ್ಲೊಮಾ ಕಾಲೇಜು ಇದೆ. ಡಿಪ್ಲೊಮಾ ಇನ್ ಅಗ್ರಿಕಲ್ಚರ್ ತೆಗೆದಿದ್ದಾರೆ, ಡಿಪ್ಲೊಮಾ ಇನ್ ಹಾರ್ಟಿಕಲ್ಚರ್ ತೆಗೆದಿದ್ದಾರೆ. ಆದರೆ ಅವರ ಹೆಸರನ್ನು ಇವರು ಇಡಲಿಲ್ಲ. ಆದರೆ ಹೆಸರನ್ನು ಇಟ್ಟಿದ್ದರೆ ಸರ್ಕಾರದಿಂದ ದೊಡ್ಡ ಕೆಲಸ ಏನೂ ಆಗುತ್ತಾ ಇರಲಿಲ್ಲ. ಈ ಎರಡು ಕಂಡೀಷನ್‌ಗಳ ಮುಖಾಂತರ ಇವತ್ತು ಆಗುವುದೇ ಇಲ್ಲ ಎಂದು ತಿಳಿದುಕೊಂಡು ಭೂಮಾಲೀಕರು 1988ನೇ ಇಸವಿಯಲ್ಲಿ ರಿಟ್ ಪಿಟಿಷನ್ ಮಾಡಿದ್ದಾರೆ, ರಿಟ್ ಪಿಟಿಷನ್ ಸಂಖ್ಯೆ 5793:88. ಇದು 31-8-95ರಂದು ನಿರ್ಣಯವಾಗುತ್ತದೆ. ಈ ರಿಟ್ ಪಿಟಿಷನ್‌ನಲ್ಲಿ 31-1-95ರಂದು ಆರ್ಡರ್ ಆಗುತ್ತದೆ. ಈ ರಿಟ್ ಪಿಟಿಷನ್‌ನಲ್ಲಿ ಸರ್ಕಾರದ ಪರವಾಗಿ ಒಬ್ಬ ವಕೀಲರು ಹಾಜರಾಗುತ್ತಾರೆ, ಎಂ.ಬಿ. ಪ್ರಭಾಕರ್ ಎನ್ನತಕ್ಕಂಥವರು. ಈ ರಿಟ್ ಪಿಟಿಷನ್‌ನಲ್ಲಿ ಆ ವಕೀಲರು ಸರ್ಕಾರದ ಪರವಾಗಿ ಯಾವುದೇ ಒಂದು ವಾದವನ್ನು ಕೂಡ ಮಾಡಿರುವುದಿಲ್ಲ. ಅದರಲ್ಲಿ ಏನು ಹೇಳಿದ್ದಾರೆಂದರೆ,

> "It is not clear even now what steps have been taken by the respondent."

ಉಪಾಧ್ಯಕ್ಷರು:- ಕುನ್ನೂರ್‌ರವರೇ, ಎಜ್ಯುಕೇಷನ್ ಮಿನಿಸ್ಟರ್ ಏನೋ ಹೇಳುತ್ತಾರೆ, ಕೇಳಿ.

ಶ್ರೀ ಬಿ. ಸೋಮಶೇಖರ್:- ತಾವು ಮಾತನಾಡುತ್ತಾ ಇರತಕ್ಕಂಥಾದ್ದು ಸವಣೂರು ಕೇಸು. ನನ್ನ ಕಾಲದಲ್ಲಿ ಈ ಕೇಸು ಬಂದಿದ್ದು, ಈಗ ಏನಾಗಬೇಕು ಎನ್ನುವುದನ್ನು ಸ್ವಲ್ಪ ಹೇಳಿದರೆ ನಾನು ವಿಚಾರ ಮಾಡುತ್ತೇನೆ. ಯಾರು ಏನು ತಪ್ಪು ಮಾಡಿದ್ದಾರೆ? ಯಾರಿಗೆ ಅನುಕೂಲವಾಗಿದೆ ಎಂದು ಹೇಳಿ. 1988ರಲ್ಲಿ ನಾನು ಆಗ ಸಂಬಂಧಪಟ್ಟ ಮಂತ್ರಿಯಾಗಿದ್ದೆ. ಆ ವಿಚಾರದಲ್ಲಿ ನಾನು ಸ್ಥಳಕ್ಕೂ ಹೋಗಿದ್ದೆ. ಅದರ ಬಗ್ಗೆ ಏನು ಆಗಬೇಕಾಗಿದೆ ಎಂದು ಹೇಳಿ. ರಿಟ್ ಪಿಟಿಷನ್ ಓದುತ್ತಿದ್ದೀರಲ್ಲಾ, ಅದನ್ನು ಕೊಟ್ಟರೆ ಒಳ್ಳೆಯದು.

ಶ್ರೀ ಮಂಜುನಾಥ ಸಿ ಕುನ್ನೂರ್:- ಬಹಳ ಸಂತೋಷ. ಏಕೆಂದರೆ ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಇದರ ಬಗ್ಗೆ ಸಾಕಷ್ಟು ಮಾಹಿತಿ ಇದೆ. ಆ ಜಮೀನನ್ನು ಸರ್ಕಾರದ ಪರವಾಗಿ ತೆಗೆದುಕೊಂಡು ಅದನ್ನು ಸರ್ಕಾರಕ್ಕೆ ಉಳಿಸಬೇಕು ಎನ್ನುವಂಥ ಪ್ರಯತ್ನವನ್ನು ಅವರು ಮಾಡಿದ್ದಾರೆ. ನಾನು ಅವರಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ವಿಷಯದಲ್ಲಿ ಈಗ ಏನಾಗಬೇಕಾಗಿದೆ ಎಂದರೆ, ಈ ಜಮೀನನ್ನು ಭೂಮಾಲೀಕರು ವಾಪಸ್ಸು ತೆಗೆದುಕೊಂಡಿದ್ದಾರೆ. ಆ ಜಮೀನಿಗೆ ಸಂಬಂಧಪಟ್ಟಂತೆ ರಿಟ್ ಪಿಟಿಷನ್ ನಮ್ಮಂತೆ ಆಗಲಿಲ್ಲ ಎಂದರೆ ನಾವು ರಿಟ್ ಅಪೀಲ್ ಮಾಡ-

ಬೇಕಾಗಿತ್ತು. ರಿಟ್ ಅಪೀಲ್ ಮಾಡತಕ್ಕಂಥ ಕೆಲಸವನ್ನು ನಮ್ಮ ಕಾನೂನು ಇಲಾಖೆಯವರು ಮಾಡ ಬೇಕಾಗಿತ್ತು. ಕಾನೂನು ಇಲಾಖೆಯವರು ಆ ಕೆಲಸವನ್ನು ಮಾಡಿಲ್ಲ.

ಶ್ರೀ ಬಿ. ಸೋಮಶೇಖರ್:- ಆ ಜಮೀನನ್ನು ಸರ್ಕಾರದಿಂದ ವಾಪಸ್ಸು ಕೊಟ್ಟು ಬಿಟ್ಟಿದ್ದಾರೆ-ಯೇ?

ಶ್ರೀ ಮಂಜುನಾಥ ಸಿ ಕುನ್ನೂರು:- ಹೌದು, ತೆಗೆದುಕೊಂಡು ಬಿಟ್ಟಿದ್ದಾರೆ. ಸುಮಾರು 2-3 ತಿಂಗಳ ಹಿಂದೆ ಇದು ಆಯಿತು. ಇಲ್ಲೇ ಇದೆ, ಆರ್ಡರ್ ಕಾಪಿಯಲ್ಲಿ ಎಲ್ಲಾ ಇದೆ, ನಿಮಗೆ ಕೊಡು-ತ್ತೇನೆ.

ಉಪಾಧ್ಯಕ್ಷರು:- ತಮ್ಮ ಕಡೆಗೆ ಅವರು ಕಾಗದ ಪತ್ರಗಳನ್ನು ತೆಗೆದುಕೊಂಡು ಬರುತ್ತಾರೆ. ಅವ-ರಿಗೆ ಮಾಹಿತಿ ಇಲ್ಲ. ಅವರು ಹೇಗೆ ಉತ್ತರ ಕೊಡುತ್ತಾರೆ? ಏನಾಗಿದೆ ಎನ್ನುವುದಕ್ಕೆ ಅವರಿಗೆ ಮಾಹಿತಿ ಇಲ್ಲ. ಅವರು ಏನು ಹೇಳಬೇಕು? ಅವರು ಮಾಹಿತಿ ತರಿಸಿಕೊಂಡು ಅದರ ಬಗ್ಗೆ ಸರಿಯಾಗಿ ಹೇಳು-ತ್ತಾರೆ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಉಪಾಧ್ಯಕ್ಷರೇ, ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಅದು ಸುಮಾರು 20 ಎಕರೆ ಜಮೀನು, ಬಹಳ ಬೆಲೆ ಬಾಳತಕ್ಕಂಥ ಜಮೀನು, ಸುಮಾರು 40-50 ವರ್ಷಗಳ ಹಿಂದೆ ಅದನ್ನು ನಮ್ಮ ಶಿಕ್ಷಣ ಇಲಾಖೆಗೆ ದಾನ ಮಾಡಿದ್ದರು. ದಾನ ಕೊಟ್ಟಮೇಲೆ ಒಂದು ಕಂಡೀಷನ್ ಹಾಕಿದ್ದರು. ಅಲ್ಲಿ ವ್ಯವಸಾಯ ಕಾಲೇಜನ್ನು ಮಾಡಬೇಕು ಮತ್ತು ಅದನ್ನು ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿ ಮಾಡಬೇಕು ಎಂದು. ಆದರೆ ಈ ಒಂದು ಕಂಡೀಷನ್‌ನನ್ನು ಫುಲ್‌ಫಿಲ್ ಮಾಡಲಿಲ್ಲ ಎಂದು ವಾಪಸ್ಸು ಕೊಡಬೇಕು ಎಂದು ಆರ್ಡರ್ ಆಗಿದೆ. ನಾನು ಅದೇ ತಕ್ಷಣ ಖಾತೆ ವಹಿಸಿಕೊಂಡೆ. ವಹಿಸಿಕೊಂಡ ತಕ್ಷಣ ಕೆಲವು ಸಾರ್ವಜನಿಕ ಮುಖಂಡರುಗಳು ಬಂದು ಇದು ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಜಮೀನು. ಇದನ್ನು ವಾಪಸ್ಸು ಕೊಡುತ್ತಿದ್ದಾರೆ ಎಂದು ಹೇಳಿದ ಮೇಲೆ ನಾನು ಅದಕ್ಕೆ ತಡೆಯಾಜ್ಞೆ ಕೊಟ್ಟೆ. ತಡೆಯಾಜ್ಞೆ ಕೊಟ್ಟು ನಾನೇ ಖುದ್ದಾಗಿ ಸ್ಥಳ ಪರಿಶೀಲನೆಗೆ ಹೋದಮೇಲೆ ಅಲ್ಲಿ ಎಲ್ಲಾ ಸ್ಥಳೀಯ ಮುಖಂಡರುಗಳು, ಕಾಲೇಜು ಪ್ರಿನ್ಸಿಪಾಲರು ಮತ್ತು ಅಲ್ಲಿಯ ಪುರಸಭೆಯ ಸದಸ್ಯರುಗಳು ಎಲ್ಲರೂ ನನಗೆ ಇದರ ಬಗ್ಗೆ ಮಾಹಿತಿ ಕೊಟ್ಟರು. ಇದನ್ನು ನೀವು ಸರ್ಕಾರಕ್ಕೆ ಉಳಿಸಿಕೊಳ್ಳಬೇಕು, ದಾನ ಮಾಡಿರತಕ್ಕಂಥಾದ್ದು ಕಂಡೀಷನಲ್ ದಾನ ಆಗುವುದಕ್ಕೆ ಸಾಧ್ಯವಿಲ್ಲ, ಕಂಡೀಷನಲ್ ಗಿಫ್ಟ್ ಆಗುವುದಕ್ಕೆ ಆಗುವುದಿಲ್ಲ. ಇದನ್ನು ವಾಪಸ್ಸು ಕೊಡುತ್ತಿದ್ದಾರೆ. ಆದ್ದರಿಂದ ಇದನ್ನು ನಿಲ್ಲಿಸಬೇಕು ಎಂದು ಹೇಳಿದಾಗ ನಾನೇ ಖುದ್ದಾಗಿ ಆರ್ಡರ್ ಮಾಡಿದೆ. ಇದನ್ನು ಯಾವುದೇ ಕಾರಣಕ್ಕೆ ಸರ್ಕಾರದಿಂದ ವಾಪಸ್ಸು ಕೊಡತಕ್ಕಂಥ ಪ್ರಶ್ನೆಯಿಲ್ಲ. ಇದನ್ನು ಸರ್ಕಾರವೇ ಉಪಯೋಗಿಸಿಕೊಳ್ಳಬೇಕು, ಸರ್ಕಾರ ವೊಕೇಷನಲ್ ಕೋರ್ಸಸ್ ಏನಿದೆ ಅದರ ಅಭಿವೃದ್ಧಿ ಮಾಡುವುದಕ್ಕೋಸ್ಕರ, ಇವತ್ತು ಬೇರೆ ಬೇರೆ ಕೋರ್ಸ್‌ಗಳನ್ನು ಅಭಿವೃದ್ಧಿ ಮಾಡು-ವುದಕ್ಕೋಸ್ಕರ ಇಟ್ಟುಕೊಳ್ಳಬೇಕು, ಇದನ್ನು ವಾಪಸ್ಸು ಕೊಡಬಾರದು ಎನ್ನತಕ್ಕಂಥ ಆದೇಶವನ್ನು

ನಾನು ಹೊರಡಿಸಿದೆ. ಆದಾದ ಮೇಲೆ ನನಗೆ ತಿಳಿದ ಮಟ್ಟಿಗೆ ಅವರು ಇದರ ವಿರುದ್ಧವಾಗಿ ಕೋರ್ಟಿಗೆ ಹೋಗಿದ್ದಾರೆ ಎಂದು ಗೊತ್ತಾಗಿದೆ. ಕೊರ್ಟಿಗೆ ಹೋದಮೇಲೆ ಕೋರ್ಟಿನಲ್ಲಿ ಆದೇಶವಾಗಿರಬಹುದು; ಅದಕ್ಕೋಸ್ಕರ ಕೊಟ್ಟಿದ್ದಾರೆ. ಸರ್ಕಾರದ ತಪ್ಪು ಏನಿಲ್ಲ ಎನ್ನುವುದು ನನಗೆ ತಿಳಿದಿರುವಂಥ ಮಾಹಿತಿ. ಕೋರ್ಟ್‌ನಿಂದ ಆಗಿರಬಹುದೇ ಹೊರತು, ಸರ್ಕಾರದಿಂದ ನಾನಂತೂ ಹಾಗೆ ಆಗುವಂತೆ ಮಾಡಿಲ್ಲ.

ಶ್ರೀಮತಿ ಪ್ರಮೀಳ ನೇಸರ್ಗಿ:- ಬಹಳ ಮುಖ್ಯವಾದ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ. 31-3-95ರಲ್ಲಿ ಜಡ್ಜ್‌ಮೆಂಟ್ ಆದರೆ ಅಪೀಲ್ ಏಕೆ ಹಾಕಲಿಲ್ಲ ಎಂಬುದನ್ನು ಅವರು ಕೇಳುತ್ತಿರ-ತಕ್ಕಂಥಾದ್ದು. ಅವರು ಬಹಳ ಒಳ್ಳೆಯ ವಿಷಯ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು:- ಇನ್ನೂ ಸಾಕಷ್ಟು ಜನ ಮಾತನಾಡುವವರು ಇದ್ದಾರೆ. ಪ್ರತಿಸಾರಿ ತಾವು ಡಿಸ್ಟರ್ಬ್ ಮಾಡುತ್ತೀರಿ. ಪ್ರತೀಸಾರಿ ಹೀಗೆ ಡಿಸ್ಟರ್ಬ್ ಮಾಡಿದರೆ ಅವರು ಇದನ್ನು ಮುಗಿಸುವುದು ಹೇಗೆ? ಇನ್ನೂ 8-9 ಜನ ಮಾತನಾಡುವವರು ಇದ್ದಾರೆ. ಎಲ್ಲರಿಗೂ 15-20 ನಿಮಿಷ ಟೈಮ್ ಕೊಡಬೇಕು. ತಾವು ಈ ತರಹ ಮಾಡಿದರೆ ಹೇಗೆ? ತಾವು ಮುಂದುವರೆಸಿ. ದಯಮಾಡಿ ಎಲ್ಲರೂ ಸಹಕರಿಸಬೇಕು.

ಶ್ರೀ ಮಂಜುನಾಥ ಸಿ. ಕುನ್ನೂರ್:- ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಇದನ್ನು ಓದುತ್ತೇನೆ.

> "Proceedings of the Government of Karnataka: Subject:- Regarding withdrawal of writ appeal in respect of preferring writ appeal in writ petition No. 5793/88/3 - Revannappa v/s State of Karnataka and others. Here, in the High Court order at Clause(1) above the High Court allowed writ petition in letter read at Clause(2) above the Government advocate of High Court of Karnataka, Bangalore, forwarded the certified copy of the High Court order of Karnataka, along with his opinion that it is not a fit case for appeal"

Once he is writing like this:-

> "In G.O. read at Clause(3) above, this Department had authorising the Government advocate to prefer writ appeal. The same was examined by the Government and the following orders are made. Authorisation - The G.O. dated 18-11-1995 to prefer the writ appeal against the order W.P. No. 5793/88 is hereby withdrawn"

This is the order of Solicitor and Ex-officio Deputy Secretary to Government, Department of Law and Parliamentary Affairs.

Sir, my submission is that there was no necessity to withdraw the writ appeal to prefer an appeal as against the order of the High Court. It was the bounden duty of the Law Department to prefer an appeal to the Full Bench of the High Court of Karnataka. So, the Law Department has utterly failed in this connection to prefer appeal. This is my submission. Even now I am bringing it to the notice of the Government, if anything is possible by filing condonation of delay, the writ appeal may kindly be preferred immediately in the interest of the Government property.

ಶ್ರೀ ಎಂ.ಸಿ. ನಾಣಯ್ಯ:- ಈಗ ಅವರು ಒಂದು ಪ್ರಮುಖವಾಗಿರತಕ್ಕಂಥ ವಿಚಾರವನ್ನು ಎತ್ತಿದ್ದಾರೆ. ತಾವು ದಯವಿಟ್ಟು ಅದಕ್ಕೆ ಸಂಬಂಧಪಟ್ಟಿರತಕ್ಕಂಥ ಆರ್ಡರ್ ಮತ್ತು ಇತರ ದಾಖಲೆ-ಗಳನ್ನು ಕಳುಹಿಸಿಕೊಡಿ. ಅಡ್ಮಿನಿಸ್ಟ್ರೇಟೀವ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಹಾಗೆ, ಕಾನೂನು ಇಲಾಖೆಗೆ ಸಂಬಂಧಪಟ್ಟಹಾಗೆ ನಾಳೆ ನಾನು ಎಲ್ಲಾ ಕಡತಗಳನ್ನು ತೆಗೆಸಿ ವಿಚಾರ ಮಾಡುತ್ತೇನೆ. ಅದ-ಕ್ಕೆ ಏನು ಕ್ರಮ ಕೈಗೊಳ್ಳಬೇಕು ಎನ್ನುವುದನ್ನು ಈ ಸದನದಲ್ಲಿ ಹೇಳುತ್ತೇನೆ ಅಥವಾ ನಿಮಗೇ ಹೇಳು-ತ್ತೇನೆ. ದಯವಿಟ್ಟು ಅದನ್ನು ಕಳುಹಿಸಿಕೊಡಿ. ನಾಳೆ ಅಧಿಕಾರಿಗಳ ಜೊತೆ ಚರ್ಚೆ ಮಾಡಲು ನನಗೆ ಅನುಕೂಲವಾಗುತ್ತದೆ. ದಯವಿಟ್ಟು ಈಗಲೇ ಕಳುಹಿಸಿಕೊಡಿ.

ಉಪಾಧ್ಯಕ್ಷರು:- ಈಗ ತಾವು ಮುಕ್ತಾಯ ಮಾಡಿ.

ಶ್ರೀ ಮಂಜುನಾಥ ಸಿ. ಕುನ್ನೂರ್:- ಮಾನ್ಯ ಉಪಾಧ್ಯಕ್ಷರೇ, ಈ ವಿಷಯಕ್ಕೆ ಸಂಬಂಧಿಸಿದ ಕಡತಗಳನ್ನು, ನಮ್ಮ ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ನಿರ್ದೇಶಕರಿಂದ ಬೆಳಗಾವಿಯ ಜಾಯಿಂ-ಟ್ ಡೈರೆಕ್ಟರ್‌ಗೆ ಹೋಗಿದ್ದು, ಪ್ರಿನ್ಸಿಪಾಲರಿಗೆ ಲೆಟರ್ ಬರೆದದ್ದು ಕೂಡಲೇ ಕಬ್ಜಾ ಕೊಡಿ ಎಂದು ಹೇಳಿದ್ದು, ಮತ್ತು ಅಷ್ಟೇ ಅಲ್ಲದೆ ಕಬ್ಜಾ ಕೊಡಬೇಕಾದರೆ . . .

ಉಪಾಧ್ಯಕ್ಷರು:- ಎಲ್ಲಾ ಸಂಬಂಧಿಸಿದ ಕಾಗದ ಪತ್ರಗಳನ್ನು ಕೊಟ್ಟುಬಿಟ್ಟರೆ ಮುಗಿದುಹೋಗು-ತ್ತದೆ. ಒಂದೊಂದನ್ನೇ ಏಕೆ ರಿಪೀಟ್ ಮಾಡುತ್ತೀರಿ?

ಶ್ರೀ ಮಂಜುನಾಥ ಸಿ. ಕುನ್ನೂರ್:- ಸನ್ಮಾನ್ಯ ಉಪಾಧ್ಯಕ್ಷರೇ, How the Government hurriedly taken the decision to handover possession of this particular land, that also I am bringing to your kind notice. The Joint Director has given a telegram to bring the relative file so as to hand over the possession. What was the necessity to give telegram by the J.D. of Belgaum to the concerned principal? That is my submission.

ಹೈಕೋರ್ಟ್ ಆರ್ಡರ್ ಪ್ರತಿಯನ್ನು ಹಾಗೂ ಅಪೀಲ್ ವಿತ್‌ಡ್ರಾ ಮಾಡಿದ ಪ್ರತಿಯನ್ನು ಹಾಗೂ ಜಮೀನಿನ ರೆಕಾರ್ಡ್‌ಗಳು ಎಲ್ಲವನ್ನೂ ಕೂಡ ತಮ್ಮ ಕಡೆಗೆ ಕಳುಹಿಸಿ ಕೊಡುತ್ತೇನೆ. ದಯ-

ಬಿಟ್ಟು ತಾವು ಇದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು ಮತ್ತು ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಹೈಕೋರ್ಟ್‌ನವರೂ ಕೂಡ ಯಾವುದೇ ಒಂದು ಆಸ್ತಿಯ ವಿಷಯ ಬಂದಾಗ ಡೈರೆಕ್ಷನ್ ಕೊಡಬೇಕಾಗಿತ್ತು. ಹೈಕೋರ್ಟ್ ಆರ್ಡರ್‌ನಲ್ಲಿ ಅವರು ಈ ಜಮೀನಿನ ಕಬ್ಜಾವನ್ನೇ ಮಾಲೀಕರಿಗೆ ಬಿಟ್ಟುಕೊಡಿ ಎನ್ನತಕ್ಕಂಥ ಆದೇಶವನ್ನು ಮಾಡು-ವುದರ ಬದಲಾಗಿ, ಮುನ್ಸಿಫ್ ಕೋರ್ಟ್ ಇದೆ, ಸಿವಿಲ್ ಕೋರ್ಟ್ ಇದೆ, ಡಿಸ್ಟ್ರಿಕ್ಟ್ ಕೋರ್ಟ್ ಇದೆ, ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಇದೆ, ಯಾವ ಆಸ್ತಿಯನ್ನು ಯಾವ ರೀತಿಯಾಗಿ ಡೆಲವರಿ ಆಫ್ ಪೊಸಿಷನ್ ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಇವತ್ತು ಹೈಕೋರ್ಟಿನಲ್ಲಿ ಆದೇಶ ಮಾಡ-ಬೇಕಾಗಿತ್ತು. ದುರ್ದೈವವೆಂದರೆ ಹೈಕೋರ್ಟ್ ಆರ್ಡರ್‌ನಲ್ಲಿ ಕೂಡ ಅದನ್ನು ಬರೆದಿಲ್ಲ. ಯಾವುದೇ ಒಂದು ಆಸ್ತಿಯ ಬಗ್ಗೆ ಒಬ್ಬ ಮನುಷ್ಯ ರಿಟ್‌ಅನ್ನು ದಾಖಲು ಮಾಡುವಾಗ ತಕ್ಷಣವೇ ಆ ಆಸ್ತಿಯನ್ನು ವಾಪಸ್ಸು ಕೊಡಬೇಕು ಎನ್ನುವಂಥ ಆರ್ಡರನ್ನು ಮಾಡತಕ್ಕಂಥಾದ್ದು ಸರಿಯಲ್ಲ ಎನ್ನತಕ್ಕಂಥ ವಿಚಾ-ರವನ್ನು ನಾನು ಇವತ್ತು ಒಬ್ಬ ನ್ಯಾಯವಾದಿಯಾಗಿ ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ.

ಶ್ರೀ ಹೆಚ್. ಶಿವಪ್ಪ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ವಕೀಲರು, ಹೈಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಆದಂಥ ರಿಸೈಟಲ್‌ಅನ್ನು ನಾವು ಇಲ್ಲಿ ಚರ್ಚೆ ಮಾಡುವುದಕ್ಕೆ ಆಗುತ್ತದೆಯೇ? ಅದರ ಬಗ್ಗೆ ನಾವು ಕಮೆಂಟ್ಸ್ ಮಾಡುವುದಕ್ಕೆ ಆಗುತ್ತದೆಯೇ. That is the absolute jurisdiction of the High Court. It has delivered some judgment. We can only prefer an appeal against that judgment. We cannot sit over the judgment of the High Court; we cannot offer comments on the judgment.

ಉಪಾಧ್ಯಕ್ಷರು:- ಜಡ್ಜ್‌ಮೆಂಟ್ ಮೇಲೆ ಕಾಮೆಂಟ್ಸ್ ಮಾಡುವುದು ಬೇಡ ಎಂದು ಅವರು ಹೇಳುತ್ತಾರೆ.

ಶ್ರೀಮತಿ ಪ್ರಮೀಳ ನೇಸರ್ಗಿ:- ಮಾನ್ಯ ಉಪಾಧ್ಯಕ್ಷರೇ, ಜಡ್ಜಿನ ಕಾಂಡಕ್ಟ್ ಬಗ್ಗೆ ನಾವು ಡಿಸ್ಕಸ್ ಮಾಡುವುದಕ್ಕೆ ಬರುವುದಿಲ್ಲ. ಆದರೆ ಯಾವುದೇ ಜಡ್ಜ್‌ಮೆಂಟಿನ ಬಗ್ಗೆ ಸರಿಯಲ್ಲ ಎನ್ನುವು-ದನ್ನು ಹೇಳುವುದಕ್ಕೆ ಈ ಸದನಕ್ಕೆ ಅಧಿಕಾರ ಇದೆ. ಪಾರ್ಲಿಮೆಂಟಿನಲ್ಲೂ ಕೂಡ ಹಲವಾರು ತೀರ್ಮಾನಗಳಾಗಿವೆ. ಇಲ್ಲೂ ಕೂಡ ತೀರ್ಮಾನವಾಗಿದೆ. ಜಡ್ಜ್‌ಮೆಂಟ್ ತಪ್ಪು ಎಂದು ನಾವು ಹೇಳಲು ಬರುತ್ತದೆ.

ಶ್ರೀ ಹೆಚ್. ಶಿವಪ್ಪ:- ಈಗ ಸರಿಯಲ್ಲ ಎಂದು ಹೇಳಿ ನಾವು ಅದರ ಬಗ್ಗೆ ತೀರ್ಮಾನ ತೆಗೆದು-ಕೊಳ್ಳುವುದಕ್ಕೆ ಆಗುತ್ತದೆಯೇ? Can we take a decision? Who is to be implemented if you take a decision? It is wrong.

ಉಪಾಧ್ಯಕ್ಷರು:- ಲಾ ಮಿನಿಸ್ಟರ್ ಮಾತನಾಡುತ್ತಾರೆ.

SRI M.C. NANAIAH:- It is a settled principle now. We cannot

speak on the conduct of judges. But, the judgment and the observation made in any judgment can be commented upon; It can be x-rayed; can be scrutinised and we can say it is wrong. I think this power is not only vested with us; it is vested with every common citizen.

3.50 ಪಿ.ಎಂ

ಶ್ರೀ ಮಂಜುನಾಥ ಸಿ. ಕುನ್ನೂರು:- ಸನ್ಮಾನ್ಯ ಉಪಾಧ್ಯಕ್ಷರೇ, ಈ ವಿಷಯದಲ್ಲಿ ಎಲ್ಲಾ ಕಡತಗಳನ್ನು ನಾನು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ. ಇನ್ನು ನಾನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬಗ್ಗೆ ಒಂದೇ ನಿಮಿಷದಲ್ಲಿ ಮಾತಾಡಿ ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು:- ನಾನು ವಿನಂತಿ ಮಾಡುವುದೇನೆಂದರೆ ಈಗಾಗಲೇ 10-12 ಜನ ಬೇಡಿಕೆ ಮೇಲೆ ಮಾತನಾಡುವವರಿದ್ದಾರೆ. ಎಲ್ಲರೂ 15 ನಿಮಿಷದ ಮೇಲೆ ಮಾತನಾಡಬಾರದೆಂದು ನಿಮ್ಮ ನಾಯಕರು ಮತ್ತು ಇನ್ನಿತರ ಸದಸ್ಯರು ಸೇರಿ ಮಾತನಾಡಿಕೊಂಡಿದ್ದಾರೆ. ತಾವು ಈಗಾಗಲೇ ಬೇಡಿಕೆ ಮೇಲೆ ಮಾತನಾಡಲು ಸಾಕಷ್ಟು ಸಮಯವನ್ನು ತೆಗೆದುಕೊಂಡಿದ್ದೀರಿ. ದಯಮಾಡಿ ಇನ್ನು 2 ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿಬಿಡಿ.

ಶ್ರೀ ಮಂಜುನಾಥ ಸಿ. ಕುನ್ನೂರು:- ಮಾನ್ಯ ಉಪಾಧ್ಯಕ್ಷರೇ, ತಾವು ನನಗೆ ಇಲ್ಲಿಯವರೆಗೆ ಮಾತನಾಡಲು ಸಮಯವನ್ನು ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಶಿವಪ್ಪ (ಹರಿಹರ):- ಮಾನ್ಯ ಉಪಾಧ್ಯಕ್ಷರೇ, ನಮ್ಮ ಸಂವಿಧಾನದ ಆರ್ಟಿಕಲ್ 203ರ ಅಡಿಯಲ್ಲಿ ಇವತ್ತಿನ ದಿವಸ ಮಾನ್ಯ ರಾಜ್ಯಪಾಲರವರ ಶಿಫಾರಸ್ಸಿನ ಮೇರೆಗೆ ಸುಮಾರು 19 ಬೇಡಿಕೆಗಳ ಮೇಲೆ ಹಣವನ್ನು ಮಂಜೂರು ಮಾಡತಕ್ಕಂಥ ಈ ಬೇಡಿಕೆಯನ್ನು ಅನುಮೋದಿಸುತ್ತಾ ನಾನು ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಈಗ ನಾವು ಈ ಬೇಡಿಕೆ ತಂದಿರುವುದರಲ್ಲಿ ಯಾವ ಕಾನೂನಿನ ಅಡಿಯಲ್ಲಿಯೂ 'ಡಿಮ್ಯಾಂಡ್ ಫಾರ್ ಗ್ರ್ಯಾಂಟ್ಸ್' ಎಂದು ಹೇಳಿಲ್ಲ. ಏಕೆಂದರೆ ನಿನ್ನೆ ನಮ್ಮ ಅಧ್ಯಕ್ಷರು ಒಂದು ಅಬ್ಸರ್ವೇಷನ್ ಮಾಡುತ್ತಿದ್ದರು. ಹೊಸದಾಗಿ ನಾವೆಲ್ಲಾ ಸದಸ್ಯರುಗಳು ಬಂದಿದ್ದೇವೆ. ನಾವು ಯಾವ ರೀತಿಯಾಗಿ ನಡೆದುಕೊಳ್ಳಬೇಕು ಎನ್ನುವುದರ ಬಗ್ಗೆ ನಮಗೆ ಸಲಹೆ ಸೂಚನೆಗಳನ್ನು ಕೊಟ್ಟರು. ಆ ಪ್ರಕಾರ ಈ ಬೇಡಿಕೆಗಳನ್ನು ಯಾವ ಕಾನೂನಿನ ಅಡಿಯಲ್ಲಿ ತಂದಿದ್ದೇವೆ ಎನ್ನುವುದನ್ನು ನೋಡಬೇಕು. ಇದರ ಬಗ್ಗೆ ರಾಜ್ಯಪಾಲರೇ ಏಕೆ ಶಿಫಾರಸ್ಸು ಮಾಡಬೇಕಾಗಿತ್ತು? ರಾಜ್ಯಪಾಲರ ಶಿಫಾರಸ್ಸಿನ ಮೇಲೆ ಏಕೆ ಇದನ್ನು ತರಬೇಕು? ಮುಖ್ಯಮಂತ್ರಿಗಳ ಶಿಫಾರಸ್ಸಿನ ಮೇಲೆ ಏಕೆ ತರಬಾರದು ಎನ್ನುವುದು ಇದು ಸಂಶಯಾಸ್ಪದವಾಗುತ್ತದೆ. ಆದ್ದರಿಂದ ಈ ವಿಚಾರವನ್ನು ಸದಸ್ಯರಿಗೆ ಗೊತ್ತುಪಡಿಸುವುದಕ್ಕೋಸ್ಕರ ಆರ್ಟಿಕಲ್ 203 ಆಫ್ ದಿ ಕಾನ್ಸ್ಟಿಟ್ಯೂಷನ್ ಅದರ ಮೇಲೆ ಸಬ್ ಕ್ಲಾಸ್ 3ರ ಪ್ರಕಾರ ಮಾನ್ಯ ರಾಜ್ಯಪಾಲರ ಶಿಫಾರಸ್ಸಿನ ಮೇಲೆ ಈ ಬೇಡಿಕೆಯನ್ನು ತಂದಿದ್ದೇವೆಂದು ಹೇಳಿದರೆ ಒಳ್ಳೆಯದೇನೋ ಎಂದು ಸರ್ಕಾರಕ್ಕೆ ಸೂಚನೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. . .

ಈಗ ನಮ್ಮ ಸರ್ಕಾರ ಆಗಿರಬಹುದು, ಹಿಂದಿನ ಸರ್ಕಾರಗಳೂ ಕೂಡ ಇದನ್ನು ಮಾಡಿಲ್ಲ. ಹಿಂದಿನ ಎಲ್ಲಾ ಡಿಮ್ಯಾಂಡ್ ಫಾರ್ ಗ್ರ್ಯಾಂಟ್ಸ್ ನೋಡಿದ್ದೇನೆ. ಇದನ್ನು ಯಾವ ಆರ್ಟಿಕಲ್ ಅಡಿಯಲ್ಲಿ ತಂದಿದ್ದೇವೆಂದು ಯಾರೂ ಹೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಆರ್ಟಿಕಲ್ ಬಗ್ಗೆ ಡಿಮ್ಯಾಂಡ್‌ಗಳ ಶಿಫಾರಸ್ಸನ್ನು ಯಾರು ಮಾಡಬಹುದು ಎನ್ನುವುದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದಾರೆ. ಮಾನ್ಯ ಕಾನೂನು ಸಚಿವರು ಸುಮ್ಮನೆ ಕುಳಿತಿದ್ದಾರೆ. ನಮ್ಮಂಥ ಕೆಲವರಿಗೆ ಇದರ ಬಗ್ಗೆ ಗೊತ್ತಾಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಗಳು ಬೇಡಿಕೆ ಬಗ್ಗೆ ಶಿಫಾರಸ್ಸು ಮಾಡಬೇಕು ಎನ್ನುವಂಥ ಕೆಲವು ವಿಷಯಗಳ ಮೇಲೆ ಮಾನ್ಯ ಕಾನೂನು ಸಚಿವರು ಅರ್ಥ ಮಾಡಿಕೊಂಡು ಬದಲಾವಣೆ ತರಬೇಕೆಂದು ಹೇಳುತ್ತಿದ್ದಾರೆ ಮತ್ತು ಮುಖ್ಯಮಂತ್ರಿಗಳು ಇದಕ್ಕೆ ರೆಕ-ಮಂಡೇಷನ್ ಮಾಡಬೇಕೆಂದು ಹೇಳುತ್ತಿದ್ದಾರೆ. . .

ಶ್ರೀ ಹೆಚ್. ಶಿವಪ್ಪ:- ಮಾನ್ಯ ಉಪಾಧ್ಯಕ್ಷರೆ, ಮುಖ್ಯಮಂತ್ರಿಗಳು ಶಿಫಾರಸ್ಸು ಮಾಡಬಾರ-ದೆಂದು ಯಾವ ಕಾನೂನಿನ ಅಡಿಯಲ್ಲಿ ಇದೆ? ರಾಜ್ಯಪಾಲರೇ ಏಕೆ ಮಾಡಬೇಕು? Just to show that it is under constitutional obligation, this has been brought before the House ಎನ್ನುವುದನ್ನು ತೋರಿಸಲಿಕ್ಕೆ ಸಲಹೆ ಕೊಡುತ್ತೇನೆ ಅಷ್ಟೆ. ಇದೇನೂ ಕಾಮೆಂಟ್ ಅಲ್ಲ. ನಾನು ಇನ್ನೊಂದು ಸಲಹೆಯನ್ನು ಸರ್ಕಾರಕ್ಕೆ ಕೊಡುವುದೇನೆಂದರೆ ನಾವು ಇಲ್ಲಿ ಚರ್ಚೆಯ ಮೇಲೆ ಭಾಗವಹಿಸಿ ಮಾತನಾಡಿರತಕ್ಕಂಥದ್ದು ಚರ್ಚೆ ಚರ್ಚೆಯಾಗಿಯೇ ಉಳಿಯಬಾರದು. ಬೇರೆ ವಿಷಯ-ದಲ್ಲಿ 'ಕ್ರಮ ತೆಗೆದುಕೊಳ್ಳಬೇಕೆಂದು' ನಾವು ಏನು ಹೇಳುತ್ತೇವೆ ಅದೇ ರೀತಿಯಲ್ಲಿ ನಾವು ಎಲ್ಲಾ ಸದಸ್ಯರು ಏನು ಸಲಹೆ ಕೊಡುತ್ತೇವೆ ಅದನ್ನು ಕೊನೆಯ ಪಕ್ಷ ಮುಂದಿನ ವರ್ಷವಾದರೂ ಇಂಥಿಂಥ ಸಲಹೆ ಸೂಚನೆ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಎನ್ನುವುದನ್ನು ನಮ್ಮ ಮುಂದೆ ಮಂಡಿಸಿದರೆ ಒಳ್ಳೆಯದೇನೋ; ಅದನ್ನು ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕು. ಅದರ ಬಗ್ಗೆ ಮುಂದೆ ನಾವು ಹೊಸ ಅಧ್ಯಾಯ ಪ್ರಾರಂಭ ಮಾಡಬೇಕು. ಇದುವರೆಗೆ ಈ ಪದ್ದತಿ ಆಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಆರ್ಟಿಕಲ್ 203ರ ಬಗ್ಗೆ ಹೇಳಿದರು. Article 203 is regarding the Con-solidated Fund. It reads:

> "Procedure in Legislature with respect to estimates.
>
> (1) So much of the estimates as relates to expenditure charged upon the Consolidated Fund of a State shall not be submitted to the vote of the Legislative Assembly, but nothing

in this clause shall be construed as preventing the discussion in the Legislature or any of those estimates.

(2) So much of the said estimates as relates to other expenditure shall be submitted in the form of demands for grants to the Legislative Assembly, and the Legislative Assembly shall have power to assent, or to refuse to assent, to any demand, or to assent to any demand subject to a reduction of the amount specified therein.

(3) No demand for a grant shall be made except on the recommendation of the Governor."

So the procedure is clear. When the constitutional obligation is there, the demands have to be moved under this only. How can they modify it to bring in the name of the Chief Minister? ನನಗೆ ಇದು ಗೊತ್ತಾಗಲಿಲ್ಲ. ಇಲ್ಲವೆಂದರೆ ಸಂವಿಧಾನವನ್ನೇ ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಶಿವಪ್ಪ:- ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಿದ ಭಾಷೆ ಶೈಲಿ ಮಾನ್ಯ ಖರ್ಗೆಯವರಿಗೆ ಅರ್ಥವಾಗಲಿಲ್ಲವೆಂದು ತೋರುತ್ತದೆ. ನಾನು ಹೇಳಿದ್ದುದು ಬೇರೆ. ನಿನ್ನೆ ನಮ್ಮ ಅಧ್ಯಕ್ಷರು ಹೊಸ ಸದಸ್ಯರುಗಳಿಗೆ ಒಂದು ಸೂಚನೆ ಕೊಟ್ಟರು. ಅದು ನಮಗೆ ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದ ಅದನ್ನು ನಮೂದಿಸುವುದರಿಂದ ತಪ್ಪೇನೂ ಆಗುವುದಿಲ್ಲ. "Under article 203 this demand for Grant has been brought before the House" ಎನ್ನುವುದು ಹೇಳಲಿಕ್ಕೆ ನಾನು ಸಲಹೆ ಕೊಡುತ್ತಿದ್ದೇನೆ, ಸೂಚನೆ ಕೊಡುತ್ತಿದ್ದೇನೆ. ಇದು ಕನ್ಸಾಲಿಡೇಟೆಡ್ ಫಂಡ್ ಎಂಬುದು ಗೊತ್ತಿದೆ. . . ಒಟ್ಟು 19 ಬೇಡಿಕೆಗಳು ಏನಿವೆ, ಇದರಲ್ಲಿ ನಾನು ಸಾಮಾನ್ಯ ಆಡಳಿತದ ಬಗ್ಗೆ ಮಾತ್ರ ಸ್ವಲ್ಪ ಬೆಳಕು ಚೆಲ್ಲಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಆಡಳಿತದಲ್ಲಿ ದಕ್ಷತೆ ಕುಸಿದು ಹೋಗಿದೆ ಮತ್ತು ಡಿಲೇ ಇನ್ ಡಿಸ್‌ಪೋಸಲ್ ಆಫ್ ಫೈಲ್ಸ್ ಇದರಿಂದ ಸರ್ವೇಸಾಮಾನ್ಯ ಜನರಿಗೆ ಸರ್ಕಾರದಲ್ಲಿ ನ್ಯಾಯ ಸಿಗುತ್ತಿಲ್ಲ. ಒಬ್ಬ ಹಳ್ಳಿ ರೈತನಿಗೆ ತಕ್ಷಣ ಅವನ ಕೆಲಸ ಎಲ್ಲಾ ಕಛೇರಿಗಳಲ್ಲಿ ಆಗುತ್ತಿಲ್ಲ. ಈ ಕಛೇರಿಗಳಲ್ಲಿ ಏಕೆ ಸರಿಯಾಗಿ ಕೆಲಸವಾಗುತ್ತಿಲ್ಲ? ಒಬ್ಬ ರೈತ ಸಾವಿರಾರು ರೂಪಾಯಿ ಕೊಟ್ಟು ರಿಜಿಸ್ಟ್ರೇಷನ್ ಮಾಡಿಸಿದ ತಕ್ಷಣ ಪುನಃ ಆ ಮ್ಯುಟೇಷನ್ ಅಕ್ಸೆಪ್ಟೆನ್ಸ್‌ಗೆ ಎಷ್ಟೋ ದಿವಸಗಳಾಗುತ್ತವೆ. ಅದು ಆದ ನಂತರ ಪಹಣಿ ಬರೆಯಬೇಕು. ಆ ಪಹಣಿ ಬರೆಯುವುದಕ್ಕೆ ಪುನಃ ನಾವು ಈ ಗ್ರಾಮಲೆಕ್ಕಿಗನನ್ನು ಬೇಸ್ ಮಾಡಬೇಕು. ಅಂದರೆ ಆ ಗ್ರಾಮಲೆಕ್ಕಿಗನ ಬೆನ್ನು ಹತ್ತಿಕೊಂಡು ಹೋಗಬೇಕು. ಅವರು ಸಿಗುವುದಿಲ್ಲ. ಇದರಿಂದ ನ್ಯಾಯ ಸರ್ಕಾರದಲ್ಲಿ ದೊರೆಯುವುದಿಲ್ಲ. ರೈತ ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಗ್ರಾಮಲೆಕ್ಕಿಗ ಎಲ್ಲೋ ಪಟ್ಟಣದಲ್ಲಿ ವಾಸ ಮಾಡುತ್ತಾನೆ. ಹಳ್ಳಿಯಲ್ಲಿ ಆತ ವಾಸ ಮಾಡುವುದಿಲ್ಲ. ಹೀಗಾದರೆ ಈ ರೈತರ ಗತಿ ಏನು? ಇದರಿಂದ ರೈತನಿಗೆ ಅನೇಕ ತೊಂದರೆಗಳಾಗುತ್ತಿವೆ. ಅದನ್ನು ತಪ್ಪಿಸಬೇಕು. ಆಡಳಿತ ಸರ್ವೇಸಾಮಾನ್ಯ ಜನರ ಮನೆಬಾಗಿಲಿಗೆ

ಹೋಗಬೇಕೆಂದು ನಮ್ಮ ಸರ್ಕಾರದ ನೀತಿ ಮತ್ತು ತತ್ವ ಏನಿದೆ ಅದರಂತೆ ಆಡಳಿತ ಪ್ರತಿಯೊಬ್ಬ ಸಾಮಾನ್ಯನ ಮನೆಬಾಗಿಲಿಗೆ ಹೋಗಬೇಕು. ತೀವ್ರಗತಿಯಲ್ಲಿ ಜನಸಾಮಾನ್ಯರಿಗೆ ನ್ಯಾಯವನ್ನು ಒದಗಿಸಬೇಕೆನ್ನುವ ತತ್ವಕ್ಕೆ ಬದ್ಧರಾಗಿದ್ದೇವೆ. ಆ ಕೆಲಸವನ್ನು ಮಾಡಬೇಕು. ಸರ್ಕಾರ ಅದರ ಬಗ್ಗೆ ಚಿಂತನೆ ಮಾಡಬೇಕು. ಇವತ್ತು rank ಪ್ರೊಮೋಟಿಸ್‌ಗಳನ್ನೇನು ತಹಶೀಲ್ದಾರರನ್ನಾಗಿ ಮಾಡುತ್ತೇವೆ ಅದರಿಂದ ತೊಂದರೆಯಾಗುತ್ತದೆ. ಅವರಿಗೆ ಕಾನೂನೇನು ಗೊತ್ತಿರುವುದಿಲ್ಲ. ಸಿ.ಆರ್.ಪಿ.ಸಿ.-ಯ ಸೆಕ್ಷನ್ 107 ಎಂದರೇನು? 110 ಎಂದರೆ ಏನು ಎಂಬುದು ತಾಲ್ಲೂಕು ಮ್ಯಾಜಿಸ್ಟ್ರೇಟರ್ ಆದ ಅವರಿಗೆ ಗೊತ್ತಿರುವುದಿಲ್ಲ. ಅದರ ಬಗ್ಗೆ ನಮ್ಮ ವಕೀಲರುಗಳು ಮತ್ತ್ಯಾರಾದರೂ ವಕೀಲರುಗಳು ಹೈಕೋರ್ಟ್ ಮತ್ತು ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್‌ಗಳೆಲ್ಲವನ್ನೂ ಅವರ ಮುಂದೆ ಹೇಳಿದರೆ ಏನೂ ಪ್ರಯೋಜನವಾಗುವುದಿಲ್ಲ. ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ, ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ ಎಂಬಂತಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ, ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಎಂಬುದನ್ನು ಯಾರಿಗೆ; ಸರ್ಕಾರಕ್ಕೆ ಹೇಳುತ್ತಿದ್ದೀರೋ ಅಥವಾ ಬೇರೆಯವರಿಗೆ ಹೇಳುತ್ತಿದ್ದೀರೋ?

ಶ್ರೀ ಹೆಚ್. ಶಿವಪ್ಪ:- Rank ಪ್ರೊಮೋಟೀಸ್‌ಗಳೇನು ತಹಸೀಲ್ದಾರ್‌ಗಳಾಗಿದ್ದಾರೆ ಅವರು ಪದವೀಧರರಲ್ಲ. They are not conversant with the rules and regulations and the decisions of the Supreme Court and the High Court. ಈಗ ಆ ವ್ಯವಸ್ಥೆ ಇದೆ. ನಾವು ಅವರ ಹತ್ತಿರ ಹೋಗಿ ಖಾತೆಯನ್ನು ಬದಲಾವಣೆ ಮಾಡಲು ಯಾವುದೋ ಜಡ್ಜ್‌ಮೆಂಟನ್ನು ತೋರಿಸಿದರೆ ಅವರಿಗೆ ಅರ್ಥವಾಗುವುದಿಲ್ಲ. ಆದ್ದರಿಂದ ಕೆ.ಎ.ಎಸ್.ನ್ನು ಮಾಡಿದಂಥವರನ್ನು ತಹಸೀಲ್ದಾರರನ್ನಾಗಿ ಹಾಕಿ ಅಥವಾ ತಹಸೀಲ್ದಾರರಾಗಿ Rank ಪ್ರೊಮೋಟೀಸ್‌ಗಳನ್ನೇ ಹಾಕುವುದು ಇದ್ದರೆ ಅವರಿಗೆ ಕೆಲವು ಕ್ವಾಲಿಫಿಕೇಷನ್‌ನ್ನು ನಿಗದಿ ಮಾಡಿ. ಪದವಿ ಮಾಡಿರಬೇಕು, ಎಲ್.ಎಲ್.ಬಿ. ವ್ಯಾಸಂಗ ಮಾಡಿರಬೇಕು ಎಂಬುದಾಗಿ ನಿಗದಿ ಮಾಡಿ. ಆ ರೀತಿ ಮಾಡಿದರೆ ಅವರು ಸರಿಯಾಗಿ ಕಾನೂನನ್ನು ತಿಳಿದುಕೊಳ್ಳಬಲ್ಲರು, ಆಗ ನ್ಯಾಯ ದೊರಕುತ್ತದೆ. ಮತ್ತು ನಾವು ಲಕ್ಷಾಂತರ ರೂಪಾಯಿ ಕೊಟ್ಟು ಆಸ್ತಿಯನ್ನು ತೆಗೆದುಕೊಂಡಾಗ ದಾಖಲೆಯನ್ನು ಕೊಡಬೇಕು. ಒಂದು ಮೋಟಾರ್ ವಾಹನವನ್ನು ತೆಗೆದುಕೊಂಡರೆ ಆರ್.ಸಿ. ಪುಸ್ತಕವನ್ನು ತಕ್ಷಣ ಕೊಟ್ಟು ಅದರ ಒಡೆಯನೆಂದು ದಾಖಲೆಯನ್ನು ಕೊಡುತ್ತಾರೆ. ಆದ್ದರಿಂದ ಆಸ್ತಿಗಳ ನೋಂದಾವಣಿಯಾದ ಕೂಡಲೇ ಪುಸ್ತಕವನ್ನು ಕೊಟ್ಟು ದಾಖಲೆಗಳು ವರ್ಗಾವಣೆಯಾಗಬೇಕು ಮತ್ತು ಮ್ಯುಟೇಷನ್ ಬದಲಾವಣೆಯಾಗಬೇಕು, ಖಾತೆ ಬದಲಾವಣೆಯಾಗಬೇಕು, ರೈತನಿಗೆ ಪಹಣಿ ಸಿಗಬೇಕು. ಆ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ಸಲಹೆಯನ್ನು ಕೊಡುತ್ತೇನೆ. ಇವತ್ತು ಸಬ್‌ಡಿವಿಜನ್ ಕಛೇರಿ, ಡಿವಿಜನಲ್ ಕಮಿಷನರ್ ಕಛೇರಿಗಳೇನು ಕೆಲಸ ಮಾಡುತ್ತವೆ? ಅವುಗಳು ಬಿಳಿ ಆನೆ ಇದ್ದಂತಾಗಿದೆ, ಇವು-

ಗಳು ಒಂದು ರೀತಿಯಲ್ಲಿ ಪೋಸ್ಟ್ ಆಫೀಸ್ ಇದ್ದಂತಾಗಿದೆ. ದಾಖಲೆಗಳನ್ನು ಕೊಡುವಲ್ಲಿ ಅವರು ಎಷ್ಟು ಸಾಧ್ಯವೋ ಅಷ್ಟು ತಡ ಮಾಡುತ್ತಾರೆ. ಒಂದು ರೀತಿಯಲ್ಲಿ ಸ್ಟಂಬ್ಲಿಂಗ್ ಬ್ಲಾಕ್ ಎಂದು ಏನು ಹೇಳುತ್ತೇವೆ ಅದರಂತಾಗಿದೆ. ಅವುಗಳನ್ನು ನಾವು ಅಬಾಲಿಷ್ ಮಾಡುವ ಅಗತ್ಯವಿದೆ. ಅವುಗಳಿಂದಾಗಿ ಸರ್ಕಾರದ ಎಕ್ಸ್‌ಚಕರ್‌ಗೆ ಬರ್ಡನ್ ಆಗುತ್ತಿದೆ. ಅವುಗಳಿಂದ ನಾವು ಯಾವ ಉದ್ದೇಶದಿಂದ ಆಡಳಿತವನ್ನು ನಡೆಸಬೇಕೆಂದಿದ್ದೆವೋ ಅದು ಮಾಡಲು ಸಾಧ್ಯವಿಲ್ಲದಂತಾಗಿದೆ. ಈ ಕಛೇರಿಗಳನ್ನು ವೈಂಡ್ ಆಫ್ ಮಾಡಬೇಕೆಂದು ಬಹಳ ದಿವಸಗಳಿಂದ ಕೂಗು ಇದೆ. ಈ ಸ್ಟಂಬ್ಲಿಂಗ್ ಬ್ಲಾಕ್ ಏನು ಇದೆಯೋ ಅದನ್ನು ತಡೆಹಿಡಿಯಬೇಕೆಂದು ಹೇಳುತ್ತೇನೆ. ಇವತ್ತು ಎಲ್ಲಾ ತಾಲ್ಲೂಕು ಕಛೇರಿಗಳಲ್ಲೂ ಭ್ರಷ್ಟಾಚಾರವಿದೆ ಎಂಬ ದೂರು ಇದೆ. ಒಳಾಡಳಿತ, ಸಾರಿಗೆ ಸಿಬ್ಬಂದಿ, ಆಡಳಿತ ಸುಧಾರಣಾ ಇಲಾಖೆಯ ಮೇಲಿನ ವಿಧಾನ ಮಂಡಲದ ವಿಷಯ ಸಮಿತಿಯ ಮೊದಲನೆಯ ವರದಿಯಲ್ಲಿ ಸರ್ಕಾರಿ ಕಛೇರಿಗಳಲ್ಲಿ ಇತ್ತೀಚೆಗೆ ಹೆಚ್ಚಾಗಿರುವ ಭ್ರಷ್ಟಾಚಾರವನ್ನು ತಡೆಗಟ್ಟುವ ದೃಷ್ಟಿಯಿಂದ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಈ ಭ್ರಷ್ಟಾಚಾರ ಸಮಾಜ ಹುಟ್ಟಿದಾಗಿನಿಂದಲೂ ಇದೆ. ಆದರೆ it varies in degrees. In kind, it is there. How to arrest it? ನನ್ನ ದೃಷ್ಟಿಯಲ್ಲಿ there are two types of corruption, one is need-based corruption and other one is luxury-oriented corruption. ಇದು ಭ್ರಷ್ಟಾಚಾರತೆ ಏತಕ್ಕೆ ಆಗುತ್ತದೆಂದರೆ, ಅವಶ್ಯಕತೆಯ ಆಧಾರದ ಮೇಲೆ ಕೆಲವರು ಹಣವನ್ನು ತೆಗೆದುಕೊಳ್ಳುತ್ತಾರೆ, they are compelled to do so. That is called need-based corruption. The second one is, Luxury-oriented corruption. He wants to amass much wealth. ಒಬ್ಬ ಪೋಲೀಸ್ ಪೇದೆ, ಒಬ್ಬ 'ಡಿ' ಗ್ರೂಪ್ ನೌಕರ, ಎರಡನೆ ದರ್ಜೆ ಗುಮಾಸ್ತ ಅವರ ಮಗನನ್ನು ಶಾಲೆಗೆ ಸೇರಿಸಬೇಕು, ಸೇರಿಸಬೇಕಾದರೆ ಐದು ಸಾವಿರ ರೂಪಾಯಿ ಡೊನೇಷನ್ ಕೊಡಬೇಕು, ಹೆಂಡತಿಗೆ ಒಳ್ಳೆಯ ಸೀರೆಯನ್ನು ತರಬೇಕು ಆದರೆ ಇವತ್ತು ಅವರಿಗೆ ಬರುತ್ತಿರುವ ಸಂಬಳದಲ್ಲಿ ಅದನ್ನು ತೆಗೆದುಕೊಡಲು ಆಗುತ್ತಿಲ್ಲ. ಅದಕ್ಕೋಸ್ಕರ ಲಂಚಕ್ಕಾಗಿ ಒಂದು ಕಡೆ ಕೈಚಾಚುತ್ತಾನೆ. ಇದನ್ನು ಅವಶ್ಯಕತೆಯ ಆಧಾರದ ಮೇಲಿನ ಭ್ರಷ್ಟಾಚಾರವೆಂದು ಹೇಳಬಹುದು. ಇನ್ನು ವಿಲಾಸಿ ಆಧಾರಿತ ಭ್ರಷ್ಟಾಚಾರದ ಬಗ್ಗೆ ಹೇಳುವುದಾದರೆ, ಇದು ನಮ್ಮಲ್ಲಿರುವ ವ್ಯವಸ್ಥೆಯ ಬಗ್ಗೆ ಹೇಳುತ್ತಿಲ್ಲ, ಇಂದಿರಾ ಗಾಂಧಿಯವರು ಹೇಳಿದ್ದರು. . .

(ಗೊಂದಲ)

ಶ್ರೀ ಸಿ.ಹೆಚ್. ವಿಜಯಶಂಕರ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಪ್ರಾಥಮಿಕ ಶಿಕ್ಷಣ ಸಚಿವರಾದ ಗೋವಿಂದೇಗೌಡರು ಇಲ್ಲೇ ಇದ್ದಾರೆ. ಹಿರಿಯ ಸದಸ್ಯರಾದ ಶಿವಪ್ಪನವರು ಮಾತಾನಾಡುತ್ತಾ ಶಾಲೆಗೆ ಮಕ್ಕಳನ್ನು ಸೇರಿಸಬೇಕಾದರೆ ಐದು ಸಾವಿರ ರೂಪಾಯಿ ಡೊನೇಷನ್ ಕೊಡಬೇಕಾಗುತ್ತದೆಂದು ಹೇಳಿದರು. ಆ ಹಣವನ್ನು ಎಲ್ಲಿಗೆ ಕೊಡಬೇಕು ಎಂಬ ಬಗ್ಗೆ ಇಬ್ಬರೂ ಶಿಕ್ಷಣ ಸಚಿವರು ಹೇಳಬೇಕು.

SRI S.R. LAKSHMAIAH:- Why are you pointing to Mr. Govinde Gowda? ಇದು ವಿದ್ಯಾಮಂತ್ರಿಗಳಾದ ಗೋವಿಂದೇಗೌಡರ ಕಾಲದಿಂದ ಬಂದಿಲ್ಲ; ಇದು ಬಹಳ ಕಾಲದಿಂದ ನಡೆದುಕೊಂಡು ಬಂದಿದೆ.

ಶ್ರೀ ಹೆಚ್. ಶಿವಪ್ಪ:- ಸಮಾಜ ಹುಟ್ಟಿದಾಗಿನಿಂದಲೂ ಇದು ಇದೆ; It cannot be eradicated on toto. It can only be checked to certain extent. It is an International phenomenon. ಆದ್ದರಿಂದ ಖಾಸಗಿ ಶಾಲೆಗಳಲ್ಲೇನು ಡೊನೇಷನ್ ಸಮಸ್ಯೆ ಇದೆ, ಅದು ವಾಸ್ತವಿಕ. ಶ್ರೀಮತಿ ಇಂದಿರಾಗಾಂಧಿಯವರು ಇದು it is an International phenomenon, ಎಂದು ಹೇಳಿದ್ದಾರೆ, ಆಗಿನಿಂದಲೂ ಇದು ಇದೆ. It is as old as humanity itself. It is a global phenomenon. ಆದ್ದರಿಂದ ಎರಡನೇ ದರ್ಜೆ ಭ್ರಷ್ಟಾಚಾರದ ಬಗ್ಗೆ ಹೇಳುತ್ತಿದ್ದೆ, ಅದು ಅವಶ್ಯಕತೆಯ ಭ್ರಷ್ಟಾಚಾರವಲ್ಲ, desire to amass money and that too easy money ಅದು ಆಗಬಾರದು. ಆ ರೀತಿ ಭ್ರಷ್ಟಾಚಾರ ಮೇಲ್ದರ್ಜೆಯ ನೌಕರರಲ್ಲಿ ಆಗುತ್ತಿದೆ. ಅದನ್ನು ನಾವು ನಿಲ್ಲಿಸಬೇಕಾಗಿದೆ. ಇದನ್ನು ನಿಲ್ಲಿಸಲು ಎಷ್ಟೋ ಕಮೀಷನ್‌ಗಳನ್ನು ಮಾಡಲಾಯಿತು. ಆದರೆ ಇದನ್ನು ತಡೆಗಟ್ಟಲು ಸಾಧ್ಯವಾಗಿಲ್ಲ. ಲೇಟ್ ಪ್ರಧಾನ ಮಂತ್ರಿಯವರಾದ ನಂದಾಜಿಯವರು ಪ್ರಯತ್ನಮಾಡಿದರು. ಸಂತಾನಮ್ ಸಮಿತಿ ಬಂತು; ಗೋರ್ವಾಲ ಸಮಿತಿ ಬಂತು. ಹೀಗೆ ಇನ್ನೂ ಅನೇಕ ಸಮಿತಿಗಳು ಬಂದವು, ಹೋದವು. ನಾನು ಭ್ರಷ್ಟಾಚಾರಕ್ಕೆ ಪ್ರಚೋದನೆಯನ್ನು ಕೊಡುತ್ತಿದ್ದೇನೆ, ಭ್ರಷ್ಟಾಚಾರ ಇರಬೇಕೆಂದು ನನ್ನ ಅಭಿಪ್ರಾಯ ಅಲ್ಲ. It is a tolerable disease, a social evil. It is a curable and excusable and tolerable to the extent upper class go up. ಅಪ್ಪರ್ ಕ್ಲಾಸ್‌ನಲ್ಲಿ ಏನು ಮಾಡುತ್ತಿದ್ದಾರೆ ಅದನ್ನು ನಾವು ಇವತ್ತು ಅರೆಸ್ಟ್ ಮಾಡಬೇಕಾಗಿದೆ, ತಡೆಹಿಡಿಯಬೇಕಾಗಿದೆ, ಇದರ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಟಿ.ಬಿ. ಜಯಚಂದ್ರ:- ತಾವು ಬಹಳ ಚೆನ್ನಾಗಿ ವ್ಯಾಖ್ಯಾನವನ್ನು ಮಾಡಿದಿರಿ. ಆದರೆ ಇದರ ಬಗ್ಗೆ ಕೊನೆಯದಾಗಿ ನಿಮ್ಮ ಸಲಹೆ ಏನು? ಈ ದೇಶದ ಭ್ರಷ್ಟಾಚಾರವನ್ನೆಲ್ಲಾ ಹೇಳಿ ಅದನ್ನು ಟಾಲರಬಲ್ ಎಂದು ಹೇಳಿದಿರಿ. ಅಂದಮೇಲೆ ನಿಮ್ಮ ಸಲಹೆ ಏನು? ಅದನ್ನು ಲೀಗಲೈಸ್ ಮಾಡಬೇಕೆಂದು ಹೇಳುತ್ತೀರಾ?

ಶ್ರೀ ಹೆಚ್. ಶಿವಪ್ಪ:- ಹೇಳುತ್ತೇನೆ. ಸ್ವಲ್ಪ ಹೊತ್ತು ತಡೆಯಿರಿ.

ಶ್ರೀ ಚಂದ್ರಕಾಂತ ಬೆಲ್ಲದ್:- ನಿಮ್ಮ ಸಲಹೆ ಏನು ಎಂಬುದನ್ನು ಹೇಳಿ.

ಶ್ರೀ ಹೆಚ್. ಶಿವಪ್ಪ:- ಕೊಡುತ್ತೇನೆ.

ಉಪಾಧ್ಯಕ್ಷರು:- ಅವರ ಮಾತು ಮುಗಿಯುವವರೆಗೂ ಅವಸರ ಏತಕ್ಕೆ ಮಾಡುತ್ತೀರಿ? ಅವರು ಸಲಹೆ ಕೊಡುತ್ತಿದ್ದಾರೆ.

ಶ್ರೀ ಹೆಚ್. ಶಿವಪ್ಪ:- ಆಡಳಿತದ ಸುಧಾರಣೆಯನ್ನು ಹೇಗೆ ಉತ್ತಮಪಡಿಸಬೇಕು. ಭ್ರಷ್ಟಾಚಾರ-ವನ್ನು ಹೇಗೆ ತೊರೆದುಹಾಕಬೇಕೆಂಬ ಬಗ್ಗೆ ಸಾಕಷ್ಟು ಮಾಹಿತಿ, ಸಾಕಷ್ಟು ಸಾಹಿತ್ಯ ಇದೆ. ಆದರೆ ಅದು ಇವತ್ತೂ ಆಗುತ್ತಿಲ್ಲ.

ಶ್ರೀಮತಿ ಪ್ರಮಿಳಾ ನೇಸರ್ಗಿ:- ಇಷ್ಟಾದರೂ ನೀವು ಅಲ್ಲೇ ಇರುತ್ತೀರಾ? ಅಲ್ಲೇ ಕಂಟಿನ್ಯೂ ಮಾಡುತ್ತೀರಾ? ಅದರ ಬಗ್ಗೆ ಹೇಳಿ.

ಉಪಾಧ್ಯಕ್ಷರು:- ಮಾನ್ಯ ಸದಸ್ಯಿಣಿಯವರು ಏನು ಕೇಳುತ್ತಿದ್ದಾರೆಂದರೆ, ಅವರ ಜೊತೆಯಲ್ಲಿ-ರುತ್ತೀರೋ ಅಥವಾ ನಮ್ಮ ಜೊತೆ ಬರುತ್ತೀರೋ ಎಂದು.

ಶ್ರೀ ಹೆಚ್. ಶಿವಪ್ಪ:- ಹಿಂದೆ ಇದ್ದುದು ಈ ಸರ್ಕಾರ ಬಂದಮೇಲೆ ಒಂದು ಕಡಿವಾಣ ಬಂದಂತಾಗಿದೆ. ಕಡಿಮೆ ಆಗಿದೆ, ಅದನ್ನು ಹೇಳುವವರೆಗೂ ನಿಮಗೆ ತಾಳ್ಮೆ ಇಲ್ಲಾ. ಈ ಜನತಾದಳದ ಸರ್ಕಾರ ಕೆಲವು ನೀತಿಗಳನ್ನು ಅನುಸರಿಸಿದೆ. ಅಧಿಕಾರ ವಿಕೇಂದ್ರೀಕರಣ ಮಾಡಿದೆ. That has indirectly checked and arrested corruption. ಇವತ್ತಿನ ದಿವಸ ಕಾನ್‌ಸೆಂಟ್ರೇಷನ್ ಎಲ್ಲಿದೆ? ಅಧಿಕಾರ ಎಲ್ಲಿ ಕೇಂದ್ರೀಕೃತವಾಗಿದೆ ಅಲ್ಲಿ ಭ್ರಷ್ಟಾಚಾರ ಬಹಳ ಹೆಚ್ಚು. ನಮ್ಮ ಜನತಾದಳದ ಸರ್ಕಾರ ಕೆಳಹಂತದಿಂದ ಸರ್ವೇ ಸಾಮಾನ್ಯ ಜನರೂ ಕೂಡ ಆಡಳಿತದಲ್ಲಿ ಭಾಗಿಗಳಾಗಬೇಕು; ತಮ್ಮ ತಮ್ಮ ತೊಂದರೆಗಳನ್ನು ಅವರವರ ಪ್ರತಿನಿಧಿಗಳ ಮುಖಾಂತರ ಪರಿಹಾರ ಮಾಡಿಕೊಳ್ಳಬೇಕೆಂದು ಇವತ್ತು ಈ ಮಸೂದೆಯನ್ನು ಜಾರಿಗೆ ತಂದು ಅನುಕೂಲಮಾಡಿಕೊಟ್ಟಿದೆ. ಆ ಜಿಲ್ಲಾಪಂಚಾಯಿತಿ ಇರಬಹುದು, ತಾಲ್ಲೂಕು ಪಂಚಾಯಿತಿ ಇರಬಹುದು ಅಥವಾ ಮಂಡಲ್ ಪಂಚಾಯಿತಿ ಇರ-ಬಹುದು; ಈ ಆಡಳಿತ ವಿಕೇಂದ್ರೀಕರಣ ವ್ಯವಸ್ಥೆಯಿಂದ ಭ್ರಷ್ಟಾಚಾರ ಕಡಿಮೆಯಾಗಿದೆ. ಇವತ್ತು ಎಲ್ಲರೂ ಪ್ರಜ್ಞಾವಂತರಾಗಿದ್ದಾರೆ. ಹಿಂದೆ ಒಬ್ಬ ಎಂ.ಎಲ್.ಎ. ನ ಅಡಿಯಲ್ಲಿ ಎಲ್ಲಾ ಅಧಿಕಾರಿಗಳೂ ಇರುತ್ತಿದ್ದರು. ಅವತ್ತು ಆ ಎಂ.ಎಲ್.ಎ. ಅನ್ನು ಕೇಳಿ ಅಧಿಕಾರಿಗಳು ಕೆಲಸ ಮಾಡಬೇಕಾದರೆ ಎಷ್ಟು ಭ್ರಷ್ಟಾಚಾರ ಇತ್ತು? ಇವತ್ತು ತಾಲ್ಲೂಕು ಪಂಚಾಯಿತಿಗಳ ಪ್ರತಿನಿಧಿಗಳಿದ್ದಾರೆ, ಜಿಲ್ಲಾ ಪಂಚಾ-ಯಿತಿಯ ಪ್ರತಿನಿಧಿಗಳು ಇದ್ದಾರೆ, ಅವರೆಲ್ಲರೂ ಕಛೇರಿಗೆ ಹೋಗಿ ಅವರ ಮೇಲೆ ಪ್ರಭಾವವನ್ನು ಬೀರಿದ್ದರ ಪರಿಣಾಮದಿಂದಾಗಿ ಇವತ್ತು ಭ್ರಷ್ಟಾಚಾರ ಕಡಿಮೆಯಾಗಿದೆ.

ಶ್ರೀ ಹೆಚ್.ಎನ್. ನಂಜೇಗೌಡ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶಿವಪ್ಪನವರ ವಾದ ಈಗ ಕರಪ್ಷನ್ ವಿಕೇಂದ್ರೀಕರಣ ಆಗಿದೆ ಎಂದು ಅರ್ಥವೇ? ಮೇಲುಗಡೆ ಒಂದು ಹಂತದಲ್ಲಿ ಇಷ್ಟು ಇಟ್ಟಿದ್ದೇವೆ.

ಶ್ರೀ ಹೆಚ್. ಶಿವಪ್ಪ:- ಅದು ಭ್ರಷ್ಟಾಚಾರದ ವಿಕೇಂದ್ರೀಕರಣ ಅಲ್ಲ. ಭ್ರಷ್ಟಾಚಾರ ಇವತ್ತು ಕಡಿಮೆಯಾಗಿದೆ. . .

ಮಾನ್ಯ ಸದಸ್ಯರು:- ಜಿಲ್ಲಾಧಿಕಾರಿಗಳ ಹಿಡಿತ ಶಾಸಕರಿಗೆ ಇತ್ತು. ಆದರೆ ಇವತ್ತು ಇಲ್ಲ. ಒಂದೇ ಜಾಗದಲ್ಲಿದ್ದಂಥ ಕರಪ್ಷನ್ ಈಗ ಎಲ್ಲಾ ಕಡೆಯಲ್ಲೂ ತಮ್ಮ ಸರ್ಕಾರ ಹರಡಿದೆ.

ಶ್ರೀ ಹೆಚ್. ಶಿವಪ್ಪ:- ಈ ರೀತಿ ಮಧ್ಯೆ ಮಧ್ಯೆ ಸದಸ್ಯರು ಪ್ರವೇಶ ಮಾಡಿದರೆ ನಮ್ಮ ಮಾತಿನ ದಿಕ್ಕು ಬದಲಾಗುತ್ತದೆ. ಈ ಭ್ರಷ್ಟಚಾರವನ್ನು ನಾವು ಕಡಿಮೆ ಮಾಡಬೇಕಾದರೆ ನಾವು ಇನ್ನೂ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ನಾನು ಇವತ್ತು ಸಲಹೆಯನ್ನು ಕೊಟ್ಟಂತೆ ಒಳ್ಳೆಯ Rank ಪ್ರೊಮೋಟೀಸ್‌ನನ್ನು ಬಿಟ್ಟು ಒಬ್ಬ ಕೆ.ಎ.ಎಸ್. ಜ್ಯೂನಿಯರ್ ಅಧಿಕಾರಿಯನ್ನು ಹಾಕಬೇಕು. ಇಂಟರ್‌ಮೀಡಿಯಂ ಆಫೀಸ್‌ಗಳಾದಂಥ ಸಬ್ ಡಿವಿಜನಲ್ ಆಫೀಸ್‌ಗಳು ಮತ್ತು ಡಿವಿಜನಲ್ ಕಮಿಷನರ್‌ರವರ ಆಫೀಸ್‌ಗಳನ್ನು ಅಬಾಲಿಷ್ ಮಾಡಿದರೆ ಭ್ರಷ್ಟಾಚಾರ ಸ್ವಲ್ಪಮಟ್ಟಿಗೆ ಕಡಿಮೆ-ಯಾಗುತ್ತದೆಂದು ಹೇಳಬಯಸುತ್ತೇನೆ. ಇವತ್ತು ಬ್ಯೂರಾಕ್ರೆಸಿಯ ಬಗ್ಗೆ ಬಹಳ ಜನರು ಮಾತನಾಡು-ತ್ತಾರೆ. ಆಕ್ಟೋಪಸ್ ಬ್ಯೂರಾಕ್ರೆಸಿ ಅಂದರೆ ಅಧಿಕಾರಶಾಹಿ ಈ ಒಂದು ಪ್ರಜಾತಂತ್ರದಲ್ಲಿ ಯಾವ ರೀತಿ ಇರಬೇಕು? ಮಾನ್ಯ ನೆಹರೂರವರು ಹೇಳಿದ್ದಾರೆ, ಜನರಲಿಸ್ಟ್ಸ್ ಮತ್ತು ಎಕ್ಸ್‌ಪರ್ಟ್ಸ್ ಮಧ್ಯೆ ಏನು ಪೈಪೋಟಿ, ಸಂಘರ್ಷ ಇದೆ ಅದನ್ನು ತೆಗೆದುಹಾಕಬೇಕಾಗಿದೆ ಎಂದು. ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಬಹಳ ಜನರ ದೂರುಗಳಿವೆ. ಇವತ್ತು ತಮಗೆ ಗೊತ್ತಿರುವಂತೆ ಎಲ್ಲಾ ಹುದ್ದೆಗಳಿಗೂ ಐ.ಎ.ಎಸ್. ಅಧಿ-ಕಾರಿಗಳನ್ನು ನೇಮಿಸುತ್ತಾರೆ. ಮೊನ್ನೆ ಮಾನ್ಯ ಸದಸ್ಯರಾದ ನಂಜೇಗೌಡರು ಮಾತನಾಡುತ್ತಾ ಈ ಐ.ಎ.ಎಸ್ ಅಧಿಕಾರಿಗಳು ಇಸ್ಪೀಟ್ ಆಟದಲ್ಲಿ ಜೋಕರ್‌ಗಳು ಇದ್ದಂತೆ ಎಂದು ಹೇಳಿದರು. There is a saying, they are all jack of all trades as well as transmission belt of society. ಮಾನ್ಯ ರಾಜೇಂದ್ರ ಬಾಬುರವರೂ ಹೇಳಿದ್ದಾರೆ;

> "I see no reason why the technical personnel should not be treated on par with the administrative personnel and the technical services should not be given the same emoluments and advantages as the country's administrative services. I am sure sooner or later, it is bound to happen."

ಅದೇ ರೀತಿ ಮಾನ್ಯ ನೆಹರೂರವರು ಕೂಡ ಹೇಳಿದ್ದಾರೆ.

> It is wrong to think that people in the administrative services belongs to some upper strata of society where others cannot reach. One cannot do away with the administrative but cannot do with Engineers. An Engineer can work as an Administrator, but an Administrator cannot work without Engineers because he does not know the job at all. The present controversy owes much to the British created feudal culture of our administration. False sense of prestige, superiority, dominance and exclusiveness constitute the main characteristics of this culture. In today's condition, it has to be derived that the generalists as well as the specialists contribute equally to the Socio-economic development of the country.

4.20 ಪಿ.ಎಂ

ಇವತ್ತು ಏನು ವ್ಯತ್ಯಾಸ ಇದೆ? ನಾವು ಇವತ್ತು ಇಂಜಿನಿಯರ್-ಇನ್-ಚೀಫ್ ಎಂದರೆ ಅಲ್ಲಿ ಐ.ಎ.ಎಸ್ ಆಫೀಸರ್ಸ್ ಪೋಸ್ಟ್ ಮಾಡುತ್ತೇವೆ. ಪಿ.ಡಬ್ಲ್ಯು.ಡಿ. ಸೆಕ್ರೆಟರಿ ಹುದ್ದೆಗೆ ಐ.ಎ.ಎಸ್. ಆಫೀಸರ್ಸ್ ಪೋಸ್ಟ್ ಮಾಡುತ್ತೇವೆ. ಇವತ್ತು ಕೆ.ಇ.ಬಿ.ಗೆ ಐ.ಎ.ಎಸ್. ಅಧಿಕಾರಿಯನ್ನು ಪೋಸ್ಟ್ ಮಾಡುತ್ತೇವೆ. ಇದು ಆಗಬಾರದು. ಇವತ್ತು ಸ್ಪೆಷಲಿಸ್ಟ್ಸ್ ಇದ್ದಾರೆ. They must also be made equal partners. They have got the specialised knowledge in that special field. ಈ ವ್ಯತ್ಯಾಸವನ್ನು ತೆಗೆದುಹಾಕಬೇಕು. ಅಂದಾಗ ಮಾತ್ರ ಇವತ್ತಿನ ದಿವಸ ಆ ಅತೃಪ್ತಿ ಏನಿದೆ ಆಡಳಿತದಲ್ಲಿ ಅದು ಹೋಗಲಿಕ್ಕೆ ಸಾಧ್ಯವಾಗುತ್ತದೆ. ನಂತರ ಬ್ಯುರೋಕ್ರೆಸಿ ಎಲ್ಲಾ ವರ್ಗದ ಜನರಿಂದ ವಿರೋಧಿಸಲ್ಪಡುವಂಥ ವಾತಾವರಣ ನಿರ್ಮಾಣ ಮಾಡಲಿಕ್ಕೆ ಕಾರಣ ಏನು? ನಮ್ಮದೂ ಅದರಲ್ಲಿ ಸ್ವಲ್ಪ ಪಾಲಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಬ್ರಿಟನ್ನಿನ ಒಂದು ಬುಕ್‌ನಲ್ಲಿ ಕ್ಯಾಬಿನೆಟ್ ಹೇಗಿರಬೇಕು ಎಂಬುದನ್ನು ಹೇಳಿದ್ದಾರೆ. "Cabinet must consist of experienced members of the dominant party." ಎಂದು I have called out certain sentences. That is all. ಆದ್ದರಿಂದ ಇವತ್ತು ಈ ಪೊಲಿಟಿಕಲ್ ಎಗ್ಸಿಕ್ಯುಟೀವ್ ವೀಕ್‌ನೆಸ್ ಏನಿದೆ, that is the strength of the bureaucracy. ಇವತ್ತು ಸೀನಿಯರ್ ಮೆಂಬರ್ಸ್ ಇರಬೇಕು ಎಂದು ನೀವು ಕೇಳಬಹುದು. ಹಾಗೆ ಇದೆಯೇ ನಿಮ್ಮ ಕಾಂಪೊಸಿಷನ್ ಆಫ್ ದಿ ಕ್ಯಾಬಿನೆಟ್ ಎಂದು ನೀವು ಕೇಳಬಹುದು. ಅದು ಹಿಂದೆ ಹೇಳಿದ್ದುದು. ಈ ಸಂದರ್ಭದಲ್ಲಿ ಎಲ್ಲಾ ರಾಜ್ಯಗಳಲ್ಲಿ ತೆಗೆದುಕೊಂಡರೂ ಅಷ್ಟೆ. ಇವತ್ತಿನ ದಿವಸ ಯುವಕರನ್ನು ನಾವು ತಯಾರು ಮಾಡಬೇಕಲ್ಲಾ? ಬರೀ ಸೀನಿಯರ್ ಮೆಂಬರ್ಸ್ ಇದ್ದರೆ ಯುವಕರು ಮುಂದೆ ಬರುವುದು ಹೇಗೆ? ಅವರನ್ನು ತಯಾರು ಮಾಡುವುದು ಹೇಗೆ? ಸೆಕೆಂಡ್ ಲೈನ್ ಲೀಡರ್‌ಷಿಪ್ ತಯಾರು ಮಾಡಲೇಬೇಕಲ್ಲಾ? ಆ ದೃಷ್ಟಿಯಿಂದ ನಮ್ಮ ಕ್ಯಾಬಿನೆಟ್, ನಮ್ಮ ಮುಖ್ಯಮಂತ್ರಿಗಳು he has chosen dynamic young people.

ಶ್ರೀ ಯು.ಆರ್ ಸಭಾಪತಿ:- ನಿಮ್ಮನ್ನು ಬಿಟ್ಟು.

ಉಪಾಧ್ಯಕ್ಷರು:- ಏತಕ್ಕೆ ಡಿಸ್ಟರ್ಬ್ ಮಾಡುತ್ತೀರಿ? ಅವರು ಮಾತಾಡಲಿ.

ಶ್ರೀ ಯು.ಆರ್ ಸಭಾಪತಿ:- ಅವರ ಮಾತಿಗೆ ನಾವು ಸ್ವಲ್ಪ ಸ್ಪಂದಿಸಬೇಕಾಗುತ್ತದೆ.

ಉಪಾಧ್ಯಕ್ಷರು:- ಹಾಗೆಲ್ಲಾ ಏನಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಅಧ್ಯಕ್ಷರೇ, ಇದು ಅವರ ಪ್ರಾಮಾಣಿಕ ಅನಿಸಿಕೆ ಅಲ್ಲ.

ಶ್ರೀ ಹೆಚ್. ಶಿವಪ್ಪ:- ನಾನು ಟ್ರೆಜರಿ ಬೆಂಚಿನ ಸದಸ್ಯನಾಗಿ ಪ್ರಾಮಾಣಿಕವಾಗಿ ಕೆಲವು ಸೂಚನೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. You must appreciate my stand and the view point. ಅದು ಬಿಟ್ಟು ನೀವೇನೋ ಮಾತನಾಡಬೇಕು ನಾವು ವಿರೋಧ ಪಕ್ಷದಲ್ಲಿದ್ದೇವೆ

ಎಂದು ಎಲ್ಲದಕ್ಕೂ ಎದ್ದು ಎದ್ದು ಮಾತನಾಡುತ್ತಾ ಹೋದರೆ ಸರಿಯಲ್ಲ. ಇದಕ್ಕೋಸ್ಕರವೇ ಡೆಮಾ-ಕ್ರೆಸಿ ಫೈಲ್ಯೂರ್ ಆಗುತ್ತಾ ಇರುವುದು. ನಂಜೇಗೌಡರಿಗೆ ಗೊತ್ತಿದೆ. ಯಾವ ಸಂದರ್ಭದಲ್ಲಿ ಮಾತ್ರ ಏಳಬೇಕು ಅಂತಿದೆಯೋ ಆಗ ಮಾತ್ರ ಅವರು ಏಳುತ್ತಾರೆ. ನೀವೆಲ್ಲಾ ಸುಮ್ಮನೆ ಟ್ರೆಜರಿ ಬೆಂಚಿನವರು ಮಾತನಾಡಿದಾಗಲೆಲ್ಲಾ ಸುಮ್ಮನೆ ಏಳುವುದು, ಕೂಗುವುದು ಮಾಡುತ್ತೀರಿ. ಹೀಗಾದರೆ ಡೆಮಾಕ್ರೆಸಿ ಸಕ್ಸಸ್‌ಫುಲ್ ಆಗುವುದಿಲ್ಲ. We are not in plutocracy or autocracy.

ಶ್ರೀ ವಾಟಾಳ್ ನಾಗರಾಜ್:- ಎದ್ದು ಎದ್ದು ನಿಂತುಕೊಂಡು ಮಾತನಾಡಿದರೆ ಪ್ರಜಾಪ್ರಭುತ್ವ ಅಲ್ಲ. ಬಾಯಿ ಮುಚ್ಚಿಕೊಂಡು ಕುಳಿತಿರುವುದು ಪ್ರಜಾಪ್ರಭುತ್ವ.

ಶ್ರೀ ಹೆಚ್. ಶಿವಪ್ಪ:- ಇಲ್ಲ, ಇಲ್ಲ. ಎಲ್ಲಿ ನೀವು ತಪ್ಪುತ್ತೀರೋ ಅಲ್ಲಿ ನಾವು ಹೇಳುತ್ತೇವೆ. ವಿರೋಧ ಪಕ್ಷದ ನಾಯಕರೇ, ಸುಮ್ಮಸುಮ್ಮನೆ ಎದ್ದು ಎದ್ದು ಹೇಳುವುದಿಲ್ಲ. ನಮ್ಮ ಲಿಮಿಟೇಷನ್ಸ ಗೊತ್ತಿದೆ. ನಮ್ಮ ರೆಸ್ಪಾನ್ಸಿಬಿಲಿಟಿ ಗೊತ್ತಿದೆ. ಎಲ್ಲಿ ನೀವು ತಪ್ಪುತ್ತೀರೋ ಅಲ್ಲಿ ನಾವು ಎದ್ದು ಹೇಳುತ್ತೇವೆ ಅಷ್ಟೇ. ನೀವು ಹಾಗಲ್ಲ. ಸುಮ್ಮನೆ ಎದ್ದು ಹೇಳಿದ್ದೇ ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್:- ಇದಕ್ಕೇ ಅವರು ಸಹಸದಸ್ಯರಾಗಿರುವುದು ಎಂದು ಕಾಣುತ್ತದೆ.

ಶ್ರೀ ಹೆಚ್. ಶಿವಪ್ಪ:- ನಾನು ಏನೋ ಹೇಳುತ್ತಿದ್ದೆ. ಅದು ಮರೆತೇ ಹೋಯಿತು. ಕಂಪೋಸಿ-ಷನ್ ಆಫ್ ಮಿನಿಸ್ಟ್ರಿ ಹೇಗಿರಬೇಕು ಎಂದು ಹೇಳುತ್ತಿದ್ದೆ. ಆದ್ದರಿಂದ ಬ್ಯುರೋಕ್ರೆಸಿ ಬೆಳೆಯಲಿಕ್ಕೆ ನಮಗೆ ಕಾಲ ಇಲ್ಲ. ಕೆಲವು ಯುವಕರು ಎಲ್ಲಾ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇದು ಆಗಬೇಕು. Because we fail to take decision, the bureaucracy grows. ಅದನ್ನು ನಾವು ತಡೆಹಿಡಿಯಬೇಕಾಗಿದೆ. ಇವತ್ತು ನಾವು ಡೆಮಾಕ್ರೆಟಿಕ್ ಓರಿಯೆಂಟೆಡ್ ಅಡ್ಮಿನಿಸ್ಟ್ರೆಷ-ನನ್ನು ಕೊಡಬೇಕಾಗಿದೆ. ಆ ದಿಸೆಯಲ್ಲಿ ಅಕೌಂಟಬಿಲಿಟಿ ಇರಬೇಕಾಗಿದೆ. ಕೆಲವು ಸಲಹೆಗಳನ್ನು ನಾನು ನೀಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಇವತ್ತು ಅಕೌಂಟಬಿಲಿಟಿ ಏನಾಗಿದೆಯೆಂದರೆ everybody's responsibility is nobody's responsibility. ಅಕೌಂಟಬಿಲಿಟಿ ಇಲ್ಲ ಇವತ್ತಿನ ದಿವಸ. ರೆಸ್ಪಾನ್ಸಿಬಲಿಟಿ ಇಲ್ಲ. ಅದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಈ ದಿಕ್ಕಿನಲ್ಲಿ ನಾವು ಚಿಂತನೆ ಮಾಡಬೇಕು. ಆಮೇಲೆ ಫಾಲ್ಟಿ ಪ್ರಮೋಷನ್ಸ. ಇವತ್ತು ಪ್ರೊಮೋಷನ್ಸ್ ಯಾವ ರೀತಿ ಆಗುತ್ತಿದೆ ಎನ್ನುವುದನ್ನು ನಮ್ಮ ಹಿರಿಯ ಸದಸ್ಯರು ಹೇಳಿದರು. ನೀವು ಹೇಳಿದ್ದು ಹೇಳುತ್ತೇನೆ.

SRI H. N. NANJE GOWDA:- Everybody's responsibilty is no-body's responsibility, ಅಂದರೆ ಯಾರನ್ನು ಕುರಿತು ಹೇಳುತ್ತಿದ್ದೀರಿ? ಮಂತ್ರಿಮಂಡಲ-ವನ್ನೋ? ಆಳುವ ಪಕ್ಷವನ್ನೋ? ಯಾವುದಕ್ಕೆ ಅಂತ?

ಶ್ರೀ ಹೆಚ್. ಶಿವಪ್ಪ:- ಆಡಳಿತದಲ್ಲಿ ಇಂಥ ನ್ಯೂನತೆಗಳು ಬರಬಾರದು.

ಶ್ರೀ ವಾಟಾಳ್ ನಾಗರಾಜ್:- ಯಾವ ಆಡಳಿತ?

ಶ್ರೀ ಹೆಚ್. ಶಿವಪ್ಪ:- ಯಾವುದೇ ಆಡಳಿತದಲ್ಲಿ, ನಮ್ಮ ಆಡಳಿತದಲ್ಲಿ ಇಲ್ಲ. ಇದ್ದರೂ ಸರಿ-ಪಡಿಸಿಕೊಳ್ಳಬೇಕು ಎನ್ನುವ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ನೋಡಿ, ಅದನ್ನು ಧೈರ್ಯವಾಗಿ ಹೇಳಲಾರರು ಶಿವಪ್ಪನವರು. ಬಹಳ ಕಷ್ಟಪಡುತ್ತಿದ್ದಾರೆ.

ಶ್ರೀ ಹೆಚ್. ಶಿವಪ್ಪ:- ಈಗ ಅಂಥದ್ದೇನಾದರೂ ಇದ್ದರೆ ನಮ್ಮ ಸರ್ಕಾರ, ನಾವು ಚಿಂತನೆ ಮಾಡಬೇಕಾಗಿದೆ. ಅದಕ್ಕೆ ಸರಿಯಾಗಿ ಔಷಧಿ ಕೊಡಬೇಕಾಗಿದೆ. ಅದನ್ನು ಹೇಳುತ್ತಿದ್ದೇನೆ. Everybody's responsibilty is nobody' responsibility. Everybody's property is nobody's property. ಅದಾಗಬಾರದು. We must own the responsibility. ಅಕೌಂಟಬಿಲಿಟಿ ಇದ್ದಾಗ ಮಾತ್ರ we can improve the administration and transparent administration can be accorded. Time bound promotions ಅದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಏನೋ ಹೇಳುತ್ತಿದ್ದೆ.

ಶ್ರೀ ಜಿ.ವಿ. ರಾಮರೆಡ್ಡಿ:- ಮಾನ್ಯ ಶಿವಪ್ಪನವರು ಇಷ್ಟು ಕಷ್ಟ ಪಟ್ಟುಕೊಂಡು ಏತಕ್ಕೆ ಮಾತನಾಡಬೇಕು?

ಉಪಾಧ್ಯಕ್ಷರು:- ನಡುವೆ ಏತಕ್ಕೆ ತೊಂದರೆ ಮಾಡುತ್ತೀರಿ? ಅವರು ಮಾತನಾಡಲಿ.

ಶ್ರೀ ಹೆಚ್. ಶಿವಪ್ಪ:- ಈ ಅತೃಪ್ತಿ, ಆಡಳಿತ ಕೆಡುವುದಕ್ಕೆ ದಕ್ಷತೆ ನಾವು ಎನ್‌ಷ್ಯೂರ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಕೆಲವು ಸಂದರ್ಭ ಈ ಫಾಲ್ಟಿ ಪ್ರೊಮೋಷನ್ಸ್ ಇದೆಯಲ್ಲಾ, ಇವತ್ತಿನ ದಿವಸ ಐ.ಎ.ಎಸ್., ಐ.ಪಿ.ಎಸ್., ಅಧಿಕಾರಿಗಳಿಗೆ ಟೈಮ್ ಬೌಂಡ್ ಪ್ರೊಮೋಷನ್ಸ್. ಉಳಿದ ಅಧಿಕಾರಿಗಳಿಗೆ ಟೈಮ್ ಬೌಂಡ್ ಪ್ರೊಮೋಷನ್ಸ್ ಇಲ್ಲ. ಅದಾಗಬಾರದು. ನಾನು ಸಲಹೆ ಕೊಡುತ್ತಿದ್ದೇನೆ ನಂಜೇಗೌಡರೇ. ನಮ್ಮ ಸರ್ಕಾರದಲ್ಲಿ ಇದು ಇದೆ ಎಂದು ಅಲ್ಲ. ಇದ್ದರೂ ತಿದ್ದಿ-ಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಫಾಲ್ಟಿ ಪ್ರೊಮೋಷನ್ಸ್ ಇದೆಲ್ಲಾ ಆಗಬಾರದು ಎನ್ನುವ ದೃಷ್ಟಿಯಿಂದ. . .

ಉಪಾಧ್ಯಕ್ಷರು:- ಶಿವಪ್ಪನವರೇ, 30 ನಿಮಿಷ ಆಯಿತು.

ಶ್ರೀ ಹೆಚ್. ಶಿವಪ್ಪ:- ಬಂದೆ ಬಂದೆ. "One solution may be that scale for other services like IAS should be time-bound irrespective of the posts and vacancies. Irrespective of the posts whether they are or not, time-bound promotions are given and there should be no special pay or allowances for any post. It has to be realised that all services contribute equally to the development of the country. It is time that there were equal pay for equal responsibilty and equal opportunity for all services. ಆದ್ದರಿಂದ ಇವತ್ತು ಐ.ಎ.ಎಸ್., ಐ.ಪಿ.ಎಸ್., ಆಫೀಸರ್ಸ್‌ಗೆ ಬಂದ ತಕ್ಷಣ

ಟೈಮ್ ಬೌಂಡ್ ಪ್ರೊಮೋಷನ್ಸ್ ಹೇಗಾಗುತ್ತದೆ? ಬಂದ ತಕ್ಷಣ ಅವರಿಗೆ ಸೂಪರ್ ಟೈಮ್ ಸ್ಕೇಲ್ ಕೊಟ್ಟುಬಿಟ್ಟು ಅಲ್ಲಿ ಪೋಸ್ಟ್ಸ್ ಇದೆಯೋ ಇಲ್ಲವೋ ಅಲ್ಲೇ ಅವರನ್ನು ಇಡುತ್ತಾರೆ. ಬೇರೆ ಲೋ-ಯೆಸ್ಟ್ ಕ್ಯಾಟಗರಿಯಲ್ಲಿ ಇರುವವರಿಗೆ ವರ್ಷಗಟ್ಟಲೆ ಇವತ್ತಿನ ದಿವಸ ಪ್ರೊಮೋಷನ್ಸ್ ಕೊಡುವುದಿಲ್ಲ. ಅದು ಆಗಬಾರದು. ಇವತ್ತು ಹೈರಾರ್ಕಿಯಲ್ಲಿ ಎಲ್ಲರೂ ಒಂದೇ. ಹೆಡ್‌ಕ್ಲರ್ಕ್ ಇದ್ದ ಹಾಗೆ ಅವರವರು ಬುದ್ಧಿಯ ಮೇಲೆ ಎಲ್ಲರೂ ಅಷ್ಟೆ. ಆ ದಿಸೆಯಲ್ಲಿ ಇದನ್ನು ನಾವು ಇಂಪ್ರೂವ್‌ಮೆಂಟ್ ಮಾಡ-ಬೇಕಾಗಿದೆ ದಕ್ಷ ಆಡಳಿತವನ್ನು ತರಬೇಕಾದರೆ. ಇನ್ನೂ ಆಕ್ಷನ್ ತೆಗೆದುಕೊಳ್ಳುವುದರಲ್ಲಿ ಡಿಲೇ ಆಗು-ತ್ತಿದೆ. ಇವತ್ತಿನ ದಿವಸ ಡಿಪಾರ್ಟ್‌ಮೆಂಟ್ ಆಫ್ ಫರ್ಸೊನಲ್ ಅಂಡ್ ಅಡ್ಮಿನಿಸ್ಟ್ರೇಷನ್ ರಿಫಾ-ರ್ಮ್ಸ್‌ನಲ್ಲಿ ಒಬ್ಬರು ನಾರಾಯಣಸ್ವಾಮಿ ಎನ್ನುವವರ ಬಗ್ಗೆ ನಾನು ಓದಿದೆ. ಡಾ: ನಾರಾಯಣಸ್ವಾಮಿ ಅವರ ಮೇಲೆ ಡೀಫಾಲ್ಟೇಷನ್ ಆಫ್ ಫಂಡ್, ಮಿಸ್ ಅಪ್ರೊಪ್ರಿಯೇಷನ್ ಆಫ್ ಫಂಡ್ಸ್ ಮೇಲೆ ಎನ್‌ಕ್ವೈಯರಿ ನಡೆದು ಆಕ್ಷನ್ ತೆಗೆದುಕೊಳ್ಳುವುದರ ಹೊತ್ತಿಗೆ ಸೂಪರ್ ಅನ್ಯುಯೇಷನ್ ರೀಚ್ ಅದರು; ಅವರ ರಿಟೈರ್‌ಮೆಂಟ್ ಆಯಿತು. ಮುಂದೆ ಗತಿಯೇನು? ಇಷ್ಟು ತಡವಾಗಬಾರದು. ಇಷ್ಟು ತಡವಾದರೆ ಯಾವ ಅಧಿಕಾರಿಗಳಿಗೂ ಭಯ ಇರುವುದಿಲ್ಲ. ಹೆದರಿಕೆ ಇರುವುದಿಲ್ಲ. ಆದ್ದರಿಂದ ಅವ-ರಿಗೆ ಇಂತಹ ಆಕ್ಷನ್ಸ್‌ಗಳ ಬಗ್ಗೆ ಏನು ಸಜೆಷನ್ಸ್ ಕೊಟ್ಟಿದ್ದಾರೆ ತತ್‌ಕ್ಷಣ ಇವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇವತ್ತಿನ ದಿವಸ ಯಾರು ಏನಾದರೂ ಮಾಡ-ಬಹುದು ಎನ್ನುವ ವಾತಾವರಣ ನಮ್ಮ ಸರ್ಕಾರದಲ್ಲಿ ನಿರ್ಮಾಣವಾಗಬಾರದು. ಅಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಅಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕು. ಪ್ರಮೊಷನ್ ಕೊಡಬೇಕಾ-ದರೆ ಪರ್‌ಫಾರ್ಮೆನ್ಸ್ ಸರ್ಟಿಫಿಕೇಟ್ ಸರಿಯಾಗಿರಬೇಕು. ಈ Psychophancy and fla-ttery ಇವಕ್ಕೆ ಅಲ್ಲಿ ಸ್ಥಾನವಿರಬಾರದು. Performance certificate must be given on an official's perfect performance. ಅಂತಹ ಪರಿಸ್ಥಿತಿ ಒದಗುವ ಹಾಗೆ ಇವತ್ತಿನ ದಿವಸ ನಾವು ನೋಡಿಕೊಳ್ಳಬೇಕು. ಲ್ಯಾಂಡ್ ಅಕ್ವಿಸಿಷನ್ ಕೇಸ್‌ನಲ್ಲಿ ಮಾನ್ಯ ಕಾನೂನು ಮಂತ್ರಿಗಳಿಗೆ ಒಂದು ಸಲಹೆ ಕೊಡುತ್ತೇನೆ. ಕೋರ್ಟ್ ಫೀ ವ್ಯಾಲ್ಯುವೇಷನ್ ಅಕ್ಟ್ ಏನಿದೆ ಸೆಕ್ಷನ್ 48 ಕೋರ್ಟ್ ಫೀ ವ್ಯಾಲ್ಯುವೇಷನ್ ಅಕ್ಟ್‌ನಲ್ಲಿ ಇವತ್ತು ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ಸ್‌ನಲ್ಲಿ ನಾಮಿನಲ್ ಕೋರ್ಟ್ ಫೀ ಮಾಡುತ್ತೀರಿ. ವೇಜಸ್‌ಗೆ ನಾಮಿನಲ್ ಕೋರ್ಟ್ ಫೀ ಕೊಡುತ್ತಿದ್ದೀರಿ. ಆದರೆ ಲ್ಯಾಂಡ್ ಅಕ್ವಿಸಿಷನ್ ಕೇಸ್‌ನಲ್ಲಿ ಒಬ್ಬ ಭೂಮಾಲೀಕ ಸಣ್ಣ ರೈತ, ರೈತ ತಾನು ಕಳೆದುಕೊಂಡ ಭೂಮಿಗೆ ಕಾಂಪನ್‌ಸೇಷನ್ ಪಡೆಯಲಿಕ್ಕೆ ಅವನು ಇವತ್ತು ಅಡ್ವಲರಂ ಮೇಲೆ ಕೋರ್ಟ್ ಫೀ ಕೊಡಬೇಕಾಗಿದೆ. ಅವ ರೀಹಾಬಿಲಿಟೇಟ್ ಆಗಬೇಕು ಇವತ್ತು ಭೂಮಿ ಕಳೆದುಕೊಂಡ 10 ವರ್ಷಗಳ ಮೇಲೆ ಅವನಿಗೆ ಕಾಂಪನ್‌ಸೇಷನ್ ಕೊಡುತ್ತೀರಿ. ಹತ್ತು ವರ್ಷಗಳ ನಂತರವಾದರೆ ಇನ್‌ಫ್ಲೇಷನ್ ಏನು? ಅವನು ಹಿಂದೆ 10 ರೂಪಾಯಿ ಕೊಟ್ಟಿದ್ದರೆ ಇವತ್ತಿನ ನೂರು ರೂಪಾಯಿಗೆ ಸಮ ಅಲ್ಲ. ಹಿಂದೆ 10 ರೂಪಾಯಿ ಕೊಟ್ಟಿದ್ದರೆ ಅವನು ಭೂಮಿ ತೆಗೆದುಕೊಳ್ಳುತ್ತಿದ್ದ. ಇವತ್ತು ನೀವು ನೂರು ರೂಪಾಯಿ ಕೊಟ್ಟರೂ ಹಿಂದೆ ಏನು ಒಂದು ಎಕರೆ ಜಮೀನು ಬರುತ್ತಿತ್ತು ಇವತ್ತು ಅರ್ಧ ಎಕರೆ

ಜಮೀನೂ ಬರುವುದಿಲ್ಲ. ಅದನ್ನು ನಾವು ನೋಡಬೇಕಾಗಿದೆ. ಇವತ್ತು ಎರಡು ಗುಂಟೆ ಇದ್ದರೆ ಅದರ ಮೇಲೆ ಅಪೀಲು ಹಾಕುತ್ತೀರಿ. ಸರ್ಕಾರಕ್ಕೆ ಇವತ್ತು ಬಡ್ಡಿ ಎಷ್ಟು ಬರ್ಡ್‌ನ್ ಆಗುತ್ತಿದೆ ಟ್ರಜರಿಗೆ. ಇವತ್ತಿನ ದಿವಸ ರಾಶಿ ರಾಶಿಯಾಗಿ ಸರ್ಕಾರದ ಮುಂದೆ ಕೇಸುಗಳು ಪೆಂಡಿಂಗ್‌ನಲ್ಲಿವೆ.

ಉಪಾಧ್ಯಕ್ಷರು:- ಮಾನ್ಯ ಶಿವಪ್ಪನವರೇ, ತಾವು ಬೇಗ ಮುಗಿಸಿ ಎಲ್ಲರೂ ಮಾತನಾಡಿ ಮಂತ್ರಿ-ಗಳು ಇವತ್ತು ಉತ್ತರ ಕೊಡಬೇಕಾಗಿದೆ.

ಶ್ರೀ ಹೆಚ್. ಶಿವಪ್ಪ:- ಭೂಮಿ ಕಳೆದುಕೊಂಡ ಭೂಮಾಲೀಕನಿಗೆ ತತ್‌ಕ್ಷಣ ಕಾಂಪನ್‌ಸೇಷನ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಸೆಕ್ಷನ್ 48 ಕೋರ್ಟ್ ಫೀ ವ್ಯಾಲ್ಯುವೇಷನ್, application of this Section should be relaxed. ಅವರಿಗೆ ನಾಮಿನಲ್ ಫೀ ಕೊಡುವಂತಹ ವ್ಯವಸ್ಥೆ ಮಾಡಬೇಕು. ಇನ್ನು ಡೈರೆಕ್ಟೊರೇಟ್ ಆಫ್ ಪ್ರಾಸಿಕ್ಯೂಷನ್ ಏನಿದೆ ಅದರಲ್ಲಿ ಯಾವ ಉದ್ದೇಶಕ್ಕೋಸ್ಕರ ಲೀಗಲ್ ಏಡ್ ಇದೆ, ಆ ಲೀಗಲ್ ಏಡ್ ಪ್ರಾರಂಭವಾಗಿದೆ ಅದು ಇವತ್ತಿನ ದಿವಸ ಎಲ್ಲಾ ಜನರಿಗೆ ಮುಟ್ಟುತ್ತಿಲ್ಲ. ಅದು ಪ್ರೊಸಿಜರ್‌ನಲ್ಲಿ ಮುಗಿದುಹೋಗುವಂತಹ ಪರಿಸ್ಥಿತಿ ಇದೆ. ಕೊಟ್ಟಂತಹ ದುಡ್ಡು ಬರೀ ಆಡಳಿತಕ್ಕೆ ಖರ್ಚುಮಾಡುವಂತಹ ಪರಿಸ್ಥಿತಿ ಬಂದಿದೆ. ಅದರ ಬಗ್ಗೆ ಕಾನೂನು ಇಲಾಖೆಯವರು ಚಿಂತನೆ ಮಾಡಿ, ಇದು ಯಾವ ಉದ್ದೇಶಕ್ಕೋಸ್ಕರ ಪ್ರಾರಂಭವಾಗಿದೆ ಆ ಉದ್ದೇಶ ಸಫಲವಾಗಲಿಕ್ಕೆ ಪ್ರಯತ್ನ ಮಾಡಬೇಕು.

ಇನ್ನು ವಿದ್ಯಾ ಇಲಾಖೆಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಮಾನ್ಯ ಗೋವಿಂದಗೌಡರ ಗಮನ ಸೆಳೆಯಲಿಕ್ಕೆ ಇಚ್ಛೆಪಡುತ್ತೇನೆ. ನಾವೆಲ್ಲರೂ ಹೇಳುವ ಹಾಗೆ ಮಾನ್ಯ ಗೋವಿಂದಗೌಡರು ಆದರ್ಶ ಮಂತ್ರಿಗಳಾಗಿದ್ದಾರೆ. ಪ್ರೈಮರಿ ಸ್ಕೂಲ್ಸ್ ಟೀಚರ್ಸ್‌ಗಳನ್ನು ನೀವು ಏನು ರಿಕ್ರೂಟ್ ಮಾಡುತ್ತಿದ್ದೀರಿ ಅಲ್ಲಿ ದಯವಿಟ್ಟು 50 ಪರ್ಸೆಂಟ್ ಮಹಿಳೆಯರಿಗೆ ಕೊಡುತ್ತೇವೆ ಎನ್ನುವ ವಾದವನ್ನು ಕೈ ಬಿಡಬೇಕು. ಏಕೆಂದರೆ, ಬೇರೆ ಇಲಾಖೆಯಲ್ಲಿ ನೀವು ಕೊಡಿ ನಮ್ಮದು ಅಭ್ಯಂತರ ಇಲ್ಲ. ಆದರೆ ತಮ್ಮ ಇಲಾಖೆ-ಯಲ್ಲಿ ಉಪಾಧ್ಯಾಯರುಗಳನ್ನು ಏನು ನೇಮಕ ಮಾಡುತ್ತೀರಿ ಅವರು ಹಳ್ಳಿಗಳಿಗೆ ಹೋಗಬೇಕಾಗುತ್ತದೆ. ಹಳ್ಳಿಗಳಲ್ಲಿ ಅವರಿಗೆ ಮನೆ ಇರುವುದಿಲ್ಲ. ಅವರೆಲ್ಲರೂ ಪಟ್ಟಣವನ್ನೇ ಭೇಡುತ್ತಾರೆ. ನಗರದಲ್ಲಿರ-ಬೇಕೆಂದು ಕೇಳುತ್ತಾರೆ. ಆದ್ದರಿಂದ ಕೇವಲ ಕಡಿಮೆ 25 ಪರ್ಸೆಂಟ್ 20 ಪರ್ಸೆಂಟ್ ನಿಮ್ಮ ಲೆಕ್ಕಾಚಾರದ ಪ್ರಕಾರ ಮಹಿಳೆಯರಿಗೆ ಕೊಡಬೇಕು. ಮಹಿಳೆಯರಿಗೆ ತೊಂದರೆಯಾಗುತ್ತದೆಂದು ಹೇಳುತ್ತಿದ್ದೇನೆ. ಮಹಿಳೆಯುರಿಗೆ ಪುರಸ್ಕಾರ ಕೊಡಬೇಕು ಮಾನ್ಯತೆ ಕೊಡಬೇಕು ಜಾಸ್ತಿ ರಿಸರ್ವೇಷನ್ ಕೊಡ ಬೇಕು. ಅದನ್ನೆಲ್ಲಾ ಒಪ್ಪೋಣ. ಟೀಚರ್ಸ್ ಹುದ್ದೆಗಳನ್ನು ಮಹಿಳೆಯರಿಗೆ ಕೊಟ್ಟರೆ ಉದ್ದೇಶ ಸಫಲವಾಗುತ್ತಿಲ್ಲ. ಎಲ್ಲರೂ ನಮ್ಮನ್ನು ಬಂದು ಕಾಡುತ್ತಾರೆ. ನನ್ನನ್ನು ಹರಿಹರಕ್ಕೆ ಹಾಕಿಸಿಕೊಡಿರಿ, ದಾವಣಗೆರೆಗೆ ಹಾಕಿಸಿಕೊಡಿರಿ ಎಂದು. ಅದು ಆಗುವುದಿಲ್ಲ ಇವತ್ತಿನ ದಿವಸ. ಅವರು ಹಳ್ಳಿಗೆ ಹೋಗು-ವುದಕ್ಕೆ ತಯಾರಿಲ್ಲ. ಹಳ್ಳಿಗೆ ಹೋದರೆ ಅವರಿಗೆ ಮನೆಯಿಲ್ಲ.

ಶ್ರೀ ಎಸ್.ಆರ್. ಲಕ್ಷ್ಮಯ್ಯ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶಿವಪ್ಪನವರು ವಿದ್ಯಾ ಇಲಾಖೆಯಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವಾಗ ಮಹಿಳೆಯರಿಗೆ ಶೇಕಡ 50ರಷ್ಟು ಹುದ್ದೆಗಳನ್ನು ಕೊಡಬಾರದೆಂದು ಹೇಳುತ್ತಿದ್ದಾರೆ. ಇವತ್ತು ವಿದ್ಯಾ ಇಲಾಖೆ ಅಭಿವೃದ್ಧಿಯಾಗ-ಬೇಕಾದರೆ ಹಳ್ಳಿಯ ಮಕ್ಕಳು ವಿದ್ಯಾವಂತರಾಗಬೇಕಾದರೆ ಆ ಇಲಾಖೆಗೆ ಒಳ್ಳೆಯದಾಗಬೇಕಾದರೆ ಹೆಣ್ಣು ಮಕ್ಕಳಿಗೆ 50 ಪರ್ಸೆಂಟ್ ಕೊಟ್ಟಾಗಲೇ ಸಾಧ್ಯ. ಕಾರಣ ಇಷ್ಟೆ, ಅವರು ಕದ್ದು ಹೋಗುವುದಿಲ್ಲ. ಜೂಜಾಡುವುದಕ್ಕೆ ಹೋಗುವುದಿಲ್ಲ, ಸಾರಾಯಿ ಅಂಗಡಿಗೆ ಹೋಗುವುದಿಲ್ಲ, ಬ್ರಾಂದಿ ಅಂಗಡಿಗೆ ಹೋಗುವುದಿಲ್ಲ. ಬೆಳಿಗ್ಗೆ 11 ಗಂಟೆಗೆ ಸ್ಕೂಲಿಗೆ ಹೋಗಿ 5 ಗಂಟೆಗೆ ಕರೆಕ್ಟಾಗಿ ಮನೆಗೆ ಬರುತ್ತಾರೆ. ಆದ್ದರಿಂದ ಹೆಣ್ಣುಮಕ್ಕಳಿಗೆ ಜಾಸ್ತಿ ಫ್ರಿಫರೆನ್ಸ್ ಕೊಡಬೇಕು.

ಶ್ರೀ ಹೆಚ್. ಶಿವಪ್ಪ:- ಮಾನ್ಯ ಲಕ್ಷ್ಮಯ್ಯನವರ ವಾದಕ್ಕೆ ನಮ್ಮದು ವಿರೋಧವಿಲ್ಲ. ಬೇರೆ ಇಲಾಖೆಯಲ್ಲಿ ಈಗೇನು ಹೇಳಿದನಲ್ಲಾ ಅದೆಲ್ಲಾ ಕರೆಕ್ಟ್. ನಾವು ಯಾವುದಾದರೂ ಕಛೇರಿಗೆ ಹೋಗಿ ಎಲ್ಲಿ ಹೋಗಿದ್ದಾರೆ ನಿಮ್ಮ ಗುಮಾಸ್ತರು ಅಂದರೆ ಈಗ ಜಸ್ಟ್ ಕಾಫಿ ಕುಡಿಯಲಿಕ್ಕೆ ಹೋಗಿದ್ದಾರೆಂದು ಹೇಳುತ್ತಾರೆ. ಅಥವಾ ಸಾಹೇಬರನ್ನು ನೋಡುವುದಕ್ಕೆ ಹೋಗಿದ್ದಾರೆಂದು ಹೇಳುತ್ತಾರೆ. ಹೆಣ್ಣುಮಕ್ಕಳು ಹಾಗೆ ಮಾಡೋಲ್ಲ. ಪ್ರಾಕ್ಟಿಕಲಿ ಪ್ರಾಗ್ಮಟಿಕ್ ಅಪ್ರೋಚ್ ಬೇಕಲ್ಲಾ ನಮಗೆ. ಇವತ್ತು ಹಳ್ಳಿಗೆ ಹೋಗು-ತ್ತಾರಾ ಅವರು? ಹಳ್ಳಿಗೆ ಹೋಗುವುದಕ್ಕೆ ಸಾಧ್ಯವಿದೆಯಾ; ಅಲ್ಲಿ ಮನೆ ಇದೆಯಾ? ಇಲ್ಲ. ವಾದ-ಕ್ಕೋಸ್ಕರ ವಾದ ಮಾಡುವುದು ಬೇಡ. ಇವತ್ತು ನಾವು ನೈಜವಾಗಿ ಯೋಚನೆ ಮಾಡಬೇಕಾಗುತ್ತದೆ. ವಾಸ್ತವಿಕ ಅಂಶವನ್ನು ನಾವು ಗಮನದಲ್ಲಿಡಬೇಕಾಗಿದೆ.

ಶ್ರೀ ಎಸ್. ಕೃಷ್ಣಪ್ಪ:- ಹೆಣ್ಣು ಮಕ್ಕಳಿಗೆ ಮೇಸ್ಟ್ರು ಕೆಲಸ ಕೊಟ್ಟರೆ ಅವರು ಹಳ್ಳಿಯಲ್ಲಿ ಇರು-ವುದಿಲ್ಲವೆಂದು ಹೇಳುತ್ತೀರಿ. ಇನ್ನಾವ ನೌಕರರು ಅಧಿಕಾರಿಗಳು ಹಳ್ಳಿಗಳಲ್ಲಿದ್ದಾರೆ, ಅದನ್ನು ಹೇಳಿ? ವಿಲೇಜ್ ಅಕೌಂಟೆಂಟ್ ತೆಗೆದುಕೊಳ್ಳಿ.

ಉಪಾಧ್ಯಕ್ಷರು:- ಮಾನ್ಯ ಶಿವಪ್ಪನವರೇ, ಬೇಗ ಮುಗಿಸಿ. ಇವತ್ತೆ ರಿಪ್ಲೈ ಇದೆ. ಇನ್ನು ಐದಾರು ಜನ ಮಾತನಾಡುವವರು ಇದ್ದಾರೆ.

ಶ್ರೀ ಎಸ್. ಕೃಷ್ಣಪ್ಪ:- ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕೂಟಿವ್ ಇಂಜಿನಿಯರ್‌ಗಳಿಗೆ ಬೆಂಗಳೂರಿನಲ್ಲಿ, ಮೈಸೂರಿನಲ್ಲಿ ಮನೆಗಳು ಇರುತ್ತವೆ. ಹಳ್ಳಿಗಳಿಗೆ ಹೋಗುವವರು ಯಾರು, ಅದನ್ನು ಹೇಳಿ?

ಶ್ರೀ ಹೆಚ್. ಶಿವಪ್ಪ:- ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಹೇಳಬೇಕೆಂದು ಇದ್ದೆ. ಕಂದಾಯ ಮಂತ್ರಿಗಳು ಅದಕ್ಕೆ ಧ್ವನಿಗೂಡಿಸಬೇಕು. ಇವತ್ತಿನ ದಿವಸ ಯಾವ ವಿಲೇಜ್ ಅಕೌಂ-ಟೆಂಟ್ ಸಹ ಊರಿನಲ್ಲಿ ಇರುವುದಿಲ್ಲ.

ಶ್ರೀ ಟಿ.ಎಂ. ಚಂದ್ರ ಶೇಖರಯ್ಯ:- ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ನಿಮಿಷ ಹೇಳು-ತ್ತೇನೆ. ಉಪಾಧ್ಯಾಯಿನಿಯರ ಆಯ್ಕೆಯಲ್ಲಿ ಮಹಿಳೆಯರಿಗೆ 25 ಪರ್ಸೆಂಟ್ ಕೊಡಿರಿ 50 ಪರ್ಸೆಂಟ್

ಕೊಡಿರಿ ಎನ್ನುವ ಮಾತನ್ನು ನಾವು ಒಪ್ಪುತ್ತಿಲ್ಲ. ಏಕೆಂದರೆ ಹಳ್ಳಿಯಲ್ಲಿರತಕ್ಕ ವಿದ್ಯಾರ್ಥಿನಿಯರು ಅಥವಾ ಹೆಣ್ಣುಮಕ್ಕಳು ಹಳ್ಳಿಯಲ್ಲಿ ನೌಕರಿ ಮಾಡಲಿಕ್ಕೆ ತಯಾರಿದ್ದಾರೆ. ನೌಕರಿ ಸಿಗುವುದು ಹಳ್ಳಿಯ ಹೆಣ್ಣುಮಕ್ಕಳಿಗೆ ಅದೊಂದೇ ನೌಕರಿ. ಅದನ್ನು ಬಿಟ್ಟರೆ ಹೇಗೆ? ಶಹರದ ಜನರಿಗೆ ನೀವು ಶಹರದಲ್ಲಿ ಇಡಿರಿ. ಆದರೆ ಕಲಿತವರೆಷ್ಟು ಹಳ್ಳಿಯಲ್ಲಿದ್ದವರು ಮಾತ್ರ ಟಿಸಿಹೆಚ್ ಮಾಡಿರುತ್ತಾರೆ?

ಶ್ರೀ ಹೆಚ್. ಶಿವಪ್ಪ:- ನಾನು ಒಂದು ಸಲಹೆ ಕೊಡುತ್ತಿದ್ದೇನೆ ಅಷ್ಟೆ. ಅದು ಸರ್ಕಾರಕ್ಕೆ ಬಿಟ್ಟಿದ್ದು. ಸಾಧಕಬಾಧಕಗಳನ್ನು ಯೋಚನೆ ಮಾಡಿ ಏಕೆಂದರೆ ಫಾರ್ ಅಂಡ್ ಎಗೆನೆಸ್ಟ್ ಇರಲೇಬೇಕು. ಪ್ರೋಸ್ ಅಂಡ್ ಕಾನ್ಸ್. ನಾವು ಒಂದೇ ದಿಕ್ಕಿನಲ್ಲಿ ಯೋಚನೆ ಮಾಡುವುದರಿಂದ ಶಿವಪ್ಪನವರು ಹೇಳಿದ್ದು ಸರಿಯೇ ಅಥವಾ ಇಲ್ಲವೇ ಎನ್ನುವುದನ್ನು ಚರ್ಚೆ ಮಾಡುವುದಕ್ಕೆ ಈಗ ಅವಕಾಶ ಸಿಕ್ಕಿದೆ. ಅದರ ಮೇಲೆ ನೀವು ಚಿಂತನೆ ಮಾಡಿ. You think over that. Whichever is feasible and practicable, you try to implement it. I am not against it. ಆದ್ದರಿಂದ ವಿಲೇಜ್ ಅಕೌಂಟೆಂಟ್ ಇವತ್ತಿನ ದಿವಸ ಒಬ್ಬರೂ ಹಳ್ಳಿಯಲ್ಲಿ ಸಿಗುವುದಿಲ್ಲ. ಇವತ್ತಿನ ದಿವಸ ಡೆಪ್ಯೂಟಿ ಕಮಿಷನರ್‌ರವರನ್ನು ಭೇಟಿ ಮಾಡಬಹುದು. ಇವತ್ತು ವಿಲೇಜ್ ಅಕೌಂಟೆಂಟ್ ಅನ್ನು ಭೇಟಿ ಮಾಡುವುದಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಚಿಂತನೆ ಮಾಡ-ಬೇಕಾಗಿದೆ. ಅವರು ಗ್ರಾಮದಲ್ಲೇ ಇರಬೇಕು ಎಂದು ಕಡ್ಡಾಯವಾಗಿ ಇವತ್ತು ನಿರ್ದೇಶನ ಕೊಡ-ಬೇಕಾಗಿದೆ. ನಿರ್ದೇಶನ ಕೊಟ್ಟರೂ ಆಗುವುದಿಲ್ಲ. ಇವತ್ತಿನ ದಿವಸ ಈ ಕ್ರಮ ತೆಗೆದುಕೊಳ್ಳತಕ್ಕಂಥ ಪವರ್ಸ್‌ನ್ನು ಅಧಿಕಾರಿಗಳಿಗೆ ಕೊಟ್ಟರೆ ಮಾತ್ರ ದಕ್ಷತೆಯನ್ನು ಆಡಳಿತದಲ್ಲಿ ಕೊಡಬಹುದು. ಇವತ್ತಿನ ದಿವಸ ಆ ವಿಲೇಜ್ ಅಕೌಂಟೆಂಟ್ ಎಂಟೆಂಟು ದಿವಸಗಟ್ಟಲೆ ಬರುವುದಿಲ್ಲ. ಅವನಿಗೆ ಸಸ್ಪೆಂಡ್ ಮಾಡುವುದಕ್ಕೆ ತಹಸೀಲ್ದಾರ್ ಅವರಿಗೆ ಅಧಿಕಾರ ಇಲ್ಲ. ಏನು ಮಾಡಬೇಕು? ಅವನನ್ನು ಶಿಸ್ತಿಗೆ ಒಳ-ಪಡುವ ಹಾಗೆ ಮಾಡಬೇಕು. ವಿವಿಧ ಹಂತದಲ್ಲಿ ಜಿಲ್ಲಾಧಿಕಾರಿಗಳಿಗೆ, ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ನವರಿಗೆ, ಅವರ ಸಬಾರ್ಡಿನೇಟ್ಸ್ ತಪ್ಪು ಮಾಡಿದರೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಇಲ್ಲ. ಹೀಗಾದರೆ ಆಡಳಿತದಲ್ಲಿ ಅವರು ಶಿಸ್ತನ್ನು ತರುವುದಕ್ಕೆ ಹೇಗೆ ಆಗುತ್ತದೆ? ಇವತ್ತಿನ ದಿವಸ ಅದು ಆಗುತ್ತಿಲ್ಲ. ಅದರ ಬಗ್ಗೆ ನಾವು ಯೋಚನೆ ಮಾಡಬೇಕು. ಇವತ್ತಿನ ದಿವಸ ಹಂತ ಹಂತವಾಗಿ ಅಧಿಕಾರವನ್ನು ಅಧಿಕಾರಿಗಳಿಗೆ ಕೊಡಬೇಕಾಗಿದೆ. ಈ ಅಧಿಕಾರವನ್ನು ತಹಸೀಲ್ದಾರ್ ಅವರಿಗೆ ಕೊಡಬೇಕು. ಆವಾಗ ನಾವು ದಕ್ಷತೆಯನ್ನು, ಟ್ರಾನ್ಸ್‌ಪರೆನ್ಸಿ ಇನ್ ಅಡ್ಮನಿಸ್ಟ್ರೇಷನ್ ಅನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ನಾನು ಇನ್ನೂ ಅನೇಕ ಕೆಲವು ಸಲಹೆಗಳನ್ನು ಕೊಡಬೇಕೆಂದು ಇದ್ದಾಗ್ಯೂ . . .

ಉಪಾಧ್ಯಕ್ಷರು:- ಬೇಗ ಮುಗಿಸಿ ಸ್ವಾಮಿ.

ಶ್ರೀ ಹೆಚ್. ಶಿವಪ್ಪ:- ಆಯಿತು. ಇಷ್ಟು ಹೇಳುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಂಥ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ಸದನದಲ್ಲಿ ತಂದಿರತಕ್ಕಂಥ ಬೇಡಿಕೆಗಳನ್ನು ಅನುಮೋದನೆ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಮುನಿಯಪ್ಪನವರೇ, ನೀವು 15 ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀಮತಿ ಬಿ.ಟಿ. ಲಲಿತಾನಾಯಕ್:- ಮಾನ್ಯ ಅಧ್ಯಕ್ಷರೇ, ನನಗೂ ಅವಕಾಶ ಕೊಡಬೇಕು.

ಉಪಾಧ್ಯಕ್ಷರು:- ಅವರದ್ದು ಆದಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

+ ಶ್ರೀ ಬಿ. ಮುನಿಯಪ್ಪ (ಗಾಂಧಿನಗರ):- ಮಾನ್ಯ ಉಪಾಧ್ಯಕ್ಷರೇ, 1996-97ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆಯನ್ನು ನಾನು ಪ್ರಾರಂಭ ಮಾಡುತ್ತಾ, ಇಲ್ಲಿ ಹತ್ತೊಂಭತ್ತು ಇಲಾಖೆಗಳ ಮೇಲೆ ಚರ್ಚೆ ಮಾಡಬೇಕು ಎನ್ನುವಾಗ ಬಹಳ ಸಮಯ ಬೇಕಾಗುತ್ತದೆ. ಆದರೂ ಸಹ ಕೆಲವೊಂದು ಇಲಾಖೆಗಳ ಮೇಲೆ ಬೆಳಕನ್ನು ಚೆಲ್ಲಿ ನನ್ನ ಮಾತನ್ನು ಮುಗಿಸುವುದಕ್ಕೆ ಆಸೆಪಡುತ್ತೇನೆ. ಸಾಕಷ್ಟು ವಿಚಾರಗಳನ್ನು ಎಲ್ಲಾ ಇಲಾಖೆಗಳ ಮೇಲೆ ಇಲ್ಲಿ ಸದಸ್ಯರುಗಳು ಮಾತನಾಡಿದ್ದಾರೆ. ಈ ವಿದ್ಯಾ ಇಲಾಖೆ ಬಗ್ಗೆ ಮಾತನಾಡುವಾಗ ಮಾತನಾಡಿದಂಥ ಬಹುಜನ ಸದಸ್ಯರು ಸರ್ಕಾರಿ ಪ್ರಾಥಮಿಕ ಶಾಲೆಗಳು ಇರಬಹುದು, ಮಾಧ್ಯಮಿಕ ಶಾಲೆಗಳು ಇರಬಹುದು, ಪ್ರೌಢಶಾಲೆಗಳು ಆಗಿರಬಹುದು, ಸರ್ಕಾರ ನಡೆಸುತ್ತಿರತಕ್ಕಂಥ ಜೂನಿಯರ್ ಕಾಲೇಜುಗಳು ಆಗಿರಬಹುದು. ಖಾಸಗಿಯವರ ಗುಣ-ಮಟ್ಟ ಹೆಚ್ಚಾಗಿರುವ ಕಾರಣ ಜನರು ಪ್ರೈವೇಟ್ ಕಾಲೇಜು, ಶಾಲೆಗಳಿಗೆ ಹೋಗುತ್ತಿದ್ದಾರೆ ಎನ್ನತಕ್ಕಂಥ ವಾದವನ್ನು ಬಹುಜನ ಸದಸ್ಯರು ಇಲ್ಲಿ ವ್ಯಕ್ತಪಡಿಸಿದ್ದಾರೆ. ಅದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ನಾನು ಇಲ್ಲಿ ವ್ಯಕ್ತಪಡಿಸಲು ಆಸೆಪಡುತ್ತೇನೆ. ಸರ್ಕಾರದಿಂದ ನಡೆಸಲ್ಪಡುವಂಥ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಾಲೆಗಳು ನನ್ನ ಕ್ಷೇತ್ರದಲ್ಲಿ ಹನ್ನೆರಡು ಶಾಲೆಗಳು ಇವೆ. ಸರ್ಕಾರದ ಯಾವುದೇ ಕಾಲದಲ್ಲಿ, ಯಾರು ಶಾಸಕರಾಗಿ ಆಯ್ಕೆಯಾಗಿ ಬರುತ್ತಾರೆ, ಅವರು ಸ್ಥಳೀಯ ಬೆಟರ್-ಮೆಂಟ್ ಕಮಿಟಿಯ ಅಧ್ಯಕ್ಷರಾಗಿ ಇರುತ್ತಾರೆ. ಹಾಗೆಯೇ ನನ್ನನ್ನು ನನ್ನ ಕ್ಷೇತ್ರದಲ್ಲಿ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ನನ್ನ ಶಾಸನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರತಕ್ಕಂಥ ಶಾಲೆಗಳು ಏನಿವೆ, ಅಲ್ಲಿರತಕ್ಕಂಥ ಅಧ್ಯಾಪಕರು, ಅಧ್ಯಾಪಕಿ ಸಹೋದರಿಯವರು ಏನಿದ್ದಾರೆ, ಅವರು ಒಳ್ಳೆಯ ರೀತಿಯಲ್ಲಿ ಪಾಠ ಮಾಡುತ್ತಾರೆ; ಮಕ್ಕಳಿಗೆ ಒಳ್ಳೆಯ ಶಿಸ್ತನ್ನು ಕಲಿಸುತ್ತಾರೆ. ಒಳ್ಳೆಯ ಸಂಸ್ಕೃತಿಯನ್ನು ಕಲಿಸುವಂಥ ಅಧ್ಯಾಪಕರು, ಅಧ್ಯಾಪಕಿಯರು ಅಲ್ಲಿ ಇದ್ದಾರೆ. ಕೋಟ್ಯಾಂತರ ರೂಪಾಯಿ ಆಸ್ತಿ ಹೊಂದಿರುವಂಥ ಸರ್ಕಾರಿ ಶಾಲೆಗಳು ಬಹಳ ಸುಂದರವಾದ ಕಟ್ಟಡಗಳನ್ನು ಹೊಂದಿವೆ. ಬೆಂಗಳೂರು ಮಹಾನಗರದಲ್ಲಿ ಹೃದಯ ಭಾಗವಾಗಿರತಕ್ಕಂಥ ಪ್ರದೇಶದಲ್ಲಿ ಒಳ್ಳೆಯ ಆಸ್ತಿ ಕೂಡ ಅವುಗಳಿಗೆ ಇದೆ. ಅಲ್ಲಿರತಕ್ಕಂಥ ಕೊರತೆಗಳು ಏನೆಂದು ಕೇಳುವಾಗ ಶಿಕ್ಷಕರೂ ಕೂಡ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಆದರೆ ಪ್ರತಿವರ್ಷ ಈ ಶಾಲೆಗಳ ರಿಪೇರಿ ಮಾಡುವುದು, ಶಾಲೆಯಲ್ಲಿರುವ ಅವಶ್ಯಕ ವಸ್ತುಗಳನ್ನು ನೋಡಿ-ಕೊಳ್ಳುವ ಮತ್ತು ಕೋಟ್ಯಾಂತರ ರೂಪಾಯಿ ಬೆಲೆಬಾಳುವಂಥ ಕಟ್ಟಡಗಳನ್ನು ಕಾಪಾಡಲು ಯಾವ ಶಾಲೆಯಲ್ಲೂ ಕೂಡ ರಾತ್ರಿ ಹೊತ್ತು ವಾಚ್‌ಮನ್ ಇಲ್ಲ. ಕೆಲವು ಶಾಲೆಗಳಲ್ಲಿ ರಾತ್ರಿ ಹೊತ್ತು ಗೋಡೆ ಹಾರಿ ಜನರು ಬಂದು ಅಡುಗೆ ಮಾಡಿ ಅಲ್ಲಿರತಕ್ಕಂಥ ಬೀರುಗಳನ್ನು ಒಡೆದು, ಟೇಬಲ್‌ನ್ನು ಒಡೆದು ಊಟವನ್ನು ಮಾಡಿ, ಇನ್ನೂ ಹಲವಾರು ವ್ಯವಹಾರಗಳನ್ನು ಮಾಡುವಂಥಾದ್ದು ಈ ಶಾಲೆಗಳಲ್ಲಿ

ನೋಡುತ್ತಿದ್ದೇವೆ. ಈ ಶಾಲೆಗಳು ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದರೂ ಕೂಡ ಜನರಿಗೆ, ಮಕ್ಕಳನ್ನು ಹಡೆದಂಥ ತಂದೆತಾಯಿಗಳಿಗೆ ಒಂದು ವ್ಯಾಮೋಹ ಇದೆ. ಆರ್ಥಿಕವಾಗಿ ಮುಂದುವರಿ-ದವರಾದರೂ ಆಗಿರಬಹುದು, ಅಥವಾ ಮಧ್ಯಮವರ್ಗದ ಜನರಾಗಿರಬಹುದು, ಅಥವಾ ಬಡತನ ರೇಖೆಗಿಂತ ಕಡಿಮೆ ಅದಾಯ ಇರತಕ್ಕಂಥ ಜನರು ಆಗಿರಬಹುದು, ಮಕ್ಕಳನ್ನು ಹಡೆದಂಥ ತಂದೆ ತಾಯಿಗಳು ತಮ್ಮ ಎದುರು ಮನೆಯವರೋ, ಪಕ್ಕದ ಮನೆಯವರೋ, ಏನು ಯಾವುದೋ ಬೀದಿಯಲ್ಲಿ ಅವರು ಹಲವಾರು ಸಾವಿರ ರೂಪಾಯಿ ಹಣವನ್ನು ಡೊನೇಷನ್ ಆಗಿ ಕೊಟ್ಟು ಆ ಶಾಲೆಗೆ ಮಕ್ಕಳನ್ನು ಕಳುಹಿಸಿ ಮನೆಮುಂದೆ ವಾಹನ ಬಂದು ಆ ಮಕ್ಕಳನ್ನು ಕರೆದುಕೊಂಡು ಹೋಗಿ, ಅಪ್ಪನನ್ನು ಅಪ್ಪ ಎಂದು, ಅಮ್ಮನನ್ನು ಅಮ್ಮ ಎಂದು ಕರೆದರೆ ಸಮಾಜದಲ್ಲಿ ಮೂರನೇ ದರ್ಜೆ ಪ್ರಜೆಗಳು ಎನ್ನುವ ಭಾವನೆ ಮಕ್ಕಳನ್ನು ಹಡೆದಂಥ ತಂದೆತಾಯಿಗಳಿಗೆ ಇವತ್ತು ಬಂದಿರುವುದನ್ನು ನಾವು ಸಮಾಜದಲ್ಲಿ ನೋಡುತ್ತಿದೇವೆ. ಇವತ್ತು ಎಷ್ಟೋ ಉನ್ನತಮಟ್ಟದ ಶಾಲೆಗಳೆಂದು ಕರೆಯು-ವಂಥ ಶಾಲೆಗಳಲ್ಲಿ ನೂರಕ್ಕೆ ಎಂಬತ್ತು ಪರ್ಸೆಂಟ್ ಅಂಕಗಳನ್ನು ತೆಗೆದುಕೊಂಡರೆ ಮಾತ್ರ ಆ ಶಾಲೆ-ಗಳಲ್ಲಿ ಪ್ರವೇಶವನ್ನು ಕೊಡುತ್ತಾರೆ. ನಿನ್ನೆ ದಿವಸ ನನ್ನ ಕ್ಷೇತ್ರದಲ್ಲಿ ಮಹಾನಗರಪಾಲಿಕೆಯ ಹೆಣ್ಣುಮಕ್ಕಳ ಪ್ರೌಢಶಾಲೆಯ ಕಾರ್ಯಕ್ರಮಕ್ಕೆ ಹೋಗಿದ್ದೆ. ನಗರಪಾಲಿಕೆಯ ಶಾಲೆಗಳಲ್ಲಿ 60-70 ಪರ್ಸೆಂಟ್ ಫಲಿತಾಂಶ ಬರುವುದನ್ನು ನೋಡುತ್ತೇವೆ. ಅಲ್ಲಿ ಯಾವ ಮಕ್ಕಳು ಓದುತ್ತಾರೆಂದು ಹೇಳಬೇಕಾದರೆ ಮಹನಗರಪಾಲಿಕೆಯ ಕಾರ್ಮಿಕರ ಮಕ್ಕಳು, ಬೀದಿಗೆ ಟಾರು ಹಾಕುವಂಥವರ ಮಕ್ಕಳು, ಕಟ್ಟಡ ಕಟ್ಟುವಂಥ ಕಾರ್ಮಿಕರ ಮಕ್ಕಳು, ಎಷ್ಟೋ ಜನ ಹೆಣ್ಣುಮಕ್ಕಳು ಬೆಳಿಗ್ಗೆ ಬೇರೆಯವರ ಮನೆಯಲ್ಲಿ ಕೆಲಸ ಮಾಡಿ ಪಾತ್ರೆ ಮುಸುರೆ ತೊಳೆದು ಶಾಲೆಗೆ ಬರುವಂಥ ಮಕ್ಕಳನ್ನೂ ಕೂಡ ನಾನು ಅ ಶಾಲೆ-ಗಳಲ್ಲಿ ನೋಡಿದ್ದೇನೆ. ಆದರೆ ಆ ಶಾಲೆಗಳು ಚೆನ್ನಾಗಿ ಕೆಲಸ ಮಾಡುತ್ತಿವೆ. ಆದರೆ ಈ ದಿವಸ ಆ ಶಾಲೆ-ಗಳ ರಿಪೇರಿ ಮಾಡುವುದಕ್ಕೆ ಪಿ.ಡಬ್ಲೂ.ಡಿ. ಇಲಾಖೆಗೆ ವಹಿಸಿ ತಾವು ಕೊಡುತ್ತಿರುವ ಹಣ ಯಾವುದೇ ಕೆಲಸಕ್ಕೆ ಸಾಕಾಗುವುದಿಲ್ಲ. ಈ ಹಣದಿಂದ ರಿಪೇರಿ ಮಾಡಲು ಸಾಧ್ಯವಿಲ್ಲ. ಸುಣ್ಣವನ್ನು ಬಳಿಯುವು-ದಕ್ಕೂ ಸಾಧ್ಯವಿಲ್ಲ. ಮೇಲೆ ಸೋರುತ್ತಿದ್ದರೆ ಅದನ್ನು ಮುಚ್ಚುವುದಕ್ಕೆ ಸಾಧ್ಯವಾಗದ ಮಟ್ಟಕ್ಕೆ ಪಿ.ಡಬ್ಲೂ.ಡಿ.ಯಲ್ಲಿ ಯಾವುದೋ ಕಾಲದಲ್ಲಿ ಮಾಡಿರುವಂಥ ಕಾನೂನನ್ನು ಇಟ್ಟುಕೊಂಡು 62ರಲ್ಲಿ ಕಟ್ಟಿದ ಕಟ್ಟಡಕ್ಕೆ ಒಂದು ಚದರಕ್ಕೆ ಇನ್ನೂರು ರೂಪಾಯಿ ಕೊಡುವ ಪದ್ಧತಿ ಇದೆ. ಈ ಪದ್ಧತಿ ಬದಲಾವಣೆಯಾಗಬೇಕು. ಪ್ರತಿಯೊಂದು ಶಾಲೆಯಲ್ಲೂ ಕೂಡ, ಆ ಕಟ್ಟಡವನ್ನು ಕಾಪಾಡಲು, ಆ ಶಾಲೆಯನ್ನು ಕಾಪಾಡಲು ಪ್ರತಿಯೊಂದು ಶಾಲೆಗೂ ವಾಚಮನ್ ಬೇಕು. ರಾತ್ರಿ ಹೊತ್ತು ಅಲ್ಲಿ ನಡೆಯುವಂಥ ಅವ್ಯವಹಾರಗಳನ್ನು ತಡೆಗಟ್ಟಲು ಇದು ಆಗಬೇಕೆಂದು ತಮ್ಮ ಮೂಲಕ ನಾನು ಸರ್ಕಾರದ ಗಮನಕ್ಕೆ ತಂದು, ಈ ಇಲಾಖೆ ಬಗ್ಗೆ ಹೆಚ್ಚು ಮಾತನಾಡದೆ ಒಂದಂತೂ ಕಠಿಣವಾದ ಆರೋಪ ಮಾಡಿ ಅದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈ 15ನೇ ತಾರೀಖು ಬಂದರೆ ಭಾರತದೇಶಕ್ಕೆ ಸ್ವಾತಂತ್ರ್ಯ ಬಂದು 49 ವರ್ಷಗಳಾಗುತ್ತದೆ. 49 ವರ್ಷಗಳು ಆದಮೇಲೆ ಭಾರತ ದೇಶವನ್ನು ಇವತ್ತು ನಾವು ಜಾತ್ಯಾತೀತ ರಾಷ್ಟ್ರವೆನ್ನುತ್ತೇವೆ. ಜಾತ್ಯಾತೀತ ರಾಷ್ಟ್ರವೆಂದು ಹೇಳುವಂಥ ನಾವು ಶಾಲೆಗೆ

ಮಕ್ಕಳನ್ನು ಸೇರಿಸಬೇಕಾದರೆ, ಎಷ್ಟೋ ಸರ್ಕಾರಗಳು, ಎಷ್ಟೊ ರಾಜಕೀಯ ಪಕ್ಷಗಳ ಸರ್ಕಾರಗಳು ಬಂದುಹೋದರು ಕೂಡ ಮಕ್ಕಳನ್ನು ಶಾಲೆಗೆ ಸೇರಿಸಬೇಕಾದರೆ ನೀವು ಯಾವ ಜಾತಿ, ಯಾವ ಮತ ಎಂದು ಕೇಳುವ ಪದ್ಧತಿ ಈ ಸ್ವತಂತ್ರ ಭಾರತದ 49 ವರ್ಷದಲ್ಲಿ ಇದೆ ಎನ್ನುವುದಾದರೆ ಇದು ಎಲ್ಲರೂ ತಲೆತಗ್ಗಿಸುವಂಥ ವಿಚಾರ ಎಂದು ನಾನು ನಂಬಿದ್ದೇನೆ. ಈ ಪದ್ಧತಿಯನ್ನು ಸರ್ಕಾರ, ಅದು ಸರ್ಕಾರಿ ಶಾಲೆಗಳು ಇರಬಹುದು ಅಥವಾ ಖಾಸಗಿಯಾಗಿ ನಡೆಸುವ ಶಾಲೆಗಳು ಇರಬಹುದು, ಆ ಶಾಲೆಗಳಲ್ಲಿ ಪ್ರವೇಶ ಮಾಡುವ ಮಕ್ಕಳನ್ನು ನೀನು ಯಾವ ಜಾತಿ, ಯಾವ ಮತ ಎಂದು ಕೇಳುವಂಥ ಕಾಲಮ್ ಅನ್ನು ಸರ್ಕಾರ ತೆಗೆಯಬೇಕು. ಇದನ್ನು ತೆಗೆಯದೇ ಹೋದರೆ ನಾವು ಜಾತ್ಯಾತೀತ ಸರ್ಕಾರ, ಜಾತ್ಯಾತೀತರು, ಈ ದೇಶಕ್ಕೆ ಸ್ವಾತಂತ್ರ್ಯ ಬಂದು 49 ವರ್ಷ ಆಯಿತು ಎಂದು ಹೇಳುವು-ದರಲ್ಲಿ ಯಾವುದೇ ಅರ್ಥವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಸನ್ಮಾನ್ಯ ಮಂತ್ರಿಗಳನ್ನು ನಾನು ತಮ್ಮ ಮೂಲಕ ಕೇಳುತ್ತೇನೆ, ಈ ಪದ್ಧತಿಯನ್ನು ನಾವು ಖಂಡಿತವಾಗಿಯೂ ತೆಗೆಯಬೇಕಾಗಿದೆ. ಮಕ್ಕಳ ಎಳೆಯ ವಯಸ್ಸಿನಲ್ಲಿ ಜಾತಿ ಬೀಜವನ್ನು ಬಿತ್ತುವುದನ್ನು ತಡೆಹಿಡಿಯಬೇಕಾಗಿದೆ ಎನ್ನುವುದನ್ನು ನಾನು ವಿದ್ಯಾ ಇಲಾಖೆಗೆ ಸಂಬಂಧಪಟ್ಟ ವಿಚಾರಗಳನ್ನು ಪ್ರಸ್ತಾಪ ಮಾಡಿ ಅದೇ ರೀತಿಯಲ್ಲಿ ಬೆಂಗ-ಳೂರು ಅಭಿವೃದ್ಧಿ ಬಗ್ಗೆ ಮಾತನಾಡುವಾಗ ಈ ಬೆಂಗಳೂರು ಮಹಾನಗರ ಕರ್ನಾಟಕ ರಾಜ್ಯದ ಹತ್ತ-ರಲ್ಲಿ ಒಂದು ಭಾಗ ಜನಸಂಖ್ಯೆಯನ್ನು ಹೊಂದಿರುವಂಥದ್ದು. ಇವತ್ತು ಇಲ್ಲಿರತಕ್ಕಂಥ ಸಮಸ್ಯೆಗಳನ್ನು, ಯಾವ ಸರ್ಕಾರಗಳು ಬಂದರೂ ಕೂಡ ಬೆಂಗಳೂರನ್ನು ಅಭಿವೃದ್ಧಿ ಪಡಿಸುವಲ್ಲಿ ವಿಫಲವಾಗಿದೆ ಎನ್ನುವ ಆಪಾದನೆಯನ್ನು ಈ 49 ವರ್ಷಗಳಲ್ಲಿ ಆಡಳಿತ ನಡೆಸಿದಂಥ ಎಲ್ಲಾ ಸರ್ಕಾರಗಳ ಮೇಲೆ ಮಾಡಲು ನಾನು ಇಚ್ಛೆಪಡುತ್ತೇನೆ. ಕಾರಣ, ಬೆಂಗಳೂರು ನಗರಕ್ಕೆ 25-30 ವರ್ಷಗಳಿಗೆ ಮುಂಚೆ-ಯೇ ಮೇಲು ಸೇತುವೆ, ಸುರಂಗ ಮಾರ್ಗಗಳು ಆಗಬೇಕಾಗಿತ್ತು. ಆದರೆ ಇದಕ್ಕೆ ಮುಂಚೆ ಮೂರು-ನಾಲ್ಕು ಮುಖ್ಯಮಂತ್ರಿಗಳು ಆಗಿದ್ದವರು ಶಂಕುಸ್ಥಾಪನೆ ನೆರವೇರಿಸಿದ್ದರೂ ಕೂಡ ಈಗ ನಾವು ಮಾಡೋಣ ಎನ್ನುವ ಪ್ರಯತ್ನಕ್ಕೆ ಬಂದಿದ್ದೇವೆ. ಪಕ್ಕದ ರಾಜ್ಯದಲ್ಲಿ ಅದು ಆಂಧ್ರಪ್ರದೇಶ ಆಗಿರ-ಬಹುದು, ತಮಿಳುನಾಡು ಆಗಿರಬಹುದು, ಅಲ್ಲಿ ಹಲವಾರು ಸುರಂಗ ಮಾರ್ಗಗಳು, ಮೇಲು ಸೇತುವೆಗಳಾಗಿ 20 ವರ್ಷವಾಗಿದೆ. ಬೆಂಗಳೂರು ಜನಸಂಖ್ಯೆ ಅರ್ಧ ಕೋಟಿ ಇದೆ. ಹೊರಗಿನಿಂದ ಬರತಕ್ಕಂಥ ಪ್ರವಾಸಿಗರು ದಿನಕ್ಕೆ 10 ಲಕ್ಷ ಇದ್ದಾರೆ. ಬಂಧುಗಳ ಮನೆಗಳಿಗೆ ಬರುವವರು ಮತ್ತು ವ್ಯಾಪಾರಕ್ಕಾಗಿ ಬರುವವರು ಎಂದು ಐದು–ಹತ್ತು ಲಕ್ಷ ಜನ ಪ್ರತಿದಿವಸ ಬೆಂಗಳೂರಿಗೆ ಬರುತ್ತಾರೆ. ಬೆಂಗಳೂರು ನಗರದಲ್ಲಿ ಯಾವ ಭಾಗಕ್ಕೆ ಹೋದರೂ ಕೂಡ, ಒಂದು ಕಡೆಯಿಂದ ಮತ್ತೊಂದು ಕಡೆಗೆ ವಾಹನ ಇರಬಹುದು ಅಥವಾ ದ್ವಿಚಕ್ರ ವಾಹನ ಇರಬಹುದು, ನಾಲ್ಕು ಚಕ್ರ ವಾಹನ ಇರ-ಬಹುದು, ಎಲ್ಲಿ ನೋಡಿದರೂ, ಯಾವ ಭಾಗದಲ್ಲಿ ಕೂಡ ಓಡಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಮೊದಲೇ ಹೇಳಿದ ರೀತಿಯಲ್ಲಿ, ಬೆಂಗಳೂರು ನಗರದ ಜನರು ವಂಚಿತರಾಗಿದ್ದಾರೆ. ಕಳೆದ ವರ್ಷಕ್ಕೆ ಬೆಂಗಳೂರು ಮಹಾ ನಗರ ಪಾಲಿಕೆಯ ಚುನಾವಣಾ ಅವಧಿ ಮುಗಿದಿದ್ದರೂ ಕೂಡ ಇವತ್ತಿನವರೆಗೂ ಬೆಂಗಳೂರು ಪಾಲಿಕೆಯ ಚುನಾವಣೆಯನ್ನು ನಡೆಸಲು ಹಲವಾರು ಕಾರಣಗಳನ್ನು ತೋರಿಸಿ

ಮುಂದೂಡುತ್ತಿದ್ದಾರೆ. ಅಲ್ಲಿ ಚುನಾಯಿತ ಪ್ರತಿನಿಧಿಗಳು ಇಲ್ಲದೇ ಸರಿಯಾದ ಕೆಲಸಗಳು ಆಗುತ್ತಾ ಇಲ್ಲ. ಕೆಲಸಗಳು ಆಗಬೇಕಾದರೆ, ಸರ್ಕಾರ ತಕ್ಷಣ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯನ್ನು ನಡೆಸಬೇಕಾಗಿದೆ. ಇದರ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ. ಹಳೆಯ ಸರ್ಕಾರ, ಬೆಂಗಳೂರು ಮಹಾನಗರ ಪಾಲಿಕೆಯ ಮತ್ತು ರಾಜ್ಯದ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಏನು ವ್ಯವಸ್ಥೆ ಮಾಡಿ, ಮೀಸಲಾತಿಯನ್ನು ಜಾರಿಗೆ ತಂದರೋ ಅದು ಶಾಸನ ಸಭೆಯಲ್ಲಿ ಚರ್ಚೆಗೆ ಒಳಗಾಗಲಿಲ್ಲ, ಚರ್ಚಿಸಲಿಲ್ಲ, ಏನು ಮೀಸಲಾತಿಯನ್ನು ಜಾರಿಗೆ ತಂದಿದ್ದಾರೆ, ಈ ಸರ್ಕಾರವಾದರೂ ಈ ಪದ್ಧತಿಗಳನ್ನು ವಾಸ್ತವವಾಗಿರತಕ್ಕಂಥ ಮತ್ತು ಇವತ್ತಿನ ನಡೆನುಡಿಗೆ ಹೊಂದಿಕೊಳ್ಳುವಂಥ ಮೀಸಲಾತಿ ಪದ್ಧತಿಯನ್ನು ಜಾರಿಗೆ ತರಬೇಕಾಗಿದೆ. ಇವತ್ತು ಬೆಂಗಳೂರು ಮಹಾನಗರದಲ್ಲಿ, ಒಂದು ನೂರು ವಾರ್ಡ್‌ಗಳು ಇವೆ. ಈ ವಾರ್ಡ್‌ಗಳಲ್ಲಿ ಹೊಸ ಪದ್ಧತಿಯಿಂದಾಗಿ ಬಂದಿರತಕ್ಕಂಥ ಮೀಸಲಾತಿ ಪದ್ಧತಿಯಲ್ಲಿ, ಎರಡು ವಾರ್ಡ್‌ಗಳು ಇವೆ. ಅದು ಬಿ.ಸಿ.ಬಿ. ಎಂದು, ಆ ಬಿ.ಸಿ.ಬಿ. ವಾರ್ಡ್‌ಗಳ ಅವಶ್ಯಕತೆ ಏಕೆ ಇದೆ ಎಂದು ಕೇಳುವಾಗ, ಅವರಿಗೆ ಏನೇನು ಸೌಲಭ್ಯಗಳು ಇರಬೇಕು, ಇರಬಾರದು ಎನ್ನುವುದನ್ನು ಸೂಚಿಸುತ್ತೇನೆ. ಅವರು ಟೆಲಿಫೋನ್‌ಗಳನ್ನು ಇಟ್ಟುಕೊಂಡಿದ್ದರೆ, ಮೀಸಲಾತಿಗೆ ಬಿ.ಸಿ.ಬಿ. ಬರುವುದಿಲ್ಲವೆಂದು ಪ್ರಸ್ತಾಪವಾಗಿದೆ. ಒಂದು ವೇಳೆ ಚುನಾವಣೆ ನಡೆಯುವಾಗ ಟೆಲಿಫೋನ್ ಇಟ್ಟುಕೊಳ್ಳದೆ ಇರಬಹುದು. ಚುನಾವಣೆ ಗೆದ್ದ ಮೇಲೆ, ವ್ಯಾಪಾರದಿಂದಲೋ ಅಥವಾ ಯಾವುದಾದರೊಂದು ರೀತಿಯಲ್ಲಿ ಲಾಭ ಬಂದು ಅಥವಾ ರೇಸ್‌ಕೋರ್ಸಿಗೆ ಹೋಗಿ, ಅಲ್ಲಿ ಯಾವುದಾದರೂ ಜಾಕ್‌ಪಾಟ್ ಹೊಡೆದು ಅಥವಾ ಯಾವುದಾದರೂ ರಾಜ್ಯದ ಲಾಟರಿ ಟಿಕೆಟ್ ತೆಗೆದುಕೊಂಡು, ಅದರಿಂದ ಲಕ್ಷಾಂತರ ರೂಪಾಯಿ ಬಂದು, ಅವರು ಟೆಲಿಫೋನ್ ಹಾಕಿಕೊಂಡರೆ ಅವರ ಸದಸ್ಯತ್ವವನ್ನು ನೀವು ಕಿತ್ತುಕೊಳ್ಳುತ್ತೀರೋ ಎಂದು ನಾನು ನಿಮ್ಮನ್ನು ಕೇಳುತ್ತೇನೆ. ಬೆಂಗಳೂರು ನಗರದಲ್ಲಿ ಮೀಸಲಾತಿ ಬಗ್ಗೆ ಬರುವಾಗ, ಕೆಲವು ಜಾತಿಗಳನ್ನು ಇಂಥಿಂಥ ಪಟ್ಟಿಯಲ್ಲಿ ಇರಬೇಕೆಂದು ಸೂಚಿಸಿದ್ದಾರೆ. ಅದರಲ್ಲಿ ವಣ್ಯ ಎಂದು, ಒಂದು ಜಾತಿ. ಆ ಜಾತಿ "ಎ" ಗ್ರೂಪ್‌ನಲ್ಲಿ ಬರುತ್ತದೆ. ಇನ್ನೊಂದು ಜಾತಿ ಗೌಂಡರ್ ಎನ್ನುವುದು. ಈ ಜಾತಿ "ಬಿ" ಗ್ರೂಪ್‌ನಲ್ಲಿ ಬರುತ್ತದೆ. ಈ ವಣ್ಯ ಮತ್ತು ಗೌಂಡರ್ ಎನ್ನುವುದು ಒಂದೇ ಜಾತಿ. ಅವರು "ಎ"ನಲ್ಲಿ ಬೇಕಾದರೂ ನಿಂತುಕೊಳ್ಳಬಹುದು, ಅಥವಾ "ಬಿ" ನಲ್ಲಿ ಬೇಕಾದರೂ ನಿಂತುಕೊಳ್ಳಬಹುದು. ಇಲ್ಲಿ ಒಂದು ಕಡೆ "ವಣ್ಯ" ಎ - ಗ್ರೂಪಿನಲ್ಲಿ ಬರುತ್ತಾರೆ, ಗೌಂಡರ್, ಬಿ–ಗ್ರೂಪಿನಲ್ಲಿ ಬರುತ್ತಾರೆ. ಅದೇ ರೀತಿ ಕಮ್ಮನಾಯುಡು ಎಂದು, ಒಂದು ಜಾತಿ ಇದೆ. ಇದನ್ನು "ಎ"ನಲ್ಲಿ ಕಮ್ಮ ಇಟ್ಟು, "ಬಿ"ನಲ್ಲಿ ನಾಯುಡು ಇಟ್ಟಿದ್ದಾರೆ. ಇದು ವೈಜ್ಞಾನಿಕವಾಗಿಲ್ಲದೆ, ಜನರನ್ನು ವಂಚಿಸುವ ರೀತಿಯಲ್ಲಿ ಮತ್ತು ವಾಸ್ತವಾಂಶವಿಲ್ಲದ ರೀತಿಯಲ್ಲಿ ಈ ರಿಸರ್ವೇಶನ್ ಪದ್ಧತಿ ಇದೆ ಎನ್ನುವುದನ್ನು ನಾನು ತಾಳ್ಮೆಯಿಂದ ಸರ್ಕಾರದ ಗಮನಕ್ಕೆ ತರಲು ಆಸೆಪಡುತ್ತೇನೆ. ಅದೇ ರೀತಿಯಲ್ಲಿ ನೂರು ವಾರ್ಡ್‌ಗಳನ್ನು ಮಾಡುವಾಗ ಬೆಂಗಳೂರು ನಗರದಲ್ಲಿ ಮಹಿಳೆಯರಿಗೆ, ಹಿಂದುಳಿದವರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಈ ರೀತಿಯ ವಾರ್ಡ್‌ಗಳನ್ನು ಮಾಡುವಾಗ ಇಂಥಿಂಥ ವಿಭಾಗ, ಇಂಥಿಂಥ ವಾರ್ಡ್ ಎಂದು ಯಾರಾದರೂ ಅಪೇಕ್ಷೆ ಪಟ್ಟರೆ,

ಅದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಆ ರೀತಿ ಮಹಿಳೆಯರಿಗೆ ಮತ್ತು ಹಿಂದುಳಿದವರಿಗೆ ತಮ್ಮ ಮನಸ್ಸಿಗೆ ಬಂದಂತೆ ಆಳುವ ಪಕ್ಷ, ಅವರಿಗೆ ಎಲ್ಲಿ ಅನುಕೂಲವಾಗಿರುತ್ತದೆಯೋ, ಆ ಜಾಗಗಳಲ್ಲಿ, ಅವೈಜ್ಞಾನಿಕ-ವಾಗಿ, ಇದನ್ನು ಜಾರಿಗೆ ತಂದಿರುವುದನ್ನು ನಾವು ನೋಡಬಾರದು. ರಾಜಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿ ಪ್ರಕಾಶನಗರ ಎನ್ನುವಂಥ ವಾರ್ಡ್ ಇದೆ. ಈ ವಾರ್ಡ್ ಈ ಮೊದಲು ಜನರಲ್ ಆಗಿತ್ತು. ಇವತ್ತು ಅದನ್ನು ಪರಿಶಿಷ್ಟಜಾತಿಯವರಿಗೆ ಮೀಸಲಾಗಿಟ್ಟಿದ್ದಾರೆ. ಆ ವಿಭಾಗದಲ್ಲಿನ ವಾರ್ಡ್‌ನಲ್ಲಿನ ಒಂದು ಸಾವಿರ ಮಾತದಾರರು ಪರಿಶಿಷ್ಟ ಜನಾಂಗಕ್ಕೆ ಸೇರಿದವರು ಇಲ್ಲ. ಇದನ್ನು ಯಾರಿಗೋ, ಅವರಿಗೆ ಬೇಕಾದವರಿಗೋಸ್ಕರ, ಆ ರೀತಿ ಬದಲಾವಣೆ ಮಾಡಿ, ಅಲ್ಲಿಯ ಜನರ ಕೋಪಕ್ಕೆ ಇವತ್ತು ಒಳಗಾಗಿದ್ದಾರೆ. ಯಾವುದಾದರೊಂದು ವಾರ್ಡ್‌ನ್ನು ಇದು ಮಹಿಳೆಯರಿಗೆ ಮೀಸಲು, ಇದು "ಎ" ಗ್ರೂಪಿಗೆ ಮೀಸಲು ಮತ್ತೊಂದು "ಬಿ" ಗ್ರೂಪಿಗೆ ಮೀಸಲು, ಮೊಗದೊಂದು ಪರಶಿಷ್ಟಜಾತಿಗೆ ಮೀಸಲು ಎಂದು ಹೇಳುವಾಗ, ಅದನ್ನು ಜನರಿಗೆ ಪ್ರಕಟಿಸಿ ಏನಾದರೂ ಆಕ್ಷೇಪಣೆ ಇದೆಯೇ ಎಂದು ಕೇಳಬೇಕಾಗಿತ್ತು. ಆ ರೀತಿ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಮಾಡಿಲ್ಲ; ಇದನ್ನು ಮಾಡ-ಬೇಕೆಂದು ಹೇಳುತ್ತೇನೆ. ಅದೇ ಸಂದರ್ಭದಲ್ಲಿ ನಮ್ಮಲ್ಲಿ ಅಂಕಿಅಂಶಗಳು ಇವೆ. ಇಷ್ಟು ಜನರು ಬೆಂಗ-ಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮಹಿಳಾ ಮತದಾರರು ಇದ್ದಾರೆ, ಇಷ್ಟು ಜನರು ಗಂಡಸರು ಇದ್ದಾರೆ ಎಂಬ ಅಂಕಿ ಅಂಶಗಳು ಇವೆ. ಇಷ್ಟು ಜನ ಪರಿಶಿಷ್ಟಜಾತಿ ಮತ್ತು ಪಂಗಡಕ್ಕೆ ಸೇರಿದವರಿದ್ದಾರೆ ಎಂಬ ಅಂಕಿಅಂಶಗಳು ಇವೆ. ಆದರೆ, ರಾಜ್ಯದಲ್ಲಾದರೂ ಸರಿ, ಬೆಂಗಳೂರು ನಗರದಲ್ಲಾದರೂ ಸರಿ ಇಷ್ಟು ಜನರು ಹಿಂದುಳಿದವರು ಇದ್ದಾರೆನ್ನುವಂಥ ಅಂಕಿಅಂಶಗಳನ್ನು ಈ ನಿಮಿಷದವರಿಗೆ ನಾವು ತೆಗೆದಿಲ್ಲ. ಆದರೆ, ಅವರಿಗೆ ಮೀಸಲಾತಿಯನ್ನು ಕೊಟ್ಟು, ಅನ್ಯಾಯವನ್ನು ಮಾಡಿ, ಯಾರಿಗೂ ಅನುಕೂಲಕರ ಇಲ್ಲದಂಥ ಪದ್ಧತಿಯನ್ನು ಬೆಂಗಳೂರು ಮಹಾನಗರ ಪಾಲಿಕೆ-ಯಲ್ಲಿ ಜಾರಿಗೆ ತಂದಿದ್ದಾರೆ. ಪಕ್ಕದಲ್ಲಿರತಕ್ಕ ತಮಿಳುನಾಡಿನಲ್ಲಿ ಇದೇ ರೀತಿಯ ಪದ್ಧತಿಯನ್ನು ತರು-ವಾಗ, ಅಲ್ಲಿ ವಾರ್ಡ್‌ಗಳ ಸಿಸ್ಟಂ ತರುವಾಗ, ಇಂಥಿಂಥ ವಿಭಾಗ, ಇಂತಹ ನಂಬರ್, ಇದು ಮಹಿಳೆ-ಯರಿಗೆ ಇದು ಪರಿಶಿಷ್ಟ ಜಾತಿಯವರಿಗೆ ಎಂದು ಅವಕಾಶವನ್ನು ಕೊಟ್ಟು, ಯಾರಾದರೂ ಆಕ್ಷೇಪಣೆ ಮಾಡಿಯಾರು ಎಂದು, ಒಂದು ತಿಂಗಳು ಕಾಲಾವಕಾಶವನ್ನು ಕೊಟ್ಟರು. ಅದೇ ಸಂದರ್ಭದಲ್ಲಿ ಇವರಿಗೆ ನಾವು ಹಿಂದುಳಿದ ಜನಾಂಗಧ ಅಂಕಿಅಂಶಗಳನ್ನು ತೆಗೆದಿಟ್ಟಿಲ್ಲ. ಇದನ್ನು ತೆಗೆಯಬೇಕಾದರೆ ಎರಡು ವರ್ಷಗಳ ಕಾಲ ಬೇಕಾಗುತ್ತದೆ. ಆದಕಾರಣ, ಈಗಿರತಕ್ಕ ಹಳೆಯ ವಾರ್ಡ್‌ಗಳನ್ನೇ ಇಟ್ಟು ಚುನಾವಣೆಯನ್ನು ಮಾಡುತ್ತೇವೆ, ಪಕ್ಕದ ತಮಿಳುನಾಡಿನಲ್ಲಿ ಮಾಡಿದ್ದಾರೆ, ಜಾರಿಗೆ ಬರುತ್ತದೆ ಎನ್ನುವುದಾದರೆ, ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇಂಥಿಂಥ ತಪ್ಪುಗಳನ್ನು ಮಾಡಿದ್ದಾರೆ. ಈಗಿನ ಸರ್ಕಾರ, ಇದನ್ನು ಬದಲಾವಣೆ ಮಾಡಿ, ವೈಜ್ಞಾನಿಕ ಪದ್ಧತಿಯಲ್ಲಿ, ವಾಸ್ತವಿಕವಾದ ಪದ್ಧತಿ-ಯನ್ನು ಅನುಸರಿಸಿ, ಈ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯನ್ನು ಬೇಗ ನಡೆಸ-ಬೇಕು. ಅಲ್ಲಿ ಪ್ರಜಾಪ್ರತಿನಿಧಿಗಳು ಬಂದು, ಅವರು ಅಧಿಕಾರವನ್ನು ಸ್ವೀಕರಿಸಿ, ಜನರ ಸಮಸ್ಯೆಗಳನ್ನು, ಅದರಲ್ಲೂ ವೇಗವಾಗಿ ಬೆಳೆದಿರತಕ್ಕ ಬೆಂಗಳೂರು ನಗರದ ಸಮಸ್ಯೆಗಳನ್ನು ಬಗೆಹರಿಸಲು ಅವಕಾಶ-

ವಾಗುತ್ತದೆ ಎನ್ನುವ ಮಾತನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅದೇ ಸಂದರ್ಭದಲ್ಲಿ ಬೆಂಗಳೂರು ನಗರದ ಸುತ್ತಮುತ್ತಲೂ ಇರತಕ್ಕ ಪ್ರದೇಶಗಳಲ್ಲಿ, ಅದು ಬಿ.ಡಿ.ಎ. ಪ್ರದೇಶಗಳಾಗಿರಬಹುದು, ರೆವಿನ್ಯೂ ಪ್ಯಾಕೆಟ್‌ಗಳಾಗಿರಬಹುದು. ಹಲವಾರು ಹಳ್ಳಿಗಳನ್ನು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸೇರಿಸಿ-ಕೊಂಡರು. ಇದಕ್ಕೆ ನನ್ನ ಯಾವುದೇ ವಿಧವಾದ ಅಭ್ಯಂತರ ಇಲ್ಲ. ಆದರೆ, 1990ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ನಡೆಯುವಾಗ, ಅವತ್ತಿನ ದಿವಸ ಬೆಂಗಳೂರು ನಗರದಲ್ಲಿ ಕಸ ಗುಡಿಸಲು 1300 ಜನ ಪೌರ ಕಾರ್ಮಿಕರು ಬೇಕೆಂದು ಸಾರ್ವಜನಿಕರಿಗೆ ಕರೆಯನ್ನು ಕೊಟ್ಟು, ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಸುಮಾರು 70-80 ಸಾವಿರ ಜನರು ಪೌರ ಕಾರ್ಮಿಕರಾಗಿ ಕೆಲಸ ಮಾಡಲು ಅರ್ಜಿ ಹಾಕಿಕೊಂಡರು. ವಿದ್ಯಾವಂತರು, ಅವಿದ್ಯಾವಂತರು, ಪದವೀಧರರು ಎಲ್ಲರೂ ಅರ್ಜಿಗಳನ್ನು ಹಾಕಿಕೊಂಡರು. 1990 ರಲ್ಲಿ 1995ರವರೆಗೂ ಬೆಂಗಳೂರು ಮಹಾನಗರ ಪಾಲಿಕೆ-ಯ ಅಧಿಕಾರದ ಅವಧಿಯೂ ಕೂಡ ಮುಗಿಯಿತು. ಆದರೆ, ಇವತ್ತಿನವರೆಗೂ ಆ 1300 ಜನಪೌರ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿಲ್ಲ. 1990ರಲ್ಲಿ 1300 ಜನ ಬೇಕಾಗಿತ್ತು. ಇವತ್ತಿಗೆ ಕನಿಷ್ಟ 3 ಸಾವಿರ ಜನ ಪೌರ ಕಾರ್ಮಿಕರು ಬೆಂಗಳೂರು ಮಹಾನಗರ ಪಾಲಿಕೆಗೆ ಬೇಕಾಗಿದೆ. ಅವರನ್ನು ತೆಗೆದು ಕೊಳ್ಳದೆ ಇವತ್ತು ಚುನಾವಣೆ ನಡೆಸುವುದು ಮತ್ತೆ ಹೊರಗಡೆ ಇರತಕ್ಕ ಬಿ.ಡಿ.ಎ ಪ್ಯಾಕೆಟ್‌ಗಳನ್ನು, ರೆವಿನ್ಯೂ ಪ್ಯಾಕೆಟ್‌ಗಳನ್ನು ಮತ್ತು ಕೆಲವು ಗ್ರಾಮಗಳನ್ನು ಸೇರಿಸಿ ಇವತ್ತು ಬೆಂಗಳೂರು ನಗರದ ಜನತೆಗೆ ಕೆಲಸ ಮಾಡುತ್ತೇವೆಂದು ಯಾರಾದರೂ ತಿಳಿದರೆ, ಅದು ಭ್ರಮೆಯಾಗುತ್ತದೆ. ಈ ವಿಚಾರ-ವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆಗಿರತಕ್ಕ ಲೋಪಗಳನ್ನು ಸರಿಪಡಿಸಿ, ಬೆಂಗಳೂರು ಮಹನಗರ ಪಾಲಿಕೆಯ ಚುನಾವಣೆಯನ್ನು ತಾವು ನಡೆಸಬೇಕು. ತಕ್ಷಣ ಪೌರ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ತೆಗೆದುಕೊಳ್ಳಬೇಕಾದರೆ, ಪ್ರಪಂಚದಲ್ಲಿ ಯಾವ ರಾಜ್ಯದಲ್ಲಿ, ಯಾವ ರಾಷ್ಟ್ರದಲ್ಲಿಯೂ ಕೇಳಿರದ ಪದ್ಧತಿಯನ್ನು ಬೆಂಗಳೂರು ಮಹನಗರ ಪಾಲಿಕೆಯಲ್ಲಿ ಲಾಟರಿಯನ್ನು ಹಾಕಿ ತೆಗೆದುಕೊಳ್ಳಬೇಕೆಂದು, ಅಧಿಕಾರಿಗಳು ಹೇಳುತ್ತಿದ್ದಾರೆ. ಈ ರೀತಿ ಲಾಟರಿ ಹಾಕಿ ತೆಗೆದು-ಕೊಳ್ಳುವಾಗ, ಅವನು ಕುಂಟ ಬರಬಹುದು, ಕುರುಡ ಬರಬಹುದು ಅಥವಾ ಅಂಗವಿಕಲರಾಗಿರು-ವವರು ಬರಬಹುದು. ಈ ರೀತಿ ಲಾಟರಿ ಹಾಕಿ ಕೆಲಸಕ್ಕೆ ತೆಗೆದುಕೊಳ್ಳುವಂಥ ಕಥೆಯನ್ನು ನಾನು ಎಲ್ಲಿಯೂ ಕೇಳಿಲ್ಲ, ಇಂತಹ ಘಟನೆಗಳು ಎಲ್ಲಿಯೂ ನಡೆದಿಲ್ಲವೆಂದು ತಿಳಿಯುತ್ತೇನೆ. ಇಂತಹ ವಿಷಯವನ್ನು ಕೈಬಿಟ್ಟು ಯಾರು 1300 ಜನ ಪೌರ ಕಾರ್ಮಿಕರ ಕೆಲಸಕ್ಕೆ ಅರ್ಜಿಯನ್ನು ಹಾಕಿದ್ದಾರೆ. ಇದರಲ್ಲಿ ಹೆಚ್ಚು ಭಾಗ ವಿದ್ಯಾವಂತರೇ ಹಾಕಿರುತ್ತಾರೆ. ಈ ವಿದ್ಯಾವಂತರನ್ನು ಪೌರ ಕಾರ್ಮಿಕರ ಕೆಲಸಕ್ಕೆ ಸೇರಿಸಿಕೊಂಡರೆ, ಇವರು 6 ತಿಂಗಳು ಅಥವಾ ಒಂದು ವರ್ಷವಾದ ಮೇಲೆ, ನಾನು ಡಿಗ್ರಿ ಪಡೆದಿದ್ದೇನೆ, ನಾನು ಪೌರ ಕಾರ್ಮಿಕರ ಕೆಲಸವನ್ನು ಮಾಡುವುದಿಲ್ಲವೆಂದು ಯಾರಾದರೂ ಕಾರ್ಪೊ-ರೇಟರ್ ಅಥವಾ ಎಂ.ಎಲ್.ಎ ಅಥವಾ ಮಂತ್ರಿಗಳ, ಬಳಿ ಬಂದು, ನನಗೆ ಬೇರೆ ಕೆಲಸವನ್ನು ಕೊಡಬೇಕೆಂದು ಅರ್ಜಿಗಳನ್ನು ಕೊಡುವುದನ್ನು ನಾವು ನೋಡುತ್ತೇವೆ. ಆ ರೀತಿ ಪೌರ ಕಾರ್ಮಿಕರ ಕೆಲಸಕ್ಕೆ 7-8ನೇ ತರಗತಿ ಓದಿದವರನ್ನು ತೆಗೆದುಕೊಂಡು, ಅವರಿಗೆ ಸಂದರ್ಶನ ಕೊಟ್ಟು,

ಯಾವುದಾದರೊಂದು ಮೈದಾನಕ್ಕೆ ಕರೆದುಕೊಂಡು ಹೋಗಿ, ಅವರ ಕೈಯಲ್ಲಿ ಪೊರಕೆ ಕೊಟ್ಟು, ಗುಡಿಸುವ ಕೆಲಸ ಮಾಡಿಸಬೇಕು. ಈ ರೀತಿ ಗುಡಿಸಲು ಯಾರು ಸಮರ್ಥರಾಗಿದ್ದಾರೆ ಅಂತಹವರನ್ನು ಇವತ್ತು ಪೌರ ಕಾರ್ಮಿಕರ ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬ ಮಾತನ್ನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಬೆಂಗಳೂರು ನಗರದಲ್ಲಿ ಇವತ್ತು ನೂರು ವಾರ್ಡ್‌ಗಳು ಇವೆ. ಈ ವಾರ್ಡ್‌ಗಳಿಗೆ ಗ್ಯಾಂಗ್‌-ಮೆನ್‌ಗಳನ್ನು ತೆಗೆದುಕೊಳ್ಳುವಾಗ ಒಂದು ವಾರ್ಡ್‌ನಲ್ಲಿ ಈಗ 4-5 ಜನ ಗ್ಯಾಂಗ್‌ಮೆನ್‌ಗಳು ಇದ್ದಾರೆ. ಆ 4-5 ಜನ ಗ್ಯಾಂಗ್‌ಮೆನ್‌ಗಳಲ್ಲಿ 2-3 ಗ್ಯಾಂಗ್‌ಮೆನ್‌ಗಳು ಕೆಲಸ ಮಾಡಲು ಸಾಧ್ಯವಿಲ್ಲದೇ ಇರುವ ಮಟ್ಟದಲ್ಲಿದ್ದಾರೆ. ಈ 2-3 ಜನ ಗ್ಯಾಂಗ್‌ಮೆನ್‌ಗಳನ್ನು ಇಟ್ಟುಕೊಂಡು ಬೆಂಗಳೂರು ನಗರದಲ್ಲಿ ಕೆಲಸವನ್ನು ತೆಗೆಯಲಿಕ್ಕೆ ಸಾಧ್ಯವಿಲ್ಲ. ನನ್ನ ಕ್ಷೇತ್ರದಲ್ಲಿ 6 ಕಾರ್ಪೊರೇಷನ್ ಡಿವಿಜನ್‌ಗಳು ಇತ್ತು. ಈಗ 4 ವಾರ್ಡ್‌ಗಳು ಆಗಿವೆ. ಈ 4 ವಾರ್ಡ್‌ಗಳಲ್ಲಿ 4-5 ಜನ ಗ್ಯಾಂಗ್‌-ಮೆನ್‌ಗಳನ್ನು ಇಟ್ಟುಕೊಂಡು ನನ್ನ ಕ್ಷೇತ್ರದಲ್ಲಿ ಕೆಲಸ ತೆಗೆಯಲಿಕ್ಕೆ ಸಾಧ್ಯವಿಲ್ಲ. ಸರ್ಕಾರ ಮತ್ತು ಮಂತ್ರಿಗಳು ಬೆಂಗಳೂರು ನಗರವನ್ನು ಚೊಕ್ಕಟವಾಗಿಡಲು ಸುಂದರವಾಗಿ ಇಡಲು ಹೆಚ್ಚು ಹೆಚ್ಚು ಪೌರಕಾರ್ಮಿಕರನ್ನು ಮತ್ತು ಗ್ಯಾಂಗ್‌ಮೆನ್‌ಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ಬೆಂಗಳೂರು ಮಹಾನಗರಪಾಲಿಕೆಯಲ್ಲಿ ದಿನನಿತ್ಯ ಸರ್ಕಾರದ ಅನುಮತಿ ಇಲ್ಲದೇ ಹೊಸ ಹೊಸ ಹುದ್ದೆಗಳನ್ನು ಕೊಡುವಂತಹ ಪದ್ಧತಿ ಬೆಂಗಳೂರು ಮಹಾನಗರಪಾಲಿಕೆಯಲ್ಲಿದೆ. ಆ ಪದ್ಧತಿ ಬದಲಾವಣೆಯಾಗ-ಬೇಕು ಯಾವುದೇ ವಿಧವಾದ ಸರ್ಕಾರದ ಅನುಮತಿ ಇಲ್ಲದೇ, ಕಾನೂನಿನ ಚೌಕಟ್ಟಿಗೆ ವಿರುದ್ಧವಾಗಿ ಅವರಿಗೆ ಮನ ಬಂದಂತೆ ಪೆಂಡಿಂಗ್ ಅಪ್ರೂವಲ್ ಎನ್ನುವ ಹೆಸರಿನಲ್ಲಿ ಹಲವಾರು ಹುದ್ದೆಗಳನ್ನು ಸೃಷ್ಠಿ ಮಾಡುವುದನ್ನು ಸರ್ಕಾರ ತಕ್ಷಣ ತಡೆಹಿಡಿಯಬೇಕೆಂದು ನಾನು ಒತ್ತಾಯವನ್ನು ಮಾಡುತ್ತಾ ಅದೇ ರೀತಿಯಲ್ಲಿ ಇನ್ನೂ ಹಲವಾರು ವಿಚಾರಗಳನ್ನು ಮಾತನಾಡಬೇಕು ಎಂದು ಬಂದರೂ ಕೂಡ ಸಮಯದ ಅಭಾವದಿಂದ ನಾನು ಸಾರಿಗೆ ಸಂಸ್ಥೆಯ ವಿಚಾರವನ್ನು ಒಂದೆರಡು ನಿಮಿಷದಲ್ಲಿ ಮಾತ-ನಾಡುತ್ತೇನೆ. ಬೆಂಗಳೂರು ನಗರ ಸಾರಿಗೆ ಮತ್ತು ಕರ್ನಾಟಕ ರಾಜ್ಯದ ಸಾರಿಗೆಯನ್ನು ಬೇರ್ಪಡಿಸುವ ಬಗ್ಗೆ ಮಾನ್ಯ ಮಂತ್ರಿಗಳು ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ನೀವು ಯಾವ ರೀತಿಯಲ್ಲಿ ಆದರೂ ಸರಿ ಆ ಇಲಾಖೆಯನ್ನು ಬೇರ್ಪಡಿಸಬೇಕು. ಬೆಂಗಳೂರು ನಗರದಲ್ಲಿ ಯಾವ ಬಸ್ಸನ್ನು ನೋಡಿದರೂ ಕೂಡ ಒಂದು ಬಸ್ಸಿನಲ್ಲಿ 50 ಜನ ಹೋಗು-ವಂತಹ ಕಡೆಗಳಲ್ಲಿ 75ರಿಂದ 100 ಜನ ಪ್ರಯಾಣ ಮಾಡುತ್ತಾರೆ. ಆದರೂ ಸಹ ಆ ಸಂಸ್ಥೆ ನಷ್ಟದಲ್ಲಿ ನಡೆಯುತ್ತದೆ ಅಂದರೆ ಅದಕ್ಕೆ ಕಾರಣವೇನು? ಅದಕ್ಕೆ ಕಾರಣಕರ್ತರು ಯಾರು ಎನ್ನುವುದನ್ನು ನಾವು ಇವತ್ತು ಚಿಂತನೆ ಮಾಡಬೇಕಾಗುತ್ತದೆ. ಒಂದು ಅಂಬಾಸಿಡರ್ ಕಾರನ್ನು ತೆಗೆದುಕೊಂಡರೆ ಅದರಲ್ಲಿ 5-6 ಜನ ಕುಳಿತುಕೊಂಡು ಹೋಗುವುದು ಅದು ಲಾಭದಾಯಕವಾಗಿದೆ, ಆದರೆ 50 ಜನ ಕುಳಿತು ಪ್ರಯಾಣ ಮಾಡುವಂತಹ ಬೆಂಗಳೂರು ನಗರ ಸಾರಿಗೆ ಬಸ್ಸಿನಲ್ಲಿ ಈ ರೀತಿ ನಡೆಯುತ್ತಿದೆ ಎಂದು ಹೇಳುವುದಾದರೆ ಆ ನಷ್ಟವನ್ನು ಹೋಗಲಾಡಿಸಲು ಮಾನ್ಯಮಂತ್ರಿಗಳು ಮತ್ತು ಸರ್ಕಾರ ತೀರ್ಮಾನ

ತೆಗೆದುಕೊಂಡಿರುವ ರೀತಿಯಲ್ಲಿ ಬೆಂಗಳೂರು ನಗರ ಸಾರಿಗೆ ಸಂಸ್ಥೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೇರ್ಪಡಿಸಿ ತೀವ್ರವಾದ ಕ್ರಮವನ್ನು ತೆಗೆದುಕೊಂಡು ಬೆಂಗಳೂರು ನಗರದ ಜನರಿಗೆ ಒಳ್ಳೆಯ ಒಂದು ಸಾರಿಗೆ ವ್ಯವಸ್ಥೆಯನ್ನು ಕೊಟ್ಟು ಸರ್ಕಾರಕ್ಕೆ ಒಳ್ಳೆಯ ಲಾಭ ಬರುವಂತೆ ಮಾನ್ಯ ಮಂತ್ರಿಗಳು ಮಾಡಬೇಕು ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡಬೇಕಾದರೆ ಕೆಲವಾರು ವರ್ಷಗಳ ಹಿಂದೆ ಅಲ್ಲಿರುವ ಕಾರ್ಮಿಕ ಸಂಘಕ್ಕೂ ಮತ್ತು ಆಡಳಿತವರ್ಗಕ್ಕೂ ಒಂದು ಒಪ್ಪಂದ ಏರ್ಪಟ್ಟಿತ್ತು. ಆ ಒಪ್ಪಂದ ಇವತ್ತಿನವರೆಗೂ ಜಾರಿಗೆ ಬಂದಿಲ್ಲ. ಈ ಕಡೆ ಮಾನ್ಯ ಸಾರಿಗೆ ಸಚಿವರು ಗಮನ ಕೊಡಬೇಕು. ಆ ಕಾರ್ಮಿಕರಿಗೂ ಮತ್ತು ಆಡಳಿತ ವರ್ಗಕ್ಕೂ ಆದಂತಹ ಒಪ್ಪಂದ ಇಲ್ಲಿಯವರೆಗೂ ಜಾರಿಗೆ ಬಂದಿಲ್ಲ. ಅದನ್ನು ಜಾರಿಗೆ ತಂದು ಎಲ್ಲರೂ ಶ್ರದ್ಧೆಯಿಂದ ಕೆಲಸ ಮಾಡುವ ರೀತಿಯಲ್ಲಿ ಸಾರಿಗೆ ಸಂಸ್ಥೆಯನ್ನು ನಡೆಸಬೇಕು ಎಂದು ಹೇಳುತ್ತೇನೆ. ಬಹಳ ಪ್ರಮುಖವಾದ ಇಲಾಖೆ ಪೋಲೀಸ್ ಇಲಾಖೆ. ಈ ಪೋಲೀಸ್ ಇಲಾಖೆಯ ವಿಚಾರವನ್ನು ಮಾತನಾಡುವಾಗ ತಾವೆಲ್ಲರೂ ಇವತ್ತು ಪೋಲೀಸ್ ಇಲಾಖೆಯನ್ನು ಟೀಕೆ ಮಾಡುವುದನ್ನು ನೋಡುತ್ತೇವೆ. ಬೆಂಗಳೂರು ನಗರದಲ್ಲಿ ನನ್ನ ಕ್ಷೇತ್ರದಲ್ಲಿ ಬಸ್ಸು ನಿಲ್ದಾಣ, ಸಾರಿಗೆ ಸಂಸ್ಥೆಯ ನಿಲ್ದಾಣ ನಗರ ಸಾರಿಗೆ ಸಂಸ್ಥೆಯ ನಿಲ್ದಾಣ ರಾಜ್ಯ ಸಾರಿಗೆ ಸಂಸ್ಥೆಯ ನಿಲ್ದಾಣ, ರೈಲ್ವೆ ನಿಲ್ದಾಣ ಇರತಕ್ಕಂಥ ಪ್ರದೇಶಗಳಲ್ಲಿ ಉಪ್ಪಾರಪೇಟೆ ಪೋಲಿಸ್ ಸ್ಟೇಷನ್ ಬರುತ್ತದೆ. ಇಲ್ಲಿ ಸುಮಾರು 60 ಜನ ಕಾನ್ಸಟೇಬಲ್‌ಗಳನ್ನು ಇಟ್ಟುಕೊಂಡಿದ್ದಾರೆ. ಬೆಂಗಳೂರು ನಗರಕ್ಕೆ ಒಂದು ದಿವಸಕ್ಕೆ ಲಕ್ಷಾಂತರ ಜನ ಬಂದು ಹೋಗುತ್ತಾರೆ. ಪ್ರಯಾಣಿಕರು ಬಸ್ಸಿನಲ್ಲಿ ಬರುತ್ತಾರೆ ರೈಲಿನಲ್ಲಿ ಬರುತ್ತಾರೆ. ಆ ಬಸ್ಸುಗಳಲ್ಲಿ ರೈಲುಗಳಲ್ಲಿ ಅಪರಾಧಿಗಳು ಬರುತ್ತಾರೆ ಕೊಲೆಗಡುಕರು ಬರುತ್ತಾರೆ, ಕಳ್ಳ-ಸಾಗಣಿಕೆದಾರರು ಬರುತ್ತಾರೆ, ಈ ಉಪ್ಪಾರಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ 60 ಜನ ಪೋಲೀಸ್ ಕಾನ್ಸ್‌ಟೇಬಲ್‌ಗಳನ್ನು ಇಟ್ಟುಕೊಂಡು ಕರ್ನಾಟಕ ರಾಜ್ಯದ ಹೃದಯದಂತೆ ಇರುವ ಬೆಂಗಳೂರು ನಗರದ ರೈಲ್ವೆ ನಿಲ್ದಾಣ, ಬಸ್ಸು ನಿಲ್ದಾಣ ಮತ್ತು ನಗರಸಾರಿಗೆ ನಿಲ್ದಾಣಗಳಿಂದ ಬರತಕ್ಕಂಥ ಅಪರಾಧಿ-ಗಳನ್ನು ಪೋಲಿಸಿನವರು ಕಂಡು ಹಿಡಿಯುವುದಕ್ಕೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ. ನಿನ್ನೆಯ ದಿವಸ ಮಾತನಾಡಿದಂತಹ ಎಷ್ಟೋ ಜನ ಮಾನ್ಯ ಗೆಳೆಯರು ಹೇಳಿದರು. ಪೋಲಿಸ್ ಇಲಾಖೆ-ಯಲ್ಲಿರತಕ್ಕಂಥ ಆಯುಧಗಳಿಗಿಂತ ಅಪರಾಧಿಗಳ ಬಳಿ ಇರತಕ್ಕಂಥ ಆಯುಧಗಳು ಬಹಳ ಆಧುನಿಕ ವಾಗಿವೆ. ಇವತ್ತು ಪೋಲಿಸ್ ಇಲಾಖೆಯಲ್ಲಿರತಕ್ಕಂಥ ವಾಹನಗಳಿಗಿಂತ ಅಪರಾಧಿಗಳ ಬಳಿ ಅವರು ಬಹಳ ಆಧುನಿಕವಾದಂತಹ ವಾಹನಗಳನ್ನು ಇಟ್ಟಿದ್ದಾರೆ. ಈ ದೇಶದಲ್ಲಿ ಯಾವ ಯಾವ ಸಂಘಟನೆ-ಗಳನ್ನು ಸರ್ಕಾರ ತಡೆಗಟ್ಟಿದೆಯೋ ಆ ಸಂಘಟನೆಗಳೆಲ್ಲಾ ಇವತ್ತು ಬೆಂಗಳೂರು ನಗರದಲ್ಲಿ ತಲೆ ಎತ್ತಿದೆ ಎನ್ನುವುದಾದರೆ ಪೋಲಿಸ್ ಇಲಾಖೆ ಅವರನ್ನು ಕಂಡು ಹಿಡಿಯುವುದರಲ್ಲಿ ಇವತ್ತು ವಿಫಲವಾಗ-ಬಾರದು ಎನ್ನುವುದಾದರೆ ನಾನು ಸರ್ಕಾರದ ಗಮನಕ್ಕೆ ಒಂದೇ ಒಂದು ವಿಚಾರವನ್ನು ತರುತ್ತೇನೆ. ಹೊರರಾಜ್ಯಗಳಿಂದ ಬೆಂಗಳೂರು ನಗರಕ್ಕೆ ಬರತಕ್ಕಂಥ ವಾಹನಗಳನ್ನು ಅದು ಬಳ್ಳಾರಿ ರಸ್ತೆ ಆಗಿರ-ಬಹುದು ಹಳೆ ಮದ್ರಾಸ್ ರಸ್ತೆ ಆಗಿರಬಹುದು, ಈ ಕಡೆ ಹೊಸೂರು ಮಾರ್ಗದಿಂದ ಬರುವಂತಹ ಬಸ್ಸುಗಳು ಆಗಿರಬಹುದು, ಮೈಸೂರಿನಿಂದ ಬರುವ ಮಾರ್ಗ ಆಗಿರಬಹುದು, ಯಾವುದೇ ಮಾರ್ಗ

ಆದರೂ ಕೂಡ ಪೋಲೀಸ್ ಇಲಾಖೆ 24 ಗಂಟೆ ಗಡಿ ಪ್ರದೇಶಗಳಿಂದ ಬೆಂಗಳೂರು ಪ್ರವೇಶ ಮಾಡುವಂತಹ ಸ್ಥಳಗಳಲ್ಲಿ ದಿನಕ್ಕೆ 24 ಗಂಟೆಗಳ ಕಾಲ ಪೋಲೀಸಿನವರು ಅಲ್ಲಿ ಕಾದು ಹೊರರಾಜ್ಯ-ಗಳಿಂದ ಬರುವಂತಹ ವಾಹನಗಳ ನಂಬರುಗಳನ್ನು ನೋಡಿಕೊಂಡು ತಪಾಸಣೆ ಮಾಡುವಂತಹ ಕೆಲಸವನ್ನು ಇವತ್ತು ಮಾಡದೇ ಹೋದರೆ ಮುಂದಿನ ದಿವಸಗಳಲ್ಲಿ ಬಹಳ ಕಷ್ಟವಾಗುತ್ತದೆ. ಮದ್ರಾಸ್‌ನಲ್ಲಿರತಕ್ಕಂಥ ಆರ್‌ಎಸ್‌ಎಸ್ ಕಛೇರಿಗೆ, ಬೆಂಗಳೂರು ನಗರದಲ್ಲಿರತಕ್ಕಂಥವರು ಹೋಗಿ ಬಾಂಬ್-ನ್ನು ಹಾಕುತ್ತಾರೆ ಎನ್ನುವುದಾದರೆ ಇಲ್ಲಿರತಕ್ಕಂಥ ವಿಧಾನಸೌಧಕ್ಕೊ, ಇಲ್ಲಿರತಕ್ಕಂಥ ಹೈಕೋರ್ಟ್‌ಗೊ, ಇಲ್ಲಿರತಕ್ಕಂಥ ಎಲ್.ಐ.ಸಿ. ಕಟ್ಟಡಕ್ಕೊ ಅಪಾಯ ಬರುವುದರಲ್ಲಿ ಸಂಶಯವಿಲ್ಲ. ದೇಶದಲ್ಲಿ ಬ್ಯಾನ್ ಮಾಡಿರುವ ಎಲ್ಲಾ ಸಂಘಟನಾ ಶಕ್ತಿಗಳು ಬೆಂಗಳೂರು ನಗರದಲ್ಲಿವೆ. ಅದಕ್ಕೆ ಎಚ್ಚರದಿಂದ ನಮ್ಮ ಗಡಿಭಾಗಗಳಲ್ಲಿ ಹೊರಗಿನಿಂದ ಬರುವ ವ್ಯಕ್ತಿಗಳನ್ನು ನಮ್ಮ ಪೋಲೀಸಿನವರು ಗುರುತಿಸದೇ ಹೋದರೆ ಮುಂದೆ ಬೆಂಗಳೂರು ನಗರಕ್ಕೆ ಅಪಾಯ ಇದೆ ಎನ್ನುವುದನ್ನು ಸರ್ಕಾರ ಗಮನಕ್ಕೆ ತಂದು ಹಲವಾರು ವಿಚಾರಗಳನ್ನು . . .

ಉಪಾಧ್ಯಕ್ಷರು:- ತಾವು ಬೇಗ ಮುಗಿಸಬೇಕು. ಸಮಯ ಆಗಿದೆ.

ಶ್ರೀ ಬಿ. ಮುನಿಯಪ್ಪ:- ನನಗೆ ಎಷ್ಟು ಸಮಯ ಕೊಟ್ಟಿದ್ದೀರಿ?

ಉಪಾಧ್ಯಕ್ಷರು:- 15 ನಿಮಿಷ.

ಶ್ರೀ ಬಿ. ಮುನಿಯಪ್ಪ:- ಎಲ್ಲರಿಗೂ ಒಂದೂವರೆ ಗಂಟೆ ಅವಕಾಶ ಕೊಟ್ಟಿದ್ದೀರಿ. ನಾನು ಮಾತ-ನಾಡುವಾಗ ಬೇಗ ಮುಗಿಸಿ ಅಂದರೆ ನನ್ನ ಮಾತನ್ನು ನಾನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಅವರು ಬಹಳ ಒಳ್ಳೆಯ ಸಲಹೆಗಳನ್ನು ಸರ್ಕಾರಕ್ಕೆ ಕೊಡುತ್ತಿದ್ದಾರೆ. ಬ್ಯಾನ್ಡ್ ಆರ್ಗನೈಜೇಶನ್ಸ್ ಮತ್ತು ಇಂಟರ್‌ನ್ಯಾಶನಲ್ ಆರ್ಗನೈಜೇಶನ್ಸ್ ಇಲ್ಲಿ ಕೆಲಸ ಮಾಡುತ್ತಿವೆ ಎಂದು ಹೇಳುತ್ತಿದ್ದೀರಿ. ದಯವಿಟ್ಟು ಅವುಗಳ ಇನ್‌ಫರ್‌ಮೇಷನ್ ಅನ್ನು ಹೇಳಿದರೆ ನಮಗೆ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಆಗುತ್ತದೆ. ದಯವಿಟ್ಟು ಹೇಳಿ.

ಶ್ರೀ ಬಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಾಜಿ ಗೃಹ ಸಚಿವರು ಹೇಳುವ ರೀತಿ-ಯಲ್ಲಿ ಆ ಸಂಘಟನೆಗಳ ಜೊತೆಯಲ್ಲಿ ನನಗೆ ಸಂಪರ್ಕವಿಲ್ಲ. ಕಳೆದ ಕೆಲವು ದಿವಸಗಳ ಮುಂಚೆ ಬಸವೇಶ್ವರನಗರದಲ್ಲಿ ಆಂಧ್ರಪ್ರದೇಶದ ಯಾವುದೋ ಒಂದು ಸಂಘಟನೆಯನ್ನು ನಮ್ಮ ಪೋಲೀಸಿ-ನವರು ಹಿಡಿದು ಬೆಳಕಿಗೆ ತಂದರು. ಲಕ್ಷಾಂತರ ರೂಪಾಯಿಗಳ ಚಿನ್ನ, ಬೆಳ್ಳಿ, ಆಯುಧಗಳನ್ನು. ಅದೇ ರೀತಿಯಲ್ಲಿ ಶಿವರಸನ್ ಈ ದೇಶದ 25 ರಾಜ್ಯಗಳಲ್ಲಿ ಯಾವ ರಾಜ್ಯಕ್ಕೂ ಹೋಗಲಿಲ್ಲ. ಬೆಂಗಳೂರಿಗೆ ಬಂದಿದ್ದ. ಇಲ್ಲಿ ಬಹಳ ಸರಳವಾಗಿ ಒಂದು ಸಾವಿರ ರೂಪಾಯಿ ಬಾಡಿಗೆ ಕೊಡುವಂತಹ ಮನೆಗೆ ಎರಡು ಮೂರು ಸಾವಿರ ರೂಪಾಯಿ ಬಾಡಿಗೆಯನ್ನು ಕೊಟ್ಟರೆ ಯಾರಿಗೆ ಬೇಕಾದರೂ ಬೆಂಗಳೂರಿನ ಜನ ಮನೆಯನ್ನು ಬಾಡಿಗೆಗೆ ಕೊಡುತ್ತಾರೆ. ಅದೇ ಬೇರೆ ರಾಜ್ಯಗಳಿಗೆ ಹೋಗಿ ನೀವು ಎಷ್ಟೇ ತಲೆಕೆಳಗೆ ಮಾಡಿದರೂ ಕೂಡ ಅವರು ನಮ್ಮ ಹಿಂದಿನ ಚರಿತ್ರೆಯ ಪುಟಗಳನ್ನೆಲ್ಲಾ ತಿರುಗಿಸಿ ನೀವು ಎಲ್ಲಿಂದ

ಬಂದಿದ್ದು ಎಂದು ಕೇಳಿ ನಮ್ಮ ಕಥೆಗಳನ್ನೆಲ್ಲಾ ಜಾಲಾಡಿ ಕಡೆಗೆ ಮನೆಯನ್ನೂ ಕೊಡುವುದಿಲ್ಲ. ಬೆಂಗಳೂರು ನಗರದಲ್ಲಿ ಇವತ್ತು ಹೊಸ ಬಡಾವಣೆಗಳಲ್ಲಿ 5 ಸಾವಿರ ರೂಪಾಯಿ ಬಾಡಿಗೆ ಕೊಡುವ ಯೋಗ್ಯವಾದ ಮನೆಗೆ 10 ಸಾವಿರ ರೂಪಾಯಿಗಳ ಬಾಡಿಗೆಯನ್ನು ಕೊಟ್ಟು 2-3 ಲಕ್ಷ ರೂಪಾ-ಯಿಗಳ ಅಡ್ವಾನ್ಸ್‌ನ್ನು ಕೊಟ್ಟರೆ ಯಾವ ರಾಜ್ಯದ ಜನರು ಬಂದರೂ ಕೂಡ ಯಾವ ಅಪರಾಧವನ್ನು ಮಾಡುವವರು ಬಂದರೂ ಕೂಡ ಬೆಂಗಳೂರಿನಲ್ಲಿ ಮನೆಯನ್ನು ಕಟ್ಟಿರತಕ್ಕಂಥ ಮನೆಯ ಮಾಲೀಕ-ರು ಬಾಡಿಗೆಗೆ ಮನೆಯನ್ನು ಕೊಡುವ ವಾತಾವರಣ ಇದೆ ಎನ್ನುವುದನ್ನು ನಾನು ಸನ್ಮಾನ್ಯ ಸಚಿವರ ಗಮನಕ್ಕೆ ತಂದು ನಾನು ಪೋಲೀಸ್ ಇಲಾಖೆಯ ಬಗ್ಗೆ ಕಳೆದ ಸಾರಿ ಬಜೆಟ್ ಭಾಷಣದ ಮೇಲೆ ಮಾತನಾಡುವಾಗ ಪೋಲೀಸ್ ಇಲಾಖೆಯಲ್ಲಿರತಕ್ಕಂಥ ಸುಮಾರು 40 ಸಾವಿರ ಜನ ಅವರ ಜೀವನ ಮಟ್ಟ ಅವರನ್ನು ಟೀಕೆ ಮಾಡುವುದು ಒಂದು ಭಾಗ, ನಿಜವಾಗಿಯೂ ನಾವು ಅವರ ಬಗ್ಗೆ ಆರೋಗ್ಯ-ಕರವಾದ ಟೀಕೆಯನ್ನು ಮಾಡಬೇಕು. ಅದೇ ರೀತಿಯಲ್ಲಿ ಅವರು ಮಾಡುವಂತಹ ಒಳ್ಳೆಯ ಕೆಲಸಗಳ ಬಗ್ಗೆ ಕೂಡ ಅಭಿನಂದನೆಗಳನ್ನು ಮಾಡಬೇಕು. ಮತ್ತು ಕಳೆದ ಸಲ ನಾವು ಶಾಸಕರಾಗಿ ಬಂದಂತಹ ಸಂದರ್ಭದಲ್ಲಿ ಬೆಂಗಳೂರು ನಗರ ಪೋಲೀಸ್ ಕಮೀಷನರ್ ಕಛೇರಿಯಲ್ಲಿ 8-10 ಕೋಟಿ ರೂಪಾಯಿಗಳ ವಸ್ತುಗಳನ್ನು ಕರೆನ್ಸಿ ನೋಟಿನಿಂದ ಹಿಡಿದು ಚಿನ್ನ, ಬೆಳ್ಳಿ, ಟೇಪ್‌ರೆಕಾರ್ಡ್, ಎಲ್ಲವನ್ನೂ ಬೆಂಗಳೂರು ನಗರದಲ್ಲಿರತಕ್ಕಂಥ ಪೋಲೀಸ್ ಸ್ಟೇಷನ್‌ಗಳು ಹಿಡಿದಂತಹ ಕದ್ದ ಮಾಲುಗಳನ್ನು ವಸ್ತುಪ್ರದರ್ಶನಕ್ಕೆ ಇಟ್ಟಿದ್ದರು ಎನ್ನುವಾಗ ನಮ್ಮ ಪೋಲೀಸಿನವರು ಒಳ್ಳೆಯ ಕೆಲಸವನ್ನು ಮಾಡುತ್ತಿ-ದ್ದಾರೆ ಎಂಬುದು ಗೊತ್ತಾಗುತ್ತದೆ. ನಮ್ಮಲ್ಲಿ ಒಂದು ಪದ್ಧತಿ ಇದೆ. ರಾಜಕಾರಣಿಗಳೆಲ್ಲರೂ ಅಯೋಗ್ಯರು ಕಳ್ಳರು. ಅಧಿಕಾರಿಗಳೆಲ್ಲರೂ ಅಯೋಗ್ಯರು ಕಳ್ಳರು, ಎಂದು ಪತ್ರಕರ್ತರು ಏನೋ ಬರೆದುಬಿಡುತ್ತಾರೆ. ಈ ರೀತಿ ಸಾಧಾರಣವಾಗಿ ಜನರು ಮಾತನಾಡುವುದು. ಆದರೆ ರಾಜಕಾರಣಿ ಇಲ್ಲದೇ ಹೋದರೆ ಸರ್ಕಾರಗಳು ಇಲ್ಲ. ಅಧಿಕಾರಿಗಳು ಇಲ್ಲದ ಸರ್ಕಾರಗಳು ಇಲ್ಲ. ಆದರೆ ಪತ್ರಕರ್ತರು ಇಲ್ಲದೇ ಪ್ರಪಂಚ ಉಳಿಯುವುದಿಲ್ಲ. ಆದರೆ ಒಬ್ಬರನ್ನು ಒಬ್ಬರು ಟೀಕೆ ಮಾಡಿಕೊಂಡು ಅವರ ಮನೋ-ಧೈರ್ಯವನ್ನು ಕುಂದಿಸುವಂತಹ ಕೆಲಸ ಮಾಡುವುದನ್ನು ನಿಲ್ಲಿಸಬೇಕು. ಪೋಲೀಸರನ್ನು ಟೀಕೆ ಮಾಡಿ ಅವರ ಮನೋ ಧೈರ್ಯವನ್ನು ಕುಂದಿಸುವ ಬದಲು ಅವರ ಕಷ್ಟ ಸುಖಗಳನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಗ್ರಾಮಾಂತರ ಪ್ರದೇಶಗಳ ಪೋಲೀಸ್ ಠಾಣೆಯಲ್ಲಿ ಕೆಲಸ ಮಾಡತಕ್ಕಂಥ ಪೋಲೀಸರಿಗೆ ಕಡಿಮೆ ದರದಲ್ಲಿ ಕೊಡತಕ್ಕಂಥ ದವಸ ಧಾನ್ಯಗಳನ್ನು 6 ತಿಂಗಳುಗಳಿಂದ ಕೊಟ್ಟಿಲ್ಲ. ಇದರ ಜೊತೆಗೆ ಅವರಿಗೆ ರಜಾ ದಿನಗಳ ವೇತನವನ್ನು 15 ದಿವಸಗಳಿಗೆ ಬದಲಾಗಿ 3 ವಾರಗಳವರೆಗೆ ಕೊಡಲಾಗುತ್ತದೆಂದು ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವಾಗ ಹೇಳಿದ್ದರು. ಆದರೆ, ನಾನು ಅದನ್ನು ಒಂದು ತಿಂಗಳವರೆಗೆ ಕೊಡಬೇಕೆಂದು ಸಲಹೆ ಮಾಡಿದ್ದೆ. ಈ ರಜಾ ದಿನ ಭತ್ಯೆಯನ್ನು ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಮಾತ್ರ ಕೊಟ್ಟು ಎ.ಎಸ್.ಐ ಮತ್ತು ಸಬ್ ಇನ್ಸ್‌ಪೆಕ್ಟರುಗಳಿಗೆ ಇನ್ನೂ ಕೊಟ್ಟಿಲ್ಲ. ಇಂಥಾ ಸಣ್ಣ ಪುಟ್ಟ ಸಹಾಯವನ್ನು ವಿಳಂಬ ಮಾಡದೆ ಪೋಲೀಸರಿಗೆ ಕೊಡಬೇಕು. ಮತ್ತೆ ನನ್ನ ಕ್ಷೇತ್ರದಲ್ಲಿ ಮತ್ತು ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್‌ರವರ ಕ್ಷೇತ್ರದಲ್ಲಿ ಪೋಲೀಸರ

ಹಲವಾರು ಕ್ವಾರ್ಟರ್ಸ್ ಇವೆ. ಈ ಕ್ವಾರ್ಟ್‌ರ್ಸ್‌ಗಳ ಸುಧಾರಣೆ ಬಗ್ಗೆ ಹಲವಾರು ಬಾರಿ ನಾನು ಮಾತನಾಡಿದರೂ ಏನೂ ಪ್ರಯೋಜನವಾಗಿಲ್ಲ. ಅಲ್ಲಿರತಕ್ಕಂಥ ಕ್ವಾರ್ಟರ್ಸ್‌ಗಳು ಕೊಳಚೆ ಪ್ರದೇಶ-ಗಳಿಗಿಂತ ಕೀಳಾಗಿವೆ. ಅಲ್ಲಿ ನಾಗರೀಕ ಸೌಕರ್ಯಗಳಿಲ್ಲದೆ ವಂಚಿತರಾಗಿರುವುದರಿಂದ ಈ ಕೂಡಲೇ ಆ ಕ್ವಾರ್ಟರ್ಸ್‌ಗಳ ಸುಧಾರಣೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಈಗ ನಾವು ಇರುವ ಈ ಸುಂದರ ಕಟ್ಟಡವನ್ನು ಕಟ್ಟಿದ ಮಾನ್ಯ ಕೆಂಗಲ್ ಹನುಮಂತಯ್ಯನವರು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಒಂದು ವರದಿಯನ್ನು ಕೊಟ್ಟಿದ್ದರು. ಆ ವರದಿ ಪ್ರಕಾರ ಶಾಸನಸಭೆಯ ಸದಸ್ಯರ ಸಂಖ್ಯೆಯ 10 ಪರ್ಸೆಂಟ್ ಮಾತ್ರ ಮಂತ್ರಿಗಳಾಗಿರಬೇಕೆಂದು ತಿಳಿಸಿದ್ದರು. ಅದರ ಪ್ರಕಾರ ಇವತ್ತು 24 ಜನ ಮಂತ್ರಿಗಳು ಮಾತ್ರ ಇರಬೇಕಾಗಿತ್ತು. ಅವರು ಕೊಟ್ಟಿದ್ದಂಥ ವರದಿಯನ್ನು ತಿದ್ದುಪಡಿ ಮಾಡಿಕೊಂಡು ಇವತ್ತು 45 ಜನ ಮಂತ್ರಿಗಳಿದ್ದಾರೆ. ಜನರ ಕೆಲಸವನ್ನು ಮಾಡಲು 45 ಜನ ಮಂತ್ರಿಗಳ ಅವಶ್ಯಕತೆ ಇದೆಯೆಂದು ಭಾವಿಸುವುದಾದರೆ ಆ 45 ಜನ ಮಂತ್ರಿಗಳೂ ಶಾಸನ ಸಭೆಯಲ್ಲಿ ಕೂರುವಂಥ ಮನಸ್ಸು ಮಾಡಬೇಕು. ಇಷ್ಟು ಜನ ಮಂತ್ರಿಗಳಾಗಿದ್ದರೂ ಇನ್ನೂ ಹಲವಾರು ಎಂ.ಎಲ್.ಎ.ಗಳು ನಾನೂ ಮಂತ್ರಿಯಾಗಬೇಕೆಂದು ಕನಸು ಕಾಣುತ್ತಿದ್ದಾರೆ. ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಇವತ್ತಿನ ದಿವಸದಲ್ಲಿ ರಾಜ್ಯದಲ್ಲಿ ಸಮಸ್ಯೆಗಳು ವೇಗವಾಗಿ ಬೆಳೆಯುತ್ತಿವೆ. ಬೆಂಗಳೂರು ನಗರಕ್ಕೆ ನೀರು ಸರಬರಾಜು ಆಗುತ್ತಿದ್ದಂಥ ತಿಪ್ಪಗೊಂಡನ ಹಳ್ಳಿ ಕೆರೆಯಲ್ಲಿ ಮತ್ತು ಹೆಸರಘಟ್ಟ ಕೆರೆಯಲ್ಲಿ ಇವತ್ತಿನ ದಿವಸ ನೀರು ಇಲ್ಲ. ಬರೀ ಕಾವೇರಿ ನೀರನ್ನು ನಂಬಿಕೊಂಡು ಬೆಂಗಳೂರು ನಗರದ ಜನರು ಬದುಕಬೇಕಾಗಿದೆ. ಕೆಲವು ದಿವಸಗಳ ಹಿಂದೆ ಸನ್ಮಾನ್ಯ ಮುಖ್ಯ ಮಂತ್ರಿಯವರು ಶಿವಮೊಗ್ಗದಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಬೆಂಗಳೂರು ನಗರಕ್ಕೆ ಕುಡಿ-ಯುವ ನೀರು ಸರಬರಾಜು ಮಾಡುವುದಕ್ಕೋಸ್ಕರ 1300 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಮತ್ತು ಇತರ ಎಲ್ಲಾ ಜಿಲ್ಲೆಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡುವುದಕ್ಕಾಗಿ ಕೇವಲ 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ವ್ಯಥೆ ವ್ಯಕ್ತಪಡಿಸತಕ್ಕಂಥ ರೀತಿಯಲ್ಲಿ ಮಾತನಾಡಿದ್ದಾರೆ. ನಾನು ಕೇಳುತ್ತೇನೆ, ಬೆಂಗಳೂರು ನಗರವನ್ನು ಇನ್ನು ಎಷ್ಟು ಬೆಳೆಸಲಾಗುತ್ತದೆ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಕಟ್ಟಡಗಳನ್ನು ಯಾವ ರೀತಿ ಕಟ್ಟಬೇಕೆಂಬ ನೀತಿ ನಿಯಮಗಳಿದ್ದರೂ ಅದನ್ನು ಉಲ್ಲಂಘಿಸಿ ಆಕಾಶ ಮುಟ್ಟುವಂಥ ಸುಂದರ ಕಟ್ಟಡಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಇದೇ ರೀತಿ ಕಟ್ಟಡಗಳನ್ನು ಕಟ್ಟುವುದಕ್ಕೆ ಅವಕಾಶ ಕೊಟ್ಟರೆ ಮುಂದಿನ ದಿವಸ-ಗಳಲ್ಲಿ ಕುಡಿಯಲು ನೀರು ಕೂಡ ಸಿಗುವುದಿಲ್ಲ. ಎರಡನೇ ಮಹಾಯುದ್ಧ ಕಾಲದಲ್ಲಿ ಜನರಿಗೆ ಕುಡಿಯಲು ನೀರು ಕೂಡ ಸಿಕ್ಕಲಿಲ್ಲವೆಂದು ಕೇಳಿದ್ದೇವೆ. ಆ ಪರಿಸ್ಥಿತಿ ಮತ್ತೆ ಬರಬಾರದು. ಹಿಂದೆ ಅಲೆಕ್ಸಾಂಡರ್ ಎನ್ನುವ ಮಹಾನ್ ನಾಯಕ ಇಡೀ ಪ್ರಪಂಚವನ್ನೇ ನನ್ನ ಕೈ ಕೆಳಗೆ ಇಟ್ಟುಕೊಳ್ಳ-ಬೇಕೆಂದು ಬಯಸಿದ್ದವನು ಕೊನೆಗೆ ಕುಡಿಯಲು ನೀರು ಸಿಗದೆ ಸತ್ತು ಹೋದ ಎನ್ನುವ ವಿಷಯವನ್ನು ನಾವು ಚರಿತ್ರೆಯಲ್ಲಿ ಓದಿದ್ದೇವೆ. ಇದೇ ಪರಿಸ್ಥಿತಿ ಬೆಂಗಳೂರು ನಗರದಲ್ಲೂ ಮುಂದಿನ ದಿನಗಳಲ್ಲಿ ಕಾಣುವ ಸೂಚನೆ ಇರುವುದರಿಂದ ಬೆಂಗಳೂರು ನಗರದ ಯಾವ ಶಾಸಕರು ನಿದ್ದೆ ಮಾಡುವ

ಹಾಗಿಲ್ಲದಂತಾಗಿದೆ. ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟ ಕೆರೆಗಳಲ್ಲಿ ನೀರು ಇಲ್ಲದೇ ಇರುವುದರಿಂದ ಇಡಿ ನಗರಕ್ಕೆ ಕಾವೇರಿ ನದಿಯ ನೀರನ್ನೇ ಕೊಡಬೇಕಾಗಿರುವುದರಿಂದ ಸರ್ಕಾರ ಯೋಜನೆಗಳನ್ನು ಹಾಕಿಕೊಳ್ಳಬೇಕು. ಬೆಂಗಳೂರು ನಗರ ಆಭಿವೃದ್ಧಿ ಸಚಿವರು ನೀರಿನ ಸಮಸ್ಯೆ ನಿವಾರಿಸುವ ಸಲುವಾಗಿ ಕರೆದಿರುವ ಸಭೆಗಳಲ್ಲಿ ನಾವು ಎಷ್ಟೋ ಸಲಹೆಗಳನ್ನು ಕೊಟ್ಟಿದ್ದೇವೆ. ಆದರೆ ಆ ಸಲಹೆಗಳನ್ನು ಒಂದೂ ಜಾರಿಗೆ ತರುತ್ತಿಲ್ಲ. ಬೆಂಗಳೂರು ನಗರದ ಹಲವಾರು ಭಾಗಗಳಲ್ಲಿ ತೋಡಿರುವ ಕೊಳವೆ ಬಾವಿಗಳಲ್ಲಿ ಒಳ್ಳೆಯ ನೀರು ಇರುವುದರಿಂದ ಅಲ್ಲಿ ಟ್ಯಾಂಕ್‌ಗಳನ್ನು ಕಟ್ಟಿ ಬಡಾವಣೆಗಳಿಗೆ ಸರಬರಾಜು ಮಾಡಬೇಕೆಂದು ನಾವು ಅನೇಕ ಬಾರಿ ಒತ್ತಾಯ ಮಾಡಿದರೂ ಆದನ್ನು ಜಾರಿಗೆ ತಂದಿಲ್ಲ. ಈ ಯೋಜನೆಯನ್ನು ಜಾರಿಗೆ ತಂದರೆ ಮಾತ್ರ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆಂದು ಹೇಳುತ್ತೇನೆ. ಈ ರೀತಿ ಹಲವಾರು ಸಮಸ್ಯೆಗಳು ಬೆಂಗಳೂರು ನಗರದಲ್ಲಿ ಇರುವುದರಿಂದ ಮಾನ್ಯ ನಗರಾಭಿವೃದ್ಧಿ ಸಚಿವರು ಪಕ್ಷ ಬೇಧ ಮರೆತು ನಗರದ ಎಲ್ಲಾ ಶಾಸಕರನ್ನು ಕರೆದು ಸಭೆ ಮಾಡಿ ಸಮಸ್ಯೆಗಳ ಪರಿಹಾರಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳಿ, ಈಗ ಸಮಯ ಇಲ್ಲದೇ ಇರುವುದರಿಂದ ಮುಂದಿನ ಬೇಡಿಕೆಗಳ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ಇನ್ನೂ ಹಲವಾರು ಸಲಹೆಗಳನ್ನು ಕೊಡುತ್ತೇನೆಂದು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀಮತಿ ಬಿ.ಟಿ. ಲಲಿತ ನಾಯಕ್ (ದೇವದುರ್ಗ):-** ಸನ್ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನು ತಿಳಿಸುತ್ತಾ ಇವತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಆಡಲು ಇಷ್ಟಪಡುತ್ತೇನೆ. 2 ಸಾವಿರ ಇಸವಿಯೊಳಗೆ ಸರ್ವರಿಗೂ ಆರೋಗ್ಯ ಎನ್ನುವಂಥ ಘೋಷಣೆ ವಿಶ್ವ ಆರೋಗ್ಯ ಸಂಸ್ಥೆಯಿಂದ ಬಂದಿದ್ದರೂ ಅದು ಜಾರಿಗೆ ಬರುತ್ತಿಲ್ಲ. ಆರೋಗ್ಯದ ಬಗ್ಗೆ ಮೂರ್ನಾಲ್ಕು ಅಂಶಗಳನ್ನು ನಾವು ಮರೆತಿರುವುದರಿಂದ ಇಂಥ ತೊಂದರೆ ಬಂದಿದೆ ಎಂದು ನಾನು ಹೇಳಬೇಕಾಗುತ್ತದೆ. ಆರೋಗ್ಯವನ್ನು ಪಡೆಯುವುದಕ್ಕೆ ಅನಾರೋಗ್ಯವನ್ನು ತಡೆಗಟ್ಟುವುದೇ ಆರೋಗ್ಯದ ಮೊದಲ ಹಂತ. ಅದರ ಜೊತೆಗೆ ಶುದ್ಧವಾದ ಮತ್ತು ಸಮತೋಲನವಾದ ಆಹಾರ, ಕುಡಿಯಲು ಶುದ್ದವಾದ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಬಗ್ಗೆ ಕಾಳಜಿ ವಹಿಸುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಇವತ್ತು ನಾವು ಆರೋಗ್ಯವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲದೆ ಅದು ಕೇವಲ ಘೋಷಣೆಯಾಗಿಯೇ ಉಳಿದಿದೆ. ನಮ್ಮ ದೇಶದಲ್ಲಿ ಮೂಲಭೂತವಾದ ವ್ಯವಸ್ಥೆಯನ್ನು ನಾವು ಮಾಡಿಕೊಂಡಿಲ್ಲ ಹಾಗೂ ಅದನ್ನು ಹೇಗೆ ಮಾಡಿಕೊಳ್ಳಬೇಕು ಎನ್ನುವಂಥ ಒಂದು ಸಾಮಾನ್ಯವಾದ ಅರಿವನ್ನು ಕೂಡ ಜನರಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇವತ್ತಿನ ದಿವಸ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಹೆಚ್ಚು ಹೆಚ್ಚು ಮಿಸಲಾತಿಯನ್ನು ಕೊಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಆಡುತ್ತಿದ್ದೇವೆ. ಯಾವ ರೀತಿಯಿಂದ ಜನರು ಬದುಕಬೇಕು? ಜನಸಂಖ್ಯೆ ಹೆಚ್ಚಾಗಿರುವಂಥ ಈ ಸಂದರ್ಭದಲ್ಲಿ ಕುಟುಂಬ ಯೋಜನೆಯಿಂದ ಆಗತಕ್ಕಂಥ ಪ್ರಯೋಜನ ಏನು? ಆರೋಗ್ಯವನ್ನು ಪಡೆದುಕೊಳ್ಳತಕ್ಕಂಥ ರೀತಿ ಹೇಗೆ? ಎಂಬ ಬಗ್ಗೆ

ಗ್ರಾಮಾಂತರ ಪ್ರದೇಶದ ಮತ್ತು ಪಟ್ಟಣ ಪ್ರದೇಶಗಳಲ್ಲಿ ವಾಸಿಸುವಂಥ ಜನರಿಗೆ ತೋರಿಸುವಂಥ ಕೆಲಸವಾಗಿಲ್ಲ. ಈ ಬಗ್ಗೆ ಗ್ರಾಮೀಣ ಮಹಿಳೆಯ ವಿಷಯದಲ್ಲಿ ಒಂದೆರಡು ವಿಷಯಗಳನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಒಬ್ಬ ಮಾನ್ಯ ಸದಸ್ಯರು, ಟೀಚರ್ಸ್ ಪೋಸ್ಟ್‌ನಲ್ಲಿ ಮಹಿಳೆಯರಿಗೆ 50 ಪರ್‌ಸೆಂಟ್ ಮೀಸಲಾತಿ ಕೊಡಬಾರದು, ಏಕೆಂದರೆ, ಗ್ರಾಮೀಣ ಪ್ರದೇಶದಲ್ಲಿ ಅವರು ಕೆಲಸ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಅದು ಮಹಿಳಾ ವಿರೋಧಿ ಮಾತಾಗಿ ಕಾಣಿಸಿದರೂ ಕೂಡ ಆ ಮಾತಿನಲ್ಲಿ ಸತ್ಯಾಂಶ ಇದೆ. ನಿಜವಾಗಿ ಮಹಿಳೆಯರಿಗೆ ಬಹಳಷ್ಟು ತೊಂದರೆಗಳಿವೆ. ತಾವು ಗಮನಿಸಿದ ಹಾಗೆ ಅಂಗನವಾಡಿ ಮಹಿಳಾ ಕಾರ್ಯಕರ್ತೆಯರ ಎರಡು ಮೂರು ಕೊಲೆಗಳು ಪ್ರತಿ ತಿಂಗಳು ಆಗುತ್ತಿರುವುದನ್ನು ಪತ್ರಿಕೆಗಳಲ್ಲಿ ನಾವು ಕಾಣುತ್ತಿದ್ದೇವೆ. ಏಕೆಂದರೆ, ಇವತ್ತಿನ ದಿವಸ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರಿಗೆ ಯಾವುದೇ ರೀತಿಯಲ್ಲೂ ಭದ್ರತೆ ಇಲ್ಲ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ಇಚ್ಛಿಸಿದರೂ ಕೂಡ ಅವರಿಗೆ ಇರಲು ಸರಿಯಾದ ನೆಲೆ ಮತ್ತು ಸರಿಯಾದ ಒಂದು ಪರಿಸರ ಇಲ್ಲ. ಅಂಥಾ ಪರಿಸರದಲ್ಲಿ ತನ್ನ ಮಾನವನ್ನು ಉಳಿಸಿಕೊಂಡು ಗೌರವವಾದ ಬದುಕಿಗೆ ಕಾಣಿಕೆಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಶಿಕ್ಷಕಿಯನ್ನು ನೇಮಕ ಮಾಡಿಕೊಂಡ ಮೇಲೆ ಅವರ ವಾಸಕ್ಕೆ ಮನೆ ಬೇಕಾಗುತ್ತದೆ, ಜೊತೆಗೆ ಭದ್ರತೆ ಮತ್ತು ಉತ್ತಮ ನೆಲೆಯನ್ನು ಕಲ್ಪಿಸಿಕೊಡಬೇಕಾಗುತ್ತದೆ. ಅವರಿಗೆ ತರಬೇತಿ ಸಹಾ ಕೊಡಬೇಕಾಗುತ್ತದೆ. ಶಿಕ್ಷಕರಿಗೆ ಹಾಗೂ ತಂದೆ ತಾಯಿಗಳಿಗೆ ಮಕ್ಕಳನ್ನು ಯಾವ ರೀತಿ ಬೆಳೆಸಬೇಕೆಂಬ ಬಗ್ಗೆ ತರಬೇತಿ ಕೊಡಬೇಕಾಗುತ್ತದೆ. ಹಾಗೆಯೆ ಈ ಭಾನಾಮತಿ ಏಕೆ ಬರುತ್ತದೆ ಎಂಬ ಬಗ್ಗೆ ಬಹಳ ಜನರಿಗೆ ಗೊತ್ತಿಲ್ಲ. ಇದೊಂದು ರೀತಿಯಲ್ಲಿ ಮೂಢನಂಬಿಕೆಯ ರೂಪವಾಗಿದೆ ಆದ್ದರಿಂದ,

5.20 ಪಿ.ಎಂ

ಯಾರ ಮನಸ್ಸು ದುರ್ಬಲವಾಗಿರುತ್ತದೆಯೋ ಅಂಥವರು ಮಾತ್ರ ಈ ಭಾನಾಮತಿ ವಶೀಕರಣಕ್ಕೆ ಒಳಗಾಗುತ್ತಾರೆ. ಯಾರ ಮನಸ್ಸು ಸದೃಢವಾಗಿರುತ್ತದೆಯೋ, ಯಾರು ಮೂಢನಂಬಿಕೆಗಳಿಗೆ ದಾಸರಾಗಿಲ್ಲವೋ ಅಂಥವರ ಹತ್ತಿರ ಭಾನಾಮತಿಯ ಆಟ ಹತ್ತಿರವೂ ಸುಳಿಯುವುದಿಲ್ಲ. ತಾವುಗಳು ಗಮನಕೊಟ್ಟು ನೋಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರ ಅದು ಕಾಡುತ್ತಾ ಇದೆ. ಅದರಲ್ಲೂ ಅನಕ್ಷರಸ್ತರು ಇರುವ ಕಡೆಗಳಲ್ಲಿ ಕಾಡುತ್ತಾ ಇದೆ. ಇದನ್ನು ಹೇಗೆ ನಿವಾರಣೆ ಮಾಡಿಕೊಳ್ಳಬೇಕೆಂಬ ಬಗ್ಗೆಯೂ ನಾವು ಗಮನಕೊಡಬೇಕಾಗುತ್ತದೆ. ಆರೋಗ್ಯ ಅಂದರೆ ದೇಹಾರೋಗ್ಯದ ಜೊತೆಗೆ ಮಾನಸಿಕ ಆರೋಗ್ಯವೂ ಅಷ್ಟೇ ಮುಖ್ಯವಾದುದು. ಹಾಗೆಯೇ ಆರ್ಥಿಕ ಭದ್ರತೆಯೂ ಕೂಡ ಮನುಷ್ಯನ ಆರೋಗ್ಯಕ್ಕೆ ಸಹಾಯಕವಾಗಿರುತ್ತದೆ. ಇದನ್ನೆಲ್ಲಾ ಬಿಟ್ಟು ಬರೀ ದೈಹಿಕವಾಗಿ ಆರೋಗ್ಯವಾಗಿರುತ್ತೇವೆಂದರೆ ಅದು ಎಂದಿಗೂ ಸಾಧ್ಯವಿಲ್ಲ. ಮಾನಸಿಕ ರೋಗಿಗಳು ಅದರಿಂದಾಗಿ ಹೆಚ್ಚಾಗುತ್ತಾ ಇದ್ದಾರೆ. ಹಲವಾರು ಮೂಢನಂಬಿಕೆಗಳಿಂದಾಗಿ ನಮ್ಮಲ್ಲಿ ಇವೊತ್ತು ಅಂಗವಿಕಲತೆಯು ಹೆಚ್ಚುತ್ತಿದೆ. ಇಂಥವನ್ನೆಲ್ಲಾ ನಾವು ಗಮನಿಸಿದಾಗ ಸ್ವಚ್ಛತೆಯ ಬಗ್ಗೆ, ಪರಿಸರ ನೈರ್ಮಲ್ಯದ ಬಗ್ಗೆ ಗಮನಕೊಡ-

ಬೇಕಾಗುತ್ತದೆ. ಪರಿಸರ ನೈರ್ಮಲ್ಯದ ಬಗ್ಗೆ ನಮ್ಮ ಜನರಿಗೆ ಎಷ್ಟು ತಿಳುವಳಿಕೆ ಇದೆ? ಹೊಗೆಯ ಮಾಲಿನ್ಯ, ಎಲ್ಲದಕ್ಕಿಂತ ಹೆಚ್ಚಾಗಿ ಮಾತಿನ ಮಾಲಿನ್ಯವು ಹೆಚ್ಚುತ್ತಿದೆ. ನಾವು ಹೆಚ್ಚು ಹೆಚ್ಚು ಮಾತನಾಡುತ್ತಿದ್ದು ಕೆಲಸವನ್ನು ಕಡಿಮೆ ಮಾಡುತ್ತಿದ್ದೇವೆ. ಇವೊತ್ತು ಗಾಂಧಿ, ಬುದ್ಧ, ಬಸವಣ್ಣ, ಮುಂತಾದವರನ್ನು ನಾವು ಅವರ ಮಹಾನ್ ಕೆಲಸಗಳಿಗಾಗಿ ಸ್ಮರಿಸುತ್ತಿದ್ದೇವೆ. ಯಾವುದು ಮನುಷ್ಯನ ಕೈಯಲ್ಲಿ ಆಗುವುದಿಲ್ಲವೋ ಯಾವುದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೋ, ಅದನ್ನು ಇವೊತ್ತು ನಾವು ಮೂರ್ತಿಗಳ ರೂಪದಲ್ಲಿ ಮಾಡುತ್ತಿದ್ದೇವೋ ಏನೋ ಎಂದು ನನಗನ್ನಿಸುತ್ತದೆ. ಹೀಗೆ ಪ್ರತಿಮೆಗಳನ್ನು ಮಾಡಿ ನಿಲ್ಲಿಸಿ ಬಿಟ್ಟರೆ ನಮ್ಮ ಕರ್ತವ್ಯ ಮುಗಿಯಿತು ಎಂಬ ಭಾವನೆ ನಮ್ಮಲ್ಲಿದೆ. ನಿಜವಾಗಿಯೂ ಆ ಮಹಾಪುರುಷರ ವಾಣಿಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದೂ ಕೂಡ ಮುಖ್ಯ. ಸರಕಾರವು ಕಾನೂನುಗಳನ್ನು ಮಾಡಬಹುದು, ಆದರೆ ಸರಕಾರವು ಇಚ್ಛಾಶಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮನುಷ್ಯನು ತನ್ನ ಇಚ್ಛಾ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾದರೆ ತಾನು ಸ್ವಂತ ವಿಚಾರ ಮಾಡಬೇಕಾಗುತ್ತದೆ. ಅಂಥ ಒಂದು ವಾತಾವರಣವನ್ನು ಅಲ್ಲಿ ನಿರ್ಮಾಣ ಮಾಡಬೇಕಾಗುತ್ತದೆ. ಎಲ್ಲವನ್ನೂ ಅದು ಮಾಡುತ್ತದೆ ಎಂದು ಹೇಳಲಾಗುವುದಿಲ್ಲ. ಹಿಂದೆ ಗಡಿಗೆ–ಮಡಿಕೆಗಳಲ್ಲಿನ ಅಡುಗೆಯನ್ನು ಊಟ ಮಾಡುತ್ತಿದ್ದ ಜನರು ಹೇಗೆ ನೂರಾರು ವರ್ಷಗಳ ತನಕ ಬದುಕುತ್ತಿದ್ದ ವಿಚಾರ ನಮಗೆಲ್ಲರಿಗೂ ಗೊತ್ತು. ಅದು ನಮಗೆ ಇವೊತ್ತು ಸಾಧ್ಯವಾಗುತ್ತಾ ಇಲ್ಲ. ಹಾಗಾದರೆ ಆಧುನಿಕತೆಯು ನಮ್ಮನ್ನು ಯಾವ ದಿಕ್ಕಿಗೆ ಕೊಂಡೊಯ್ಯುತ್ತಿದೆ? ಆಧುನಿಕತೆಯು ಇವೊತ್ತು ವರದಕ್ಷಿಣೆಯ ಕೊಲೆಗಳನ್ನು ಹರಡಲು ಸಹಾಯಕವಾಗಿದೆ. ಆಧುನಿಕತೆಯು ಇವೊತ್ತು ನಮ್ಮನ್ನು ನಾನಾ ರೀತಿಯ ವ್ಯಾಮೋಹಗಳಿಗೆ ಈಡು ಮಾಡುತ್ತಿದೆ. ಮರಗಳನ್ನು ಕಡಿದು ಟೇಬಲ್, ಕುರ್ಚಿ, ಕಿಟಕಿ ಬಾಗಿಲುಗಳನ್ನು ಮಾಡಿ ಮನೆಕಟ್ಟುವಾಗ ಎಷ್ಟೆಷ್ಟು ಮರಗಳನ್ನು ನಾವು ಬಳಸುತ್ತಾ ಇದ್ದೇವೆ ಅದರ ಬಗ್ಗೆ ನಾವು ಆಲೋಚನೆ ಮಾಡಿಲ್ಲವೇ? ಆಧುನಿಕತೆಯು ನಮ್ಮನ್ನು ಎಷ್ಟು ವಿನಾಶದ ಕಡೆಗೆ ಕೊಂಡೊಯ್ಯುತ್ತಿದೆ ಎಂಬುದನ್ನು ನಮ್ಮ ಆರೋಗ್ಯದ ವಲಯ ಪರಿಶೀಲಿಸಬೇಕು. ಅದೂ ಕೂಡ ಅದರ ಭಾಗವೆಂದು ಪರಿಗಣಿಸಬೇಕೆಂದು ಹೇಳಬಯಸುತ್ತೇನೆ. ಇವೊತ್ತು ನಾಗರೀಕರಣ ಎನ್ನುವುದು ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುತ್ತಾ ಇಲ್ಲಾ ಮನುಷ್ಯರನ್ನು ಅದು ಮೃಗಗಳಾಗಿ ಮಾಡುತ್ತಾ ಇದೆ. ನಾವು ಆಧುನಿಕರಾಗಬೇಕೆಂಬ ಗೀಳಿನಲ್ಲಿ ಮಾಡಬಾರದುದನ್ನು ಮಾಡುತ್ತಾ ಇದ್ದೇವೆ. ದೂರದರ್ಶನಗಳು, ಪತ್ರಿಕೆಗಳು, ಹಾಗೂ ಬೇರೆ ಬೇರೆ ಮಾಧ್ಯಮಗಳ ಮೂಲಕ ಜನರಿಗೆ ಒಳ್ಳೆಯದನ್ನು ಹೇಳಲು ಸಾಧ್ಯವಾಗಿಲ್ಲ. ಟಿವಿನಲ್ಲಿ ಬಾಕ್ಸಿಂಗ್‌ನ್ನು ನೋಡುತ್ತೇವೆ. ಅದನ್ನು ಬಹಳ ಖುಷಿ ಪಟ್ಟು ಜನರು ನೋಡುತ್ತಾರೆ. ಆದರೆ ಒಳ್ಳೆಯದನ್ನು ಅಷ್ಟಾಗಿ ನೋಡುವುದಿಲ್ಲ. ಮೊನ್ನೆ ಒಬ್ಬ ಮಾನ್ಯ ಸದಸ್ಯರು ಒಂದು ಪ್ರಸ್ತಾವದಲ್ಲಿ ಪಕ್ಕದಲ್ಲಿ ಸ್ತ್ರೀ ಇದ್ದರೆ ನೂರು ರೂಪಾಯಿ ಕೊಟ್ಟಾದರೂ ಅಲ್ಲಿ ಪಕ್ಕದಲ್ಲಿ ಸೀಟು ಹಿಡಿಯುತ್ತೇವೆಂಬ ಮಾತನ್ನು ಹೇಳಿದರು. ಹಾಗಾದರೆ ನಾವು ಯಾವ ಕಡೆಯಲ್ಲಿ ಹೋಗುತ್ತಾ ಇದ್ದೇವೆ? ನಮ್ಮ ತರುಣ ಜನಾಂಗ ಯಾವ ರೀತಿಯಲ್ಲಿ ಆಲೋಚನೆಯನ್ನು ಮಾಡುತ್ತಿದೆ ಎಂಬುದನ್ನು ನಾವು ಆಲೋಚನೆ ಮಾಡುವಾಗ ಮನಃಸ್ವಾಸ್ಥ್ಯ ಎಲ್ಲಿ ಚೆನ್ನಾಗಿ ಇರುತ್ತದೆಯೋ ಅಲ್ಲಿ ಮಾತ್ರ ನಾವು

ಒಳ್ಳೆಯ ಪ್ರಜೆಗಳಾಗಿ ಬಾಳುವುದಕ್ಕೆ ಸಾಧ್ಯವೇ ಹೊರತು ಇಂಥ ಒಂದು ಅಸ್ವಸ್ಥತೆಯ ನಡುವೆ, ಕೆಟ್ಟ ಸಂಪ್ರದಾಯಗಳ ನಡುವೆ ನಿಜವಾಗಿಯೂ ಮನುಷ್ಯರಾಗಿ ಬಾಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ವಿಚಾರವನ್ನು ಬಹಳ ಮುಖ್ಯವಾಗಿ ಪರಿಗಣಿಸಬೇಕಾಗಿದೆ. ಇನ್ನೊಂದು ವಿಚಾರ ಅಂದರೆ ಅಧಿಕಾರ ವಿಕೇಂದ್ರೀಕರಣ. ಅಧಿಕಾರ ವಿಕೇಂದ್ರೀಕರಣ ವಿಚಾರದಲ್ಲಿ ಎಲ್ಲರೂ ಏನು ಹೇಳುತ್ತಾರೆ ಎಂದರೆ, ಮಹಿಳೆಯರು ತಾಲ್ಲೂಕು, ಜಿಲ್ಲಾಪಂಚಾಯತಿಗಳಲ್ಲಿ ಆಯ್ಕೆಯಾಗಿ ಬಂದಿದ್ದಾರೆ ರಾಜಕೀಯಕ್ಕೆ ಬಂದ ಮೇಲೆ ಅವರಿಗೆ ಏನೂ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ. ಹಾಗೆ ಹೇಳುವುದು ತಪ್ಪು. ಅಂಥ ಮಹಿಳೆಯರಿಗೆ ಇದರಿಂದಾಗಿ ಎಷ್ಟೋ ತಿಳುವಳಿಕೆಯು ಬಂದಿದೆ. ಎಲ್ಲರೂ ವಿದ್ಯಾವಂತರಾಗುವುದು ಸಾಧ್ಯವಿಲ್ಲ. ಬುದ್ಧಿವಂತರಾಗುವುದಕ್ಕೂ ಸಾಧ್ಯವಿಲ್ಲ. ಇವೊತ್ತು ನಾವುಗಳಲ್ಲಿ ಎಷ್ಟೋ ಜನ ಶಾಸಕರಿದ್ದೇವೆ. ಆದರೆ ಎಲ್ಲರೂ ಒಂದೇ ರೀತಿಯಲ್ಲಿ ಬುದ್ದಿವಂತರಾಗುವುದಕ್ಕೆ ಸಾಧ್ಯವಿಲ್ಲ. ಬಹಳಷ್ಟು ಜನ ಏನೂ ಗೊತ್ತಿಲ್ಲದವರು ಬಹಳಷ್ಟು ತಿಳಿದುಕೊಳ್ಳಬೇಕಾದವರು ಬಹಳಷ್ಟು ಜನರಿದ್ದೇವೆ. ಆದುದರಿಂದ ಮಹಿಳೆಯರು ಕೂಡ ಆ ಕ್ಷೇತ್ರದಲ್ಲಿ ಬಂದು ನಮ್ಮ ಊರು, ಕೇರಿಗೆ ಏನು ಮಾಡಬಹುದೆಂದು ವಿಚಾರವನ್ನು ಮಾಡುತ್ತಿದ್ದಾರೆ. ಆದ್ದರಿಂದ ಅಧಿಕಾರ ವಿಕೇಂದ್ರೀಕರಣವನ್ನು ತಂದಂಥ ಸರಕಾರವನ್ನು ಮಹಿಳಾಕುಲವೇ ಅಭಿನಂದಿಸಬೇಕು. ಮಹಿಳಾ ಆಯೋಗ ರಚನೆಯಾಗುತ್ತಾ ಇದೆ, ಅದರಲ್ಲಿ ಮಹಿಳೆಯರಿಗೆ ಸಾಕಷ್ಟು ನ್ಯಾಯ ದೊರಕುವಂಥ ಅವಕಾಶ ಕೂಡ ಇದೆ. ಅದನ್ನು ಕೂಡ ಸರಕಾರವು ಮಾಡುತ್ತಾ ಇದೆ. ಅದರ ಜೊತೆಗೆ ಆಧುನಿಕತೆಯಿಂದಾಗುವಂಥ ಅನ್ಯಾಯಗಳನ್ನು, ಅವಲಕ್ಷಣಗಳನ್ನು, ವಿಕೃತಿಗಳನ್ನು ಅವುಗಳನ್ನೆಲ್ಲಾ ತೊಡೆದು ನಾಶ ಮಾಡುವಂಥ ಒಂದು ದಿಕ್ಕಿನಲ್ಲಿ ನಾವು ಕ್ರಮ ತೆಗೆದುಕೊಳ್ಳಬೇಕಾಗಿದೆ. ಅದನ್ನು ಹೆಚ್ಚು ಹೆಚ್ಚು ಸಾರ್ವಜನಿಕರು, ಸಂಘ ಸಂಸ್ಥೆಗಳು, ಸರಕಾರಮುಂತಾಗಿ ಹೇಳಬೇಕಾಗಿದೆ. ನಮ್ಮಲ್ಲಿ ಗುರುಕುಲಗಳು ಬರಬೇಕು. ನಮ್ಮ ಶಾಲೆಗಳು ಬಹಳಷ್ಟು ಪುಸ್ತಕಗಳನ್ನು ಮಕ್ಕಳ ಬೆನ್ನುಮೂಳೆ ಮುರಿಯುವ ಹಾಗೆ ಹೊರಿಸಿ ಕಳುಹಿಸುವುದಕ್ಕಿಂತಲೂ ಹಿಂದೆ ಗುರುಕುಲದಲ್ಲಿ ಬಹಳ ಸರಳವಾಗಿ ಪ್ರಕೃತಿಯು ಮನುಷ್ಯನನ್ನು ಹೇಗೆ ಬದುಕಲು ಕಲಿಸುತ್ತದೆ ಎನ್ನುವಂಥ ಸರಳ ಬೋಧನೆ ನೀಡಿದಾಗ ಮನುಷ್ಯ ಮನುಷ್ಯನಾಗುತ್ತಾನೆ. ಜಾತಿ, ಮತ, ಭೇದ, ಮೂಢನಂಬಿಕೆಗಳು, ಮುಂತಾದ ಅನಿಷ್ಟಗಳಿಂದ ನಾವು ಹೊರಬರುವುದಕ್ಕೆ ಸಾಧ್ಯವಾಗುತ್ತದೆ. ನಮಗೆ ಮಾನಸಿಕ ಸ್ವಾಸ್ಥ್ಯ ಬಹಳ ಮುಖ್ಯ. ಮಾನ್ಯ ಪ್ರಾಥಮಿಕ ಸಚಿವರಲ್ಲಿ ನಾನು ಒಂದು ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ ಚಿಕ್ಕಂದಿನಲ್ಲಿ ನಾವೇನು ಕಲಿತಿರುತ್ತೇವೆಯೋ ಮುಂದೆ ಅದು ನಾವು ಮುದುಕರಾಗಿ ಸಾಯುವವರೆಗೂ ಇರುತ್ತದೆ. ನಡುವೆ ನಾವು ಬೇರೆ ಏನಾದರೂ ಕಲಿತರೂ ಕೂಡ ಆ ಹುಟ್ಟುಗುಣ ಮಾತ್ರ ಹೋಗುವುದಿಲ್ಲ. ಆದ್ದರಿಂದ ಚಿಕ್ಕಂದಿನಲ್ಲಿ ಮಕ್ಕಳಿಗೆ ತ್ರಿಭಾಷೆಗಳನ್ನು ಕಲಿಸುವ ವ್ಯವಸ್ಥೆಯಾಗಬೇಕು. ಹಿಂದಿ, ಇಂಗ್ಲೀಷ್ ಮತ್ತು ಕನ್ನಡ. ಇವುಗಳನ್ನು ಯಾವುದಾದರೂ ಒಂದು ಸಮಯದಲ್ಲಿ ಒಂದು ಭಾಷೆಯಾಗಿ ಕಲಿಯುವ ವ್ಯವಸ್ಥೆಯನ್ನು ಮಾಡಿದಾಗ ಎಳೆಯ ಮಕ್ಕಳು ಮೂರು ಭಾಷೆಗಳನ್ನು ಒಮ್ಮೆಗೆ ಕಲಿಯುವ ಅವಕಾಶ ಬರುತ್ತದೆ. ಈಗ ಇರುವ ಭಾಷಾ ಸೂತ್ರ ಅಷ್ಟರಮಟ್ಟಿಗೆ ಚೆನ್ನಾಗಿ ಜಾರಿಗೆ ಬರುತ್ತಾ ಇಲ್ಲ ಕಾನ್ವೆಂಟ್‌ಗಳಲ್ಲಿ ಕಲಿತರೆ ಬರೇ ಇಂಗ್ಲೀಷ್ ಮಾತ್ರ.

ನಮ್ಮ ಜ್ಞಾನಪೀಠ ಪಡೆದಂಥ ಎಲ್ಲಾ ಮಹಾನ್ ಸಾಹಿತಿಗಳು ಎಲ್ಲರೂ ಕನ್ನಡದಲ್ಲಿಯೇ ಕಲಿತವರು ಎಂಬುದನ್ನು ನಾವು ಜನತೆಗೆ ಹೇಳಬೇಕಾಗಿದೆ. ಯಾಕೆಂದರೆ ಕನ್ನಡದ ಬಗ್ಗೆ ಇಷ್ಟು ತಾತ್ಸಾರ ಬೇಕಾ-ಗಿಲ್ಲ. ನಾವು ಎಲ್ಲಾ ಭಾಷೆಗಳನ್ನು ಕಲಿಯೋಣ. ನೀವು 64 ವಿದ್ಯೆಗಳಲ್ಲಿಯೂ ಪರಿಣಿತರಾಗಿ. ಅದಕ್ಕೆ ಯಾರ ಅಡ್ಡಿಯೂ ಇಲ್ಲ. ಇಂಗ್ಲೀಷ್ ಬಗ್ಗೆ ಮೂದಲಿಕೆಯು ನಮ್ಮಲ್ಲಿಲ್ಲ. ಆದರೆ ನಾವಿಂದು ಕನ್ನಡದ ಕೊರಳನ್ನು ಒತ್ತಿ ಹಿಡಿದು ಇಂಗ್ಲೀಷಿನ ಕಡೆಗೆ ಏರುತ್ತಾ ಇದ್ದೇವೆ. ಕನ್ನಡ ತಾಯಿಯನ್ನು ನಾವು ನೂಕಿ-ಬಿಟ್ಟಿದ್ದೇವೆ, ಕೊರಳು ಕೊಯ್ದಿದ್ದೇವೆ. ಇಂಥ ಕೆಲಸ ಆಗಬಾರದು. ಇವೊತ್ತಿನ ಶಿಕ್ಷಣ ಸರಿಯಾದ ರೀತಿಯಲ್ಲಿ ನಡೆಯುತ್ತಾ ಇಲ್ಲ, ಅದು ನಮ್ಮ ನಗೆಯನ್ನು ಕಸಿದುಕೊಂಡಿದೆ, ನಮ್ಮ ಬದುಕನ್ನು ಕಸಿದು ಕೊಳ್ಳುತ್ತಾ ಇದೆ. ಇಷ್ಟನ್ನು ಹೇಳಿ ನಾನು 1986-87ರಲ್ಲಿ ಬರೆದ ಒಂದು ಕವಿತೆಯನ್ನು ಓದ ಬಯ-ಸುತ್ತೇನೆ. ನಮ್ಮ ನಗೆ ಹೇಗೆ ಮಾಯವಾಗುತ್ತಿದೆ ಎಂದು ಹೇಳಿದ್ದೇನೆ.

ಹುಡುಕಿದರೂ ಸಿಗಲೊಲ್ಲದು . . .

"ಕಳೆದು ಹೋಗಿದೆ ನನ್ನ ನಗೆಯು, ಕೆದ ಕೆದಕಿ ಹುಡುಕುತ್ತಿದ್ದೇನೆ ಸಿಗಲೊಲ್ಲದು
ಕಳೆದು ಹೋಗಿರುವ ನನ್ನ ನಗೆಯು ಕೆದಕೆದಕಿ ಹುಡುಕುತ್ತಿದ್ದೇನೆ ಸಿಗಲೊಲ್ಲದು
ಅಕ್ಕಿ, ಬೇಳೆ, ಡೈರಿ ಹಾಲು, ಎಣ್ಣೆ ಡಬ್ಬಿ, ತರಕಾರಿ ಬುಟ್ಟಿಗಳಲ್ಲಿ,
ಸಾರಿಗೆ ವಾಹನ, ರೈಲು ಇಂಧನದ ಉರಿಧಗೆಯಲ್ಲಿ,
ಅಂಗಡಿ, ಹೋಟೆಲು, ಸಿನೀಮಾ, ಆಸ್ಪತ್ರೆಗಳಲ್ಲಿ, ಕಚೇರಿ ಸೌಧಗಳಲ್ಲಿ,
ಓಟು, ನೋಟುಗಳಲ್ಲಿ - ಹಲವು ಹತ್ತು ಸಂಕೇತಗಳಲ್ಲಿ ಹುಡುಕಿ ಹುಡುಕುತ್ತಿದ್ದೇನೆ
ಸಿಗಲೊಲ್ಲದು. . .
ಮಕ್ಕಳ ಶಾಲೆ ಕಾಲೇಜು ಶಿಕ್ಷಣದಲ್ಲಿ, ಅವರಂಗಿ ಬಟ್ಟೆ, ಪುಸ್ತಕ ಚಾಕು–ಚೂರಿಗಳಡಿಯಲ್ಲಿ
ಮನೆಬಾಡಿಗೆ, ತಂತು ಗೋಡೆ ಬಿರುಕುಗಳಲ್ಲಿ ಕುಸಿದ ಕಟ್ಟಡಗಳ ಹುಡಿಧೂಳಿನಲ್ಲಿ,
ಭಾರಿ ಭಾರಿಗೂ ಉಡಾಯಿಸುವ ಉಪಗ್ರಹಗಳಲ್ಲಿ, ಮೇಲೆ ಮಿನುಗುವ ಚುಕ್ಕೆ–ಚಂದ್ರಮರಲ್ಲಿ,
ನನ್ನ ನಗೆಯನ್ನು ಹುಡುಕುತ್ತಿದ್ದೇನೆ, ಸಿಗಲೊಲ್ಲದು. . .
ಸೊಸೆಯಂದಿರು ಸೀದುಹೋದ ಬೂದಿಕಣದಲ್ಲಿ, ದಿಟ್ಟ ಲೇಖನಿಗೆ ಹೆಲ್ಮೆಟ್ಸಿ ಇರಿದು ಸೋರಿದ
ರಕ್ತದೋಕುಳಿಯಲ್ಲಿ, ಹಲವು ಮಾದರಿಯ ಚಳುವಳಿಯ ಬಸಿರಿನಲ್ಲಿ ಕೊಳಚೆಗೇರಿಯ
ಗುಡಿಸಿಲಿನ ಕಣ್ಮಣಿಗಳ ನರಳುವಿಕೆಯಲ್ಲಿ ನನ್ನ ನಗುವನ್ನು ಹುಡುಕುತ್ತಿದ್ದೇನೆ, ಸಿಗಲೊಲ್ಲದು."

ಅಧ್ಯಕ್ಷರೆ, ಇಷ್ಟು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):-** ಮಾನ್ಯ ಅಧ್ಯಕ್ಷರೇ, ನನಗೆ ಈ ಸಂದ-ರ್ಭದಲ್ಲಿ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಅನೇಕ ಮಾನ್ಯ ಹಿರಿಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಈ 19 ಬೇಡಿಕೆಗಳ ಬಗ್ಗೆ ವ್ಯಕ್ತಪಡಿಸಿ ಬೆಳಕು ಚೆಲ್ಲತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಸರಕಾರದಲ್ಲಿನ ಆಡಳಿತ ಪಕ್ಷವೇ ಇರಬಹುದು, ಅಥವಾ

ವಿರೋಧ ಪಕ್ಷವೇ ಇರಬಹುದು. ಎಲ್ಲರ ಮುಖ್ಯ ಉದ್ದೇಶವು ಪ್ರಜಾಹಿತ ರಕ್ಷಣೆಯಾಗಿರುತ್ತದೆ. 1972ನೇ ಇಸವಿಯಲ್ಲಿ ವಿಶ್ವಸಂಸ್ಥೆಯು ಜಗತ್ತಿನ ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳನ್ನು ಕರೆದು ಚರ್ಚಿಸಿ, ಮನುಷ್ಯರಿಗೆ ಬೇಕಾಗಿರುವ ಎಲ್ಲಾ ಕನಿಷ್ಟ ಸವಲತ್ತುಗಳನ್ನು ಕೊಡಬೇಕು. ಅದರಲ್ಲಿಯೂ ಮುಖ್ಯವಾಗಿ ಆಹಾರ, ಬಟ್ಟೆ ಮತ್ತು ವಸತಿಯನ್ನು ನೀಡಬೇಕೆಂದು ನಿರ್ಣಯವನ್ನು ಮಾಡಿದೆ. ವಿಶ್ವ ಸಂಸ್ಥೆ ಸಂವಿಧಾನದ 21ನೇ ವಿಧಿಯ ಪ್ರಕಾರ 2 ಸಾವಿರ ಇಸವಿಯೊಳಗೆ ಮುಗಿಸಬೇಕೆಂದು ಹೇಳಿದೆ. ಆದರೆ ನಾವು ವಿಷಯ ಸಮಿತಿಯಲ್ಲಿಯೂ ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಆಶ್ರಯ ಮನೆಗೆ ನಾವು 20,000 ಹಣ ಕೊಡುತ್ತಿದ್ದೇವೆ. ಡಾ|| ಅಂಬೇಡ್ಕರ್ ಮನೆಗೆ 20 ಸಾವಿರ; ಇಂದಿರಾ ಆವಾಸ್ ಮನೆಗೆ 14 ಸಾವಿರ ರೂಪಾಯಿ. ಕರ್ನಾಟಕದಲ್ಲಿ ಯಾವ ವರ್ಗದ ಜನರಿಗೆ ನಾವು ಆ ಮನೆಗಳನ್ನು ಕೊಡುತ್ತಿದ್ದೇವೆಂದು ವಿಚಾರ ಮಾಡಬೇಕು. ಅಸಂಘಟಿತ ಕಾರ್ಮಿಕರು ಸುಮಾರು 80 ಲಕ್ಷದಿಂದ ಒಂದು ಕೋಟಿ ಜನರು ಏನು ಇದ್ದಾರೆ ಆ ಜನರಿಗೆ ನಾವು ಈ ರೀತಿಯ ಮನೆಗಳನ್ನು ಕೊಡುತ್ತಿದ್ದೇವೆ. ಆದರೆ ಈ ರೀತಿಯ ಮನೆಗಳನ್ನು ನಾವು ಕೊಡುತ್ತಿದ್ದೀವಲ್ಲಾ ಅದಕ್ಕೆ ನಾವು ಎಷ್ಟು ಸಬ್ಸಿಡಿ ಕೊಡುತ್ತಿದ್ದೇವೆಂದು ಯೋಚನೆ ಮಾಡಬೇಕು. ಅಕ್ಕಿ, ಸೀಮೆಎಣ್ಣೆ, ಆಶ್ರಯ ಮನೆಗಳನ್ನು ಕೊಡುವುದರ ಮೂಲಕ ಒಂದು ವರ್ಷಕ್ಕೆ ಅವನಿಗೆ 900 ರೂಪಾಯಿ ಸಬ್ಸಿಡಿ ದರದಲ್ಲಿ ಸರಕಾರ ಕೊಡುತ್ತಿದೆ. ಆದರೆ ಅವನ ಶ್ರಮವನ್ನು ನಾವು ಎಷ್ಟು ಕಳ್ಳತನ ಮಾಡುತ್ತಿದ್ದೇವೆಂದು ಯೋಚನೆ ಮಾಡಬೇಕು. ಅವನಿಗೆ ಎಮ್ಮೆ ಸಾಲ, ಕುರಿ ಸಾಲ, ಕೋಳಿ ಸಾಲಗಳನ್ನು ಕೊಟ್ಟು ಅವನ ಶ್ರಮವನ್ನು ಕಳ್ಳತನ ಮಾಡಿ ನಾವು ಒಂದು ವರ್ಷಕ್ಕೆ ಅವನಿಗೆ 900 ರೂಪಾಯಿ ಸಬ್ಸಿಡಿ ಕೊಟ್ಟು 5 ಸಾವಿರ ಕಳ್ಳತನ ಮಾಡುತ್ತಿದ್ದೇವೆ. ಅಂದರೆ ಅವನಿಗೆ ವೈಜ್ಞಾನಿಕ ಕೂಲಿ ನೀತಿ ಇಲ್ಲ. ಅವನ ದುಡಿಮೆಗೆ ವೈಜ್ಞಾನಿಕ ಬೆಲೆ ನಿಗದಿ ಇಲ್ಲ ಅಂತಹ ಬಡತನದ ರೇಖೆಯಲ್ಲಿರುವ ಜನರಿಗೆ 20 ಸಾವಿರ ರೂಪಾ-ಯಿಗಳ ಮನೆ ನಾವು ಕೊಡುತ್ತಿದ್ದೇವೆ. ಆ 20 ಸಾವಿರ ರೂಪಾಯಿ ಮನೆ ನಿಜವಾಗಲೂ ಮನೆ ರೂಪದಲ್ಲಿದೆಯೇ ಎಂದು ಯೋಚನೆ ಮಾಡಬೇಕು. 1991-92, 92-93 ರಲ್ಲಿ ಪ್ರತಿ ವರ್ಷ ಒಂದು ಲಕ್ಷ 50 ಸಾವಿರ ಮನೆಗಳನ್ನು ನಾವು ಕೊಡುತ್ತಿದ್ದೇವೆ. 2,000 ಇಸವಿ ತಲುಪುವ ಹೊತ್ತಿಗೆ ಯಾರ್ಯಾರಿಗೆ ಸೂರು ಕೊಟ್ಟಿದ್ದೆವು ಯಾರ್ಯಾರಿಗೆ ನೆರಳು ಕೊಟ್ಟಿದ್ದೆವೋ ಆ ಪೂರ್ಣ ಮನೆ ಅವರಿಗೆ ಇರುವುದಿಲ್ಲ. ಈ 20,000 ರೂಪಾಯಿಗೆ ಮನೆ ಕೊಡುವ ಪದ್ಧತಿ ಇದೆಯಲ್ಲಾ ಅದನ್ನು ನಿಲ್ಲಿಸಬೇಕು. ಕನಿಷ್ಠ ಆ ಫಲಾನುಭವಿಗಳಿಗೆ 40 ಸಾವಿರ ರೂಪಾಯಿ ಕೊಟ್ಟರೆ ನಿಜವಾಗಲೂ ಒಬ್ಬ ಬಡತನದ ರೇಖೆಯಲ್ಲಿರುವ ವ್ಯಕ್ತಿಗೆ ನೆರಳನ್ನು ನಿಜವಾಗಲೂ ಕೊಡುವ ಕಾರ್ಯಕ್ರಮವಾಗುತ್ತದೆ. ಇಲ್ಲದಿದ್ದರೆ ಬರೀ ವೋಟಿಗೋಸ್ಕರ, ಏಕೆಂದರೆ ನಾವು ಅವನಿಗೆ ಕೊಡುತ್ತಿರುವುದು ಹೇಗೆ ಎಂದರೆ ಅಪ್ಪ ಹಸಿರು ಕಾರ್ಡು ಅವನ ಮಗ ಹಸಿರು ಕಾರ್ಡು ಅವನ ಮೊಮ್ಮಗ ಹಸಿರು ಕಾರ್ಡು. ಅವನ ವಂಶ ಪೂರ್ಣ ಆಶ್ರಯ ಮನೆ ಹಸಿರು ಕಾರ್ಡಿನಲ್ಲಿ ಬೆಳೆಯಬೇಕೆಂಬ ಕಾರ್ಯಕ್ರಮ. ಇದರ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ಮಾಡಿ ಅವರಿಗೆ ಮನೆ ಕೊಡಬೇಕು. ಕನಿಷ್ಟ 20 ಸಾವಿರದಿಂದ 40 ಸಾವಿರ ರೂಪಾಯಿಗಳ ಮನೆಯನ್ನು ಕೊಡುವ ಬಗ್ಗೆ ಸರಕಾರ ಇದರ ಕಡೆಗೆ ಗಂಭೀರವಾಗಿ ಚಿಂತನೆ

ಮಾಡಬೇಕು. ಇಲ್ಲದಿದ್ದರೆ ಕೇವಲ ವೋಟಿನ ದೃಷ್ಟಿಯಿಂದ ನಾವು ಆಶ್ರಯ 'ಇಂದಿರಾ ಆವಾಸ್ ಮನೆಗಳನ್ನು ಕೊಟ್ಟ ಹಾಗಾಗುತ್ತದೆ. ಅದು ರಾಜ್ಯ ಸರಕಾರ ಆಗಬಹುದು ಕೇಂದ್ರ ಸರಕಾರ ಆಗ-ಬಹುದು. ಇನ್ನೊಂದು ಸಮಸ್ಯೆ ಇಲ್ಲಿ ಇದೆ. ಫಲಾನುಭವಿಗಳನ್ನು ಗುರುತು ಮಾಡುವುದರಲ್ಲಿ ನಾವು ಸೋತಿದ್ದೇವೆ. 4 ಜನ ಈ ಒಬ್ಬ ಫಲಾನುಭವಿಯನ್ನು ಆ ಕಡೆ ಕೈ ಒಬ್ಬ ಈ ಕಡೆ ಕೈ ಒಬ್ಬ ಈ ಕಾಲು ಒಬ್ಬ ಆ ಕಾಲು ಒಬ್ಬ ಹಿಡಿದುಕೊಂಡು ಎಳೆಯುತ್ತಾನೆ. ಗ್ರಾಮ ಪಂಚಾಯತಿಗೆ ಬಿಡುವುದಿಲ್ಲ ಇಲ್ಲವೇ ತಾಲ್ಲೂಕು ಪಂಚಾಯತಿಯವರಿಗೆ ಬಿಡುವುದಿಲ್ಲ ಇಲ್ಲವೇ ಜಿಲ್ಲಾ ಪಂಚಾಯಿತಿಯವರಿಗೆ ಇಲ್ಲವೇ ಶಾಸಕರಿಗೆ ಬಿಡುವುದಿಲ್ಲ. ಒಟ್ಟಿನಲ್ಲಿ ಫಲಾನುಭವಿಗಳನ್ನು ಗುರುತಿಸುವುದರಲ್ಲಿ ನಾವು ಫೇಲ್ಯೂರ್ ಆಗಿದ್ದೇವೆ. ಕಳೆದ ಸಲ ನಾವು ಶಾಸನ ಸಭೆಯಲ್ಲಿ ಮಾತಾನಾಡಿದ್ದೇವೆ. ಫಲಾನುಭವಿಗಳಿಗೆ ಪೂರ್ತಿ ಹಣ ಕೊಡಬೇಕು ಅವನೇ ಅವನ ಮನೆಯನ್ನು ಕಟ್ಟಿಕೊಳ್ಳಬೇಕೆಂದು ನಾವು ಮಾಡಿದ್ದೆವು. ಆದರೆ ಮಧ್ಯವರ್ತಿಗಳಿಂದ ಇನ್ನೂ ಅವನನ್ನು ಬಿಡುಗಡೆ ಮಾಡಿಲ್ಲ. ಜಿಲ್ಲಾ ಪಂಚಾಯತಿಯಿಂದ ಹಂಚು ಮರಗಳನ್ನು ಕೊಡತಕ್ಕಂಥ ಮಧ್ಯವರ್ತಿಯ ಕೆಲಸ ನಾವು ಮಾಡುತ್ತಿದ್ದೇವೆ. ಇನ್ನು ಕೆಲವು ತಾಲ್ಲೂಕು ಪಂಚಾಯತಿಯಲ್ಲಿ ಕಂಟ್ರಾಕ್ಟರ್‌ದಾರರಿಂದ ಮನೆ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಸರಕಾರ ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕು. ಸರಕಾರದಿಂದ ಹಣ ಕೊಡುವುದು ಮುಖ್ಯವಲ್ಲ, ಸರಕಾರ ಕೊಟ್ಟಂತಹ ಹಣ ಯಾವ ರೀತಿ ಸಾರ್ವಜನಿಕರಿಗೆ ಖರ್ಚಾಗುತ್ತದೆನ್ನುವುದನ್ನು ಪರಿಶೀಲನೆ ಮಾಡುವುದು ಬಹಳ ಮುಖ್ಯ. ಹಣ ಕೊಡುವುದಕ್ಕೆ ಯಾರು ಬೇಕಾದರೂ ಕೊಡುತ್ತಾರೆ ಆದರೆ ನಾವು ಕೊಟ್ಟಂತಹ ಹಣ ಜನರಿಗೆ ಯಾವ ರೀತಿ ಪ್ರಾಮಾಣಿಕವಾಗಿ ಖರ್ಚಾಗುತ್ತಿದೆ ಎನ್ನುವುದು ಬಹಳ ಮುಖ್ಯ. ಅತ್ಯಂತ ಗಂಭೀರವಾಗಿ ಆಶ್ರಯ ಮನೆಗಳ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಹಣ ಹೆಚ್ಚು ಮಾಡಬೇಕು. ನಂತರ ಆ ಫಲಾನುಭವಿಗಳಿಗೆ ನೇರವಾಗಿ ತಲುಪುವ ಕೆಲಸ ಮಾಡಬೇಕು. ನಾನು ಮೈಸೂರಿನಿಂದ ಮೊನ್ನೆ ಬರುತ್ತಿದ್ದೆ. ಅಲ್ಲಿನ ಗೃಹಮಂಡಳಿ ಹುಡ್ಕೋಸ್ಕೀಮ್ ಎಂದು ಮಾಡಿದೆ. ಅಲ್ಲಿ ಮನೆಗಳನ್ನು ಏನು ಕಟ್ಟಿದ್ದಾರೆ ಅವೆಲ್ಲಾ ಬಿರುಕು ಬಿಟ್ಟಿದೆ. ಹುಡ್ಕೋ ಯೋಜನೆಯಿಂದ ಒಬ್ಬರು ಮನೆ ಕೊಡುವುದು. ಹುಡ್ಕೋ ಸ್ಕೀಮಿಗೆ ನೀವು ಯಾರನ್ನು ಕೊಡುತ್ತೀರಿ ಅವನಿಗೆ ನೀವು ಜವಾ-ಬ್ದಾರಿಯುತವಾಗಿ ನಿಂತುಕೊಂಡು ಮನೆ ಕಟ್ಟಿಸುವ ಜವಾಬ್ದಾರಿ ಕೊಟ್ಟರೆ ಆ ಹುಡ್ಕೋ ಮನೆಗಳು ಶಾಶ್ವತವಾಗಿ ಉಳಿಯುತ್ತವೆ. ಇಲ್ಲದಿದ್ದರೆ ನೀವು ಕಟ್ಟಿಕೊಟ್ಟಂತಹ ಮನೆ ಅದು ಯಾವುದೇ ರೀತಿಯಲ್ಲಿ ಅನಾನುಕೂಲವಾಗಿದ್ದರೂ ತೆಗೆದುಕೊಳ್ಳಲೇಬೇಕಾಗಿದೆ. ಆದ್ದರಿಂದ ಗೃಹ ಮಂಡಳಿಗಳವರು ಮನೆ-ಗಳನ್ನು ಕಟ್ಟುವಾಗ ವೈಜ್ಞಾನಿಕವಾಗಿ ಚಿಂತನೆ ಮಾಡುವುದು ಬಹಳ ಒಳ್ಳೆಯದು. ಇನ್ನು ಕರ್ನಾಟಕದಲ್ಲಿ 26826 ಹಳ್ಳಿಯಲ್ಲಿ ನಾವು ಬಡತನದ ರೇಖೆಯಲ್ಲಿ ಇರತಕ್ಕಂತಹ ಎಲ್ಲಾ ಜನರಿಗೆ ನಾವು ನಿವೇಶನ ಕೊಟ್ಟಿದ್ದೇವೆಯೇ ಎಂಬ ಬಗ್ಗೆ ವಿಚಾರ ಮಾಡಬೇಕು. ಸ್ಥಳ ಎಲ್ಲಿ ಇದೆ ಅದನ್ನು ವಿಚಾರ ಮಾಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:- ರಾಜ್ಯದಲ್ಲಿ ಎಷ್ಟು ವಸತಿ ಹೀನರು ಇದ್ದಾರೆ ಎಷ್ಟು ಜನ ನಿವೇಶನ ರಹಿತರು ಇದ್ದಾರೆಂಬುದನ್ನು ಸರ್ವೆ ಮಾಡಿದ್ದೇವೆ. 8 ಲಕ್ಷ ನಿವೇಶನ ವಸತಿಹೀನರು ಇದ್ದು ನಿವೇಶನ

ರಹಿತರು ರಾಜ್ಯದಲ್ಲಿ 27 ಸಾವಿರ ಹಳ್ಳಿಗಳಲ್ಲಿ ಇದ್ದಾರೆ. ವಸತಿ ಹೀನರು 11 ಲಕ್ಷ ಜನರು ಇದ್ದಾರೆಂದು ಗುರುತಿಸಲಾಗಿದೆ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ:- ನನ್ನ ಕ್ಷೇತ್ರದಲ್ಲಿ ಬಹಳ ಗ್ರಾಮಗಳು ಇದೆ. ಎಲ್ಲಿ ಜಾಗ ಸಿಗುತ್ತದೆ ಅಲ್ಲಿ ಸರ್ವೆ ಮಾಡಿ ನಿವೇಶನ ಫಾರ್ಮೇಷನ್ ಮಾಡಿ ಫಲಾನುಭವಿಗಳಿಗೆ ತಾವು ಕೊಡಬಹುದು. ಆದರೆ ಸುಮಾರು ಯಾವತ್ತು ಆಶ್ರಯ ಮನೆಗಳ ಬಗ್ಗೆ ಬಡತನದ ರೇಖೆಯಲ್ಲಿರುವ ಮನೆಗೆ ನಿವೇಶನ ಕೊಡುವುದಕ್ಕೆ ಪ್ರಯತ್ನಪಟ್ಟೆವು ಆವತ್ತಿನಿಂದ ಇಲ್ಲಿಯವರೆಗೂ ಕೆಲವು ಗ್ರಾಮಗಳಲ್ಲಿ ಒಂದು ನಿವೇಶನವನ್ನೂ ಕೊಟ್ಟಿಲ್ಲ ಇದಕ್ಕೆ ಕಾರಣ ಸ್ಥಳದ ಅಭಾವ. ನಂತರ ನಾವು ಒಂದು ಎಕರೆಗೆ ಫಿಕ್ಸ್ ಮಾಡಿರುವ ರೇಟ್ 40-50 ಸಾವಿರ ಭೂಮಿತಿ ತೆಗೆದು ಹಾಕಿದಿರಿ. ಏತಕ್ಕೆ ತೆಗೆದು ಹಾಕಿದಿರಿ ಎಂದರೆ ಅರ್ಥ, ಒಂದು ಎಕರೆ ಇರತಕ್ಕಂತಹ ಒಬ್ಬ ವ್ಯಕ್ತಿಗೆ ಹತ್ತು, 15 ಲಕ್ಷ ಸಿಕ್ಕಲಿ ಅವನು 15 ಲಕ್ಷ ಹಣ ಇಟ್ಟುಕೊಂಡು ಕನಿಷ್ಠ ಅವನ ಜೀವನ ಸುಧಾರಣೆಯಾಗಲಿ ಅಂತ. ಆದರೆ ಹಳ್ಳಿಯಲ್ಲಿ 25-40 ಸಾವಿರ ರೂಪಾಯಿ ಒಂದು ಎಕರೆ ಜಮೀನು ಕೊಡುವ ಅವೈಜ್ಞಾನಿಕ ಆಲೋಚನೆ ಮಾಡತಕ್ಕಂತಹ ಸರಕಾರ ಇದರ ಬಗ್ಗೆ ಜವಬ್ದಾರಿಯುತವಾಗಿ ಚಿಂತನೆ ಮಾಡಬೇಕು. ಒಂದು ಎಕರೆ ಜಮೀನನ್ನು 25-40 ಸಾವಿರಕ್ಕೆ ಹೇಗೆ ಕೊಡುವುದಕ್ಕೆ ಸಾಧ್ಯ? ತಾವು ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಹೊಂದಿದ್ದರೆ ಆ ಏರಿಯಾದಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಮಾರ್ಕೆಟ್ ವ್ಯಾಲ್ಯು ಎಷ್ಟು ಇದೆ ಎಂದು ತಿಳಿದು ಅದರ ಬೆಲೆಯ ಮೇಲೆ ಆ ಜಮೀನನ್ನು ಕಳೆದುಕೊಳ್ಳುವ ರೈತನಿಗೆ ಬೋನಸ್ಸು ಕೊಟ್ಟು ಆ ಬಡತನದ ರೇಖೆಯಲ್ಲಿರುವ ಜನರಿಗೆ ನಿಜವಾಗಲೂ ನಿವೇಶನ ಕೊಡುವ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಪಾಪದ ಕೆಲಸ ಮಾಡಿದ್ದೀರಿ. ಕಾಂಗ್ರೆಸ್ ಸರಕಾರ ಮಾಡಿರಬಹುದು ನೀವೂ ಅದನ್ನೂ ಕಂಟಿನ್ಯೂ ಮಾಡಬಹುದು. ಸುಮಾರು 30-40 ಸಾವಿರ ಎಕರೆ ಗೋಮಾಳವನ್ನು ಹಾಳು ಮಾಡಿಕೊಂಡು ಯಾರ್‍ಯಾರು ಊಳುತ್ತಿದ್ದರೋ ಅದನ್ನು ಯಾರ್‍ಯಾರಿಗೋ ಕೊಟ್ಟಿದ್ದೇವೆ. ಇವತ್ತು ನಾವು ಗೋಮಾಳ ಉಳಿಸಿಕೊಂಡಿದ್ದಿದ್ದರೆ ನಮ್ಮ ಹಳ್ಳಿಯ ಅಭಿವೃದ್ಧಿಗೆ ಬಹಳ ಅನುಕೂಲವಾಗುತ್ತಿತ್ತು. ನಮ್ಮ ಹಳ್ಳಿಯ ಅಭಿವೃದ್ಧಿಗೆ ಬಹಳ ಮುಖ್ಯವಾಗಿ ಜಾಗಬೇಕು ಅದನ್ನು ನಾವು ತಪ್ಪು ಮಾಡಿದ್ದೇವೆ. ನಿಜವಾಗಲೂ ತಮಗೆ ಬಡವರ ಬಗ್ಗೆ ಕಾಳಜಿ ಇದ್ದರೆ ಹಣವನ್ನು ಹೆಚ್ಚು ಮಾಡಿ ಆ ನಿವೇಶನ ಕೊಡುವ ವ್ಯವಸ್ಥೆ ಮಾಡಬೇಕು. ಬೀಡಿ ಕಾರ್ಮಿಕರನ್ನು ಗುರುತಿಸುವುದು. ಒಂದು ಏರಿಯಾದಲ್ಲಿ ಬೀಡಿ ಕಾರ್ಮಿಕರನ್ನು ಗುರುತು ಹಚ್ಚುವುದು ಆದರೆ ಕೆಲವು ಹಳ್ಳಿಗಳಲ್ಲಿ ಬೀಡಿ ಕಟ್ಟತಕ್ಕಂತಹ ಕಾರ್ಮಿಕರು ಒಂದು ಊರಿನಲ್ಲಿ 15 ಜನ ಇನ್ನೊಂದು ಊರಿನಲ್ಲಿ 8 ಜನ ಹೀಗೆ, ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳು ಬೀಡಿ ಕಟ್ಟತಕ್ಕಂತಹ ಕೆಲಸ ಮಾಡುತ್ತಾರೆ ಅವರನ್ನು ಐಡೆಂಟಿಫೈ ಮಾಡಬೇಕು. ಅವರಿಗೂ ಕೂಡ ಮನೆಯ ಸವಲತ್ತನ್ನು ಒದಗಿಸಿಕೊಡಬೇಕು. ಆ ಏರಿಯಾದಲ್ಲಿ 10 ಸಾವಿರ 2 ಸಾವಿರ ಜನ ಬೀಡಿ ಕಟ್ಟುವ ಕಾರ್ಮಿಕರು ಇದ್ದರೆ ಆ ಜನರನ್ನು ಮಾತ್ರ ಐಡೆಂಟಿಫೈ ಮಾಡುತ್ತೀರಿ, ಕೆಲವು ಹಳ್ಳಿಗಳಲ್ಲಿ 5-8-10 ಜನ ಇರುತ್ತಾರೆ. ಅವರನ್ನು ಐಡೆಂಟಿಫೈ ಮಾಡುಬೇಕು. ಉದಾಹರಣೆಗೆ ನನ್ನ ತಾಲ್ಲೂಕಿನಲ್ಲೇ

ನಾನು ಅದನ್ನು ನೋಡಿದ್ದೇನೆ. ಅವರನ್ನೂ ಐಡೆಂಟಿಫೈ ಮಾಡಬೇಕು. ಏಕೆಂದರೆ ಬೀಡಿ ಸೇದುವವನು ಎಷ್ಟು ಬೇಗ ಸಾಯುತ್ತಾರೋ ಅಷ್ಟೇ ಬೇಗ ಬೀಡಿ ಕಟ್ಟುವವರೂ ಸಾಯುತ್ತಾರೆ. ಏಕೆಂದರೆ ಆ ಹೊಗೆ ಸೊಪ್ಪಿನ ಘಾಟಿಗೆ ಅವರು ಟಿ.ಬಿ. ಪೇಷೆಂಟ್ಸ್ ರೀತಿಯಾಗುತ್ತಾರೆ. ಆದ್ದರಿಂದ ಇವನ್ನೂ ಕನ್ಸಿಡರ್ ಮಾಡಬೇಕು. ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಕೊಳಚೆ ನಿರ್ಮೂಲನ ಮಾಡುತ್ತೇವೆಂದು ಮಂಡಳಿ ಇಟ್ಟುಕೊಂಡಿದ್ದಾರೆ. ಪಾಂಡವಪುರ ತಾಲ್ಲೂಕಿನಲ್ಲಿ ಕೊಳಚೆ ಪ್ರದೇಶ ವನ್ನು ನಾವು ಗುರುತು ಮಾಡುತ್ತೇವೆಂದು ಬಂದರು. . .

ಶ್ರೀ ಕುಂಬ್ಳೆ ಸುಂದರರಾವ್:- ಬೀಡಿ ಅಪಾಯವೇನು ಇದೆ ಅದನ್ನು ಕುರಿತು ಒಂದು ಸಣ್ಣ ಕಥೆ. ಇದು ಹೆಚ್ಚಾಗಿ ಸೂಟು ಆಗುತ್ತದೆಂದು ನಾನು ಹೇಳುತ್ತೇನೆ. ಕೇರಳದ ಬೀಡಿ ಜಾಹಿರಾತು ಒಂದು ಇತ್ತು. ಆ ಜಾಹಿರಾತು ಏನು ಹೇಳುತ್ತಿತ್ತು ಎಂದರೆ "ಈ ಬೀಡಿ ಸೇದಿದರೆ ನೀನು ಮುದುಕ ಆಗುವುದಿಲ್ಲ, ಈ ಬೀಡಿ ಸೇದಿದರೆ ನಿನ್ನನ್ನು ನಾಯಿ ಕಚ್ಚುವುದಿಲ್ಲ, ಈ ಬೀಡಿ ಸೇದಿದರೆ ನಿನ್ನ ಮನೆಗೆ ಕಳ್ಳರು ನುಗ್ಗುವುದಿಲ್ಲ" ಈ ಜಾಹಿರಾತು ನೋಡಿ ಬಹಳ ಜನ ಸಂತೋಷಪಟ್ಟರು, ಕೇರಳದ ಬೀಡಿ, ಯಾವುದೇ ಬೀಡಿಗೆ ಇದು ಅನ್ವಯಿಸುತ್ತದೆ. ಗಣೇಶನಿಂದ ಹಿಡಿದು ಮಹೇಶನವರೆಗೆ ಯಾವ ಬೀಡಿ-ಯಾಗಲೀ ಎಲ್ಲಾ ಬೀಡಿಗೂ ಅನ್ವಯಿಸುತ್ತದೆ. ಸತ್ಯವೇನೆಂದರೆ ಈ ಬೀಡಿ ಸೇದಿದ ಮರುಕ್ಷಣದಿಂದ ಅವನಿಗೆ ಕೆಮ್ಮು ಆರಂಭವಾಗುತ್ತದೆ. ರಾತ್ರಿ ಇಡೀ ಕೆಮ್ಮುತ್ತಿರುತ್ತಾನೆ. ಅವನ ಮನೆಗೆ ಕಳ್ಳರು ನುಗ್ಗು-ವುದು ಹೇಗೆ ಮನೆಯಲ್ಲಿ ಎಚ್ಚರ ಇದ್ದಾರೆಂದು ಆಯಿತು. ಇನ್ನು ನಾಯಿ ಏಕೆ ಕಚ್ಚುವುದಿಲ್ಲ ಎಂದರೆ ಬೀಡಿ ಸೇದಿ ಸೇದಿ ಅವನ ಎದೆ ಗೂಡಾಗುತ್ತದೆ. ಕೈಯಲ್ಲಿ ಕೋಲು ಇಲ್ಲದೆ ನಡೆಯಲಿಕ್ಕಾಗುವುದಿಲ್ಲ. ನಾಯಿ ಹತ್ತಿರ ಬರುವುದಿಲ್ಲ ನಾಯಿ ಕಚ್ಚುವುದಿಲ್ಲ. ಏಕೆ ಮುದುಕ ಆಗುವುದಿಲ್ಲವೆಂದರೆ ಸೇದುತ್ತಾ ಇದ್ದರೆ 50 ವರ್ಷದಲ್ಲಿ ನೆಗೆದು ಬೀಳುತ್ತಾನೆ ಅವನು ಮುದುಕ ಆಗುವುದು ಯಾವಾಗ? ಇದು ಬೀಡಿಯ ದುಷ್ಪರಿಣಾಮ!.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅಧ್ಯಕ್ಷರೇ, ಕರ್ನಾಟಕ ಕೊಳಚೆ ಮಂಡಳಿ ಎಂದು ಹೇಳಿ ಒಂದು ವಿಭಾಗ ಇದೆ. ಎಲ್ಲೆಲ್ಲಿ ಕರ್ನಾಟಕದಲ್ಲಿ ಕೊಳಚೆಯಾಗಿದೆ, ಅದನ್ನು ಐಡೆಂಟಿಫೈ ಮಾಡಿ ಸವಲತ್ತು ಕೊಡುವ, ಒಂದು ನಿರ್ಮೂಲನ ಮಾಡುವ ನಿರ್ಮಲ ಮಂಡಳಿ ಎಂದು ಹೆಸರು ಇಟ್ಟುಕೊಂಡಿದ್ದಾರೆ. ಪಾಂಡವಪುರ ತಾಲ್ಲೂಕಿನಲ್ಲಿ ಯಾವ ಯಾವ ಕೊಳಚೆ ಪ್ರದೇಶಗಳಿವೆ, ಅದನ್ನು ಐಡೆಂಟಿಫೈ ಮಾಡಿ ಅದನ್ನು ಉತ್ತಮಗೊಳಿಸುತ್ತೇವೆ ಎಂದು ಬಂದರು. ಅವತ್ತು ಬಂದಿದ್ದವರು ಮತ್ತೆ ಮೊನ್ನೆ ಬಂದಿದ್ದಾರೆ. ಎರಡು ವರ್ಷಗಳಾದ ಮೇಲೆ. ಆದ್ದರಿಂದ ನಿಜವಾಗಿಯೂ ಕೊಳಚೆ ಮಂಡಳಿ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಬಹಳ ಮುಖ್ಯವಾಗಿ ರಸ್ತೆ, ಡ್ರೈನೇಜು, ಕುಡಿಯುವ ನೀರು, ಆರೋಗ್ಯ ತಪಾಸಣೆ ಬಗ್ಗೆ. ಏಕೆಂದರೆ ಟಿ.ಬಿ. ಜಾಸ್ತಿ ಇರುವುದು ಅಲ್ಲಿಯೇ. ಆರೋಗ್ಯ ಇಲಾಖೆ-ಯವರನ್ನು ಜೊತೆಗೆ ಕರೆದುಕೊಂಡು ಬನ್ನಿ. ಕೊಳಚೆ ಮಂಡಳಿಯವರು ಪೂರ್ಣ ಪ್ರಮಾಣದಲ್ಲಿ ನಿಜವಾಗಿಯೂ ಕೊಳಚೆ ನಿರ್ಮೂಲನ ಮಾಡಬೇಕು. ಜನರಿಗೆ ಒಂದು ಉತ್ತಮವಾದ ಅನುಕೂಲ,

ಸೌಕರ್ಯ, ಸೌಲಭ್ಯ ನೀಡಬೇಕೆಂದರೆ ಕುಡಿಯುವ ನೀರು ಡ್ರೈನೇಜು, ರಸ್ತೆ, ಇನ್ನಿತರ ಎಲ್ಲಾ ಕಾರ್ಯಕ್ರಮಗಳನ್ನು ಸುಮಾರಾಗಿ ಮಾಡಿಕೊಡಬೇಕು. ಏಕೆಂದರೆ ಇದುವರೆಗೂ ತಾವು ಐಡೆಂಟಿಫೈ ಮಾಡಿರುವುದು 15 ಲಕ್ಷ ಕೊಳಚೆ ನಿವಾಸಿಗಳು ಎಂದು ಹೇಳಿದ್ದೀರಿ. ಆಮೇಲೆ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದೇವೇಗೌಡರು ಒಂದು ಸಲಹೆಯನ್ನು ಕೊಟ್ಟಿದ್ದರು. ಆಶ್ರಯ ಯೋಜನೆಯ ಮನೆಗಳನ್ನು ನಗರಪ್ರದೇಶದಲ್ಲಿ ಬಹುಮಹಡಿ ಕಟ್ಟಡ ಕಟ್ಟುವುದರ ಮೂಲಕ ಜಾಗವನ್ನು ಉಳಿತಾಯ ಮಾಡಿ ಹೆಚ್ಚು ಜನರಿಗೆ ಆಶ್ರಯ ಮನೆ ಕೊಡಬಹುದು ಎಂದು ಮಾನ್ಯ ಮಾಜಿ ಮುಖ್ಯ ಮಂತ್ರಿಗಳು ಈಗಿನ ಪ್ರಧಾನ ಮಂತ್ರಿಗಳು ತಮಗೆ ಸಲಹೆ ಕೊಟ್ಟಿದ್ದರು. ಈಗ ಏನಾಗಿದೆ ಎಂದು ತಾವು ತಮ್ಮ ಉತ್ತರದಲ್ಲಿ ನಮಗೆ ತಿಳಿಸಬೇಕು. ಇನ್ನೊಂದು ಬೆಂಗಳೂರು ನಗರದಲ್ಲಿ ಬೆಂಗಳೂರಿನವರು ಬಹಳ ಜನ ಎಂ.ಎಲ್.ಎ. ಗಳು ಇದ್ದೀರಿ. ಇನ್ನು ನಗರ ಬೆಳೆಸುವುದು ಬೇಡ. ಈಗ ಏನು ಬೆಳೆದಿದೆ, ನಿಜ-ವಾಗಲೂ ಇದರಿಂದ ನಿಮಗೆ ಯಾವ ರೀತಿ ಅನಾನುಕೂಲವಾಗುತ್ತಿದೆ ಎಂದು ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಅಷ್ಟೊಂದು ಅನಾನುಕೂಲ ಇದೆ. ದಯವಿಟ್ಟು ತಾವೆಲ್ಲಾ ಹೋರಾಟ ಮಾಡಬೇಕಾ-ಗಿರುವುದು ಮೊದಲು ನಗರವನ್ನು ಬೆಳೆಸುವುದು ನಿಲ್ಲಿಸಬೇಕು. ಕೈಗಾರಿಕಾ ವಿಕೇಂದ್ರೀಕರಣ ವ್ಯವಸ್ಥೆ ಮಾಡಿ ಬೆಂಗಳೂರಿನಲ್ಲಿ ಯಾವುದು ಕೈಗಾರಿಕೆ ಬೇಡ. ಬೆಂಗಳೂರಿನಲ್ಲಿ ಯಾವುದೇ ಕೈಗಾರಿಕೆಗಳನ್ನು ಹಾಕಿಸಬೇಡಿ. ಎಲ್ಲವನ್ನೂ ಹೊರಗಡೆ ಕಳುಹಿಸಿಕೊಡಿ. ಇಲ್ಲದಿದ್ದರೆ ನೀವು ಕುಡಿಯುವ ನೀರು, ಗಾಳಿ ಬೆಳಕು ಇಲ್ಲದಿದ್ದರೆ ಯಾವುದೇ ಆರೋಗ್ಯಕರವಾದ ವಾತಾವರಣವಿರುವುದಿಲ್ಲ. ದಯವಿಟ್ಟು ತಾವು ಬಿ.ಡಿ.ಎ. ರದ್ದು ಮಾಡಬೇಕು. ತಾವು ಆ ಕೆಲಸವನ್ನು ಮಾಡಬೇಕು. ಅದರಿಂದ ಆಶ್ರಯ ಮನೆ ಬಗ್ಗೆ ಮತ್ತೊಮ್ಮೆ ಪುನರ್‌ಪರೀಶೀಲಿಸಿ ನಿಜವಾದ ಫಲಾನುಭವಿಗೆ ಬಡತನದ ರೇಖೆಯಲ್ಲಿರುವ ವ್ಯಕ್ತಿಗಳಿಗೆ ಇಪ್ಪತ್ತು ಸಾವಿರ ರೂಪಾಯಿಯಿಂದ ಮನೆ ಕಟ್ಟುವುದು ನಿಜವಾಗಲೂ ಸಾಧ್ಯವಾಗುವುದಿಲ್ಲ. ಕನಿಷ್ಟ ನಲವತ್ತು ಸಾವಿರ ರೂಪಾಯಿಗಳನ್ನಾದರೂ ಒದಗಿಸತಕ್ಕಂಥ ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಆರೋಗ್ಯ ಇಲಾಖೆ ಬಗ್ಗೆ ಡಾ|| ಮಲ್ಕಾರೆಡ್ಡಿಯವರು ಬಾರಿ ಬೆಳಕು ಚೆಲ್ಲುವ ವಿಚಾರವನ್ನು ಆರೋಗ್ಯ ಇಲಾಖೆ ಬಗ್ಗೆ, ಶಿಕ್ಷಣ ಇಲಾಖೆ ಬಗ್ಗೆ ಹೇಳಿದರು. ಮಾನ್ಯ ಮಂತ್ರಿಗಳು ತಾವು ಯೋಚನೆ ಮಾಡಬೇಕು. ಜಾಸ್ತಿ ಡಾಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳುವುದು. ಜಾಸ್ತಿ ಆಸ್ಪತ್ರೆಗಳನ್ನು ಕಟ್ಟುತ್ತೇವೆ ಎಂದು ಹೇಳುವುದು ಇದು ತಪ್ಪು. ಬೇಸಿಕಲಿ ಜನರನ್ನು ಆರೋಗ್ಯ-ವಂತರನ್ನಾಗಿ ಮಾಡುವಂಥ ಕಾರ್ಯಕ್ರಮ ಮಾಡುವುದಕ್ಕೆ ಆಸ್ಪತ್ರೆಗಳ ಸಂಖ್ಯೆಯನ್ನು ಕಡಿಮೆ ಮಾಡ ಬೇಕು. ನಿಜವಾಗಿಯೂ ಆಸ್ಪತ್ರೆಗಳ ಸಂಖ್ಯೆ ಮತ್ತು ಡಾಕ್ಟರ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಅದು ಬಿಟ್ಟು ಸರ್ಕಾರಕ್ಕೆ ಬರುವ ದುಡ್ಡಿನಲ್ಲೆಲ್ಲಾ ನಾವು ಮಾತ್ರೆ ತೆಗೆದುಕೊಡುತ್ತೇವೆ. ಹೊಸ ಹೊಸ ಖಾಯಿಲೆ ಬಂದರೆ ಹೊಸಹೊಸದಾಗಿ ಇಂಜಕ್ಷನನ್ನು ತೆಗೆದುಕೊಂಡು ಬರುತ್ತೇವೆ. ವರ್ಲ್ಡ್ ಹೆಲ್ತ್ ಆರ್ಗನೈಜೇಷನ್‌ನಿಂದ 510 ಕೋಟಿ ರೂಪಾಯಿ ಬರುತ್ತದೆ. ಎಲ್ಲಾ ಕಡೆ ನೂರು, ಇನ್ನೂರು ಹಾಸಿಗೆ ಉಳ್ಳ ಆಸ್ಪತ್ರೆಗಳನ್ನು ಕಟ್ಟಿಸಿ ಎಲ್ಲರನ್ನೂ ಅಡ್ಮಿಟ್ ಮಾಡುತ್ತೀರಿ, ಇದು ಮಾಡಬಾರದು. ಬೇಸಿಕಲಿ ನೀವು ಜನರನ್ನು ಎಜ್ಯುಕೇಟ್ ಮಾಡಬೇಕು. ಆಗಲೇ ನಿಮಗೆ ಏನಾದರೂ ಮಹತ್ತರವಾದ ಬದಲಾ-

ವಣೆಯಾಗುವುದು. ನಾನೇನು ಎಂ.ಬಿ.ಬಿ.ಸ್. ಓದಿಲ್ಲ. ಆದರೆ ನನ್ನ ಅನುಭವದಲ್ಲಿ ಒಬ್ಬ ವ್ಯಕ್ತಿ ಆರೋಗ್ಯವಾಗಿರಬೇಕಾದಂಥ ಗುಣಗಳ ಬಗ್ಗೆ, ಆರೋಗ್ಯವಾಗಿರಬೇಕಾದ ವಿಚಾರದ ಬಗ್ಗೆ ನಾವು ಗಮನವನ್ನು ಕೊಡಬೇಕಾಗುತ್ತದೆ. ಅಂಗನವಾಡಿ ಟೀಚರ್ಸ್, ಮಹಿಳಾ ಸೇವಕಿಯರು ಎಂದು ತಾವೆಲ್ಲಾ ನೇಮಕ ಮಾಡಿದ್ದೀರಿ, ಏನು ಕೆಲಸವನ್ನು ಮಾಡುತ್ತಾರೆ ಅವರು. ಯಾವ ಯಾವ ಏರಿಯಾಗೆ ಹೋಗುತ್ತಾರೆ? ಯಾರು ಬಡತನದ ರೇಖೆಗಿಂತ ಕೆಳಗಡೆ ಇದ್ದಾರೆ, ಯಾರು ಕಷ್ಟದಲ್ಲಿರುವಂಥ ಜನರಿದ್ದಾರೆ, ಅಂಥವರು ತಮ್ಮ ಮಕ್ಕಳನ್ನು ತಮ್ಮ ಮನೆಯನ್ನು ಆರೋಗ್ಯಕರವಾಗಿಟ್ಟುಕೊಳ್ಳುವ ಬಗ್ಗೆ ಎಷ್ಟು ಜನರಿಗೆ ನೀವು ಎಜ್ಯುಕೇಟ್ ಮಾಡಿದ್ದೀರಿ? ಏಕೆಂದರೆ ಏರ್ ಪಲ್ಯೂಷನ್, ವಾಟರ್ ಪಲ್ಯೂಷನ್, ಅಡಲ್ಟ್ರೇಷನ್ಸ್, ರಾಸಾಯನಿಕ ಗೊಬ್ಬರವನ್ನು ಉಪಯೋಗಿಸಿ ಹೆಚ್ಚು ಆಹಾರವನ್ನು ಬೆಳೆಸುತ್ತಿದ್ದೇವೆ. ಇವತ್ತು ಇಡೀ ಕರ್ನಾಟಕದಲ್ಲಿ ಈ ಎರಡು ವರ್ಷಗಳ ಹಿಂದೆ ನೈಟ್ರೋಜನ್‌ನ್ನು ಉಪಯೋಗಿಸುತ್ತಿರಲಿಲ್ಲ. ಆದರೆ ಎರಡರಿಂದ ಮೂರು ಪಟ್ಟು ಇವತ್ತು ನೈಟ್ರೋಜನ್ ಉಪಯೋಗಿಸಿ ನಾವು ಆಹಾರ ಪದಾರ್ಥವನ್ನು ಬೆಳೆಯುತ್ತಿದ್ದೇವೆ. ನಾವು ಆರೋಗ್ಯವಾಗಿರಬೇಕಾದರೆ ಯಾವುದೇ ದೇಶದಲ್ಲಿ, ಯಾವುದೇ ರಾಜ್ಯದಲ್ಲಿ ಆರೋಗ್ಯದಲ್ಲಿ ಪೌಷ್ಟಿಕಾಂಶ ಕೊಡುವ ವಿಚಾರದ ಬಗ್ಗೆ ಸರ್ಕಾರ ಗಂಭೀರವಾಗಿ ವಿಚಾರ ಮಾಡಬೇಕು. ಅದು ನಿಜವಾದ ಸರ್ಕಾರ. ನಿಜವಾಗಿ ಮನುಷ್ಯರ ಬಗ್ಗೆ ಚಿಂತನೆ ಮಾಡತಕ್ಕಂಥ ಒಂದು ವಿಚಾರ. ಔಷಧಿ ಕೊಡುವುದಲ್ಲ, ಮಾತ್ರೆ ಕೊಡುವುದಲ್ಲ, ಬಹಳ ಮುಖ್ಯವಾದುದು ಗಾಳಿ, ಆಹಾರ. ಇದರ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕು. ಆಮೇಲೆ ಔಷಧಿಗಳನ್ನು ಕೊಡುತ್ತೀರಲ್ಲಾ, ಯಾವುದೇ ಆಸ್ಪತ್ರೆಗೆ ಹೋಗಿ ಔಷಧಿ ಕೊಡುವುದು ಏನೆಂದರೆ ಪೆಪ್ಪರ್‌ಮೆಂಟ್ ಇದ್ದಹಾಗೆ. ಔಷಧಿಯನ್ನು ಕೊಡುತ್ತೀರಿ, ಅದು ಉತ್ತಮವಾಗಿ ರೆಕಗ್ನೈಸ್ ಆಗಿರುವ ಫರ್ಮ್ಸ್ ಮೂಲಕ ತಾವು ಔಷಧಿ ಕೊಡುವ ವ್ಯವಸ್ಥೆ ಮಾಡಬೇಕು. ಖರೀದಿ ವಿಧಾನವನ್ನು ಕೂಡ ಬದಲಾವಣೆ ಮಾಡಬೇಕು. ಪ್ರಾಥಮಿಕ ಘಟಕಕ್ಕೆ ತಾವು ಐವತ್ತು ಸಾವಿರ ರೂಪಾಯಿಗಳ ಔಷಧಿಯನ್ನು ಕೊಡುತ್ತೀರಿ. ಹಿಂದೆ ಔಷಧಿ ಬೆಲೆ ಏನಿತ್ತು, ಇವತ್ತು ಔಷಧಿ ಬೆಲೆ ಏನಿದೆ? ಇವತ್ತು ಆಸ್ಪತ್ರೆಯಲ್ಲಿ ಏನಾಗಿದೆ ಎಂದರೆ ಎಲ್ಲಾ ಡಾಕ್ಟರ್‌ಗಳು ವಸೂಲಿ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ಆಮೇಲೆ ನೀವು ಹೆಚ್ಚು ಬಿಲ್ಡಿಂಗ್ ಕಟ್ಟುವುದರ ಮೂಲಕ ಹೆಚ್ಚು ಕಟ್ಟಡ ಕಟ್ಟುವುದರ ಮೂಲಕ ನಾವು ಆರೋಗ್ಯ ಸುಧಾರಣೆ ಮಾಡುತ್ತೇವೆ ಎಂದು ನಾವೆಲ್ಲ ಮಾತನಾಡುತ್ತೇವೆ, ದಯ ವಿಟ್ಟು ಮೊಬೈಲ್ ಆಸ್ಪತ್ರೆಗಳನ್ನು ಜಾಸ್ತಿ ಮಾಡಬೇಕು. ಸನ್ಮಾನ್ಯ ಸಿಂಧ್ಯಾರವರಿಗೂ ಕೆಲಸ ಕಡಿಮೆ ಯಾಗಬೇಕು. ಜವರ ಮೂವ್‌ಮೆಂಟ್ಸ್ ಸ್ಟಾಪ್ ಮಾಡಬೇಕು. ಜನರು ಓಡಾಡುವ ಕೆಲಸ ಕಡಿಮೆ ಮಾಡಬೇಕು ಎಂದರೆ ಮೊಬೈಲ್ ಆಸ್ಪತ್ರೆಗಳನ್ನು ತಾವು ಮಾಡಬೇಕು. ಎಲ್ಲಾ ಸುಸಜ್ಜಿತವಾದ, ವ್ಯವಸ್ಥಿತವಾದ ಮತ್ತು ಉತ್ತಮವಾದ ತಾಂತ್ರಿಕ ಜ್ಞಾನ ಇರುವ ಡಾಕ್ಟರ್ ಸೇರಿದಂತೆ ಮೊಬೈಲ್ ಆಸ್ಪತ್ರೆಗಳನ್ನು ಮಾಡಬೇಕು. ನೀವು ಸಂಚಾರಿ ಆಸ್ಪತ್ರೆಯನ್ನು ನೋಡಿರಬಹುದು. ಒಂದೊಂದು ಸಾರಿ ಎಲೆಕ್ಷನ್‌ನಲ್ಲಿ ಮಾಡುತ್ತಾರೆ ನೋಡಿ, ಅದು ಯಾವುದೋ ಒಂದು ರೈತವಾಹಿನಿ ಎಂದು ಹೆಸರು ಇಟ್ಟು ಮಾಡುತ್ತಾರೆ, ಎಲ್ಲಾ ವ್ಯವಸ್ಥೆ ಅದರೊಳಗೇ ಇರುತ್ತದೆ. ಆ ರೀತಿ ಡಾಕ್ಟರನ್ನು ಊರಿಂದ ಊರಿಗೆ ಕಳುಹಿಸುವುದು. ಇನ್ನೊಂದು ದಯವಿಟ್ಟು ತಾವು ಗುರುತು

ಮಾಡಿಕೊಳ್ಳಬೇಕು. ನಮ್ಮ ತಾಲ್ಲೂಕಿನ ಸೀತಾಪುರ ಗ್ರಾಮದಲ್ಲಿ ಒಂದು ಇನ್‌ಸಿಡೆಂಟ್ ಆಯಿತು. ಪೋಲಿಯೊಡ್ರಾಫ್ಸ್‌ನ್ನು ಮೂರು ಜನ ಮಕ್ಕಳಿಗೆ ಹಾಕಿದ್ದಾರೆ ಆಕಸ್ಮಿಕವಾಗಿ ನಾನೊಂದು ದಿವಸ ಹಬ್ಬಕ್ಕೆ ಹೋದಾಗ ನನ್ನ ಮಕ್ಕಳನ್ನು ನೋಡಿಬನ್ನಿ ಎಂದು ಕರೆಯಿಸಿದರು. ಮೂರು ಜನ ಮಕ್ಕಳು ಸುಮಾರು ಒಂದು ಮಗುವಿಗೆ ಹದಿನೆಂಟು ವರ್ಷ, ಇನ್ನೊಂದು ಮಗುವಿಗೆ 16 ವರ್ಷ, ಇನ್ನೊಂದು ಮಗುವಿಗೆ 14 ವರ್ಷ. ಇಬ್ಬರು ಗಂಡು ಮಕ್ಕಳು, ಮತ್ತು ಒಂದು ಹೆಣ್ಣು ಮಗು. ಮೂರು ಮಕ್ಕಳು ತುಂಬಾ ಚಿಕ್ಕದಾಗಿ ಇಷ್ಟಿಷ್ಟು ಉದ್ದ ಇದ್ದು ಕೈಕಾಲೆಲ್ಲಾ ಪೆರಾಲಿಸಿಸ್ ಹೊಡೆದ ರೀತಿ ತಲೆ ಇಷ್ಟು ದಪ್ಪ ಆಗಿದೆ, ಮೂರು ಮಕ್ಕಳು ಹಾಗೆಯೇ ಬಿದ್ದಿವೆ. ಹದಿನೆಂಟು ವರ್ಷದಿಂದ ಆ ತಾಯಿ ಮೂರು ಮಕ್ಕಳನ್ನು ಸಾಕುತ್ತಿದ್ದಾಳೆ. ಎಲ್ಲಾ ಒಂದೇ ಕಡೆ ಇವೆ. ಅದೇನು ಖಾಯಿಲೆಯೋ? ಇಡೀ ಮೆಡಿಕಲ್ ಡಿಪಾರ್ಟಮೆಂಟ್ ನಮಗೆ ಒಂದು ಛಾಲೆಂಜ್ ಆಗಿದೆ. ಆದರೆ ಆ ಇಬ್ಬರು ಗಂಡ-ಹೆಂಡತಿಯರು ಒಂದೇ ರಕ್ತ ಸಂಬಂಧದಲ್ಲಿಯೇ ಮದುವೆಯಾದರು. ಅದು ಅಷ್ಟೇನೇ ನನಗೆ ಗೊತ್ತಿ-ರುವುದು. ಆದರಿಂದ ಸೀತಾಪುರಕ್ಕೆ ಒಂದು ಟೀಮನ್ನು ಕಳುಹಿಸಿ. ಆ ಕಾಯಿಲೆ ಏನು ಎಂದು ಐಡೆಂ-ಟಿಫೈ ಮಾಡಿಸಿ. ಯಾವ ಕಾರಣಕ್ಕೋಸ್ಕರ ಈ ರೀತಿಯಾಗಿದೆ ಎಂದು ನೋಡಬೇಕು. ಅದೇನಾದರೂ ಒಂದೇ ಬ್ಲಡ್‌ನಲ್ಲಿ ಮದುವೆಯಾದರೆ ಅಪಾಯವಾಗುವ ಪರಿಸ್ಥಿತಿಯೇನು? ಏನು ಕಾರಣಕ್ಕೋಸ್ಕರ ಆ ಮೂರು ಮಕ್ಕಳಿಗೆ ಆ ಸ್ಥಿತಿ ಬಂದಿದೆ ಎಂಬುದನ್ನು ನೋಡಬೇಕು. ಆಮೇಲೆ ನಿನ್ನೆ ದಿವಸ ಏಡ್ಸ್ ಬಗ್ಗೆ ಮಾತನಾಡುತ್ತಿದ್ದರು. ಯಾವುದೇ ಡಾಕ್ಟರ್ ಕಾಲೇಜುಗಳಲ್ಲಿ ಈಗ ಉದಾಹರಣೆಗೆ ತಾಲ್ಲೂಕು ಹೆಡ್ ಕ್ವಾರ್ಟರ್‌ಗಳಲ್ಲಿ ಯುವಕರಿಗೆ ಅದರ ಬಗ್ಗೆ ತಿಳಿವಳಿಕೆ ಕೊಡುವುದು, ಲೈಂಗಿಕ ಶಿಕ್ಷಣದ ಬಗ್ಗೆ ವಿಚಾರ ಮಂಡಿಸುವುದು ಅದೇನೂ ಇಲ್ಲ. ಏಡ್ಸ್ ಜಾಸ್ತಿಯಾದರೆ ಅದರ ಬಗ್ಗೆ ಔಷಧಿಯೇನು ಮಾಡಬೇಕು, ಅದರ ಬಗ್ಗೆ ಏನು ಯೋಚನೆ ಮಾಡಬೇಕು ಎಂದು ಮಾಡಿದ್ದೇವೆ. ನಿಜವಾಗಿಯೂ ಯುವಕರಿಗೆ ತರಬೇತಿ ಕೊಡುವುದು, ಇಲ್ಲಿ ಆಗುವ ಅನಾಹುತಗಳೇನು? ಹೆಚ್ಚು ಹೆಚ್ಚು ರಕ್ತ ಟ್ರಾನ್ಸ-ಪ್ಲಾಂಟ್ ಮಾಡುವುದರಿಂದ ಈ ರೀತಿಯಾಗಬಹುದು. ಲೈಂಗಿಕತೆ ಬಗ್ಗೆ ನಾವು ಹೆಚ್ಚು ತಿಳಿವಳಿಕೆ ಕೊಡುವ ಕೆಲಸವಾಗಬೇಕು. ಅದನ್ನು ನಾವು ಮಾಡುತ್ತಿದ್ದೇವೆಯೇ? ನಿಜವಾಗಲೂ ಮಾಡುತ್ತಿಲ್ಲ. ನಾವೇ ನೋಡುತ್ತಿದ್ದೇವೆ. ನಾನೇ ಪಾಂಡವಪುರ ಆಸ್ಪತ್ರೆ ಡಾಕ್ಟರಿಗೆ ಹೇಳಿದೆ: ಇದರ ಬಗ್ಗೆ ಒಂದು ವಿಚಾರಸಂಕೀರ್ಣ ಏರ್ಪಡಿಸೋಣ. ಎಲ್ಲಾ ಯುವಕರನ್ನು ಇನ್‌ವೈಟ್ ಮಾಡೋಣ. ಇಲ್ಲದಿದ್ದರೆ ಕಾಲೇಜುಗಳಿಗೆ ನಾವೇ ಹೋಗೋಣ. ಇದರ ಬಗ್ಗೆ ತಿಳಿವಳಿಕೆ ಕೊಡಬೇಕು. ಇದನ್ನು ಕಡ್ಡಾಯವಾಗಿ ಮಾಡುವ ಕೆಲಸವನ್ನು ತಾವು ದಯವಿಟ್ಟು ಮಾಡಬೇಕು. ಆಮೇಲೆ ಮಕ್ಕಳಿಗಾಗಿ ಕೆ.ಆರ್. ನಗರದಲ್ಲಿ ಒಬ್ಬ ಡಾಕ್ಟರ್ ಇದ್ದಾರೆ, ಅಟ್‌ಲೀಸ್ಟ್ ಆರು ತಿಂಗಳಿಗೆ ಒಂದು ಸಾರಿ ಎಲ್ಲಾ ಮಕ್ಕಳನ್ನು ಒಂದು ಕಡೆಕೂಡಿಸಿ, ಅವರ ಆರೋಗ್ಯದ ಬಗ್ಗೆ ಬೇಸಿಕ್ ಆಗಿ ತಿಳಿವಳಿಕೆ ಕೊಡುವ ಕೆಲಸವಾಗಬೇಕು ಅದನ್ನು ನಾವು ಮಾಡುತ್ತಿದ್ದೇವೆಯೇ? ನಿಜವಾಗಲೂ ಮಾಡುತ್ತಿಲ್ಲ.

5.50 ಪಿ.ಎಂ

ಮಂತ್ರಿಗಳು ಆಸ್ಪತ್ರೆ ಕಟ್ಟುವುದು ಮುಖ್ಯವಲ್ಲ. ಖಾಯಿಲೆ ಬರದ ಹಾಗೆ ಕ್ರಮ ಕೈಗೊಳ್ಳಲು ತಾವು ದಯವಿಟ್ಟು ಯೋಚನೆ ಮಾಡಬೇಕು. ಈಗ ಎಷ್ಟೋ ಜನ ಮಕ್ಕಳ ತಾಯಂದಿರು ಹಳ್ಳಿಗಳಲ್ಲಿರತಕ್ಕ ಮಕ್ಕಳಿಗೆ ಬೆಳಿಗ್ಗೆ ಎದ್ದ ತಕ್ಷಣ ಬಾಯಿಯನ್ನೇ ತೊಳೆದಿರುವುದಿಲ್ಲ ಕಾಫಿ ಕುಡಿಸುತ್ತಾರೆ. ಆ ಕಾಫಿ ಕುಡಿಸತಕ್ಕಂಥ ವ್ಯವಸ್ಥೆ; ಮಾಡಿದರೆ ಹಲ್ಲಿಗೆ ಎಂತೆಂಥ ರೋಗ ಬರುತ್ತದೆ, ದೇಹದ ಮೇಲೆ ಏನೇನು ಪರಿಣಾಮ ಬೀಳುತ್ತದೆ. ಅದರ ಬಗ್ಗೆಯೂ ತಿಳುವಳಿಕೆ ಕೊಡಬೇಕು. ಬಡತನ ರೇಖೆಯಲ್ಲಿರತಕ್ಕಂಥ ಜನರಿಗೆ ಆರೋಗ್ಯ ಎಷ್ಟು ಮುಖ್ಯ ಎಂಬುದನ್ನು ನಾವು ತಿಳುವಳಿಕೆ ಕೊಡಬೇಕಾಗಿದೆ. ಶಿಕ್ಷಣದಲ್ಲಿ ಸ್ಕೂಲಿನಲ್ಲಿ ಮಕ್ಕಳಿಗೆ ತಪಾಸಣೆ ಮಾಡುವುದರ ಮೂಲಕ ತಿಳುವಳಿಕೆ ಮಾಡಿಕೊಡುವುದರ ಮೂಲಕ ನೀವು ಮಾಡಬೇಕು. ಆಮೇಲೆ ಗರ್ಭಿಣಿ ಸ್ತ್ರೀಯರಿಗೆ ಪೌಷ್ಟಿಕಾಂಶದ ಬಗ್ಗೆ ಅಂಗನವಾಡಿ ಕಾರ್ಯ-ಕರ್ತೆಯರನ್ನು ಎಜ್ಯುಕೇಟ್ ಮಾಡಿ ಅವರು ಆ ಕೆಲಸ ಮಾಡಲು ಕ್ರಮ ಕೈಗೊಳ್ಳಬೇಕು. ಮಕ್ಕಳಿಗೆ ಏನು ಪೌಷ್ಟಿಕಾಂಶ ಕೊಡಬೇಕು ಎಂದು ಹೇಳಿ ಅಂಗನವಾಡಿ ಕಾರ್ಯಕರ್ತೆಯರನ್ನು ನೇಮಿಸಿದ್ದೀರಿ ಇವರು ಗರ್ಭಿಣಿ ಸ್ತ್ರೀಯರಿಗೆ ಆಹಾರ ಕೊಡತಕ್ಕಂಥದರ ಬಗ್ಗೆ ಹಾಗು ಗರ್ಭದಲ್ಲಿ ಮಗುವಿದ್ದಾಗ ಯಾವ ರೀತಿ ಆಲೋಚನೆ ಮಾಡಬೇಕು ಎನ್ನುವ ಬಗ್ಗೆ ತಿಳುವಳಿಕೆಯನ್ನು ಕೊಡತಕ್ಕ ಕೆಲಸ ಮಾಡ-ಬೇಕು. ಅವರು ಅತ್ಯಂತ ಜವಾಬ್ದಾರಿಯಿಂದ ಕೆಲಸ ನಿರ್ವಹಣೆ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಆಮೇಲೆ ಮಂಡ್ಯ ಜಿಲ್ಲೆ ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಮೊದಲನೇ ಸ್ಥಾನ ಪಡೆದಿದೆ. ಮಂಡ್ಯ ಜಿಲ್ಲೆಯಲ್ಲಿ 100 ಪರ್ಸೆಂಟ್ ಸಕ್ಸಸ್ ಆಗಿದೆ ಎಂದು ಹೇಳಿದ್ದೀರಿ. ಯಾವ ವರ್ಗದ ಜನ ಎಂದು ತಾವು ಐಡೆಂಟಿಫೈ ಮಾಡಬೇಕು. ಫ್ಯಾಮಿಲಿ ಪ್ಲಾನಿಂಗ್ ಸಕ್ಸಸ್ ಆಗುತ್ತಿದೆ ನಿಜ. ಆದರೆ ಯಾವ ವರ್ಗದ ಜನ ನಿಜವಾಗಿಯೂ ಫ್ಯಾಮಿಲಿ ಪ್ಲಾನಿಂಗ್‌ಗೆ ಒಳಗಾಗಿದ್ದಾರೆ? ಬಡತನದ ರೇಖೆ-ಯಲ್ಲಿರತಕ್ಕಂಥ, ಕೂಲಿ ಮಾಡತಕ್ಕಂಥ ಜನರು ಇವತ್ತು ಐದು ಆರು ಮಕ್ಕಳನ್ನು ಪಡೆದಿದ್ದಾರೆ. ವಿದ್ಯಾವಂತರು ತಿಳುವಳಿಕಸ್ಥರು ಒಂದು ಅಥವಾ ಎರಡಕ್ಕೆ ಆಪರೇಷನ್ ಮಾಡಿಸತಕ್ಕಂಥ ಕೆಲಸ ಮಾಡುತ್ತಾರೆ. ನಾನು ಹೋದ ಸಾರಿ ಒಂದು ಸಲಹೆ ಕೊಟ್ಟೆ. ಬಡತನ ರೇಖೆಯಲ್ಲಿರತಕ್ಕಂಥ ಜನರಲ್ಲಿ ಮಕ್ಕಳ ನಿಯಂತ್ರಣ ಮಾಡಬೇಕಾದರೆ, ಒಂದು ಮಗು ಹುಟ್ಟಿದ ತಕ್ಷಣ ಆಪರೇಷನ್ ಮಾಡಿಸಿ-ಕೊಳ್ಳುತ್ತೇನೆಂದರೆ ಸರ್ಕಾರ ಹತ್ತು ಸಾವಿರ ರೂಪಾಯಿ ಫಿಕ್ಸೆಡ್ ಡಿಪಾಸಿಟ್ ಮಾಡುತ್ತೇವೆಂದು ಘೋಷಣೆ ಮಾಡಬೇಕು. ಒಂದು ಮಗು ಕಡಿಮೆ ಆದರೆ, ನೀವು ಆಶ್ರಯ ಯೋಜನೆ ಮನೆ, ಸೈಟು, ಗ್ರೀನ್ ಕಾರ್ಡ್, ಇನ್ನಿತರ ಎಲ್ಲಾ ಸವಲತ್ತುಗಳು, ಸಾರಿಗೆ, ಶಿಕ್ಷಣ ಎಲ್ಲಾ ಸವಲತ್ತನ್ನೂ ಕಡಿಮೆ ಮಾಡ ಬಹುದು. ಆ ಮಗು 20 ವರ್ಷಕ್ಕೆ ಬರುವ ಹೊತ್ತಿಗೆ ಆ ಮಗುವಿಗೆ ಒಂದು ಲಕ್ಷ ಸಾವಿರ ರೂಪಾಯಿ ಬೆಳೆದು ಆ ಮಗು ಆರ್ಥಿಕವಾಗಿ ಮೇಲೆ ಬರುತ್ತದೆ. ನೀವೇನು ಮಾಡಿದಿರಿ, ನನ್ನ ಮಗಳು, ನನ್ನ ಸಂಪತ್ತು ಎಂದು ಹೇಳಿ ಒಂದೂವರೆ ಸಾವಿರ ರೂಪಾಯಿನೋ ಎರಡು ಸಾವಿರನೋ ಬರೇ ಹೆಣ್ಣು ಮಕ್ಕಳಿಗೆ ಕೊಡುವ ಬಗ್ಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದರ ಬದಲು ನಾನು ಹೇಳಿದ ಹಾಗೆ ನಿಜ-ವಾಗಿಯೂ ಮಾಡಿದರೆ ಜನಸಂಖ್ಯೆ ನಿಯಂತ್ರಣ ಮಾಡಬಹುದು. ಇರತಕ್ಕಂಥ ಮಕ್ಕಳಿಗೆ ಆರೋಗ್ಯ ಕೊಡತಕ್ಕಂಥದ್ದು, ಉತ್ತಮವಾದ ಆಹಾರ ಕೊಡತಕ್ಕಂಥದ್ದು. ಬಹಳ ಮುಖ್ಯವಾದ ಆಹಾರ ಕೊಡ-

ಬೇಕಾದರೆ ಜನಸಂಖ್ಯೆ ನಿಯಂತ್ರಣ ಮಾಡಬೇಕು. ಇವತ್ತು ಬಿಜಾಪುರಕ್ಕೆ ನಾನು ಹೋಗಿದ್ದೆ, ಅಲ್ಲಿ ಹದಿನೈದು ದಿವಸ ಇದ್ದೆ. ಇವತ್ತೂ ಬ್ಹಾಲ್ಯ ವಿವಾಹ ಪದ್ದತಿ ಅಲ್ಲಿದೆ. ಎಂಟು ವರ್ಷ ಒಂಭತ್ತು ವರ್ಷ ಆಡುತ್ತಿರುವ ಎಲ್ಲಾ ಹೆಣ್ಣು ಮಕ್ಕಳ ಕತ್ತಿನಲ್ಲಿ ತಾಳಿ ಇದೆ. ನನಗೆ ಆಶ್ಚರ್ಯ ಆಗಿ ಹೋಯಿತು. ಇದೇನು ಇಷ್ಟು ಚಿಕ್ಕ ವಯಸ್ಸಿನಲ್ಲಿ ತಾಳಿಯೆಂದು ಆಶ್ಚರ್ಯವಾಯಿತು. ಬಿಜಾಪುರ ಜಿಲ್ಲೆಯಲ್ಲಿ ಬಾಲ್ಯ ವಿವಾಹ ಪದ್ಧತಿ ಬಹಳ ಇದೆ. ಒಂದೊಂದು ಮನೆಯಲ್ಲಿ ಶಿಶು ವಿಹಾರ; ಎಂಟು ಮಕ್ಕಳು, ಹತ್ತು ಮಕ್ಕಳು, ಹನ್ನೆರೆಡು ಮಕ್ಕಳು ಇದ್ದಾವೆ. ಎಲ್ಲಾ ಜಿಲ್ಲೆಯ ಸಮೀಕ್ಷೆ ಮಾಡಬೇಕು ನೀವು. ಜಿಲ್ಲೆಯ ಸಮೀಕ್ಷೆ ಮಾಡಿ ವಾರ್ ಫುಟಿಂಗ್‌ನಲ್ಲಿ ಕೆಲಸ ಮಾಡಿದ ಅವರಿಗೆ ತಿಳುವಳಿಕೆ ಕೊಡತಕ್ಕಂಥ ಕೆಲಸ ಮಾಡಿದರೆ ಜನಸಂಖ್ಯೆ ನಿಯಂತ್ರಣ ಮಾಡುವುದರ ಮೂಲಕ, ರಾಜ್ಯದಲ್ಲಿ ಮಹತ್ತರವಾಗಿರತಕ್ಕ ಸವಲತ್ತು ಜನರಿಗೆ ಕೊಡಬಹುದು. ನಾವು ಅದರ ಬಗ್ಗೆ ಕಾರ್ಯಕ್ರಮ ಮಾಡದೇ ಮಂಡ್ಯ ಜಿಲ್ಲೆ ಪರವಾಗಿಲ್ಲ, ಇದ್ದುದ್ದರಲ್ಲಿ ಮೊದಲನೆಯದು. ಮಂಡ್ಯ ಜಿಲ್ಲೆಯಲ್ಲಿ ಐಡೆಂಟಿಫೈ ಮಾಡಿದ್ದೀರಾ ಯಾವ ವರ್ಗದ ಜನರು ಆಪರೇಷನ್ ಮಾಡಿಸಿಕೊಂಡಿದ್ದಾರೆಂದು; ಇಲ್ಲ. ಒಟ್ಟಿನಲ್ಲಿ ಒಂದು ಟಾರ್ಗೆಟ್ ಫಿಕ್ಸ್ ಮಾಡಿದ್ದೀರಿ, ಅದು ರೀಚ್ ಆಗಿದೆ ಅಷ್ಟೇ. ಆಮೇಲೆ ಒಂದು ವಿಶೇಷ ಕಾರ್ಯಕ್ರಮ ತಮಿಳುನಾಡಿ-ನಲ್ಲಿ ಹೆಣ್ಣು ಮಗು ಹುಟ್ಟಿದ ನಂತರ ಯಾವುದೋ ಒಂದು ಕಾಯಿ ಹಾಕಿ ಬಿಡುತ್ತಾರೆ. ಆಗ ಆ ಮಗು ಸತ್ತು ಹೋಗಿ ಬಿಡುತ್ತದೆ. ಕೇರಳದಲ್ಲಿ ಒಂದು ಹೆಣ್ಣು ಮಗು ಹುಟ್ಟಿದರೆ ಅಂಗಳಿಗೆ ಭತ್ತದ ಕಾಳು ಹಾಕಿ ಬಿಡುತ್ತಾರೆ. ಆ ಮಗು ಅಲ್ಲಿಯೇ ಸಿಕ್ಕಿ ಹಾಕಿಕೊಂಡು ಸತ್ತು ಹೋಗಿ ಬಿಡುತ್ತದೆ. ಇವತ್ತು ಈಗ ಏನಾಗಿದೆ ಎಂದರೆ ಮಗು ತಾಯಿಯ ಹೊಟ್ಟೆಯಲ್ಲಿದ್ದಾಗಲೇ ಎಂತಹ ಮಗು ಎಂದು ಕಂಡು ಹಿಡಿ-ಯುವಂತಹ ತಾಂತ್ರಿಕ ಜ್ಞಾನ ಬಂದಿರುವುದರಿಂದ ಆ ಹೆಣ್ಣು ಮಗು ಇದ್ದರೆ, ಆ ಭ್ರೂಣ ನಾಶ ಮಾಡತಕ್ಕಂಥ ಹೆಚ್ಚು ಕೆಲಸ ನಡೆಯುತ್ತದೆ. ಇದರ ಬಗ್ಗೆ ತಾವು ಗಂಭೀರವಾಗಿ ಚಿಂತನೆ ಮಾಡಬೇಕು. ಹೆಣ್ಣು ಮಕ್ಕಳು, ಗಂಡು ಮಕ್ಕಳು ಇಬ್ಬರೂ ಮುಖ್ಯವೇ? ಇಬ್ಬರೂ ಇಲ್ಲದೇ ಇದ್ದರೆ ಮುಂದೆ ಪೀಳಿಗೆ ಬೆಳೆಯುವುದಕ್ಕೆ ಸಾಧ್ಯ ಇಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ವಿಶೇಷವಾಗಿ ಹೆಣ್ಣು ಮಕ್ಕಳನ್ನು ನಾಶ ಮಾಡತಕ್ಕಂಥ ಒಂದು ಅವೈಜ್ಞಾನಿಕವಾದ ವಿಚಾರದ ಬಗ್ಗೆ ತಾವು ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು.

ಡಾ|| ಎಫ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು):- ಲಿಂಗ ನಿರ್ಧಾರ ಮಾಡಿ ಭ್ರೂಣ ಹತ್ಯೆ ಮಾಡುವುದನ್ನು ನಿಷೇಧಿಸುವ ಕಾಯಿದೆಯನ್ನು ಕೇಂದ್ರ ಸರ್ಕಾರ ಮಾಡಿದೆ. ಕೇಂದ್ರ ಸರ್ಕಾರದ ಕಾಯಿದೆ 1994ರಲ್ಲಿ ಬಂದಂತಹದನ್ನು ರಾಜ್ಯ ಸರ್ಕಾರ ಕೂಡ 1996ರಲ್ಲಿ ಅಡಾಪ್ಟ್ ಮಾಡಿ-ಕೊಂಡಿದೆ. ಮುಂದೆ ಅಂಥ ಹೆಚ್ಚಿಗೆ ಭ್ರೂಣ ಹತ್ಯೆಗೆ ಅವಕಾಶ ಇಲ್ಲ. ಒಂದು ವೇಳೆ ಅವರು ಯಾರ್‍ಯಾರು ಇಂತಹ ಒಂದು ಲ್ಯಾಬರೇಟರಿ ಇಟ್ಟಿದ್ದರೆ, ಅವರೆಲ್ಲಾ ನೋಂದಣಿಕೆಯನ್ನು ಮಾಡಿ-ಕೊಳ್ಳಬೇಕು ಸರ್ಕಾರದ ವತಿಯಲ್ಲಿ. ಜೆನಿಟಿಕ್ ಡಿಸಾರ್ಡರ್ಸ್ ಬಿಟ್ಟರೆ ಲಿಂಗವನ್ನು ಹೆರಿಗೆಗೆ ಮೊದಲೇ ಪತ್ತೆಹಚ್ಚಿ ಆ ರೀತಿಯ ಕ್ರಮವನ್ನು ಕೈಗೊಂಡವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಿ ಮೊದಲನೇ

ಕ್ರೈಂ ಮಾಡಿದವರಿಗೆ ಹತ್ತು ಸಾವಿರ ರೂಪಾಯಿ ದಂಡ ಮತ್ತು ಶಿಕ್ಷೆ ಮೂರು ವರ್ಷ ಎರಡನೇ ಸಾರಿ ಮಾಡಿದರೆ ಐವತ್ತು ಸಾವಿರ ರೂಪಾಯಿ ದಂಡ; ಐದು ವರ್ಷ ಶಿಕ್ಷೆ ಎಂಬುದಕ್ಕೆ ಈಗಾಗಲೇ ಕಾಯಿದೆಯನ್ನು ಅಡಾಪ್ಟ್ ಮಾಡಿಕೊಂಡಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಈ ಭ್ರೂಣ ಹತ್ಯೆ ವಿಚಾರದಲ್ಲಿ ಮಾತನಾಡುತ್ತಿರತಕ್ಕ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಒಂದು ಸಮೀಕ್ಷೆ ಆಗಬೇಕು. ಒಬ್ಬ ಹುಡುಗ ಬೆಂಗಳೂರಿನಲ್ಲಿರ-ತಕ್ಕಂತಹ ನರ್ಸಿಂಗ್ ಹೋಂಗಳಲ್ಲಿ ಈ ಸಮೀಕ್ಷೆ ಮಾಡಿದಾಗ, ಒಂದು ತಿಂಗಳಲ್ಲಿ ಬೆಂಗಳೂರಿ-ನಲ್ಲಿರತಕ್ಕ ನರ್ಸಿಂಗ್ ಹೋಂಗಳಲ್ಲಿ ಹತ್ತು ಸಾವಿರ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ಆಗಿದೆ ಎನ್ನುವ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆ. ಆದ್ದರಿಂದ ಇದು ಬಹಳ ಗಂಭೀರವಾದ ವಿಷಯ. ಈ ರೀತಿ ಕರ್ನಾಟಕ-ದಲ್ಲಿ ಎಷ್ಟು ಆಗುತ್ತಿದೆ? ಎಷ್ಟು ಹೆಣ್ಣು ಮಕ್ಕಳ ಕೊಲೆ ನಾವು ಇಲ್ಲಿ ಮಾತನಾಡುತ್ತಿರುವ ಸಂದರ್ಭದಲ್ಲಿ ಆಗಿದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಆದ್ದರಿಂದ ಇಷ್ಟು ಸುಲಭವಾಗಿ ನಾವು ಪನಿಷ್-ಮೆಂಟ್ ಕೊಡುತ್ತೇವೆ, ಎಂದು ಹೇಳಿದರೆ ಆ ತರಹ ಮಾಡಿದರೆ ಆಗುವುದಿಲ್ಲ. ಇದರ ಬಗ್ಗೆ ನೀವು ಒಂದು ಏಜೆನ್ಸಿ ಮಾಡಬೇಕು. ಪ್ರತಿ ಒಂದು ನರ್ಸಿಂಗ್ ಹೋಂಗಳಿಂದ ಇದರ ಬಗ್ಗೆ ನೀವು ಮಾಹಿತಿ ತರಿಸಿಕೊಂಡು ಅಂಥವರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ।। ಎಚ್.ಸಿ. ಮಹದೇವಪ್ಪ:- ನೊಂದಾಣಿಕೆ ಮಾಡಿಕೊಳ್ಳುವ ಸಮಯ ಮುಗಿದು ಹೋಗಿದೆ ಮಾನ್ಯ ಅಧ್ಯಕ್ಷರೇ; ಮತ್ತೆ ಕೇಂದ್ರ ಸರ್ಕಾರಕ್ಕೆ ಬರೆದು ಇನ್ನೂ ಆರು ತಿಂಗಳು ಹೆಚ್ಚು ಸಮಯ ತೆಗೆ-ದುಕೊಂಡು ಎಲ್ಲೆಲ್ಲಿ ಖಾಸಗಿಯವರು, ಬೇರೆ ಬೇರೆ ಕಡೆ ಮಾಡುತ್ತಿದ್ದಾರೆ, ಅದೆಲ್ಲವನ್ನೂ ನೋಂದಾ-ವಣಿ ಮಾಡಿಕೊಂಡು ಜೆನೆಟಿಕ್ ಡಿಸಾರ್ಡರ್ಸ್ ಏನಿದೆ ಮಗು ಯಾವುದೋ ಒಂದು ಅಂಗಾಂಗದ ನ್ಯೂನ್ಯತೆಯಿಂದ ಹುಟ್ಟಬಹುದಾದಂತ ಮಕ್ಕಳನ್ನು ಮೊದಲೇ ಪರೀಕ್ಷೆ ಮಾಡಲಿಕ್ಕೆ ಮಾತ್ರ ಅದನ್ನು ಸೀಮಿತಗೊಳಿಸುವುದಕ್ಕೆ ಬಿಟ್ಟು, ಲಿಂಗವನ್ನು ನಿರ್ಧಾರ ಮಾಡಿ ಭ್ರೂಣಹತ್ಯೆ ಮಾಡುವುದು ಮತ್ತು ಈ ರೀತಿಯ ಪ್ರಕರಣದಲ್ಲಿ . . .

ಅಧ್ಯಕ್ಷರು:- ಅವರು ಹೇಳುವುದರಲ್ಲಿ ನೀವು ಹೇಳುವುದರಲ್ಲಿ ಒಂದು ಸಣ್ಣ ವ್ಯತ್ಯಾಸ ಆಗಿದೆ. ಅವರು ರಿಜಿಸ್ಟರ್ ಮಾಡಿಕೊಂಡು ಲೈಸೆನ್ಸ್ ತೆಗೆದುಕೊಂಡು ಭ್ರೂಣ ಹತ್ಯೆ ಮಾಡಿದರೆ ನಮ್ಮ ಕೈಗೆ ಸಿಗುತ್ತಾರೆ, ನೀವು ಪನಿಷ್‌ಮೆಂಟ್ ಫೈನ್ ಹಾಕುತ್ತೀರಿ. ಪ್ರಮೀಳಾ ನೇಸರ್ಗಿಯವರು ಹೇಳತಕ್ಕದ್ದು ಅನಧಿಕೃತವಾಗಿ ಅನೇಕ ಜನ ಮಾಡುತ್ತಿದ್ದಾರೆ ಅದು ನಿಮಗೆ ಹೇಗೆ ಗೊತ್ತಾಗುತ್ತದೆ ಎಂದು ಅದಕ್ಕೆ ಅದನ್ನು ಫೈಂಡ್ ಔಟ್ ಮಾಡುವುದಕ್ಕೆ ನೀವು ಒಂದು ಏಜೆನ್ಸಿಯನ್ನು ಇನ್‌ಸ್ಟಿಟ್ಯೂಟ್ ಮಾಡಬೇಕು ಎಂದು.

ಶ್ರೀ ಎಚ್.ಸಿ. ಮಹದೇವಪ್ಪ:- ನಮ್ಮ ಅಡಿಷನಲ್ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿದ್ದೇವೆ. ಆ ಸಮಿತಿ ಮುಂದೆ ದೂರುಗಳು ಬಂದಾಗ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರಾಮದಾಸ್:- ಅಲ್ಟ್ರಾ ಸೌಂಡ್ ಸಿಸ್ಟಂ ಏನು ಇದೆ ಎಂದರೆ ಮಾನ್ಯ ಅಧ್ಯಕ್ಷರೆ, ಮೂರು ತಿಂಗಳಿಗೇ ಲಿಂಗ ಕಂಡು ಹಿಡಿಯಬಹುದು. ಅಲ್ಟ್ರಾ ಸೌಂಡ್ ಸಿಸ್ಟಂನ್ನು ಎಲ್ಲಾ ನರ್ಸಿಂಗ್ ಹೋಂಗಳೂ ಹೊಂದಿದ್ದಾವೆ. ನಮ್ಮ ಕಾನೂನುಗಳು ಅಲ್ಲಿ ಲಾಗೂ ಆಗುತ್ತಾ ಇಲ್ಲ. ಆಗುವುದು ಆಗು-ತ್ತಲೇ ಇದೆ.

ಅಧ್ಯಕ್ಷರು:- ಯಾರು ಕಂಪ್ಲೈಂಟ್ ಕೊಡುವವರು? ಈ ಸನ್ನಿವೇಶದಲ್ಲಿ ಭ್ರೂಣ ಹತ್ಯೆ ಆದಾಗ ಕಂಪ್ಲೈಟ್ ಯಾರು ಕೊಡಬೇಕು?

ಶ್ರೀ ಹೆಚ್. ಶಿವಪ್ಪ:- ಇದಕ್ಕೆ ಯಾರ ಸಹಕಾರ ಹೆಚ್ಚಿಗೆ ಬೇಕು ಎನ್ನುವ ಒಂದು ಪ್ರಶ್ನೆ ಇವತ್ತು ಇದೆ.

ಅಧ್ಯಕ್ಷರು:- ಅದಕ್ಕೇ ಕೇಳುತ್ತಿರುವುದು, ಯಾರು ಕಂಪ್ಲೈಂಟ್ ಕೊಡುವವರು? ನರ್ಸಿಂಗ್ ಹೋಂನವರು ಕೊಡುವುದಿಲ್ಲ.

ಶ್ರೀ ಹೆಚ್. ಶಿವಪ್ಪ:- ಆ ತಾಯಿ ಕೊಡಬೇಕು.

ಅಧ್ಯಕ್ಷರು:- ತಾಯಿ ಕೊಡುವುದಕ್ಕೆ ಆಗುವುದಿಲ್ಲ. ಇನ್ನು ತಂದೆನೋ ಯಾರೋ ಮನೆಯವರು ಗಂಡಸರು, ಅವರೂ ಕಂಪ್ಲೈಂಟ್ ಕೊಡುವುದಿಲ್ಲ. ಕಂಪ್ಲೈಂಟ್ ಕೊಡುವವರು ಯಾರು? ಬೆಕ್ಕಿಗೆ ಗಂಟೆ ಯಾರು ಕಟ್ಟುವರು?

ಡಾ।। ಎಂ.ಶಂಕರ್ ನಾಯಕ್:- ಇದರಲ್ಲಿ ಭ್ರೂಣಹತ್ಯೆ ಇದೆಯಲ್ಲಾ ಇವರು ಹೇಳತಕ್ಕದ್ದು ಗಂಡೋ ಹೆಣ್ಣೋ ಎಂದು ಮುಂಚೆನೇ ತಿಳಿದುಕೊಂಡು ಹೆಣ್ಣು ಇದ್ದರೆ ಅದನ್ನು ಮುಂಚೆಯೇ ಟರ್ಮಿನೇಟ್ ಮಾಡತಕ್ಕದ್ದು. ಆದರೆ ಇವರು ಹೇಳತಕ್ಕಂಥದ್ದು ನರ್ಸಿಂಗ್ ಹೋಂನಲ್ಲಿ ವಿಡೋಸ್, ಮದುವೆ ಆಗದೇ ಇರುವವರು, ಮಕ್ಕಳು ಬೇಕಾಗಿರುವವರು ಅವೆಲ್ಲಾ ಲೆಕ್ಕಕ್ಕೆ ಬರುತ್ತದೆ. ಸಾಮಾನ್ಯ-ವಾಗಿ ಇದನ್ನು ಒಬ್ಬ ಡಾಕ್ಟರ್ ಮಾಡದಿದ್ದರೆ ಇನ್ನೊಬ್ಬ ಡಾಕ್ಟರ್ ಮಾಡುವುದು ಇರುತ್ತದೆ, ಅದು ಲೀಗಲ್. ಆದರೆ ಭ್ರೂಣ ಹತ್ಯೆ ಆಗುತ್ತಿರುವುದು ಹೆಣ್ಣು ಮಕ್ಕಳು ಎಂದು ಹೇಳಿ ಆಗುತ್ತಿರುವುದು.

ಅಧ್ಯಕ್ಷರು:- ನೀವು ಹೇಳುತ್ತಿರುವುದು ಅಬಾರ್ಷನ್‌ನಾ?

SRI H.C. MAHADEVAPPA:- The Medical termination of preg-nancy is legal. ಲಿಂಗವನ್ನು ಹುಟ್ಟುವ ಮೊದಲೇ ಗುರುತು ಮಾಡಿ ಅಬಾರ್ಷನ್ ಮಾಡತಕ್ಕದ್ದು ಇಲ್ಲೀಗಲ್. ಲಿಂಗ ಹೆಣ್ಣೋ ಗಂಡೋ ಎಂದು ನಿರ್ಧಾರ ಮಾಡುತ್ತಾರೆ.

ಅಧ್ಯಕ್ಷರು:- ಡಾಕ್ಟರೇ, who has to lodge the complaint? ಎಂದು. ಅದಕ್ಕೇ ವಿಜಿಲೆನ್ಸ್ ಇರಬೇಕು ಎಂದು ಹೇಳುವುದು.

ಶ್ರೀ ಎಸ್.ಸಿ. ಮಹದೇವಪ್ಪ:- ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಇನ್ನೊಂದು ಬಹಳ ಮುಖ್ಯವಾದ್ದುದು ನಾವು ಎಲ್ಲಾ ಕಡೆ ಅಂಗವಿಕಲರ ಸಂಘಗಳನ್ನು ಉದ್ಘಾಟನೆ ಮಾಡುತ್ತೇವೆ. ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಅಂಗವಿಕಲರ ಸಂಘಗಳನ್ನು ಉದ್ಘಾಟನೆ ಮಾಡುವುದು. ಅಂಗವಿಕಲರು ಯಾಕೆ ಆಗುತ್ತಿದ್ದಾರೆ? ಬೇರೆ ಪ್ರಾಣಿಗಳಲ್ಲಿ ಅಂಗವಿಕಲತೆ ಇದೆಯೇನು? ದನಗಳಲ್ಲಿ ಆಗಬಹುದು, ಕಾಗೆಯಲ್ಲಿ ಆಗಬಹುದು ಮನುಷ್ಯನಲ್ಲೇ ವಿಶೇಷವಾಗಿ ಅಂಗವಿಕಲತೆಯನ್ನು ನಾವು ಯೋಚನೆ ಮಾಡಬೇಕು. ಏಕೆಂದರೆ ಅವಕ್ಕೆ ಜಾತಿ ಪದ್ದತಿ ಇಲ್ಲ. ಒಕ್ಕಲಿಗರ ಕಾಗೆ, ಲಿಂಗಾಯಿತರ ಕಾಗೆ ಎಂದೇನೂ ಇಲ್ಲ. ಅವುಗಳ ಸಂಬಂಧಗಳು ವಿಶಾಲವಾಗಿವೆ. ನಮ್ಮ ಸಂಬಂಧಗಳು ಸೀಮಿತವಾದ ಜಾತಿ ಪದ್ದತಿಯ ಮೂಲಕ ಅಂಗವಿಕಲತೆ ಜಾಸ್ತಿ ಆಗುತ್ತದೆ. ನಾವು ವೈಜ್ಞಾನಿಕವಾಗಿ ಚಿಂತನೆ ಮಾಡಬೇಕು. ಅಂಗ-ವಿಕಲರ ಸಂಘಗಳನ್ನು ನಾವು ಮಾಡಿಕೊಂಡು ಹೋಗುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಅಂಗವಿಕಲರು ಆಗುವಂತಹ ಪರಿಸ್ಥಿತಿ ಸೃಷ್ಟಿ ಆಯಿತು; ಏಕೆ? ನಾನು ಮೊನ್ನೆ ಯಾವುದೋ ಒಂದು ಉದ್ಘಾಟನೆಗೆ ಹೋಗಿದ್ದೆ. ಈ ಎರಡು ವರ್ಷಕ್ಕೆ ಹಿಂದೆ ಹೊರಟು ಹೋಗಲಿ ಎಂದು ನಾನು ಭಾಷಣ ಮಾಡಿದೆ. ಆದ್ದರಿಂದ ಅಂಗವಿಕಲತೆ ಬಗ್ಗೆ ಆರೋಗ್ಯ ಇಲಾಖೆಯಲ್ಲಿ ಅತ್ಯಂತ ಗಂಭೀರವಾಗಿ ತಾವು ಚಿಂತನೆ ಮಾಡಬೇಕು. ಇಲ್ಲದೇ ಇದ್ದರೆ ಬಹಳ ಕಷ್ಟ ಆಗುತ್ತದೆ. ಅದರ ಬಗ್ಗೆ ಜನರನ್ನು ಎಜ್ಯುಕೇಟ್ ಮಾಡ-ಬೇಕು. ಇಲ್ಲದೇ ಇದ್ದರೆ ಸರ್ಕಾರದಿಂದ ಜಾತಿ ಪದ್ಧತಿ ನಾಶ ಮಾಡುವುದಕ್ಕೋಸ್ಕರ ಯಾವುದಾದರೂ ವಿಶೇಷವಾದ ಕಾರ್ಯಕ್ರಮವನ್ನು ರೂಪಿಸಬೇಕು.

ಶ್ರೀ ಎನ್. ರಾಜಣ್ಣ:- ಮಾನ್ಯ ಪುಟ್ಟಣ್ಣಯ್ಯನವರೇ, ನೀವು ಹೇಳುವುದು ನೂರಕ್ಕೆ ನೂರು ಸತ್ಯ. ಅದೇನು ಆಗಿದೆ, ಇವತ್ತಿನ ಮಾಡರ್ನ್ ಡೇಸ್‌ನಲ್ಲಿ 'create and extract' ಆಗುತ್ತಿದೆ. ಪ್ರಾಣಿ-ಗಳಲ್ಲಿ ಒಂದು ಪರ್ಸೆಂಟ್ ಕೂಡ ಅಂಗವಿಕಲತೆ ಇಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನೀವು ಮುವತ್ತು ದನ ಸಾಕಿದ್ದೀರಲ್ಲಾ, ಅದರಲ್ಲಿ ಯಾವುದಕ್ಕಾ-ದರೂ ಅಂಗವಿಕಲತೆ ಇದೆಯಾ?

ಶ್ರೀ ಎನ್. ರಾಜಣ್ಣ:- ಒನ್ ಪರ್ಸೆಂಟ್ ಇಲ್ಲ; ಛಾಲೆಂಜ್ ಮಾಡುತ್ತೇನೆ. ಬರುವುದಿಲ್ಲ. ಈಗಿನ ಪ್ರೆಸೆಂಟ್ ಮಾಡರ್ನ್ ಮೆಡಿಸಿನ್ಸ್ ಮತ್ತು ಪರ್ಪಸ್ ಆಗಿ ಕ್ರಿಯೇಟ್ ಮಾಡಿ ಬಿಸಿನೆಸ್ ಮೆನ್ ಕೆಲವು ಸಂಬಂಧಪಟ್ಟವರಿಂದ 6-7, 8 ಪರ್ಸೆಂಟಿಗೆ ಹೋಗುತ್ತಿದೆ. ಹಳ್ಳಿಯಲ್ಲಿ ಕೂಲಿ ಮಾಡಿಕೊಂಡಿರತಕ್ಕ ಆ ತಾಯಿ ಕರೆಕ್ಟಾಗಿ ಜನ್ಮ ಕೊಡುತ್ತಿದ್ದಾಳೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಜಣ್ಣನವರ ಮಾತು ಸರಿಯಾಗಿದೆ. ಏಕೆಂದರೆ, ಅವರ ಮನೆಯಲ್ಲಿ ಮೂವತ್ತು ದನಗಳನ್ನು ಸಾಕಿದ್ದು ಒಂದೂ ಅಂಗ-ವಿಕಲವಾಗಿರುವ ದನ ಇಲ್ಲ. ಇನ್ನು ಆಸ್ಪತ್ರೆ ಬಗ್ಗೆ ಹೇಳುವುದಾದರೆ, ಮೈಸೂರಿನ ಕೆ.ಆರ್.ಎಸ್.

ಆಸ್ಪತ್ರೆಗೆ ತಾವು ಭೇಟಿ ಮಾಡಿದ್ದೀರಿ, ಆ ಆಸ್ಪತ್ರೆಯಲ್ಲಿ ಸ್ವಚ್ಛತೆ ಎನ್ನುವುದೇನಿದೆ? ಆಸ್ಪತ್ರೆಯಲ್ಲಿ ಏನೂ ಕೊಡುವುದಕ್ಕಾಗದಿದ್ದರೂ ಪರವಾಗಿಲ್ಲ, ಅಲ್ಲಿನ ವಾತಾವರಣವನ್ನು ಶುದ್ಧವಾಗಿ, ಸ್ವಚ್ಛವಾಗಿ ಇಟ್ಟು-ಕೊಳ್ಳುವ ಕನಿಷ್ಟ ಕೆಲಸವನ್ನಾದರೂ ಮಾಡಬೇಕು. ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಬಗ್ಗೆ ಪ್ರತಿಭಟಿಸಿ ಆಸ್ಪತ್ರೆ ಮುಂದೆ ಧರಣಿ ಕುಳಿತುಕೊಳ್ಳೋಣವೆಂದು ಹಿಂದೆ ಮೈಸೂರಿನ ಸುತ್ತಮುತ್ತಲ ಎಲ್ಲಾ ಹಳ್ಳಿಗಳಿಂದ ಸುಮಾರು ಹತ್ತು ಸಾವಿರದಷ್ಟು ಜನರ ಪಾದಯಾತ್ರೆ ಏರ್ಪಡಿಸಿದ್ದೆವು. ಏಕೆಂದರೆ, ಅಲ್ಲಿನ ಆಸ್ಪತ್ರೆಗೆ ಹೋಗಬೇಕಾದರೆ ಮೂಗು ಮುಚ್ಚಿಕೊಂಡು ಹೋಗುವುದು, ಮೂಗು ಮುಚ್ಚಿಕೊಂಡು ಬರುವುದು, ಅಷ್ಟು ಕೆಟ್ಟ ವಾಸನೆಯಿದ್ದು ತಡೆಯುವುದಕ್ಕಾಗುವುದಿಲ್ಲ. ಆದುದರಿಂದ, ಎಲ್ಲೆಲ್ಲಿ ಸರ್ಕಾರಿ ಆಸ್ಪತ್ರೆ-ಗಳಿವೆಯೋ ಅಲ್ಲಿಗೆ ತಾವು ಭೇಟಿ ಮಾಡಿ ಸ್ವಚ್ಛತೆ ಬಗ್ಗೆ ದಯಮಾಡಿ ಗಂಭೀರವಾಗಿ ಯೋಚಿಸ-ಬೇಕಲ್ಲದೆ ಆಸ್ಪತ್ರೆಗೆ ವೈದ್ಯರು ಮತ್ತು ಅಗತ್ಯ ಸಿಬ್ಬಂದಿಗಳನ್ನು ಒದಗಿಸಬೇಕಾಗಿರುವುದು ಅತಿ ಮುಖ್ಯ-ವಾದುದು. ತಾವು ಆಸ್ಪತ್ರೆಗಳನ್ನು ಮಂಜೂರು ಮಾಡುವುದಕ್ಕಿಂತ ಜನರಿಗೆ ಮೂಲಭೂತವಾಗಿ ಉತ್ತಮ ಆರೋಗ್ಯ ಕೊಡುವ ವ್ಯವಸ್ಥೆ ಬಗ್ಗೆ ಯೋಚಿಸಬೇಕು. ಮೂರನೆಯದಾಗಿ, ಸಾರಿಗೆ ವ್ಯವಸ್ಥೆ ಬಗ್ಗೆ. ಸಾರಿಗೆ ವ್ಯವಸ್ಥೆಯಲ್ಲಿ ಕೆ.ಎಸ್.ಆರ್. ಟಿ.ಸಿ. ಮತ್ತು ಖಾಸಗಿ ವಾಹನಗಳಿದ್ದು ಸಾರಿಗೆ ವ್ಯವಸ್ಥೆಗೆ ಇವೊತ್ತು ಹುಚ್ಚು ಹಿಡಿದುಕೊಂಡಂತಾಗಿದೆ. ಟೆಂಪೋ, ಮೆಟಡಾರ್‌ಗಳಲ್ಲಿ ಮಿತಿಗಿಂತ ಹೆಚ್ಚಾಗಿ 40-45ರಷ್ಟು ಪ್ರಯಾಣಿಕರನ್ನು ತುಂಬಿಸಿಕೊಂಡು ಹೋಗುತ್ತಾರೆ. ಸಾರಿಗೆ ವ್ಯವಸ್ಥೆ ಕುರಿತು ಚರ್ಚಿ-ಸಲು ಮಾನ್ಯ ಸಿಂಧ್ಯಾರವರು ಏರ್ಪಡಿಸಿದ್ದ ಸಭೆಗೆ ನಮ್ಮನ್ನೆಲ್ಲಾ ಕರೆದು ಒಂದು ಮಾತನ್ನು ಹೇಳಿದಿರಿ: ನಿರುದ್ಯೋಗಿ ಯುವಕರು ಜೀವನೋಪಾಯಕ್ಕಾಗಿ ಟೆಂಪೋ ಓಡಿಸುತ್ತಿದ್ದಾರೆಂದು. ಉದ್ಯೋಗ-ಕ್ಕೋಸ್ಕರ ಬೇಕಾದರೆ ಅವರಿಗೆ ಟೆಂಪೋ, ಮೆಟಡಾರ್‌ಗಳನ್ನು ಓಡಿಸಲು ಅವಕಾಶ ಕೊಡಿ. ಆದರೆ, ಪ್ರಯಾಣಿಕರ ಸೀಟುಗಳನ್ನು ಮಿತಿಗೊಳಿಸಬೇಕು. ಒಂದೇ ಸಾರಿ 40-45 ಜನ ಪ್ರಯಾಣಿಕರನ್ನು ವಾಹನದಲ್ಲಿ ತುಂಬಿಸಿಕೊಂಡು ಅಸಮತೋಲನವುಂಟಾಗಿ ಒಟ್ಟಿಗೆ 20-25 ಜನರು ಸಾಯುವ ಬಗ್ಗೆ ತಾವು ಗಂಭೀರವಾಗಿ ಯೋಚಿಸಬೇಕು. ಸಾರಿಗೆ ವ್ಯವಸ್ಥೆ ಸೃಷ್ಟಿಯಾಗಿರುವುದು ಆದಾಯ ಮಾಡುವು-ದಕ್ಕಲ್ಲ, 'ನೋ ಪ್ರಾಫಿಟ್, ನೋ ಲಾಸ್' ಆಧಾರದ ಮೇಲೆ ಕೆಲಸ ಮಾಡುವುದಕ್ಕೆ ಸೃಷ್ಟಿಯಾಗಿದೆ, ಜನರ ಸೇವಾ ಮನೋಭಾವಕ್ಕೋಸ್ಕರ ಸೃಷ್ಟಿಯಾಗಿದೆ. ಅಲ್ಲದೆ, ಸಾರಿಗೆ ಸಂಸ್ಥೆಗೂ ರಸ್ತೆಗಳನ್ನು ನಿರ್ಮಿಸುವ ಜಿಲ್ಲಾ ಪಂಚಾಯತ್ ಮತ್ತು ಪಿ.ಡಬ್ಲ್ಯೂ.ಡಿ.ಯವರಿಗೂ ಸಂಬಂಧವಿದೆ. ಆದರೆ, ಇವೊತ್ತು ಏನಾಗಿದೆಯೆಂದರೆ, ಪರಸ್ಪರ ಸಂಬಂಧವಿಲ್ಲದಂತೆ ನಡೆದುಕೊಳ್ಳುತ್ತಿರುವುದರಿಂದ ಸಾರಿಗೆ ವ್ಯವಸ್ಥೆ-ಯನ್ನು ನಾವು ಯಾವ ರೀತಿ ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಾಗುತ್ತದೆ? ಒಬ್ಬರ ಕೈಯಲ್ಲಿ ಸ್ಟೀರಿಂಗ್, ಇನ್ನೊಬ್ಬರ ಕೈಯಲ್ಲಿ ಆಕ್ಸಿಲರೇಟರ್ ಮತ್ತೊಬ್ಬರ ಕೈಯಲ್ಲಿ ಬ್ರೇಕ್ ಇದ್ದರೆ ಬಸ್ಸು ಎಷ್ಟು ಚೆನ್ನಾಗಿ ಓಡಬಹುದೆಂದು ನಾವು ಯೋಚಿಸಬೇಕು. ಕರ್ನಾಟಕ ರಾಜ್ಯದಲ್ಲಿ ಎಷ್ಟು ಸಾವಿರ ಕಿಲೋ-ಮೀಟರ್‌ಗಳಷ್ಟು ರಸ್ತೆಗಳಿವೆ? ರಸ್ತೆಗಳಲ್ಲಿ ಬಸ್ಸುಗಳನ್ನು ಯಾವ ರೀತಿ ಓಡಿಸಬಹುದು? ದೇಶಕ್ಕೆ ಸ್ವಾತಂತ್ರ್ಯ ಬಂದು 49 ವರ್ಷಗಳಾದರೂ ಇನ್ನೂ ಹಳ್ಳಿಗಳಿಗೆ ಬಸ್ಸು ತಲುಪುವ ವ್ಯವಸ್ಥೆಯಾಗಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿರುವ ಒಂದೊಂದು ಕ್ಷೇತ್ರಕ್ಕೆ ಕನಿಷ್ಟ ಆರರಿಂದ ಎಂಟು ನಗರ ಸಾರಿಗೆಯ

ಡಬಲ್ ಡೋರ್ ಬಸ್ಸುಗಳ ಸೌಲಭ್ಯ ಒದಗಿಸಿಕೊಟ್ಟರೆ ಅಲ್ಲಿನ ಸಾರಿಗೆ ವ್ಯವಸ್ಥೆ ಸುಧಾರಣೆಯಾಗುತ್ತದೆ. ಮೊನ್ನೆ ದಿವಸ ತಾವು ಸಭೆ ಕರೆದಿದ್ದಂಥ ಸಂದರ್ಭದಲ್ಲಿ ಮಾತಾನಾಡಿ ಸುಮಾರು ಏಳೂವರೆ ಲಕ್ಷ ಕಿಲೋಮೀಟರ್‌ಗಳಷ್ಟು ದೂರ ಬಸ್ಸು ಕ್ರಮಿಸಿದರೆ ಆ ಬಸ್ಸನ್ನು ತಕ್ಷಣದಲ್ಲಿ ಬದಲಾಯಿಸಲಾಗುತ್ತ-ದೆಂದು ಹೇಳಿದಿರಿ. ಈಗ ಒಂದೂವರೆ–ಎರಡು ಸಾವಿರದಷ್ಟು ಬಸ್ಸುಗಳನ್ನು ನೀವು ಖರೀದಿಸಿದ್ದೀರಿ. ಶೇಕಡ ತೊಂಭತ್ತರಷ್ಟು ಬಸ್ಸುಗಳನ್ನು ಹಾಕಿ, ಉಳಿದ ಹತ್ತರಷ್ಟು ಭಾಗದ ಬಸ್ಸುಗಳನ್ನು ಹೊಸ ಮಾರ್ಗಗಳಿಗೆಂದು ಇಲ್ಲವೇ ರಿಸರ್ವ್ ಆಗಿ ಇಟ್ಟುಕೊಳ್ಳುವ ಪದ್ಧತಿ ಇದೆ. ಕನಿಷ್ಟ ಪಕ್ಷ ಹಳ್ಳಿಗಳಿಗೆ ತಾವು ಸಾರಿಗೆ ವ್ಯವಸ್ಥೆಯನ್ನು ತಲುಪಿಸಿದರೆ ಒಂದು ಮಹತ್ತರವಾದ ಬೆಳವಣಿಗೆಯಾಗುತ್ತದಾದ್ದರಿಂದ ತಾವು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಆದೇಶ ಕೊಡಿ. ಖಾಸಗಿ ವಾಹನಗಳು ಎಷ್ಟಿವೆ? ಸರಕಾರಿ ವಾಹನಗಳು ಎಷ್ಟಿವೆ? ಎಷ್ಟು ವಾಹನಗಳು ವ್ಯವಸ್ಥಿತವಾಗಿ ನಡೆಯುತ್ತಿವೆ? ವಾಹನಗಳು ವ್ಯವಸ್ಥಿತವಾಗಿ ನಡೆಯುತ್ತಿರುವಾಗ ಇಡೀ ಜಿಲ್ಲೆಯಾದ್ಯಂತ ಯಾವ ರೀತಿ ಸಾರಿಗೆ ವ್ಯವಸ್ಥೆಯನ್ನು ರೂಪಿಸಬಹುದು ಎನ್ನುವುದರ ಬಗ್ಗೆ ಮಾಹಿತಿ ತರಿಸಿಕೊಳ್ಳಬೇಕು. ತಾವು ಹಿಂದೆಯೂ ಸಾರಿಗೆ ಸಚಿವ-ರಾಗಿ ಕಾರ್ಯ ನಿರ್ವಹಿಸಿರುವುದರಿಂದ ತಮಗೆ ನಿಜವಾಗಿಯೂ ಅನುಭವವಿದೆ ಮತ್ತು ಈ ದಿಶೆಯಲ್ಲಿ ಕರೆದಿದ್ದ ಸಭೆಯ ಉದ್ದೇಶ ನಿಜವಾಗಲೂ ಸಾರ್ಥಕವಾಗಲು ಇಂತಹ ಕನಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆಲಸ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಇಲ್ಲದಿದ್ದರೆ, ಏನಾಗುತ್ತದೆ ಎಂದರೆ, ತಾವು ಸಾರಿಗೆ ಮಂತ್ರಿಗಳಾಗಿದ್ದು, ಸುಮ್ಮನೆ ಏನೋ ಒಂದು ಸಭೆ ಕರೆದು ಅಲ್ಲಿ ಏನೋ ಮಾತಾನಾಡಿ ಅದರ ಉದ್ದೇಶ ಹಾಗೆಯೇ ಅಲ್ಲಿಗೇ ಮುಕ್ತಾಯವಾದಂತಾ-ಗುತ್ತದೆ. ಹಾಗಾಗಬಾರದು ಆದುದರಿಂದ, ಕೆ.ಎಸ್.ಆರ್.ಟಿ.ಸಿ ಸಂಸ್ಥೆಯನ್ನು ಸುಧಾರಿಸಿ ಅಭಿವೃದ್ಧಿ-ಗೊಳಿಸುವ ದಿಶೆಯಲ್ಲಿ ಹಿಂದೆ ತಮ್ಮ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯು ಅಧ್ಯಯನ ನಡೆಸಿ ತಾವೇ ಒಂದು ವರದಿ ಕೊಟ್ಟಿರುವುದರಿಂದ, ಆ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ಅಧ್ಯಕ್ಷರ ಮೂಲಕ ತಮ್ಮನ್ನು ಒತ್ತಾಯಿಸುತ್ತೇನೆ. ಈಗ ಪಕ್ಕದ ರಾಜ್ಯವಾದ ಆಂಧ್ರಪ್ರದೇಶಗಳಲ್ಲಿ ಸುಮಾರು ಹದಿನೈದು ಲಕ್ಷದಷ್ಟು ಬಸ್ಸುಗಳನ್ನು ಓಡಿಸುತ್ತಿದ್ದಾರೆ, ಸರ್ಕಾರಿ ವಾಹನಗಳ ಜೊತೆ ಖಾಸಗಿ ವಾಹನ-ಗಳನ್ನೂ ಓಡಿಸುತ್ತಿರುವುದರಿಂದ ಅಲ್ಲಿನ ಸಾರಿಗೆ ಸಂಸ್ಥೆ ಲಾಭದಲ್ಲಿದೆ, ಏನೂ ತೊಂದರೆಯಿಲ್ಲ. ಒಟ್ಟಿನಲ್ಲಿ ಸುಧಾರಣೆ ಮಾಡತಕ್ಕಂಥ ಕೆಲಸ ಮಾಡಬೇಕು. ತಪ್ಪುಗಳಿರಬಹುದು, ಇಲ್ಲವೆಂದು ಹೇಳು-ವುದಿಲ್ಲ. ಒಂದು ಸರ್ಕಾರವೆಂದರೆ ಮೊದಲು ಸುಧಾರಣೆ ಮಾಡುವ ಕೆಲಸ ಹಮ್ಮಿಕೊಂಡಿರಬೇಕು. ಮೊನ್ನೆ ದಿವಸ ನಾನು ಒಂದು ಸಭೆಗೆ ಹೋಗಿದ್ದಾಗ ತಿಳಿದುಕೊಂಡಿದ್ದೇನೆ. ಏನೆಂದರೆ, ಕೆ.ಎಸ್.ಆರ್. ಟಿ.ಸಿ ಸಂಸ್ಥೆಯಿಂದ ಬಿ.ಟಿ.ಎಸ್ ಅನ್ನು ಬೇರ್ಪಡಿಸುವ ವಿಚಾರ. ಇದಕ್ಕಾಗಿ ವಿಶ್ವ ಬ್ಯಾಂಕಿನಿಂದ ಸಾಲ ತರುತ್ತೇವೆಂದರೆ ಈಗಾಗಲೇ ಒದಗಿಸುತ್ತಿರುವ ಎಲ್ಲಾ ಸಬ್ಸಿಡಿಯನ್ನು ರದ್ದುಗೊಳಿಸಬೇಕು. ಸಾಲಕೊಟ್ಟರೆ ಯಾರಿಗೆ ತಾನೇ ಸಾಲುವುದಿಲ್ಲ? ಹಂತ ಹಂತವಾಗಿ ಸಬ್ಸಿಡಿಯನ್ನು ರದ್ದುಗೊಳಿಸುವುದರ ಮೂಲಕ ವಿಶ್ವಬ್ಯಾಂಕಿನಿಂದ ಸುಮಾರು ಇನ್ನೂರು ಕೋಟಿ ರೂಪಾಯಿಗಳಷ್ಟು ಬಿ.ಟಿ.ಎಸ್.ಗಾಗಿ ತರಲಾಗು-ತ್ತಿದೆಯೆಂಬ ವಿಚಾರ ಪ್ರಸ್ತಾಪಕ್ಕೆ ಬಂದಿದೆ. ಇದರ ಬಗ್ಗೆ ತಾವು ಉತ್ತರ ಕೊಡುವಾಗ ಹೇಳಬೇಕು.

ತಾವು ಕೊಟ್ಟಿರುವಂಥ ವರದಿಯೇನಿದೆ ವರದಿ ಅನುಷ್ಠಾನಗೊಳಿಸಿದರೆ ಈಗಿನ ಸಾರಿಗೆ ವ್ಯವಸ್ಥೆ ನಿಜವಾಗಲೂ ಬದಲಾವಣೆಯಾಗುತ್ತದೆ ಆದ್ದರಿಂದ ಸಾರಿಗೆ ಸಂಸ್ಥೆಗೆ ಕಾಯಕಲ್ಪ ಕೊಡುವಂತಾ-ಗುತ್ತದೆ. ಆದುದರಿಂದ, ಈ ವ್ಯವಸ್ಥೆಯನ್ನು ಬದಲಾವಣೆ ಮಾಡುವುದರ ಬಗ್ಗೆ ತಾವು ವರದಿಯಲ್ಲಿ ಏನು ಶಿಫಾರಸ್ಸುಗಳನ್ನು ಮಾಡಿದ್ದೀರಿ, ಈಗ ತಾವೇ ಸಾರಿಗೆ ಸಚಿವರಾಗಿರುವುದರಿಂದ ವರದಿಯನ್ನು ಜಾರಿಗೆ ತರುವುದು ಸೂಕ್ತವಾಗಿದೆ. ಇನ್ನು ಜೈಲುಗಳ ಬಗ್ಗೆ ಹೇಳುವುದಾದರೆ, ನಾನು ಹಾಗೂ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಜೈಲಿಗೆ ಹೋಗಿದ್ದೇವೆ. ನಾನು ಐದಾರು ಜೈಲುಗಳನ್ನು ನೋಡಿದ್ದೇನೆ. ರಾಜ್ಯದಲ್ಲಿ ಜನತಾದಳ ಅಧಿಕಾರದಲ್ಲಿದ್ದಾಗ ರೈತ ಸಂಘದ ಸುಮಾರು ಇನ್ನೂರು ಜನರನ್ನು ಬಂಧಿಸಿ ಇಪ್ಪತ್ತು ದಿವಸಗಳ ಕಾಲ ಬೆಂಗಳೂರಿನ ಜೈಲಿನಲ್ಲಿ ಹಾಕಿದ್ದರು. ಜೈಲಿನ ಮ್ಯಾನ್ಯು-ಯಲ್ ಪ್ರಕಾರ ಏನು ಆಹಾರ ಪದಾರ್ಥಗಳನ್ನು ಒದಗಿಸಲಾಗುತ್ತಿತ್ತು, ಅದು ಕಳ್ಳತನವಾಗುತ್ತಿದ್ದುದ-ರಿಂದ ನೀವು ಅದನ್ನು ನಿಲ್ಲಿಸಿದ್ದೀರಿ. ನಾನು ಒಮ್ಮೆ ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಹೋಗಿದ್ದಾಗ ಅಲ್ಲಿದ್ದ ತೆಂಗಿನ ಮರಗಳಿಗೆ ಮುಳ್ಳುಗಳನ್ನು ಹಾಕಿದ್ದರು. ಕಾರಣ, ತೆಂಗಿನ ಕಾಯಿಗಳು ಕಳ್ಳತನವಾಗು-ತ್ತಿದ್ದುದರಿಂದ ತೆಂಗಿನ ಮರಕ್ಕೆ ಮುಳ್ಳನ್ನು ಹಾಕಿದ್ದರು. ಹಾಗಾದರೆ ಇನ್ನು ಕಾರಾಗೃಹ ಎಷ್ಟು ಭದ್ರವಾಗಿದೆ ಎಂಬುದನ್ನು ಯೋಚಿಸಬೇಕು. ನಮ್ಮ ಹಳ್ಳಿಯಲ್ಲಿರುವ ಮರಗಳಿಗೆ ಈ ರೀತಿ ಮುಳ್ಳು ಹಾಕುವುದಿಲ್ಲ, ಆದರೆ, ಕಾರಾಗೃಹದಲ್ಲಿರುವ ತೆಂಗಿನ ಮರಗಳಿಗೆ ಮುಳ್ಳು ಹಾಕಿದ್ದಾರಲ್ಲಾ, ಏನು ಸಮಾಚಾರ ಎಂದು ಕೇಳಿದರೆ ರಾತ್ರಿ ಹೊತ್ತು ತೆಂಗಿನಕಾಯಿ ಕದಿಯುತ್ತಾರೆ; ಅದಕ್ಕೋಸ್ಕರ ತೆಂಗಿನ ಮರಗಳಿಗೆ ಮುಳ್ಳು ಹಾಕಿದ್ದೇವೆಂದರು. ನಾನು ಕೇಂದ್ರ ಕಾರಾಗೃಹಕ್ಕೆ ಹೋದದ್ದು ಅದೇ ಮೊದಲ ಸಾರಿ. ಆದುದರಿಂದ, ಕಾರಾಗೃಹದಲ್ಲಿ ಸುಧಾರಣೆಯಾಗಬೇಕಾದ ಕೆಲಸವೆಂದರೆ ಖೈದಿಗಳಿಗೆ ಉದ್ಯೋಗ . . .

ಅಧ್ಯಕ್ಷರು:- ನೀವು ಹೇಳಿದ ಮಾತಿನಂತೆ ಅಲ್ಲಿರುವ ಖೈದಿಗಳಿಗೆ ಕದಿಯುವುದು ಹೇಗೆಂದು ಅಲ್ಲಿ ತರಬೇತಿ ಕೊಡುತ್ತಾರೆಯೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಅಲ್ಲಿ ಏನು ತರಬೇತಿ ಕೊಡುತ್ತಾರೆಂದು ನನಗೇನು ಗೊತ್ತು? ನಾನು ಅಲ್ಲಿಗೆ ಹೊಸದಾಗಿ ಹೋಗಿದ್ದಾಗ ಅಲ್ಲಿದ್ದ ತೆಂಗಿನ ಮರಗಳಿಗೆ ಮುಳ್ಳು ಹಾಕಿದ್ದನ್ನು ನೋಡಿದೆ. ಏಕೆ ಆ ರೀತಿ ಮುಳ್ಳನ್ನು ಹಾಕಿದ್ದೀರೆಂದರೆ ಕಾಯಿಗಳನ್ನು ಕದಿಯುತ್ತಾರೆ, ಅದಕ್ಕೋಸ್ಕರ ಮುಳ್ಳನ್ನು ಹಾಕಿದ್ದೇವೆಂದರು.

ಅಧ್ಯಕ್ಷರು:- ನಾವು ತಿಳಿದುಕೊಂಡಿರುವುದೇನೆಂದರೆ, ಕಳ್ಳತನ ಮಾಡಿದವರನ್ನು ಶಿಕ್ಷಿಸಲು ಅಲ್ಲಿಗೆ ಕಳುಹಿಸುತ್ತಾರೆಂದು. ಆದರೆ, ನೀವು ಹೇಳುತ್ತಿರುವುದನ್ನು ನೋಡಿದರೆ, ಕಳ್ಳತನ ಹೇಗೆ ಮಾಡ-ಬೇಕೆಂಬುದರ ಬಗ್ಗೆ ಅಲ್ಲಿ ತರಬೇತಿ ಕೊಡುತ್ತಾರೆಂದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಕಾರಾಗೃಹದಲ್ಲಿರುವವರೆಲ್ಲಾ ಕಳ್ಳರೇನಲ್ಲ. ಒಳ್ಳೆಯವರನ್ನೂ ಕೂಡ ಈ ಸರ್ಕಾರ ಕಾರಾಗೃಹಕ್ಕೆ ಕಳುಹಿಸಿಬಿಡುತ್ತದೆ. ಹೌದು, ನಾನೂ ಸಹ ಹೋಗಿದ್ದೇನೆ. ನಾವೆಲ್ಲರೂ ಕೂಡ ಕಾರಾಗೃಹಕ್ಕೆ ಹೋಗಿದ್ದವರೇ ಆಗಿದ್ದೇವೆ. ಆದ್ದರಿಂದ, ಕಾರಾಗೃಹದಲ್ಲಿರುವವರೆಲ್ಲಾ ಕಳ್ಳರೇನಲ್ಲ. ಆದರೂ ಕಾರಾಗೃಹದಲ್ಲಿ ಕಳ್ಳರ ಸಂತತಿ ಬೆಳೆಯುತ್ತಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಕಾರಾಗೃಹದಲ್ಲಿರುವ ಖೈದಿಗಳು ಮಾನಸಿಕವಾಗಿ ಬದಲಾವಣೆಯಾಗಲು ಯಾವುದಾದರೊಂದು ಉದ್ಯೋಗ ಕಲ್ಪಿಸಿಕೊಡಬೇಕು. ಅವರು ಶಿಕ್ಷಾವಧಿ ಪೂರೈಸಿ ಕಾರಾಗೃಹದಿಂದ ಹೊರಗೆ ಬಂದ ನಂತರ ಸಮಾಜದಲ್ಲಿರುವ ಇತರರು ಅವರನ್ನು ಕೆಟ್ಟ ದೃಷ್ಟಿಯಲ್ಲಿ ನೋಡುವುದರಿಂದ ಅವರ ಜೀವನದಲ್ಲಿ ಸುಧಾರಣೆ ಮಾಡುವುದಕ್ಕೋಸ್ಕರ ಅವರು ಕಲಿತಿರುವ ಉದ್ಯೋಗದಲ್ಲಿ ಮುಂದುವರೆದು ಅದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಅವರಿಗೆ ಬ್ಯಾಂಕ್ ವತಿಯಿಂದ ಸಾಲ ಮಂಜೂರು ಮಾಡಿಸಿಕೊಟ್ಟು ಸಮಾಜದಲ್ಲಿ ಅವರು ನಿಜವಾದ ಮನುಷ್ಯರಂತೆ ಬೆಳೆಯಲು ವಾತಾವರಣ ಕಲ್ಪಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಾ, ಇನ್ನು ಪೋಲೀಸ್ ಇಲಾಖೆ ಬಗ್ಗೆ ಹೇಳಬಯಸುತ್ತೇನೆ. ಪೋಲೀಸ್ ಇಲಾಖೆ ಬಗ್ಗೆ ನಾವೆಲ್ಲರೂ ಆಡಿಕೊಳ್ಳುತ್ತೇವೆ. ಸಿನಿಮಾಗಳಲ್ಲಂತೂ ಪೋಲೀಸರನ್ನು ಯದ್ವಾತದ್ವಾ ಉಪಯೋಗಿಸಿಕೊಳ್ಳುತ್ತಾರೆ. ಸಿನಿಮಾದಲ್ಲಿ ಪೋಲೀಸರಿಗೆ ಮೂರು ನಾಮ ಹಾಕಿ, ಯಾವ್ಯಾವ ರೀತಿಯಲ್ಲೋ ಬಟ್ಟೆ ಹಾಕಿ, ಪೋಲೀಸರೆಂದರೆ ಕೆಟ್ಟವರು, ಉಪಯೋಗಕ್ಕೆ ಬಾರದವರೆಂದು, ಅವರನ್ನು ಸಿನಿಮಾಗಳಲ್ಲಿ ಕೆಟ್ಟದಾಗಿ ಉಪಯೋಗಿಸಿಕೊಳ್ಳುವಷ್ಟು ಇನ್ನೆಲ್ಲೂ ಉಪಯೋಗಿಸಿಕೊಳ್ಳುವುದಿಲ್ಲ. ಆದರೆ, ನಿಜವಾಗಿಯೂ ಅವರ ಬಗ್ಗೆ ಯೋಚಿಸುವುದಾದರೆ ಅವರಿಗೆ ತುಂಬಾ ಕಷ್ಟವಿದೆ. ನಮ್ಮ ಹಳ್ಳಿ ಕದೆಗಳಲ್ಲಿರುವ ಪೋಲೀಸರನ್ನು ನಾನು ಯಾವ ಲೆಕ್ಕದಲ್ಲಿ ತಿಳಿದುಕೊಂಡೆನೆಂದರೆ ನಮ್ಮ ಹಳ್ಳಿಯಲ್ಲಿ ಮೆಣಸಿನಕಾಯಿ ಬೆಳೆಯುತ್ತಾರೆ. ಉತ್ತರ ಕರ್ನಾಟಕದಲ್ಲಿ ಅದಕ್ಕೆ ಮಿರ್ಚಿ ಎನ್ನುತ್ತಾರೆ. ಮೆಣಸಿನಕಾಯಿ ಬೆಳೆಯುವ ತೋಟದಲ್ಲಿ ಹುಲ್ಲಿನಿಂದ ಮನುಷ್ಯನಂತೆ ಮಾಡಿ, ತಲೆ ಭಾಗದಲ್ಲಿ ಒಂದು ಮಡಿಕೆಯನ್ನು ದಬಾಕಿ, ಹಳೆಯ ಹರಕು ಅಂಗಿ ಹಾಕಿ, ಕೈಯಲ್ಲೊಂದು ಕೋಲು ಕೊಟ್ಟು ಬೆದರುಗೊಂಬೆಯನ್ನು ನಿಲ್ಲಿಸಿರುತ್ತಾರೆ. ಏಕೆ ಆ ರೀತಿ ಮಾಡಿರುತ್ತಾರೆಂದರೆ, ಹಕ್ಕಿ–ಪಕ್ಷಿಗಳು ತೋಟಕ್ಕೆ ಬಂದು ಮೆಣಸಿನಕಾಯಿಯನ್ನು ತಿನ್ನದಿರಲೆಂದು. ಅದೇ ರೀತಿ ಪೋಲೀಸರಿಗೆ ಒಂದು ಖಾಕಿ ಅಂಗಿ ಕೊಟ್ಟು, ಕೈಗೆ ಒಂದು ದೊಣ್ಣೆ ಇಲ್ಲವೇ ಬಂದೂಕು ಕೊಟ್ಟು ಸಮಾಜದಲ್ಲಿ ಕೆಟ್ಟವರ್ಯಾರೂ ಬರದಿರಲೆಂದು ನಿಲ್ಲಿಸಿದ್ದೇವೆ. ಇವೊತ್ತು ನಾವು ಏನು ಮಾಡುತ್ತಿದ್ದೇವೆಂದರೆ, ಹಳ್ಳಿಯಲ್ಲಿ ಉದ್ಭವಿಸುವ ಪ್ರತಿಯೊಂದು ಸಮಸ್ಯೆಯನ್ನು ಪೋಲೀಸ್ ಠಾಣೆಯ ತನಕ ಒಯ್ಯುತ್ತಿದ್ದೇವೆ. ಪೋಲೀಸರಿಲ್ಲದೆ ಸಮಸ್ಯೆ ಬಗೆಹರಿಯುವುದಿಲ್ಲವೆನ್ನುವ ವ್ಯವಸ್ಥೆ ಬಂದು ಬಿಟ್ಟಿದೆ. ಜನರು ಸಮಸ್ಯೆಗಳನ್ನು ಹೊತ್ತು ಪೋಲೀಸ್ ಠಾಣೆಗೆ ಹೋಗಬೇಕಾದರೆ ಇವರೂ (ಕಂದಾಯ ಸಚಿವರು) ಕಾರಣರಾಗಿದ್ದಾರೆ. ಸದನದಲ್ಲಿ ಈಗ ಕಂದಾಯ ಮಂತ್ರಿಗಳಿಲ್ಲ. ಪೋಲೀಸ್ ಠಾಣೆಗೆ ಹೋಗುವ ನೂರಕ್ಕೆ ಎಂಬತ್ತು ಭಾಗದಷ್ಟು ಪ್ರಕರಣಗಳು ಕಂದಾಯ

ಇಲಾಖೆಗೆ ಸಂಬಂಧಪಟ್ಟದ್ದಾಗಿರುತ್ತದೆ. ಆದ್ದರಿಂದ ಪೋಲೀಸ್ ಠಾಣೆಗಳನ್ನು ಜಾಸ್ತಿ ಕಟ್ಟುವುದಕ್ಕಿಂತ, ಪೋಲೀಸ್‌ನವರ ಸಂಖ್ಯೆಯನ್ನು ಜಾಸ್ತಿಮಾಡುವುದಕ್ಕಿಂತ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಎಲ್ಲಾ ಕಡೆ ಪೋಲೀಸ್ ಠಾಣೆ, ಜೈಲುಗಳು ಬರುತ್ತವೆ. ಈಗಾ-ಗಲೇ ಕೋರಮಂಗಲದ ಹತ್ತಿರ 156 ಎಕರೆ ಪ್ರದೇಶದಲ್ಲಿ ಬಯಲು ಬಂಧೀಖಾನೆಯನ್ನು ಕಟ್ಟುತ್ತಿ-ದ್ದಾರೆ. ಒಂದು ರಾಜ್ಯದ ಆಡಳಿತ ಉತ್ತಮವಾಗಿದೆಯೆಂದು ಹೇಳಬೇಕಾದರೆ ಪೋಲೀಸ್ ಠಾಣೆಗಳ ಸಂಖ್ಯೆ ಕಡಿಮೆ ಇರಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಪೋಲೀಸ್ ಠಾಣೆಗಳ ಮತ್ತು ಕೋರ್ಟ್‌ಗಳ ಸಂಖ್ಯೆ ಕಡಿಮೆಯಾದಾಗ ಮಾತ್ರ ನಿಜವಾದ ಆಡಳಿತ ಸುಧಾರಣೆಯಾಗುತ್ತದೆ. ಎಲ್ಲಾ ಕಡೆ ಪೋಲೀಸ್ ಠಾಣೆ, ಜೈಲು, ನ್ಯಾಯಾಲಯಗಳನ್ನು ಕಟ್ಟುವ ಕೆಲಸವಾಗಬಾರದು. ಮತ್ತು ಜನರು ಹಾಗೂ ಪೋಲೀಸ್ ಸಿಬ್ಬಂದಿಯ ನಡುವೆ ಯಾವ ರೀತಿ ಭಾಂದವ್ಯವಿರಬೇಕು ಎಂಬ ಬಗ್ಗೆ ವಿಚಾರ ಸಂಕೀರ್ಣವನ್ನು ಮಾಡಬೇಕು. ಜನರು ಮತ್ತು ಪೋಲೀಸರು ಯಾವ ರೀತಿ ಇರಬೇಕು, ಅಪರಾಧಿಗಳ ಸಂಖ್ಯೆಯನ್ನು ಯಾವ ರೀತಿಯಲ್ಲಿ ಕಡಿಮೆ ಮಾಡಬೇಕು, ಅವರನ್ನು ಯಾವ ರೀತಿಯಲ್ಲಿ ಎಜ್ಯು-ಕೇಟ್ ಮಾಡಬೇಕು, ಜನರನ್ನು ನ್ಯಾಯಾಲಯಕ್ಕೆ ಕಳುಹಿಸದಂತೆ ಪ್ರತಿ ತಾಲ್ಲೂಕಿನಲ್ಲಿ ಪ್ರತಿ ವರ್ಷ ಅಪರಾಧಗಳ ಸಂಖ್ಯೆಯನ್ನು ಯಾವ್ಯಾವ ರೀತಿಯಲ್ಲಿ ಕಡಿಮೆ ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡಬೇಕು. ನನಗೆ ಗೊತ್ತಿರುವಹಾಗೆ ಹದಿನೈದು ವರ್ಷಗಳ ಹಿಂದೆ ಎಲ್ಲಾದರೂ ಒಂದು ಕೊಲೆ-ಯಾದರೆ ಅದನ್ನು ಪತ್ತೆ ಮಾಡುವುದನ್ನು ಪೋಲೀಸ್‌ನವರು ಚಾಲೆಂಜ್ ಆಗಿ ತೆಗೆದುಕೊಳ್ಳುತ್ತಿದ್ದರು. ಆದರೆ ಇವತ್ತು ನೂರು ಕೊಲೆ ಮಾಡಿದ್ದರೆ ಎಂಭತ್ತು ಭಾಗ ಕೊಲೆಗಾರರು ಧಾರಾಳವಾಗಿ ತಪ್ಪಿಸಿಕೊಂಡು ತಿರುಗುತ್ತಿದ್ದಾರೆ. ಅಂದರೆ ಪೋಲೀಸ್‌ನವರಿಗೆ ಡೆಡಿಕೇಷನ್ ಇಲ್ಲದಂತಾಗಿದೆ. ಯಾವ ಕಾರಣಕ್ಕಾಗಿ ಈ ಇಲಾಖೆ ಈ ರೀತಿಯಾಗಿದೆಯೆಂದು ನನಗೆ ಅರ್ಥವಾಗುತ್ತಿಲ್ಲ. ಮತ್ತು ಯಾವ್ಯಾವ ರೀತಿಯಿಂದ ವ್ಯಾಜ್ಯಗಳು ಹೆಚ್ಚು ಹೋಗುತ್ತಿದ್ದವು ಎಂಬ ಬಗ್ಗೆ ಹಿಂದೆ ಪೋಲೀಸ್‌ನವರು ಅಂದಾಜು ಮಾಡುತ್ತಿದ್ದರು. ಕಂದಾಯ ಇಲಾಖೆಯ ಮೂಲಕ, ಜಾತಿಯ ವ್ಯಾಜ್ಯಗಳು, ಧರ್ಮದ ವ್ಯಾಜ್ಯಗಳು ಹೆಚ್ಚಾಗಿ ಪೋಲೀಸ್ ಠಾಣೆಗೆ ಹೋಗುತ್ತವೆ. ಯಾವ್ಯಾವ ಮೂಲದಿಂದ ವ್ಯಾಜ್ಯಗಳು ಹೆಚ್ಚಾಗಿ ನಮ್ಮ ಠಾಣೆಗೆ ಬರುತ್ತವೆ ಅದನ್ನು ಯಾವ ರೀತಿಯಲ್ಲಿ ತಡೆಗಟ್ಟಬೇಕು ಎಂಬ ದಿಕ್ಕಿನಲ್ಲಿ ಪೋಲೀಸ್ ಸಿಬ್ಬಂದಿಯು ಕೆಲಸ ಮಾಡಬೇಕಾಗಿದೆ. ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ ಒಬ್ಬ ಸಬ್-ಇನ್ಸಪೆಕ್ಟರ್‌ಗೆ ಒಂದೂವರೆ ಅಡಿ ಹೊಟ್ಟೆ ಇರುತ್ತದೆ. ಆದರೂ ಅವರನ್ನು ಕೆಲಸದಲ್ಲಿ ಇಟ್ಟುಕೊಂಡಿ-ದ್ದೀರಿ, ಮೊದಲು ಅಂಥವರನ್ನು ಕೆಲಸದಿಂದ ತೆಗೆದು ಹಾಕಬೇಕು. ಪೋಲೀಸ್ ಇಲಾಖೆಯಲ್ಲಿರ-ತಕ್ಕವರು ಮೊದಲು ದೈಹಿಕವಾಗಿ ಸಾಮರ್ಥ್ಯರಿರಬೇಕು. ಹಾಗಿಲ್ಲದಿದ್ದರೆ ಪೋಲೀಸ್‌ನವರೇನು ಕೆಲಸ ಮಾಡಲು ಸಾಧ್ಯವಾಗುತ್ತದೆ? ಪೋಲೀಸ್ ಇಲಾಖೆಯಲ್ಲಿ ಮುಖ್ಯಪೇದೆ ಪೇದೆಗೆ ಬಯ್ಯುತ್ತಾನೆ, ಮುಖ್ಯಪೇದೆಗೆ ಸಹಾಯಕ ಸಬ್ ಇನ್ಸ್‌ಪೆಕ್ಟರ್ ಬಯ್ಯುತ್ತಾನೆ, ಸರ್ಕಲ್ ಇನ್ಸ್‌ಪೆಕ್ಟರ್ ಸಬ್ ಇನ್ಸ್‌ಪೆಕ್ಟರಿಗೆ ಬಯ್ಯುತ್ತಿರುತ್ತಾನೆ, ಡಿ.ವೈ.ಎಸ್.ಪಿ. ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಬಯ್ಯುವುದು ಇದೇ ಪೋಲೀಸ್ ಇಲಾಖೆ. ಏಕೆಂದರೆ ಅವನಿಗೆ ಹೊಟ್ಟೆ ಬಂದಿರುತ್ತದೆ, ಎಷ್ಟೊತ್ತಾದರೂ ಊಟ

ಮಾಡಿರುವುದಿಲ್ಲ, ಅಸಿಡಿಟಿ ಜಾಸ್ತಿಯಾಗಿರುತ್ತದೆ, ಪೋಲೀಸ್‌ನವರ ಮೇಲೆ ಬೈಯುತ್ತಾನೆ, ಯಾರಾದರೂ ಸಿಕ್ಕಿದರೆ ಒಂದೇ ಸಲ ಹೊಡೆದುಬಿಡುತ್ತಾನೆ. ಆದ್ದರಿಂದ ಪೋಲೀಸ್ ಸಿಬ್ಬಂದಿಯಲ್ಲಿ ದೈಹಿಕ ಸಾಮರ್ಥ್ಯತೆಯನ್ನು ಕಾಪಾಡಿಕೊಂಡು ಬರಬೇಕು. ಮಾನ್ಯ ಮಂತ್ರಿಗಳೂ ಪ್ರತಿನಿತ್ಯ ವ್ಯಾಯಾಮ ಮಾಡುವುದು ಒಳ್ಳೆಯದು. ಆದ್ದರಿಂದ ಇಲ್ಲಿ ತೂಕಡಿಸುವುದು ಕಡಿಮೆಯಾಗುತ್ತದೆ.

ಅಧ್ಯಕ್ಷರು:- ತಾವು ಮಾತಾನಾಡುತ್ತಿರುವ ಧಾಟಿಯನ್ನು ನೋಡಿದರೆ ಯಾರ್‍ಯಾರಿಗೆ ಏನೇನು ಹೇಳುತ್ತಿದ್ದೀರಿ ಆದರೆ, ನನ್ನವರೆಗೆ ಬರಬೇಡಿ!

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮೊನ್ನೆ ಪತ್ರಿಕೆಯಲ್ಲಿ ಬಂದಿದೆ ಸಿದ್ಧರಾಮಯ್ಯನವರು ಮೈಸೂರಿನಲ್ಲಿ ವಾಕಿಂಗ್ ಜಾಸ್ತಿ ಹೋಗುತ್ತಾರಂತೆ; ಬೆಂಗಳೂರಿನಲ್ಲಿ ಹೋಗುತ್ತಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನಾನೇನು ಮಂತ್ರಿಗಳನ್ನು ಆಡಿಕೊಳ್ಳಬೇಕೆಂದು ಹೇಳುತ್ತಿಲ್ಲ. ಆರೋಗ್ಯದ ದೃಷ್ಟಿಯಿಂದ ಮತ್ತು ರಾಜ್ಯದಲ್ಲಿ ಆಡಳಿತವನ್ನು ಸುಸೂತ್ರವಾಗಿ ನಡೆಸಬೇಕು ಎನ್ನುವ ದೃಷ್ಟಿಯಿಂದ ಅವರು ದೈಹಿಕವಾಗಿ ವ್ಯಾಯಾಮ ಮಾಡಿದರೆ ಒಳ್ಳೆಯದು ಎಂದು ಹೇಳುತ್ತಿದ್ದೇನೆ. ಚೈನಾ ದೇಶದಲ್ಲಿ ಉಪಾಧ್ಯಾಯರುಗಳು ಮತ್ತು ಕೈಗಾರಿಕಾ ಕಾರ್ಮಿಕರು ದಿವಸಕ್ಕೆ ಅರ್ಧಗಂಟೆ ವ್ಯಾಯಾಮ ಮಾಡಬೇಕೆಂದು ಕಾನೂನು ಇದೆ. ಆದರೆ ನಮ್ಮ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನೇ ನೇಮಕ ಮಾಡಿಕೊಳ್ಳುವುದಿಲ್ಲ. ದೈಹಿಕ ಶಿಕ್ಷಕರಿಲ್ಲದ ಶಾಲೆಯನ್ನು ಡೆವಿಲ್ ಸ್ಕೂಲ್ ಎಂದು ಕರೆಯುತ್ತೇನೆ. ಬೇರೆ ಉಪಾಧ್ಯಾಯರುಗಳಿಲ್ಲದಿದ್ದರೂ ಚಿಂತೆ ಇಲ್ಲ ದೈಹಿಕ ಶಿಕ್ಷಕರು ಇರಬೇಕು. ಯೋಗಾಭ್ಯಾಸವನ್ನು ಬೇಕಾದರೂ ಮಾಡಿಸಿ. ಆದರೆ ದುರಭ್ಯಾಸವೊಂದನ್ನು ಬಿಟ್ಟು ಬೇರೆ ಎಲ್ಲಾ ಅಭ್ಯಾಸವನ್ನು ಮಾಡಿಸಿ.

ಶ್ರೀ ವಾಟಾಳ್ ನಾಗರಾಜ್:- ಹಾಗಾದರೆ ಯಾವುದು ದುರಭ್ಯಾಸವೆಂದು ತೀರ್ಮಾನ ಮಾಡಿದ್ದೀರಿ? ಅದರ ಬಗ್ಗೆ ಸ್ಪಷ್ಟ ಮಾಡಬೇಕು.

ಅಧ್ಯಕ್ಷರು:- ತಾವು ಆ ಮಾತನ್ನು ಹೇಳುವಾಗ ವಾಟಾಳ್ ನಾಗರಾಜ್‌ರವರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದಿರೋ?

ಶ್ರೀ ಸಿದ್ದರಾಮಯ್ಯ:- ಶ್ರೀ ರಾಮರೆಡ್ಡಿಯವರನ್ನು ಕೇಳಿದರೆ ಮದುವೆಯಾಗುವುದೇ ದುರಭ್ಯಾಸವೆಂದು ಹೇಳಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಇಲ್ಲ, ಆದರೆ ಮದುವೆಯಾದವರು ಮದುವೆಯಾದಂತಿದ್ದರೆ ಒಳ್ಳೆಯ ಅಭ್ಯಾಸ, ಮದುವೆಯಾಗಿಬಿಟ್ಟು ಮದುವೆಯಾಗದಂತಿದ್ದರೆ ಕೆಟ್ಟ ಅಭ್ಯಾಸ.

ಶ್ರೀ ವಾಟಾಳ್ ನಾಗರಾಜ್:- ಶ್ರೀರಾಮರೆಡ್ಡಿಯವರಿಗೆ ಮದುವೆ ಮಾಡಿಸಬೇಕೆಂದು ನಾವೆಲ್ಲಾ ಸರ್ವ ಪ್ರಯತ್ನ ಪಟ್ಟಿದ್ದೇವೆ. ನಾವು ಪುಟ್ಟಣ್ಣಯ್ಯ, ಮುನಿಯಪ್ಪ ಮುಂತಾದವರು ಸೇರಿ ಅದರ ಬಗ್ಗೆ ತೀವ್ರ ಪ್ರಯತ್ನ ಪಟ್ಟಿದ್ದೇವೆ. ತಮಗೆ ಗೊತ್ತಿಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು:- ಇದು ಮಿತ್ರದ್ರೋಹವಾದಂತಾಗುತ್ತದೆ. ಮಾನ್ಯ ಲಕ್ಷ್ಮಿಸಾಗರ್‌ರವರು ಕಾರ್ಪೊರೇಟರ್ ಆಗಿದ್ದಾಗಿನಿಂದ ನಿಮ್ಮ ಜೊತೆಗಿದ್ದಾರೆ; ಅವರನ್ನು ಹಾಗೆಯೇ ಬಿಟ್ಟು ಇವರನ್ನು ಮಾಡುತ್ತೇವೆಂದರೆ ಮಿತ್ರದ್ರೋಹ ಮಾಡಿದಂತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಶ್ರೀರಾಮರೆಡ್ಡಿಯವರಿಗೆ ಮದುವೆ ಮಾಡಿಸಬಹುದು, ಆದರೆ ಲಕ್ಷ್ಮಿಸಾಗರ್‌ರವರಿಗೆ ಖಂಡಿತಾ ಮದುವೆ ಮಾಡಿಸಲು ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಎಲ್ಲರ ಬಗ್ಗೆ ಮಾತಾನಾಡಿದ್ದೀರಿ ನನ್ನ ಬಗ್ಗೆ ಬಿಟ್ಟಿದ್ದೀರೆಂದು ಆರ್. ನಾರಾಯಣ್‌ರವರು ಜಗಳ ತೆಗೆಯಬಹುದು. ಅವರು ಬಂದ ಮೇಲೆ ಎಲ್ಲವನ್ನು ಪ್ರಸ್ತಾಪ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಬೆಳಿಗ್ಗೆ ಪುಟ್ಟಣ್ಣಯ್ಯನವರು ನನ್ನ ಜೊತೆ ಮಾತನಾಡುತ್ತಾ ನೀವು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ನಮ್ಮಂತೆ ತಪ್ಪು ಮಾಡಲಿಲ್ಲವೆಂದು ಹೇಳಿದರು. ಆದರೆ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಪುಟ್ಟಣ್ಣಯ್ಯನವರನ್ನೂ ಸೇರಿಸಿಕೊಂಡು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಜ್:- ಅಂತೂ ನಾವೆಲ್ಲಾ ಶ್ರೀ ರಾಮರೆಡ್ಡಿಯವರಿಗೆ ಮದುವೆ ಮಾಡಿಸಬೇಕೆಂದು ತೀರ್ಮಾನ ಮಾಡಿದ್ದೇವೆ, ಅದಕ್ಕೆ ತಾವೇ ಅಧ್ಯಕ್ಷತೆಯನ್ನು ವಹಿಸಬೇಕಾಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ನಾನೇ ಹಲವಾರು ಸರಳ ಮದುವೆಯನ್ನು ಮಾಡಿಸಿದ್ದೇನೆ.

ಅಧ್ಯಕ್ಷರು:- ಕೋಲಾರ ಜಿಲ್ಲೆಯವರಾದ ಶ್ರೀ ರಾಮರೆಡ್ಡಿಯವರು ಅಲ್ಲಿಯವರೆಗೆ ಎಲ್ಲಿ ಕಾಯುತ್ತಾರೆ; ಅವರ ವ್ಯವಸ್ಥೆಯನ್ನು ಅವರು ಮಾಡಿಕೊಳ್ಳುತ್ತಾರೆ ಬಿಡಿ!

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಕಾಮಾಲೆ ಕಣ್ಣಿನವರಿಗೆ ಲೋಕವೇ ಹಳದಿಯಾಗಿ ಕಾಣುತ್ತದಂತೆ, ಆ ರೀತಿಯಾಯಿತು!

ಶ್ರೀ ವಾಟಾಳ್ ನಾಗರಾಜ್:- ಏಕೆ ಇಷ್ಟು ಇವರು ಕೂಗಾಡುತ್ತಾರೆಂದರೆ, ಬೆಳಿಗ್ಗೆ ಮನೆಯಲ್ಲಿ ಒದ್ದು, ಬುದ್ದಿ ಕಲಿಸಿ ಹೇಳಿ ಹೇಳಿ ಕಳುಹಿಸಿದರೆ ತಾವು ಇಲ್ಲಿ ತಾಳ್ಮೆಯಿಂದಿರುತ್ತೀರಿ; ಅವ್ಯಾವುದೂ ಇಲ್ಲದೆ ಬಂದರೆ ಸಿಕ್ಕಾಪಟ್ಟೆ ಕೂಗಾಡುತ್ತೀರಿ ಎಂದು ಹೇಳಿದೆ. ಅದಕ್ಕಾಗಿ ಈ ತರಹ ಹೇಳುತ್ತಿರುವುದು ಎಂದು ಕಾಣುತ್ತದೆ.

ಶ್ರೀ ಜಿ.ವಿ. ರಾಮರೆಡ್ಡಿ:- ಬೆಳಿಗ್ಗೆ ಮನೆಯಿಂದ ಎಲ್ಲಾ ಒದೆಸಿಕೊಂಡು ಬಂದವರು ನನಗಿಂತ ಹೆಚ್ಚಾಗಿ ಕೂಗಾಡುತ್ತಾರೆ, ನಾನು ಕಡಿಮೆ ಕೂಗಾಡುತ್ತೇನೆ.

ಅಧ್ಯಕ್ಷರು:- ಗೋವಿಂದೇಗೌಡರಲ್ಲಿ ಕೇಳಿಕೊಂಡಿದ್ದೇನೆ, ಮಲೆನಾಡು ಅಭಿವೃದ್ಧಿ ಮಂಡಳಿಯ

ಸಭೆ ಇದೆಯೆಂದು ಅನೇಕ ಮಲೆನಾಡು ಪ್ರಾಂತ್ಯದ ಶಾಸಕರು ಆ ಸಭೆಗೆ ಹೋಗಲು ಕಾತುರರಾಗಿದ್ದೀರಿ, ಸಭೆ ಸ್ವಲ್ಪ ನಿಧಾನವಾದರೂ ಸಹಕರಿಸಬೇಕು. ಇನ್ನೂ ನಾಲ್ಕೈದು ಶಾಸಕರು ಮಾತನಾಡಬೇಕಾಗಿರುವುದರಿಂದ ರಿಪ್ಲೈಯನ್ನು ನಾಳೆ ತೆಗೆದುಕೊಳ್ಳೋಣ. ಏನಾದರೂ ಆಗಲಿ ನಾಲ್ಕೈದು ಶಾಸಕರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇನೆ. ಪತ್ರಿಕೆಯವರೂ ಸಹಕರಿಸುತ್ತಿದ್ದಾರೆ. ಆದ್ದರಿಂದ ಸ್ವಲ್ಪ ಸಮಯದಲ್ಲಿ ಮಲೆನಾಡು ಪ್ರಾಂತ್ಯದ ಶಾಸಕರನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಪೋಲೀಸ್ ಬಹಳ ಮುಖ್ಯವಾದ ಇಲಾಖೆ. ಸಾಮಾನ್ಯವಾಗಿ ಗ್ರಾಮೀಣ ಮಹಿಳೆಯರಿಗೆ ಬಹಳ ಅನ್ಯಾಯವಾಗುತ್ತದೆ. ಎರಡು ಮೂರು ಮಕ್ಕಳ ತಾಯಿಯಾಗಿರುತ್ತಾರೆ, ಅಂಥವರನ್ನು ಬಿಟ್ಟು ಅವರ ಗಂಡ ಬೇರೆಯವರನ್ನು ಮದುವೆಯಾಗಿಬಿಡುತ್ತಾನೆ. ಆ ತಾಯಿಗೆ ಯಾವುದೇ ರಕ್ಷಣೆ ಇರುವುದಿಲ್ಲ. ಅಂಥ ಪ್ರಕರಣದ ಬಗ್ಗೆ ಯಾವುದೇ ದೂರು ಬಂದರೂ ಅತ್ಯಂತ ಜವಾಬ್ದಾರಿಯಿಂದ ತೆಗೆದುಕೊಳ್ಳಬೇಕು. ಆದರಲ್ಲೂ ವರದಕ್ಷಿಣೆಯ ಬಗ್ಗೆ ನಾವು ಬಹಳ ವಿರೋಧ ಮಾಡಬೇಕಾಗುತ್ತದೆ. ಪ್ರತಿದಿನ ಪತ್ರಿಕೆಯಲ್ಲಿ ವರದಕ್ಷಿಣೆಯಿಂದಾಗುವ ಸಾವಿನ ಬಗ್ಗೆ ನೋಡುತ್ತೇವೆ. ಆದ್ದರಿಂದ ಇದರ ಬಗ್ಗೆ ವಿಶೇಷವಾದ ಕಾನೂನನ್ನು ತರಬೇಕು. ಏಕೆಂದರೆ ಒಬ್ಬ ಗಂಡಸು ಎರಡು ಮಕ್ಕಳನ್ನು ಬಿಟ್ಟು ಬೇರೆಯ ಮದುವೆಯಾಗುತ್ತಾನೆ, ಆದರೆ ತಾಯಿಯಾದವಳು ಯಾವುದೇ ಕಾರಣಕ್ಕೂ ಮಕ್ಕಳನ್ನು ಬಿಟ್ಟು ಹೋಗುವುದಿಲ್ಲ. ಇಂಥಾ ಹಲವಾರು ಪ್ರಕರಣಗಳನ್ನು ನೋಡಿದ್ದೇನೆ. ಆದ್ದರಿಂದ ಮಹಿಳೆಯರ ಬಗ್ಗೆ ಪೋಲೀಸ್ ಇಲಾಖೆಯವರು ಜಾಗೃತರಾಗಿ ಕೆಲಸ ಮಾಡುವಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಸಂಬಂಧ ಪಟ್ಟವರಿಗೆ ಸೂಕ್ತವಾದ ಆದೇಶವನ್ನು ಕೊಡಬೇಕು. ಶಿಕ್ಷಣ ಇಲಾಖೆ ಮತ್ತೊಂದು ಮುಖ್ಯವಾದ ಇಲಾಖೆ. ಸನ್ಮಾನ್ಯ ಗೋವಿಂದೇಗೌಡರು ಶಿಕ್ಷಣದ ಬಗ್ಗೆ ಮತ್ತು ಗ್ರಾಮೀಣ ಶಿಕ್ಷಣದ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ಮಾತನಾಡುತ್ತೀರಿ. ಕಡ್ಡಾಯ ಶಿಕ್ಷಣ ಎಷ್ಟು ಮುಖ್ಯವೋ ಅಷ್ಟೇ ಕಡ್ಡಾಯ ದೈಹಿಕ ಶಿಕ್ಷಣ ಮುಖ್ಯ ಎಂಬುದರ ಬಗ್ಗೆ ತಾವು ಗಮನಹರಿಸಬೇಕು. ಆರು ಮತ್ತು ಒಂದು ಶಿಕ್ಷಕರ ಹುದ್ದೆಗಳಲ್ಲಿ ಒಬ್ಬರು ದೈಹಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಶಿಕ್ಷಕರು ಇರಬೇಕು, ಉಳಿದ ವಿಷಯಕ್ಕೆ ಆರು ಶಿಕ್ಷಕರು ಇರಬೇಕು. ದೈಹಿಕ ಶಿಕ್ಷಣವನ್ನು ಎಲ್ಲಾ ಕಡೆ ಕಡ್ಡಾಯ ಮಾಡಬೇಕು. ಮಾನ್ಯ ಸುರೇಶಕುಮಾರ್‌ರವರು ಮಾತನಾಡುತ್ತಾ ಮಕ್ಕಳು ಕಾನ್‌ವೆಂಟ್‌ಗೆ ಹೋಗುವಾಗ ಬಹಳ ಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಾರೆಂದು ಹೇಳಿದರು.

6.20 ಪಿ.ಎಂ

ಅಸಮಾನ ಶಿಕ್ಷಣ ವ್ಯವಸ್ಥೆ ಇರುವುದರಿಂದಲೇ ನಾವು ಇವತ್ತು ಹಿಂದುಳಿದಿದ್ದೇವೆ. ಕ್ಯಾತನಹಳ್ಳಿಯಲ್ಲಿ ಏನು ಶಿಕ್ಷಣ ಸಿಗುತ್ತದೆಯೋ, ಬೆಂಗಳೂರಿನ ಬಾಲ್ಡ್‌ವಿನ್ ಕಾನ್ವೆಂಟ್‌ನಲ್ಲಿ ಅದೇ ಶಿಕ್ಷಣ ಸಿಕ್ಕಿದರೆ,

ಏಕೆ ಮಕ್ಕಳು ಅಷ್ಟೊಂದು ಪುಸ್ತಕಗಳನ್ನು ಹೊತ್ತುಕೊಂಡು ಹೋಗುತ್ತಾರೆ. ಏಕೆ ಜನ ವಲಸೆ ಹೋಗುತ್ತಾರೆ? ಏಕೆ ಜನ ಸಿಟಿಗೆ ಸೇರಿಕೋಳ್ಳುತ್ತಾರೆ, ಹೇಳಿ. ಅಸಮಾನ ಶಿಕ್ಷಣ ವ್ಯವಸ್ಥೆಯನ್ನು ನಾವು ಮಾಡಿರುವುದರಿಂದ ನಾವು ಇವತ್ತು ಅನಾನುಕೂಲವನ್ನು ಅನುಭವಿಸುತ್ತಿದ್ದೇವೆ. ಅಲ್ಲಿ ಯಾವುದೋ ಸೆಂಟ್ರಲ್ ಸ್ಕೂಲ್ ಇದ್ದರೆ, ಇಲ್ಲಿ ಯಾವುದೋ ಬಾಲ್ಡ್‌ವಿನ್ ಕಾನ್ವೆಂಟ್ ಇರುತ್ತದೆ. ಭ್ರಷ್ಟಾಚಾರ ಬೆಳೆಯುವುದಕ್ಕೆ ಅದೂ ಒಂದು ಕಾರಣ. ತಾವು ದಯವಿಟ್ಟು ಇದರ ಬಗ್ಗೆ ಕನಿಷ್ಟ ಒಂದು ಸಮಿತಿ-ಯನ್ನು ಮಾಡಿ. ಶಿಕ್ಷಣದ ಮೂಲಭೂತ ಬದಲಾವಣೆ ಬಗ್ಗೆ ಒಂದು ಹೋರಾಟ ನಡೆಯತಕ್ಕಂತಹ ಕೆಲಸ ಆಗಬೇಕು. ಅದು ಸಮಾಜಕ್ಕೆ ಬೇಕಾದ ಶಿಕ್ಷಣ ಆಗಬೇಕು. ಆರೋಗ್ಯ, ಕ್ರೀಡೆ, ಕಾಯಕ ಇದಕ್ಕೆ ಸಂಬಂಧಪಟ್ಟಂತಹ ವಿಚಾರಗಳೇ ಅದರಲ್ಲಿ ಇರಬೇಕು. ಅದರ ಬಗ್ಗೆಯೇ ನೀವು ಟಿ.ಸಿ.ಹೆಚ್. ಮತ್ತು ಬಿ.ಎಡ್‌ಗಳಲ್ಲಿ ಟ್ರೈನಿಂಗ್ ಕೊಡಬೇಕು. ಟಿ.ಸಿ.ಹೆಚ್.ನಲ್ಲಿ ತಾವೇನು ಟ್ರೈನಿಂಗ್ ಕೊಡುತ್ತೀರಿ, ಅದರಲ್ಲಿ ಉದ್ಯೋಗಕ್ಕೆ ಸಂಬಂಧಪಟ್ಟಂತಹ, ಕ್ರೀಡೆಗೆ ಸಂಬಂಧಪಟ್ಟಂತಹ, ಸಮಾಜಕ್ಕೆ ಬೇಕಾದಂತಹ ವಿಚಾರಗಳೇ ಇರತಕ್ಕದ್ದು ಅತಿ ಮುಖ್ಯವಾದುದು. ನೀವು ಇವತ್ತು ಬಿ.ಎಡ್. ಟ್ರೈನಿಂಗ್ ಕೊಡುತ್ತೀರಿ. ಆ ರೀತಿ ಟ್ರೈನಿಂಗ್ ಆದವರಿಗೆ ಸ್ಪೋರ್ಟ್ಸ್ ಅಂದರೆ ಏನು ಎಂದು ಗೊತ್ತಿರುವುದಿಲ್ಲ. ಅದು ಎಲ್ಲಿ ಹುಟ್ಟಿತು? ಎಲ್ಲಿ ಬೆಳೆಯಿತು ಎಂಬುದೇ ಅವರಿಗೆ ಗೊತ್ತಿರುವುದಿಲ್ಲ. ಇವತ್ತು ನೋಡಿ, ಅಟ್ಲಾಂಟಾ ಒಲಂಪಿಕ್ಸ್‌ನಲ್ಲಿ ಭಾರತ ದೇಶಕ್ಕೆ ಒಂದೂ ಪದಕ ಇಲ್ಲ. ದೇಶದಲ್ಲಿ ನಾವು 90 ಕೋಟಿ ಜನರಿದ್ದರೂ, ಒಂದೂ ಪದಕ ಇಲ್ಲ. ಅದಕ್ಕೆ ಕಾರಣವೇನು ಅಂದರೆ, ನಮ್ಮಲ್ಲಿ ಕ್ರೀಡೆಗೆ ಆದ್ಯತೆ ಕೊಟ್ಟಿಲ್ಲ. ನಮಗೆ ಇವತ್ತು ಕ್ರೀಡೆ ಬಗ್ಗೆ ಗೊತ್ತಿಲ್ಲ. ಕ್ರೀಡೆ ಬಗ್ಗೆ ನಾವು ಇವತ್ತು ತಿಳಿದುಕೊಳ್ಳಬೇಕು. ತಿಳಿದುಕೊಂಡರೆ ಅದರಲ್ಲಿ ನಾವು ಮಹತ್ತರವಾದ ಬದಲಾವಣೆ ಮಾಡಲು ಸಾಧ್ಯವಾಗುತ್ತದೆ. ಆಮೇಲೆ ಮೊರಾರ್ಜಿ ದೇಸಾಯಿ . . .

ಶ್ರೀ ಬಿ. ರಾಮನಾಥ ರೈ:- ಮಾನ್ಯ ಕ್ರೀಡಾ ಮಂತ್ರಿಗಳು ಅಟ್ಲಾಂಟಾಕ್ಕೆ ಹೋಗಿದ್ದಾರೆ. ಇನ್ನು ಮುಂದೆ ಚೆನ್ನಾಗಿ ಆಗಬಹುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ರಮಾನಾಥ ರೈರವರು ನಿಜವಾಗಿ-ಯೂ ಸರಿಯಾಗಿ ಪ್ರಾಕ್ಟೀಸ್ ಮಾಡಿದ್ದರೆ ಡಿಸ್ಕಸ್ ಅಥವಾ ಹ್ಯಾಮರ್ ಥ್ರೋನಲ್ಲಿ ಗೋಲ್ಡ್ ಮೆಡಲ್ ತೆಗೆದುಕೊಳ್ಳಬಹುದಾಗಿತ್ತು. ಸುಮ್ಮನೆ ನಿಮ್ಮ ದೇಹದಾರ್ಢ್ಯತೆಯನ್ನು ವೇಸ್ಟಾಗಿ ಇಟ್ಟುಕೊಂಡಿದ್ದೀರಿ. ಡಿಸ್ಕಸ್ ಮತ್ತು ಹ್ಯಾಮರ್ ಥ್ರೋನಂತಹ ಕ್ರೀಡೆಗಳಿಗೆ ಮಾನ್ಯ ರಮಾನಾಥ ರೈರವರು ಒಳ್ಳೇ ಫಿಟ್ ಪರ್ಸನಾಲಿಟಿ. ಮಾನ್ಯ ಅಧ್ಯಕ್ಷರೇ, ಒಬ್ಬ ದಪ್ಪ ಆಗಿರುವವನು ಹ್ಯಾಮರ್ ಎಸೆದನಂತೆ. ಅದು 300 ಮೀಟರ್ ಹೋಗಿ ಬಿತ್ತು. ಇನ್ನೊಬ್ಬ ಸಣ್ಣಗಿರುವವನು ಹ್ಯಾಮರ್ ಎಸೆಯುವಾಗ ಹ್ಯಾಮರ್ ಅಲ್ಲಿ ಉಳಿದುಕೊಂಡಿತು, ಇವನೇ ಮುಂದೆ ಹೊರಟು ಹೋದನಂತೆ. ನೋಡಿ, ಅವರು ಹ್ಯಾಮರ್ ಎಸೆಯಲಿಕ್ಕೆ ಲಾಯಕ್ಕಾಗಿದ್ದಾರೆ.

ಶ್ರೀ ಬಿ. ರಮಾನಾಥ್ ರೈ:- ಸುರಿನಾಮ್ ಎಂಬ ಒಂದು ಸಣ್ಣ ದೇಶ ಇದೆ, ಆ ದೇಶದ ಒಬ್ಬ ಜಾವಲಿನ್ ಎಸೆತಗಾರ ಇದ್ದಾನೆ. ಅವನು ದೇಶ ಬಿಟ್ಟು ಹೊರಗೆ ಸಮುದ್ರಕ್ಕೆ ಎಸೆಯುತ್ತಾನಂತೆ. ಆದರೆ ಭಾರತದಲ್ಲಿ ಅಂತಹ ಪರಿಸ್ಥಿತಿ ಇಲ್ಲ. ನಮಗೆ ನೋವಾಗುತ್ತದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಇನ್ನು ಮೊರಾರ್ಜಿ ದೇಸಾಯಿ ಶಾಲೆಗಳಿಗೆ ಮಕ್ಕಳನ್ನು ಹೇಗೆ ಸೇರಿಸಿಕೊಳ್ಳುತ್ತಾರೆ ಎಂಬುದನ್ನು ಹೇಳುತ್ತೇನೆ. ಈಗ ನವೋದಯ ಶಾಲೆಗೆ ನನ್ನ ಮಗಳಿಗೂ ಸೀಟ್ ಸಿಕ್ಕಿದೆ. ನಾನು ಆಗಲೇ ಒಂದು ಸಾರಿ ಹೇಳಿದ್ದೆ, ನವೋದಯ ಶಾಲೆಗೆ ನನ್ನ ಮಗಳಿಗೆ ಸೀಟು ಹೇಗೆ ಸಿಕ್ಕಿತು ಎಂದರೆ, ನನ್ನ ಹೆಂಡತಿಗೆ ಗೊತ್ತು, ಯಾವ ಪುಸ್ತಕ ಓದಿಸಿದರೆ ನನ್ನ ಮಗಳನ್ನು: ನನ್ನ ಮಗನನ್ನು ಇಂಟರ್‌ವ್ಯೂನಲ್ಲಿ ಪಾಸ್ ಮಾಡಿಸಬಹುದು, ಎಗ್ಸಾಮ್‌ನಲ್ಲಿ ಪಾಸ್ ಮಾಡಿಸಬಹುದು, ಶಾಲೆಗೆ ಸೇರಿಕೊಳ್ಳಲು ಸಾಧ್ಯ ಎಂದು. ನವೋದಯ ಅಂದರೆ ಪೂರ್ಣ ಬಡತನದ ರೇಖೆಯಲ್ಲಿ ಇರತಕ್ಕಂತಹ, ಆರ್ಥಿಕವಾಗಿ ಹಿಂದುಳಿದಿರತಕ್ಕಂತಹ, ಬಹಳ ನೋವಿನಲ್ಲಿ ಇರ-ತಕ್ಕಂತಹ ಜನರಿಗೋಸ್ಕರ ಸೃಷ್ಟಿಯಾದಂತಹ ಶಿಕ್ಷಣ. ಆದ್ದರಿಂದ ಪೂರ್ಣ ಬಡತನದಲ್ಲಿದ್ದು, ಆ ಪುಸ್ತಕದ ವಿಚಾರವೇ ಗೊತ್ತಿಲ್ಲದೇ ಇರತಕ್ಕಂತಹ ತಂದೆ ತಾಯಿಗಳು ಮಕ್ಕಳಿಗೆ ಒಂದು ವರ್ಷ ಮುಂಚಿತವಾಗಿ ಟ್ರೈನಿಂಗ್ ಕೊಡಿ. ಕನಿಷ್ಟ 100 ಮಕ್ಕಳಿಗಾದರೂ ನೀವು ಟ್ರೈನಿಂಗ್ ಕೊಟ್ಟು, ಆ ನೂರು ಮಕ್ಕಳಲ್ಲಿ ಕನಿಷ್ಟ 60 ಮಕ್ಕಳಾದರೂ ಸೆಲೆಕ್ಟ್ ಆದರೆ ನಿಜವಾಗಿಯೂ ಮೊರಾರ್ಜಿ ದೇಸಾಯಿಯವರ ಹೆಸರಿನಲ್ಲಿ ತಾವು ಆರಂಭಿಸಿರತಕ್ಕ ಶಾಲೆಗೆ ಬೆಲೆ ಬರುತ್ತದೆ. ನನ್ನ ಮಕ್ಕಳಿಗೂ ನೀವು ಮೊರಾರ್ಜಿ ದೇಸಾಯಿ ಶಾಲೆಯಲ್ಲಿ, ನವೋದಯ ಶಾಲೆಯಲ್ಲಿ ಸೀಟು ಕೊಡಿಸಿ. ಆಗ ಅದು ನವೋದಯ ಆಗಲಿಲ್ಲ, ಮಾಮೂಲಿ ದಳ ಉದಯವೇ ಆಯಿತು.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ ನಿಮ್ಮ ಮಕ್ಕಳಿಗೆ ಪ್ರವೇಶ ಕೊಡಲು ಅವಕಾಶವಿಲ್ಲ. ಹಸಿರು ಕಾರ್ಡುಗಳನ್ನು ಪಡೆದಿರುವಂತಹವರ ಮಕ್ಕಳಿಗೆ ಮಾತ್ರ ಇಂಟರ್‌ವ್ಯೂ ಮಾಡಿ, ಪ್ರವೇಶವನ್ನು ಕೊಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಹಸಿರು ಕಾರ್ಡುಗಳನ್ನು ಯಾರ್‍ಯಾರೋ ತೆಗೆದುಕೊಂಡು ಹೋಗುತ್ತಾರೆ. ಹಾಗಾದರೆ ಅಂತಹವರಿಗೆಲ್ಲಾ ಪ್ರವೇಶ ಕೊಡುತ್ತೀರೋ? ಇವತ್ತು ಹಸಿರು ಕಾರ್ಡು-ಗಳನ್ನು ಹಂಚತಕ್ಕ ವಿಧಾನದಲ್ಲೇ ಲೋಪ ಇದೆ. ಹಸಿರು ಕಾರ್ಡುಗಳು ನಿಜವಾಗಿ ಯಾರಿಗೆ ಸಿಗ-ಬೇಕೋ ಅವರಿಗೆ ಸಿಗದೆ ಬೇರೆಯವರಿಗೆಲ್ಲಾ ಸಿಗುತ್ತಿದೆ. ಅವರೆಲ್ಲಾ ಬಂದು ಆ ಶಾಲೆಗೆ ಸೇರಿಕೊಂಡು ಬಿಡುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಇನ್ನು ಉನ್ನತ ಶಿಕ್ಷಣದ ಬಗ್ಗೆ ಮಾತನಾಡುವುದಾದರೆ, ಅರೆ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣದ ಬಗ್ಗೆ ಹೇಳಲಿಚ್ಚಿಸುತ್ತೇನೆ. ಹೆಚ್ಚು ಉದ್ಯೋಗವಕಾಶ ಇರತಕ್ಕ ಶಿಕ್ಷಣದ ಬಗ್ಗೆ ಸರ್ಕಾರ ಒತ್ತು ಕೊಡಬೇಕು. ಕನಿಷ್ಟ ಒಂದು ಜಿಲ್ಲೆಯಲ್ಲಿ ಎರಡು ತಾಂತ್ರಿಕ ಶಿಕ್ಷಣ ಹಾಗೂ ಎರಡು ವೈದ್ಯಕೀಯ ಶಿಕ್ಷಣ ಕೊಡತಕ್ಕ ಕಾಲೇಜುಗಳಿರಬೇಕು. ಏಕೆಂದರೆ ಮೇಲ್ ನರ್ಸ್

ಟ್ರೈನಿಂಗ್ ಕೊಟ್ಟರೆ, ಇಡೀ ಪ್ರಪಂಚದಲ್ಲಿ ಬಹಳ ಜನ ಯುವಕರಿಗೆ ಉದ್ಯೋಗ ಸಿಗುತ್ತದೆ. ಇಡೀ ಪ್ರಪಂಚದ ಎಲ್ಲಾ ಆಸ್ಪತ್ರೆಗಳಲ್ಲೂ ಮೇಲ್ (male) ನರ್ಸ್‌ಗಳ ಅವಶ್ಯಕತೆ ಇದೆ. ನಮ್ಮ ರಾಜ್ಯ-ದಲ್ಲೂ ಅಂತಹ ನರ್ಸ್‌ಗಳ ಅವಶ್ಯಕತೆ ಬಹಳ ಇದೆ. ಯಾವ ಯಾವ ಉದ್ಯೋಗ ಸಿಗುತ್ತದೆ, ಆ ಉದ್ಯೋಗಕ್ಕೆ ಬೇಕಾದಂತಹ ಅಗತ್ಯ ಶಿಕ್ಷಣವನ್ನು ಕೊಡತಕ್ಕಂತಹ ಕೆಲಸವನ್ನು ದಯ ಮಾಡಿ ಸರ್ಕಾರದವರು ಮಾಡಬೇಕು. ಮಾನ್ಯ ಗೋವಿಂದೇಗೌಡರಿಗೆ ನಾನು ಇನ್ನೊಂದು ಮನವಿಯನ್ನು ಮಾಡುತ್ತಿದ್ದೇನೆ. ಎಸ್.ಎಸ್.ಎಲ್.ಸಿ., ಟಿ.ಸಿ.ಹೆಚ್. ಮಾಡಿರುವವರು ಇವತ್ತು ಬಹಳ ಜನ ಏಜ್-ಬಾರ್ ಆದವರಿದ್ದಾರೆ. ಎಸ್.ಎಸ್.ಎಲ್.ಸಿ., ಟಿ.ಸಿ.ಹೆಚ್. ಮಾಡಿರುವವರಿಗೆ ತಾವು ಕನಿಷ್ಟ ಸೌಲಭ್ಯ ಕೊಟ್ಟರೆ ಅವರು ತಮ್ಮ ಪ್ರತಿಮೆಯನ್ನು ಮಾಡಿಸಿ ಅದಕ್ಕೆ ಕೈ ಮುಗಿಯುತ್ತಾರೆ, ಇಲ್ಲದಿದ್ದರೆ ಅವರಿಗೆ ನೀವು ವೀರಗಲ್ಲು ನೆಡಬೇಕಾಗುತ್ತದೆ. ಇವತ್ತು ಅವರು ಆ ಒಂದು ಪರಿಸ್ಥಿತಿಯಲ್ಲಿದ್ದಾರೆ. ದಯವಿಟ್ಟು ತಾವು ಪುನರ್ ಪರಿಶೀಲನೆ ಮಾಡಿ. ಕನಿಷ್ಟ ಪಕ್ಷ ಎಸ್.ಎಸ್.ಎಲ್.ಸಿ., ಟಿ.ಸಿ.ಹೆಚ್. ಆಗಿದ್ದು, ಏಜ್‌ಬಾರ್ ಆಗಿರುವವರಿಗೆ ನೇಮಕಾತಿಯಲ್ಲಿ ಶೇಕಡ 40-50ರಷ್ಟು ಹುದ್ದೆಗಳಿಗೆ ತಾವು ಅವಕಾಶ ಮಾಡಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ. ತಾವು ಅದನ್ನು ಒಮ್ಮೆ ಪುನರ್ ಪರಿಶೀಲನೆ ಮಾಡಿ, ಆಲೋಚನೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಪ್ರಮುಖವಾದಂತಹ ವಿಚಾರವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಿಚ್ಚಿಸುತ್ತೇನೆ. ಈ ಸದನದಲ್ಲಿ ನಡೆಯತಕ್ಕ ವಿದ್ಯಮಾನಗಳು ಜನರಿಗೂ ಗೊತ್ತಾಗಬೇಕು. ಜನರಿಗೆ ಸದನ ಅಂಧರೆ ಏನು? ಸದನದಲ್ಲಿ ನಡೆಯತಕ್ಕ ವಿದ್ಯಾಮಾನಗಳು ಏನು? ನಮ್ಮ ಬಗ್ಗೆ ಶಾಸಕರು ಯಾವ್ಯಾವ ರೀತಿಯಲ್ಲಿ ಹೋರಾಟ ಮಾಡುತ್ತಿದ್ದಾರೆ, ಸರ್ಕಾರದ ಹೊಣೆಗಾರಿಕೆ ಏನು? ಜವಾಬ್ದಾರಿ ಏನು? ನಮ್ಮ ಹೊಣೆಗಾರಿಕೆ ಏನು ಎನ್ನುವುದು ಜನರಿಗೆ ತಿಳಿಯಬೇಕಾಗಿದ್ದರೆ, ಸದನದ ಕಾರ್ಯಕಲಾಪಗಳನ್ನು ದೂರದರ್ಶನದಲ್ಲಿ ಬಿತ್ತರಿಸಬೇಕು. ಈ ಬಗ್ಗೆ ಮಾನ್ಯ ಅಧ್ಯಕ್ಷರು ಮಾನ್ಯ ವಾರ್ತಾ ಮಂತ್ರಿಗಳಿಗೆ ದಯವಿಟ್ಟು ಹೇಳಬೇಕು. ದೂರದರ್ಶನದ ಮೂಲಕ ನಾವು ಈ ತರಹದ ಕಾರ್ಯಕ್ರಮಗಳನ್ನು ಮಾಡಬೇಕು. ಕೃಷಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇವತ್ತು ರಾಜ್ಯದಲ್ಲಿ ಮೊದಲು ಬಳಸುತ್ತಿದ್ದುದಕ್ಕಿಂತ ಎರಡು ಪಟ್ಟು ನೈಟ್ರೋಜನ್ ಅನ್ನು ರೈತರುಗಳು ಉಪಯೋಗಿಸುತ್ತಿ-ದ್ದಾರೆ. ಹೊಸ ಹೊಸ ಅಚ್ಚುಕಟ್ಟು ಪ್ರದೇಶಗಳಿಗೆ ನಾವು ನೀರನ್ನು ಬಿಡುತ್ತಿದ್ದೇವೆ. ಹೇಮಾವತಿಯಿಂದ 7 ಲಕ್ಷ 20 ಸಾವಿರ ಎಕರೆ ಜಮೀನಿಗೆ ನೀರು ಕೊಡತಕ್ಕಂತಹ ಒಂದು ಯೋಜನೆ ಇದೆ. ಇಷ್ಟು ಎಕರೆಗೆ ನೀರನ್ನು ಕೊಡಬೇಕಾದರೆ, ಮೊದಲನೇ ಸ್ಟೇಜ್‌ನಲ್ಲೇ ರಾಸಾಯನಿಕ ಗೊಬ್ಬರವನ್ನು ಯಾವ ರೀತಿ ಉಪಯೋಗಿಸಬೇಕು ಎಂಬುದರ ಬಗ್ಗೆ ಕೃಷಿಕರನ್ನು ನಾವು ಎಜ್ಯುಕೇಟ್ ಮಾಡಬೇಕು. ಇದರಲ್ಲಿ ದೂರದರ್ಶನ ಪ್ರಮುಖ ಪಾತ್ರ ವಹಿಸಬೇಕು. ಎರಡು ವರ್ಷಗಳ ಹಿಂದೆ ನಾವೇನು ನೈಟ್ರೋಜನ್ ಅನ್ನು ಉಪಯೋಗಿಸುತ್ತಿದ್ದೇವೋ ಅದರ 2-3 ಪಟ್ಟು ನೈಟ್ರೋಜನ್ ಅನ್ನು ನಾವು ಉಪಯೋಗಿಸು-ತ್ತಿದ್ದೇವೆ. ಇವತ್ತು ರಾಯಚೂರು ಜಿಲ್ಲೆ ಪೂರ್ಣ ನಾಶವಾಗತಕ್ಕ ಪರಿಸ್ಥಿತಿಗೆ ಬಂದಿದೆ. ಅಲ್ಲಿ ಒಂದು ಎಕರೆ ಭತ್ತ ಬೆಳೆಯಬೇಕಾದರೆ 15 ಮೂಟೆ ರಾಸಾಯನಿಕ ಗೊಬ್ಬರ ಬೇಕಾಗುತ್ತದೆ. ಈ ರೀತಿ 15

ಮೂಟೆ ರಾಸಾಯನಿಕ ಗೊಬ್ಬರ ಹಾಕಿ ಬೆಳೆದಂತಹ ಭತ್ತದಿಂದ ಅಕ್ಕಿ ಮಾಡಿ ನಾವು ಊಟ ಮಾಡಿ-ದರೆ, ಅದರ ಪರಿಣಾಮ ಏನು ಆಗುತ್ತದೆ ಎಂಬುದನ್ನು ಡಾಕ್ಟರಾದ ಮಾನ್ಯ ಮಲಕಾರೆಡ್ಡಿಯವರು ಹೇಳಬೇಕು. ದಯವಿಟ್ಟು ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಜಾತಿ, ಮೂಢನಂಬಿಕೆ, ವರದಕ್ಷಿಣೆ ಬಗ್ಗೆ ಕಿರುಕುಳ, ಸಮಾಜಕ್ಕೆ ಬೇಕಾದಂತಹ ಸಾಮಾಜಿಕ ಬದಲಾವಣೆ ಆಗುವಂತಹ ವಿಷಯಗಳ ಬಗ್ಗೆ ದೂರದರ್ಶನದಲ್ಲಿ ಕಾರ್ಯಕ್ರಮಗಳನ್ನು ಬಿತ್ತರಿಸುವಂತಹ ವ್ಯವಸ್ಥೆಯಾಗಬೇಕು. ಸರ್ಕಾರ ದುಡ್ಡು ಕೊಡುವುದು ಮುಖ್ಯವಲ್ಲ, ಕೊಟ್ಟಂತಹ ದುಡ್ಡು ಎಷ್ಟರಮಟ್ಟಿಗೆ ಸಾರ್ವಜನಿಕರಿಗೆ ಉತ್ತಮವಾಗಿ ಉಪಯೋಗವಾಗುತ್ತಿದೆ ಎಂಬುದನ್ನು ನೋಡಬೇಕು. ಬೇಕಾದರೆ ಇದರ ಬಗ್ಗೆ ಎಲ್ಲಾ ಪಕ್ಷದ ಶಾಸಕರನ್ನೊಳಗೊಂಡ ಸದನ ಸಮಿತಿಯನ್ನು ಮಾಡಿ. ಸರ್ಕಾರ ಎಷ್ಟರಮಟ್ಟಿಗೆ ತನ್ನ ಕಾರ್ಯ ಕ್ರಮಗಳನ್ನು ಜಾರಿಗೆ ತಂದಿದೆ, ಹಣ ಯಾವ ರೀತಿ ಉಪಯೋಗವಾಗುತ್ತಿದೆ ಎಂಬುದನ್ನು ಸಮಿತಿ ಪರಿಶೀಲಿಸಲಿ. ಭ್ರಷ್ಟಾಚಾರ ಇವತ್ತು ಅತ್ಯಂತ ಗಂಭೀರವಾದಂತಹ ಕೆಲಸ ಮಾಡುತ್ತಿದೆ. ಈ ಭ್ರಷ್ಟ-ಚಾರವನ್ನು ನಾವು ತೊಡೆದು ಹಾಕದೇ ಹೋದರೆ, ನಮ್ಮ ಪೂರ್ತಿ ಹಣವೆಲ್ಲವೂ ಇದಕ್ಕೇ ಹೋಗು-ತ್ತದೆ. ಆದುದರಿಂದಲೇ ನಮ್ಮ ರಾಜ್ಯ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಇದೇ ಪ್ರಪಂಚದಲ್ಲಿ ಭ್ರಷ್ಟಾ-ಚಾರ ಮಾಡುವುದರಲ್ಲಿ ಭಾರತ ದೇಶ 5ನೇ ಸ್ಥಾನದಲ್ಲಿದೆ. 3ನೇ ಸ್ಥಾನಕ್ಕೆ ನಾವಿನ್ನೂ ಹೋಗಿಲ್ಲ, ಎಷ್ಟು ಬೇಗ ಹೋಗುತ್ತೇವೋ ಗೊತ್ತಿಲ್ಲ. ಸರ್ಕಾರ ಅತ್ಯಂತ ಗಂಭೀರವಾಗಿ ಕೊಡತಕ್ಕಂತಹ ಹಣವನ್ನು ನ್ಯಾಯವಾಗಿ ಖರ್ಚು ಮಾಡಬೇಕೆಂದು ಹೇಳಿ, ಇಷ್ಟು ವಿಚಾರಗಳನ್ನು ಅಧ್ಯಕ್ಷರ ಮೂಲಕ ಸರ್ಕಾರದ ಗಮನ ಸೆಳೆಯಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಎ. ರಾಮದಾಸ್ (ಕೃಷ್ಣರಾಜ):-** ಸನ್ಮಾನ್ಯ ಅಧ್ಯಕ್ಷರೇ, ಪ್ರಮುಖವಾಗಿ ಯಾವುದೇ ಒಂದು ರಾಜ್ಯ, ಒಂದು ದೇಶ ಅಥವಾ ಮಾನವ ತನ್ನ ಮೌಲ್ಯಗಳನ್ನು ಉಳಿಸಿಕೊಳ್ಳಬೇಕಾದರೆ, ಪ್ರಮುಖವಾಗಿ ಮೂರು ವಿಚಾರಗಳಲ್ಲಿ ಸೇವಾ ಮನೋಭಾವನೆ ಇರಬೇಕು ಎನ್ನುವಂತಹ ವಿಚಾರ ಇದೆ. ನಾವು ಬಾಲ್ಯದಿಂದ ತಿಳಿದ ರೀತಿಯಲ್ಲಿ ಸೇವಾ ಮನೋಭಾವನೆಯನ್ನು ಶಿಕ್ಷಕರಲ್ಲಿ, ದೇಶದ ಶಿಕ್ಷಕರಲ್ಲಿ ಮತ್ತು ವಿಶೇಷವಾಗಿ ವೈದ್ಯ ವೃತ್ತಿಯಲ್ಲಿ ಇರುವಂತಹ ವೈದ್ಯರು ಮತ್ತು ಆ ಸೇವೆಯಲ್ಲಿ ಇರುವಂತಹ ಜನಗಳಲ್ಲಿ ಆ ಸೇವಾ ಮನೋಭಾವನೆಯನ್ನು ಕಾಣಬೇಕು ಎನ್ನುವಂತಹ ದೃಷ್ಟಿಯನ್ನು ಇಟ್ಟುಕೊಂಡು ಕೆಲವು ವಿಚಾರಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧ-ಪಟ್ಟ ಹಾಗೆ ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಾವು ಈ ಸದನಕ್ಕೆ ಬಂದಾಗಿನಿಂದಲೂ ಕೂಡ ಒಂದು ದೊಡ್ಡ ಸ್ಲೋಗನ್ ಅನ್ನು ಕೇಳುತ್ತಾ ಬರುತ್ತಿದ್ದೇವೆ. ಅದೇನೆಂದರೆ, 'ಎರಡು ಸಾವಿರ ಇಸವಿಯೊಳಗೆ ಸರ್ವರಿಗೂ ಆರೋಗ್ಯ' ಎನ್ನುವಂತಹ ಒಂದು ಶೀರ್ಷಿಕೆಯನ್ನು ಎಲ್ಲಾ ಪತ್ರಿಕೆಗಳ ಮುಖಾಂತರ ಹಾಗೂ ವೈದ್ಯಕೀಯ ಪ್ರಕಟಣೆಗಳಲ್ಲಿ ನಾವು ನೋಡುತ್ತಾ ಬರುತ್ತಿದ್ದೇವೆ. ಪ್ರಮುಖವಾಗಿ ಈಗ ನಮ್ಮ ಮುಂದಿರುವಂತಹ ಒಂದು ಅಂಶ 'ಏನು' ಎಂದರೆ, ಎರಡು ಸಾವಿರ ಇಸವಿಗೆ ನಮ್ಮ ಮುಂದೆ ಇನ್ನು ಕೇವಲ 3-4 ವರ್ಷ ಮಾತ್ರ ಉಳಿದಿದೆ, ಈ 3-4

ವರ್ಷಗಳಲ್ಲಿ ನಾವು ಹೇಗೆ ಸರ್ವರಿಗೂ ಆರೋಗ್ಯ ಕೊಡಬೇಕು? ಈ ದಿಸೆಯಲ್ಲಿ ನಾವೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ ಎನ್ನುವಂತಹ ವಿಚಾರವನ್ನು ನಾವು ಒಮ್ಮೆ ಅವಲೋಕನ ಮಾಡಿದರೆ, ನಮಗೆ ಒಂದೊಂದು ಸಲ ಭಯವೂ ಕೂಡ ಆಗುತ್ತದೆ. ಈ ದಿಸೆಯಲ್ಲಿ 1995ರ ಏಪ್ರಿಲ್ 5ನೇ ತಾರೀಖು ಸನ್ಮಾನ್ಯ ಆರೋಗ್ಯ ಮಂತ್ರಿಗಳು ಈ ಸದನದಲ್ಲಿ ಹೇಳಿದರು. 1995ರಲ್ಲಿ 2,000 ವೈದ್ಯರನ್ನು ಮತ್ತು ಆರೆ ವೈದ್ಯರನ್ನು ನೇಮಕ ಮಾಡುವುದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೂಡ ಕನ್‌ಕರೆನ್ಸ್ ಸಿಕ್ಕಿದೆ. 1995ರೊಳಗೆ ಅವರ ನೇಮಕಾತಿ ಆಗುತ್ತದೆ ಎಂದು ಹೇಳಿ. ಆದರೆ 1995ರ ಅಂತ್ಯದವರೆಗೂ ಕೂಡ ಕೆಲವು ನೂರುಗಳ ಲೆಕ್ಕದಲ್ಲಿ ಮಾತ್ರ ವೈದ್ಯರ ನೇಮಕವಾಗಿ ಅವರ ಸೇವೆಯನ್ನು ನಾವು ಕಾಣುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಜೊತೆಗೆ ಇವತ್ತು ಪ್ರಮುಖವಾಗಿ ನಾವು ಕಾಣುವಂಥದ್ದು ಎಲ್ಲಾ ಕಡೆ ಕೂಡ ನಮ್ಮ ಸನ್ಮಾನ್ಯ ಸಚಿವರು ಇನ್ನು ಒಂದು ವಿಚಾರ ಹೇಳುತ್ತಾ ಹೇಳಿದರು ಆರೋಗ್ಯ ಕ್ರಾಂತಿಯನ್ನು ಮಾಡುವಂತಹ ದಿಸೆಯಲ್ಲಿ ರಾಜ್ಯ ಒಂದು ಹೆಜ್ಜೆಯನ್ನು ಇಡುತ್ತಿದೆ ಎಂದು. ಆರೋಗ್ಯ ಕ್ರಾಂತಿಯನ್ನು ಮಾಡುವಂತಹ ವಿಚಾರದಲ್ಲಿ ಇವತ್ತು ನಮ್ಮ ಹೆಜ್ಜೆ ಯಾವ ಕಡೆ ಹೋಗುತ್ತಿದೆ ಎಂದು ಒಂದು ಸಲ ಅವಲೋಕನ ಮಾಡಬೇಕಾಗಿದೆ. ವಿಶೇಷವಾಗಿ ನಮಗೆ ಯಾವ ವಿಶ್ವ ಬ್ಯಾಂಕಿನಿಂದ ಅನ್ಯ ದೇಶಗಳಿಂದ 800 ಕೋಟಿ ಹಣ ಏನು ನಮಗೆ ಬಂದಿದೆ, ಆ ಹಣವನ್ನು ರಾಜ್ಯದಲ್ಲಿ ವಿನಿಯೋಗ ಮಾಡಿದ ತಕ್ಷಣವೇ ನಾವು ಒಂದು ಏನೋ ಕ್ರಾಂತಿಯನ್ನು ಮಾಡುತ್ತಿದ್ದೇವೆ ಎನ್ನುವಂತಹ ಭ್ರಾಂತಿ ನಮಗೆ ಏನಿದೆ, ಅದು ದೂರ ಆದಾಗ ಮಾತ್ರ ಪ್ರಾಕ್ಟಿಕಲ್ಲಾಗಿ ನಾವು ಏನು ಮಾಡುವುದಕ್ಕೆ ಸಾಧ್ಯವಿದೆ, ಎಂಬುದನ್ನು ಚಿಂತೆ ಮಾಡಿದಾಗ ಮಾತ್ರ ಆಗ ಸಾಧ್ಯವಾಗುತ್ತದೆ ಅನ್ನುವಂತಹ ವಿಚಾರ. ಪ್ರಮುಖವಾಗಿ ಇವತ್ತು ನಾವು 800 ಕೋಟಿ ವಿದೇಶದಿಂದ ಸಾಲವನ್ನು ಪಡೆಯುವಂತಹ ವಿಚಾರವನ್ನು ಯೋಚನೆ ಮಾಡುತ್ತಿದ್ದೇವೆ. ಅದರಲ್ಲಿ ವಿಶೇಷವಾಗಿ ವಿಶ್ವ ಬ್ಯಾಂಕಿನ 550 ಕೋಟಿ, ಜನಸಂಖ್ಯೆ ಆಯೋಗದಿಂದ 118 ಕೋಟಿ, ಜರ್ಮನ್ ದೇಶದಿಂದ 80 ಕೋಟಿ ರೂಪಾಯಿ ಈ ರೀತಿ ಹಣವನ್ನು ನಾವು ತರುತ್ತಿರುವುದರ ಜೊತೆಗೆ ನೀವು ಅಷ್ಟು 800 ಕೋಟಿ ರೂಪಾಯಿಗಳ ಸಾಲವನ್ನು ರಾಜ್ಯದ ಮೇಲೆ ಹೊರಿಸುತ್ತಿದ್ದೀರಿ, ಎನ್ನುವ ವಿಚಾರವನ್ನು ಇಟ್ಟುಕೊಂಡು ಅದರ ನಿಜವಾದ ಉಪಯೋಗ ಆಗುವಂತಹ ದಿಸೆಯಲ್ಲಿ ಯೋಚನೆ ಮಾಡಬೇಕಾದಂತಹ ಪರಿಸ್ಥಿತಿ ಬಂದಿದೆ. ವಿಶೇಷವಾಗಿ ನಾನು ಈಗಾಗಲೇ ಹೇಳಿದ ರೀತಿಯಲ್ಲಿ ಏಪ್ರಿಲ್‌ನಲ್ಲಿ ನೇಮಕಾತಿ ಬಗ್ಗೆ ಹೇಳಿದರೂ ಕೂಡ ಆ ನೇಮಕಾತಿ ಒಂದು ರೀತಿ ಬಹಳ ನಿಧಾನ ಆದರೂ ಕೂಡ ಆದರಲ್ಲಿ ತಾತ್ಕಾಲಿಕವಾಗಿ ಆಗಬೇಕಾದ ಕೆಲಸ ಒಂದು ಪ್ರಮುಖವಾದ ವಿಚಾರ. ಇನ್ನು ಒಂದು ಆತಂಕವಾದ ವಿಚಾರ ಯಾವುದೆಂದರೆ, ಒಂದು ವರ್ಷಗಳ ಅಂತರದಲ್ಲಿ 1995ರಲ್ಲಿ ಆರೋಗ್ಯ ಮಂತ್ರಿಗಳು ಹೇಳಿದಂತಹವರು ಇನ್ನೊಂದು ವರ್ಷ ಅವಧಿಯಲ್ಲಿ ಇನ್ನೊಂದು ಮಾತು ಹೇಳಿದರು. ಎಲ್ಲರಿಗೂ ಆರೋಗ್ಯ ನನಸಾಗದ ಕನಸು ಎಂದು. ಮತ್ತೆ ಅವರಲ್ಲಿ ಒಂದು ವರ್ಷದ ಅಂತರದಲ್ಲಿ ಹೇಳಿದ ಮಾತು ಅದು ಇವತ್ತು ಪ್ರಾಕ್ಟಿಕಲ್ಲಾಗಿ ಇರುವಂತಹ ವಿಚಾರ ಅನ್ನಿಸುತ್ತದೆ. ಕಾರಣವೇನೆಂದರೆ ಇವತ್ತು ನಮ್ಮ ದೇಶದಲ್ಲಿ ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಆರೋಗ್ಯವನ್ನು ಎಲ್ಲರಿಗೂ ಕೊಡಬೇಕಾ-

ದರೆ, ಮೂಲಭೂತವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಬದಲಾವಣೆ ಆಗದೆ 2000 ಇಸವಿಗೆ ನಾವು ಆರೋಗ್ಯವನ್ನು ಸರ್ವರಿಗೂ ಕೊಡುವಂಥದ್ದು ಕೇವಲ ಘೋಷಣೆಯಾಗಿ ಉಳಿಯು- ತ್ತದೆ ಎಂದು ಮಾನ್ಯ ಆರೋಗ್ಯ ಮಂತ್ರಿಗಳಲ್ಲಿ ಹೇಳಬಯಸುತ್ತೇನೆ. ಈ ರೀತಿ ನಾವು ಏನು ಘೋಷಣೆ ಘೋಷಣೆಯಾಗಿ ಉಳಿಯದೆ ಇರುವುದಕ್ಕೋಸ್ಕರ ಆರೋಗ್ಯ ಇಲಾಖೆಯಲ್ಲಿ ಯಾವ ರೀತಿಯಾಗಿ ಬದಲಾವಣೆಯನ್ನು ತರಬೇಕೆಂದು ಇವತ್ತು ನಾವು ಯೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ವಿಶೇಷವಾಗಿ ವೈದ್ಯಕೀಯ ಶಿಕ್ಷಣ ಸಚಿವರು ಒಂದು ವಿಚಾರ ಹೇಳಿದರು. ಜಿಲ್ಲಾ ಆಸ್ಪತ್ರೆಗಳಿಗೆ 300 ಕೋಟಿ ರೂಪಾಯಿಗಳನ್ನು ವಿಶ್ವ ಬ್ಯಾಂಕಿನಿಂದ ಸಾಲ ಪಡೆಯುತ್ತಿದ್ದೇವೆ. ಮತ್ತು ಜರ್ಮನಿಯಿಂದ 200 ಕೋಟಿ ರೂಪಾಯಿಗಳ ಸಾಲವನ್ನು ಪಡೆಯುತ್ತಿದ್ದೇವೆ ಎಂದು ವಿಶೇಷವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ 30 ಕಿ.ಮೀ. ಒಂದಕ್ಕೆ ಇವತ್ತು ಆಸ್ಪತ್ರೆಗಳನ್ನು ನಿರ್ಮಾಣ ಮಾಡಿ ಅಪಘಾತಕ್ಕೆ ಒಳ- ಗಾದಂತಹ ರೋಗಿಗಳ ನೆರವಿಗೋಸ್ಕರ ಬರುತ್ತೇವೆಂದು ಮಾನ್ಯ ಎ.ಬಿ. ಪಾಟೀಲರೂ ಕೂಡ ಹೇಳಿ- ದರು. ಪ್ರಮುಖವಾಗಿ ಇವತ್ತು ವಿಶ್ವ ಬ್ಯಾಂಕಿನ ಯೋಜನೆಯಲ್ಲಿ ಬರುವಂತಹ ಹಣವನ್ನು ಅದರ ಉಪಯೋಗ ನಿಜವಾದ ರೀತಿಯಲ್ಲಿ ಆದಾಗ ಮಾತ್ರ ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ಕಡು ಬಡವರಿಗೆ ಆರೋಗ್ಯ ಕೊಡುವಂತಹ ದಿಸೆಯಲ್ಲಿ ನಾವು ಕಾರ್ಯವನ್ನು ಕೈಗೊಳ್ಳುವುದಕ್ಕೆ ಸಾಧ್ಯ- ವಾಗುತ್ತದೆ ಎನ್ನುವ ದಿಸೆಯಲ್ಲಿ ನಾವು ಯೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಇವತ್ತು ಇದನ್ನು ಯೋಚನೆ ಮಾಡುವಂತಹ ಸಮಯದಲ್ಲಿ ನಮಗೆ ಮೊದಲು ನಮ್ಮ ರಾಜ್ಯದ ಪರಿಸ್ಥಿತಿಯನ್ನು ರಾಜ್ಯದ ಆರೋಗ್ಯ ಸ್ಥಿತಿಯನ್ನು ಅವಲೋಕನ ಮಾಡುವಂತಹ ಸ್ಥಿತಿ ಬಂದಿರುವಾಗ ನಮ್ಮ ರಾಜ್ಯದಲ್ಲಿ ಇವತ್ತು ಒಂದೂವರೆ ಲಕ್ಷ ಕ್ಯಾನ್ಸರ್ ಪೇಶೆಂಟ್ಸ್ ಇದ್ದಾರೆ ಎಂದು 1995ರಲ್ಲಿ ಬಂದಂತಹ ಮಾಹಿತಿ ಪ್ರಕಾರ ಗೊತ್ತಾಗಿದೆ. ಅದರಲ್ಲಿ ವಿಶೇಷವಾಗಿ 65 ಭಾಗ ಹಳ್ಳಿ ಗಾಡಿನಲ್ಲಿ ಈ ಒಂದು ಕ್ಯಾನ್ಸರ್ ರೋಗಿಗಳನ್ನು ಪತ್ತೆ ಹಚ್ಚಿದ್ದೇವೆ. ಆದರೆ ಒಂದು ದುರ್ದೈವ ಅಂದರೆ ಕ್ಯಾನ್ಸರ್ ಆಸ್ಪತ್ರೆಗಳು ಎಲ್ಲಾ ಮಹಾನಗರಗಳಲ್ಲಿ ಮಾತ್ರ ಇದೆ, ಜಿಲ್ಲಾ ಆಸ್ಪತ್ರೆಗಳಲ್ಲಿ ಇಂತಹ ಒಂದು ಸುಸಜ್ಜಿತವಾದ ಕ್ಯಾನ್ಸರ್ ತಪಾಸಣೆ ಕೇಂದ್ರ ಕೂಡ ಇಲ್ಲದೆ ಇರುವುದು ನೋಡಿದಾಗ ಇವತ್ತು ನಾವು ವಿಶ್ವಬ್ಯಾಂಕಿನ ಯೋಜನೆಯಲ್ಲಿ ಬರುವಂತಹ ಹಣವನ್ನು ನಾವು ಯಾವ ರೀತಿಯಲ್ಲಿ ಉಪಯೋಗ ಮಾಡಬೇಕು ಎನ್ನುವಂತಹ ವಿಚಾರವನ್ನು ಬಹಳ ದೀರ್ಘವಾಗಿ ಇಲಾಖೆಯವರು ಯೋಚನೆ ಮಾಡಬೇಕಾಗಿದೆ. ಇನ್ನೊಂದು ರಾಜ್ಯದಲ್ಲಿ ಪ್ರಮುಖವಾಗಿ ಇವತ್ತಿನ ಮಾಹಿತಿಯ ಪ್ರಕಾರ ಸುಮಾರು 9 ಲಕ್ಷ ಕ್ಷಯ ರೋಗಿಗಳಿದ್ದಾರೆ. ಅದರಲ್ಲಿ ಶೇಕಡ 25 ಭಾಗ ರೋಗಿಗಳು ರೋಗವನ್ನು ಬೇರೆಯವರಿಗೆ ಹರಡುವಂತಹ ಕೆಲಸವನ್ನು ಮಾಡುತ್ತಿ- ದ್ದಾರೆಂದು ವರ್ಲ್ಡ್ ಹೆಲ್ತ್ ಆರ್ಗನೈಸೇಷನ್‌ನವರು ಕೊಟ್ಟಂತಹ ಮಾಹಿತಿಯ ಪ್ರಕಾರ ಇದೆ. ನಮ್ಮ- ಲ್ಲಿರುವಂತಹ ಶೇಕಡ 25 ಭಾಗ ರೋಗಿಗಳು ರೋಗಗಳನ್ನು ಬೇರೆ ಕಡೆ ಹರಡುವಂತಹ ಕೆಲಸ ರಾಜ್ಯದಲ್ಲಿ ಆಗುತ್ತಿದೆ, ಎನ್ನುವಂತಹ ವಿಚಾರವನ್ನು ಕೇಳಿ ಇವತ್ತು ಆಘಾತ ಉಂಟಾಗುವಂತಹ ಪರಿಸ್ಥಿತಿ ಇದ್ದು ಇದರ ಬಗ್ಗೆ ಎಲ್ಲರೂ ಕೂಡ ಯೋಚನೆ ಮಾಡಬೇಕಾದ ಪರಿಸ್ಥಿತಿ ಇದೆ. ಇದರಲ್ಲಿ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಹೋಲಿಕೆ ಮಾಡಿಕೊಂಡಾಗ ಈ ರೋಗವನ್ನು ಹೆಚ್ಚಿಗೆ ಕಾಣು-

ವಂಥಾದ್ದು ಕರ್ನಾಟಕದಲ್ಲಿ. ಆದರೆ ಒಂದು ದುರ್ದೈವ ರಾಜ್ಯ ಸರ್ಕಾರ ಈ ಕ್ಷಯ ರೋಗವನ್ನು ನಿರ್ಮೂಲನೆ ಮಾಡಬೇಕೆಂದು ದೊಡ್ಡ ಕಾರ್ಯಕ್ರಮ ಹಾಕಿಕೊಂಡು ದೇಶಾದ್ಯಂತ ಅದರ ಸ್ಟ್ಯಾಂ-ಪ್ಸ್‌ನ್ನು ಮಾರುವಂತಹ ಕೆಲಸವನ್ನು ಕೂಡ ಅಧಿಕಾರಿಗಳಿಗೆ ಎಲ್ಲರಿಗೂ ಕೊಡಲಾಗಿತ್ತು. ಆದರೆ ನಮ್ಮ ರಾಜ್ಯ ಒಂದು ಏನು ವಿಕ್ರಮ ಸಾಧಿಸಿದೆ ಎಂದರೆ ಇಡೀ ದೇಶದಲ್ಲಿ ಸ್ಟ್ಯಾಂಪನ್ನು ಮಾರುವಂಥದ್ದರಲ್ಲಿ ಕರ್ನಾಟಕ ತುಂಬ ಕೊನೆಯ ಸಾಲಿನಲ್ಲಿದೆ. ಮುಖ್ಯವಾಗಿ ಕ್ಷಯ ರೋಗದ ಹರಡುವಿಕೆ ಅಥವ ಕ್ಷಯ ರೋಗ ಬರುವಂಥದ್ದು ಗ್ರಾಮೀಣ ಪ್ರದೇಶಗಳಿಂದ. ಆಹಾರದ ಸಮಸ್ಯೆಯಿಂದ ಮೊದಲನೆಯದಾಗಿ ಉಂಟಾಗುವಂತಹ ಈ ಸಮಸ್ಯೆ ಏನಿದೆ ಅದರ ಪರಿಹಾರಕ್ಕೆ ನಾವು ಏನು ಕ್ರಮ ಕೈಗೊಳ್ಳುತ್ತಿದ್ದೇವೆ ಎನ್ನುವುದರ ಬಗ್ಗೆ ಇವತ್ತು ಯೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ.

ಪ್ರಮುಖವಾಗಿ ರಾಜ್ಯದಲ್ಲಿ ಇಡೀ ದೇಶವನ್ನು ಹೋಲಿಕೆ ಮಾಡಿಕೊಂಡಾಗ ನಮ್ಮ ರಾಜ್ಯದಲ್ಲಿ ಅಲ್ಲದೆ ಹೋದರೂ ಇಡೀ ಪ್ರಪಂಚದಲ್ಲಿ ಎಲ್ಲರ ಮನಸ್ಸನ್ನು ಭಯಪಡಿಸುವಂತಹ ರೋಗ ಏಡ್ಸ್ ರೋಗ. ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ಇವತ್ತು 3,000 ಏಡ್ಸ್ ರೋಗಿಗಳಿದ್ದಾರೆ ಎನ್ನುವಂಥಾ-ದ್ದನ್ನು ಪತ್ತೆ ಹಚ್ಚಿದ್ದಾರೆ. 1985ನೇ ಇಸವಿಯಲ್ಲಿ ರಾಜ್ಯದಲ್ಲಿ ಮೊದಲನೆಯ ಏಡ್ಸ್ ರೋಗಿಯನ್ನು ಪತ್ತೆ ಮಾಡಿದ ದಿವಸದಿಂದ ಇವತ್ತಿನವರೆಗೆ ಏಡ್ಸ್ ರೋಗವನ್ನು ಪತ್ತೆ ಮಾಡುವಂತಹ ದಿಸೆಯಲ್ಲಿ ಕರ್ನಾಟಕ ಸರ್ಕಾರದಿಂದ ಯಾವ ಕ್ರಮ ನಾವು ಇವತ್ತು ಕೈಗೊಂಡಿದ್ದೇವೆ, ಎನ್ನುವಂತಹ ವಿಚಾರ-ವನ್ನು ನಾವು ಯೋಚನೆ ಮಾಡಬೇಕಾಗಿದೆ. ನಾವು ಮಾತನಾಡುವಂತಹ ಸಮಯದಲ್ಲಿ ಯಾವುದೇ ರೋಗಕ್ಕೆ ಮದ್ದಿಲ್ಲದೆ ಇರುವಂತಹ ಸಂದರ್ಭದಲ್ಲಿ ಒಂದು ವಿಚಾರ ಹೇಳುತ್ತೇನೆ. ಆದರೆ ಒಬ್ಬರು ಆರೋಗ್ಯ ಸಚಿವರಾಗಿ ಒಂದು ವಿಚಾರವನ್ನು ಹೇಳುವಂತಹ ಸಮಯದಲ್ಲಿ ನನಗೆ ಆಶ್ಚರ್ಯ-ವಾಯಿತು, ಭಯವಾಯಿತು. ಯಾವ ಏಡ್ಸ್ ರೋಗ ಅದು ಮದ್ದಿಲ್ಲದ ಮಾರಿ ನಮ್ಮ ರಾಜ್ಯಕ್ಕೆ ಒಂದು ದೊಡ್ಡ ಸಮಸ್ಯೆಯಾಗಿದೆ, ಇದಕ್ಕೆ ನಾವು ಯಾವ ರೀತಿಯಲ್ಲಿ ಅದನ್ನು ನಿವಾರಣೆ ಮಾಡು-ವುದು ಕಷ್ಟವಾಗುತ್ತದೆ ಎನ್ನುವ ಮಾತು ನಮ್ಮ ಆರೋಗ್ಯ ಸಚಿವರ ಬಾಯಿಯಿಂದ ನಾನು ಕೇಳಿದ್ದಕ್ಕೆ ನನಗೆ ನಿಜವಾಗಿಯೂ ಆಶ್ಚರ್ಯವಾಗುವಂತಹ ವಿಚಾರವಾಯಿತು. ಇವತ್ತು ರಾಜ್ಯದಲ್ಲಿ ವಿಶೇಷವಾಗಿ 3,000 ರೋಗಿಗಳನ್ನು ನಾವು ಪತ್ತೆ ಮಾಡಿದ್ದೇವೆ, ಇವರ ಪ್ರಕಾರ ಮೂರು ಲಕ್ಷ ಯಾವ ಏಡ್ಸ್ ಜನಗಳ ರಕ್ತದ ಪರೀಕ್ಷೆಯನ್ನು ಮಾಡಿದಾಗ ನಾವು ಕಂಡಿರುವಂಥದ್ದು 3,000 ರೋಗಿಗಳು. ಆದರೆ ರಾಜ್ಯದಲ್ಲಿ ಕೇವಲ ಮೂರು ಲಕ್ಷ ಜನ ಮಾತ್ರ ಇಲ್ಲ. ಆದರೆ ರಕ್ತವನ್ನು ಪರೀಕ್ಷೆ ಮಾಡುವಂತಹ ವಿಚಾರ ಬಂದಾಗ ಕೂಡ ನಾವು ಆರೋಗ್ಯ ಇಲಾಖೆಯಲ್ಲಿ ಆ ಒಂದು ದಿಸೆಯಲ್ಲಿ ನಾವು ಏನು ಕಾರ್ಯಕ್ರಮ ಕೈಗೊಂಡಿದ್ದೇವೆ ಎನ್ನುವಂತಹ ವಿಚಾರವನ್ನು ಪ್ರಮುಖವಾಗಿ ನಾವು ನೋಡ-ಬೇಕಾಗಿದೆ. ಕಾರಣ ವರ್ಲ್ಡ್ ಹೆಲ್ತ್ ಆರ್ಗನೈಸೇಷನ್ ನಿಯಮದ ಪ್ರಕಾರ ಪ್ರತಿ ರಕ್ತದ ದಾನಿಯನ್ನು ಏಡ್ಸ್ ಪರೀಕ್ಷೆಗೆ ಒಳಪಡಿಸಬೇಕಾಗುತ್ತದೆ. ಐದು ಜನ ಕ್ಷಯ ರೋಗಿಗಳಲ್ಲಿ ಒಬ್ಬರನ್ನು ನಾವು ಏಡ್ಸ್ ರೋಗದ ಬಗ್ಗೆ ಪಟ್ಟಿಯನ್ನು ಮಾಡುವಂತಹ ವಿಚಾರವಿದೆ. ಆದರೆ ಇವತ್ತು ಬ್ಲಡ್ ಬ್ಯಾಂಕಿನಲ್ಲಿ ಈ

ಏಡ್ಸ್ ಪರೀಕ್ಷೆಗೋಸ್ಕರವಾಗಿ ಒಂದು ಕಿಟ್‌ನ್ನು ತೆಗೆದುಕೊಳ್ಳಬೇಕಾದರೆ 250 ರೂಪಾಯಿಯ ಅವಶ್ಯಕತೆ ಇದೆ. ಬ್ಲಡ್ ಬ್ಯಾಂಕಿನಲ್ಲಿ ನಾವು ನೋಡುತ್ತಿದ್ದೇವೆ, 300 ರೂಪಾಯಿಗೆ ಒಂದು ಬಾಟ್ಲ್ ಬ್ಲಡ್ ನಾವು ಇವತ್ತು ತೆಗೆದುಕೊಳ್ಳುತ್ತೇವೆ. ಆದರೆ ಅದರ ಮೇಲೆ ಸ್ಪೆಸಿಫಿಕ್ಕಾಗಿ ಬರೆದಿರುತ್ತಾರೆ. ಏಡ್ಸ್ ಬಗ್ಗೆ ನಾವು ಈಗಾಗಲೇ ಪರೀಕ್ಷೆ ಮಾಡಿದ್ದೇವೆ ಎಂದು, ಆದರೆ ಪ್ರಾಕ್ಟಿಕಲ್ಲಾಗಿ ಎಷ್ಟು ಆಗಿದೆ ಎಂಬ ಬಗ್ಗೆ ನಾವು ಅದರ ವಿವರಣೆಗೆ ಹೋದಾಗ ನಮಗೆ ಅನಿಸುತ್ತದೆ, ಇವತ್ತು ವಿಶೇಷವಾಗಿ ಈ ಏಡ್ಸ್ ರೋಗದ ಬಗ್ಗೆ ನಾವು ರಾಜ್ಯದಲ್ಲಿ ಒಂದು ಆಂದೋಲನದ ಅವಶ್ಯಕತೆ ಇದೆ. ಈ ಒಂದು ತುರ್ತು ಕಾರ್ಯ-ಕ್ರಮಕ್ಕೆ ನಾವು ಪ್ರಾಮಾಣಿಕವಾಗಿ ಏಡ್ಸ ಟೆಸ್ಟನಲ್ಲಿ ನಾವು ವಿಶೇಷವಾಗಿ ಗಮನ ಕೊಡಬೇಕು ಎನ್ನುವಂಥಾದ್ದು ಪ್ರಮುಖವಾದ ವಿಚಾರ.

ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ನಾವು ಇವತ್ತು ಕಾಣುವಂಥಾದ್ದು ಅದು ಸ್ಲಂಗಳಲ್ಲಿ ಕಾಣು-ವಂಥದ್ದು ಎಂದರೆ ಹುಚ್ಚು ನಾಯಿ ಕಡಿತದಲ್ಲಿ ವಿಶ್ವದಲ್ಲಿ ಒಟ್ಟು 70,000 ರೋಗಿಗಳಲ್ಲಿ 30,000 ಜನ ನಮ್ಮ ದೇಶದವರೇ. ಅದರಲ್ಲಿ 1,500 ಜನ ನಾಯಿ ಕಡಿತಕ್ಕೆ ಒಳಗಾದವರು ನಮ್ಮ ರಾಜ್ಯದಲ್ಲಿ ಇರುವುದನ್ನು ನಾವು ದಾಖಲಾತಿಯಿಂದ ನೋಡುತ್ತಿದ್ದೇವೆ, ಆದರೆ ಒಂದು ದುರ್ದೈವ ಎಂದರೆ ಇದು ಗ್ರಾಮೀಣದಲ್ಲಿ ವಿಶೇಷವಾಗಿ ಸ್ಲಂಗಳಲ್ಲಿ ಹೆಚ್ಚು ಈ ರೋಗಿಗಳನ್ನು ಕಾಣುತ್ತೇವೆ. ಮತ್ತೆ ಆಸ್ಪತ್ರೆಗಳಲ್ಲಿ ಇವತ್ತು ನಾವು ಹೋದಾಗ ಯಾವುದೇ ಸರ್ಕಾರಿ ಆಸ್ಪತ್ರೆ ಇರಬಹುದು ಅದರಲ್ಲಿ ಒಬ್ಬ ಬಡವ ನಾಯಿ ಕಚ್ಚಿದ ಒಂದು ಪ್ರಕರಣದಲ್ಲಿ ಹೋದವರು ಇವತ್ತು ರೇಬಿಸ್ ಇಮ್ಯುನೈಸೇಷನ್ ಗ್ಲೋಟಿನ್ ಇಂಜ-ಕ್ಷನ್‌ಗಳನ್ನು ನಾವು ಎಲ್ಲೂ ಕಾಣುವುದಕ್ಕೆ ಸಾಧ್ಯವಿಲ್ಲ. ಅದು ಹಣ ಇದ್ದವರು ವಿಶೇಷವಾಗಿ ಹೊರಗಡೆ ತೆಗೆದುಕೊಂಡು ಬಂದು 300-400 ರೂ.ಗಳು ತೆತ್ತು ಇಂಜಕ್ಷನ್ ತೆಗೆದುಕೊಳ್ಳುವಂತಹ ಕೆಲಸ ಆಗಿದೆ. ಆದರೆ ಇಂತಹ ಔಷಧಿಗಳು ದೊರೆಯದೆ ಆಸ್ಪತ್ರೆಗಳಲ್ಲಿ ಇಲ್ಲದೆ ಇರುವುದನ್ನು ನಾವು ನೋಡಿದಾಗ ನಮಗೆ ಅನಿಸುತ್ತದೆ, ಹೇಗೆ ನಾವು 2,000 ಇಸವಿ ವೇಳೆಗೆ ಸರ್ವರಿಗೂ ಆರೋಗ್ಯವನ್ನು ಕೊಡುವಂತಹ ದಿಸೆಯಲ್ಲಿ ನಮ್ಮ ಕಾರ್ಯಕ್ರಮವನ್ನು ಮಾಡುವುದಕ್ಕೆ ಸಾಧ್ಯ ಇದೆ ಎನ್ನುವಂಥದ್ದು ನಾವು ಯೋಚನೆ ಮಾಡಬೇಕಾಗಿದೆ. ವಿಶೇಷವಾಗಿ ನಮ್ಮಲ್ಲಿ ಈ ಒಂದು ಅಂಧತ್ವ ನಿವಾರಣೆ ವಿಚಾರ ಏನಿದೆ, 100 ಪರ್ಸೆಂಟ್ ಸೆಂಟ್ರಲ್ ಗವರ್ನ್‌ಮೆಂಟ್ ಸ್ಕೀಮ್ ಇದು. ಏನೇ ಹಣವನ್ನು ನಾವು ಖರ್ಚು ಮಾಡಿದರೂ ಕೂಡ ರಾಜ್ಯದ ಹಣ ಖರ್ಚಾಗದೆ ಕೇಂದ್ರದ ಹಣವನ್ನು ಉಪಯೋಗಿಸಿ-ಕೊಂಡು ಮಾಡಬೇಕಾದಂತಹ ಒಂದು ಅಂಧತ್ವ ನಿವಾರಣೆ ಬಗ್ಗೆ ಏನು ಕಾರ್ಯಕ್ರಮ ಇದೆ ಇದರಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಒಂದು ಮಾಹಿತಿಯ ಪ್ರಕಾರ ಕಣ್ಣಿನ ರೋಗಿಗಳು ಎಷ್ಟು ಜನ ಇದ್ದಾರೆ ಅಷ್ಟೇ ವೈದ್ಯರೂ ಕೂಡ ಇದ್ದಾರೆ. ಆದರೆ ಅವರ ಉಪಯೋಗವನ್ನು ನಾವು ಪಡೆ-ಯಲು ಆಗದೇ ಇರುವ ಪರಿಸ್ಥಿತಿ ಬಂದಿದೆ. ಒಂದು ದಿವಸಕ್ಕೆ ಒಬ್ಬ ವೈದ್ಯ ಇಬ್ಬರನ್ನು ಅಪರೇಟ್ ಮಾಡಿದರೂ ಕೂಡ ಅಂಧತ್ವವನ್ನು ನಿವಾರಣೆ ಮಾಡಬಹುದು ಎನ್ನುವ ಸರ್ವೆ ರಿಪೋರ್ಟ್ ಕೂಡ ಬಂದಿವೆ. ಆದರೆ ನಮ್ಮಲ್ಲಿ ಆಗಿರುವಂಥ ವಿಚಾರವನ್ನು ನೋಡಿದಾಗ 1992ನೇ ಇಸ್ವಿ-

ಯಲ್ಲಿ ಶೇಕಡ 26ರಷ್ಟು, 1993ನೇ ಇಸ್ವಿಯಲ್ಲಿ ಶೇಕಡಾ 29ರಷ್ಟು, 1994ನೇ ಇಸ್ವಿಯಲ್ಲಿ ಶೇಕಡಾ 25ರಷ್ಟು, 1995ನೇ ಇಸ್ವಿಯಲ್ಲಿ ಶೇಕಡಾ 20ರಷ್ಟು ನಾವು ಸಾಧನೆ ಮಾಡಿರುವಂಥದ್ದು. ಈ ಸಾಧನೆ ಮಾಡಿರುವಂಥ ರೀತಿ ನೋಡಿದಾಗ ಯಾವುದೇ ಕಾರಣಕ್ಕೆ ನಾವು ದಿನೇ ದಿನೇ ನಮ್ಮ ಹಣವನ್ನು ಖರ್ಚು ಮಾಡಿದರೂ ಕೂಡ ಆ ಒಂದು ದಿಸೆಯಲ್ಲಿ ನಮ್ಮ ಅಚೀವ್‌ಮೆಂಟ್ ಏನು ಎಂದು ಯೋಚನೆ ಮಾಡತಕ್ಕಂಥ ಪರಿಸ್ಥಿತಿ ಇವೊತ್ತು ಬಂದಿದೆ. ಜೊತೆಗೆ ರಾಷ್ಟ್ರೀಯ ಕುಷ್ಟರೋಗ ನಿವಾರಣಾ ಕಾರ್ಯಕ್ರಮದಲ್ಲೂ ಕೂಡ ನಮ್ಮಲ್ಲಿ ಇರುವಂಥ ವರ್ಲ್ಡ್ ಹೆಲ್ತ್ ಆರ್ಗನೈಸೇಷನ್ ಪ್ರೋಗ್ರಾಮ್‌ನಲ್ಲಿ ಎರಡು ಸಾವಿರ ಇಸ್ವಿಯೊಳಗೆ ಹತ್ತು ಸಾವಿರ ಜನಗಳಲ್ಲಿ ಕೇವಲ ಒಬ್ಬ ರೋಗಿ ಮಾತ್ರ ಇರಬಹುದು, ಆ ಒಂದು ಮಟ್ಟಕ್ಕೆ ನಾವು ತರಬೇಕು ಎನ್ನುವಂಥದ್ದೇನಿದೆ ಆದರಲ್ಲಿ ನಾವು ಎಷ್ಟರಮಟ್ಟಿಗೆ ಸಕ್ಸೆಸ್ ಆಗಬಹುದು ಎನ್ನುವಂಥ ವಿಚಾರವನ್ನು ಕೂಡ ನಾವು ಇವೊತ್ತು ಯೋಚನೆ ಮಾಡಬೇಕಾಗಿದೆ. ವಿಶೇಷವಾಗಿ ನಮ್ಮ ಅಂದಿನ ಮುಖ್ಯಮಂತ್ರಿಗಳು ಇಂದಿನ ಪ್ರಧಾನಮಂತ್ರಿಗಳು ಒಂದು ಒಳ್ಳೆಯ ವಿಚಾರವನ್ನು ಹೇಳಿದರು, ನಗರ ಪ್ರದೇಶಗಳಲ್ಲಿ ಇರುವಂಥ ಒಬ್ಬ ವ್ಯಕ್ತಿ ಯಾವುದೇ ಒಂದು ರೋಗ ಬಂದರೂ ಸಹಿತ ಹಣವನ್ನು ತೆತ್ತಾದರೂ ಕೂಡ ಸೌಲಭ್ಯಗಳನ್ನು ಉಪಯೋಗಿಸಿ-ಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಗ್ರಾಮೀಣ ಪ್ರದೇಶದಲ್ಲಿನ ವ್ಯಕ್ತಿ ಇವತ್ತು ಅಂತಹ ಒಂದು ಸೌಲಭ್ಯದಿಂದ ವಂಚಿತನಾಗಿದ್ದಾನೆ. ಆ ಒಂದು ದೃಷ್ಟಿಯಿಂದ ಬಡವರಿಗೋಸ್ಕರ ಹೈಟೆಕ್ ಆಸ್ಪತ್ರೆ-ಗಳನ್ನು 1995ನೇ ಇಸ್ವಿಯಿಂದ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಆದರೆ ಈ ಸಲದ ಬಡ್ಜೆ-ಟ್‌ನ್ನು ನಾವು ನೋಡಿದರೆ ಅದು ನಮಗೆ ಕಾಣಿಸುತ್ತಿಲ್ಲ.

ಜೊತೆಗೆ ಈಗಾಗಲೇ ನೂರು ಕೋಟಿ ರೂಪಾಯಿಗಳ ಒಂದು ನಿಧಿಯ ಬಗ್ಗೆ ಈಗಾಗಲೇ ಸದನದಲ್ಲಿ ವಿಚಾರ ಬಂದಿದೆ. ಆದರೆ ಅಲ್ಲಿ ಹೇಳುವಾಗ ಒಂದು ವಿಚಾರವನ್ನು ಹೇಳಿದರು. ಈಗಾಗಲೇ ಕೇಂದ್ರ ಸರ್ಕಾರದಿಂದ ನಮಗೆ 80 "ಜಿ"ನಲ್ಲಿ ಎಕ್ಸಂಪಷನ್ ಸಿಕ್ಕಿದೆ ಎಂದು - ನಮ್ಮ ರಾಜ್ಯ ಸರ್ಕಾರ ಈಗಾಗಲೇ ಹತ್ತು ಕೋಟಿ ರೂಪಾಯಿ ತೆಗೆದು ಇಟ್ಟಿದೆ ಎನ್ನುವಂಥ ವಿಚಾರ ಇದೆ. ಆದರ ಬಗ್ಗೆ ಕೂಡ ಹೆಚ್ಚಿನ ಒಂದು ಕೆಲಸ ಆಗಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಾವು ಶಾಸಕರಾಗಿ ಬಂದಾಗ ಜನಸಾಮಾನ್ಯರ ಮಧ್ಯೆ ಹೇಗೆ ಇರಬೇಕು ಎನ್ನುವ ವಿಚಾರವನ್ನು ಹೇಳುತ್ತಾ ನಾವು ಕೇವಲ ಜನಸಾಮಾನ್ಯರಿಗೆ ರಕ್ತವನ್ನು ಕೊಡಿ ಎಂದು ಹೇಳಿದ್ದಷ್ಟೇ ಅಲ್ಲದೇನೇ ರಕ್ತ ದಾನಿಗಳಾಗಿ ಪ್ರಾಣವನ್ನು ಉಳಿಸಬೇಕು ಎನ್ನುವಂಥ ದೃಷ್ಟಿಯನ್ನು ಇಟ್ಟುಕೊಳ್ಳಬೇಕು. ಅವೊತ್ತು ರಕ್ತವನ್ನು ಕೊಡಲಿಕ್ಕೆ ಎಲ್ಲಾ ಶಾಸಕರನ್ನು ಬರಲಿಕ್ಕೆ ಹೇಳಿದಿರಿ –– ಆದರೆ ಅವೊತ್ತಿನ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಲಿಲ್ಲ. ಉದ್ದೇಶಪೂರ್ವಕವಾಗಿ ನಾನು ಭಾಗವಹಿಸಲಿಲ್ಲ ಏಕೆಂದರೆ ನನ್ನ ಮನಸ್ಸಿಗೆ ನೋವಾಗಿತ್ತು. ಸುಮಾರು ನಾಲ್ಕೈದು ಇನ್ಸಿಡೆಂಟ್‌ಗಳನ್ನು ನೋಡಿದ್ದ ಕಾರಣ ಅವೊತ್ತಿನ ಕಾರ್ಯಕ್ರಮದಲ್ಲಿ ಭಾಗವಹಿಸಲಾಗಲಿಲ್ಲ. ಕಳೆದ ವರ್ಷ ಸರ್ಕಾರಿ ಆಸ್ಪತ್ರೆಯಲ್ಲಿ ಬಂದಂಥ ರಕ್ತದ ಪರಿಸ್ಥಿತಿ ಏನು ಎಂಬುದರ ಅರಿವು ನನಗೆ ಇತ್ತು. ಆ ವಿಚಾರಕ್ಕೆ ನಾವು ಬಂದಾಗ, ರಕ್ತ ನಿಧಿಗಳ ಬಗ್ಗೆ

ನಾವು ಯೋಚನೆ ಮಾಡಿದಾಗ ರಾಜ್ಯದಲ್ಲಿಯ ಶೇಕಡಾ 90 ಭಾಗ ರಕ್ತ ನಿಧಿಗಳಲ್ಲಿ ಯಾವುದೇ ಪರೀಕ್ಷೆಗೆ ಒಳಪಡಿಸದೇ ರಕ್ತವನ್ನು ಕೊಡುವಂಥ ಮಾಹಿತಿ -- ಇವೊತ್ತು ನಮ್ಮಲ್ಲಿ ಬಂದಿದೆ. ಶೇಕಡಾ ಹತ್ತು ಭಾಗ ಮಾತ್ರ ನಮ್ಮಲ್ಲಿ ರಕ್ತ ಶೇಖರಣಾ ನಿಧಿಗಳು ಇವೆ ಎಂದರೆ ಆಶ್ಚರ್ಯ. ಆ ಬ್ಲಡ್ ಬ್ಯಾಂಕ್‌ನಲ್ಲಿ ಇವೊತ್ತು ಪ್ರಾಮುಖ್ಯವಾಗಿ ವರ್ಲ್ಡ್ ಹೆಲ್ತ್ 'ಆರ್ಗನೈಸೇಷನ್ ಪ್ರಕಾರ ಮಲೇರಿಯಾ ಟೆಸ್ಟ್, ಹಿಪಟೈಟೀಸ್, ವಿ.ಡಿ.ವಿ.ಡಿ. ಆರ್.ಎಲ್. ಮತ್ತು ಎಲಿಸಾ ಟೆಸ್ಟ್ ಅಂದರೆ ಏಡ್ಸ್ ಟೆಸ್ಟ್ ಇದು ಕಂಪಲ್‌ಸರಿ ಎಂದು ಹೇಳಿದೆ'. ಆದರೆ ಇವೊತ್ತು ಯಾವುದೇ ಸರ್ಕಾರಿ ಆಸ್ಪತ್ರೆಗಳಲ್ಲೂ ಸಹ ಇಂಥ ಟೆಸ್ಟ್‌ಗಳನ್ನು ಮಾಡುವ ಯಾವ ಸೌಲಭ್ಯಗಳು ಇವೆ ಎನ್ನುವಂಥದ್ದನ್ನು ನಾವು ಒಂದು ಸಲ ನೋಡಿ-ದರೆ ಭಯ ಆಗುತ್ತದೆ. ಜೊತೆಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಇವೊತ್ತು ನಾವು ರಕ್ತವನ್ನು ಕೊಡುವಂಥ, ಶೇಖರಣೆ ಮಾಡುವಂಥ ರೀತಿ ನೋಡಿದರೂ ಕೂಡ ಭಯ ಆಗುತ್ತದೆ. ಮೈಸೂರಿನಲ್ಲಿ ಸುಮಾರು ಎಂಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಬ್ಲಡ್ ಬ್ಯಾಂಕನ್ನು ತೆಗೆದಿದ್ದಾರೆ. ಸನ್ಮಾನ್ಯ ಸಚಿ- ವರು ಮೈಸೂರು ಆಸ್ಪತ್ರೆಗೆ ಭೇಟಿ ಕೊಟ್ಟಾಗ ಆ ಬ್ಲಡ್ ಬ್ಯಾಂಕಿಗೆ ಭೇಟಿ ಕೊಡಲಿಲ್ಲ ಎನ್ನುವ ವಿಚಾರ ನನಗೆ ಗೊತ್ತಾಯಿತು. ಆದರೆ ನಾನು ಭೇಟಿ ಕೊಟ್ಟಂಥ ಸಮಯದಲ್ಲಿ ಆ ಆಸ್ಪತ್ರೆಯಲ್ಲಿ ಸುಮಾರು ನಲವತ್ತೈದು ಬಾಟಲ್ ಬ್ಲಡ್ ಐದು ತಿಂಗಳ ಹಿಂದೆ ತೆಗೆದು ಶೇಖರಣೆ ಮಾಡಿ ಇಟ್ಟಿದ್ದನ್ನು ನಾನು ನೋಡಿದ್ದೇನೆ. ಆ ವಿಚಾರದಲ್ಲಿ ಅಲ್ಲಿದ್ದಂಥ ಸೂಪರಿಂಟೆಂಡೆಂಟ್‌ರವರನ್ನು ಕರೆದು ಕೇಳಿದಾಗ, ಸಂಬಂಧಪಟ್ಟ ಯೂನಿಟ್ ಡಾಕ್ಟರನ್ನು ಕರೆದು ಕೇಳಿದಾಗ, ಮಾಹಿತಿ ತರಿಸಿದಾಗ ಆಗ ಒಂದು ಕೇಸ್ ಶೀಟ್‌ನಲ್ಲಿ ಬ್ಲಡ್ ಕೊಡಲಾಯಿತು ಎಂದು ಇದೆ. ಜೊತೆಗೆ ಆ ಶೀಟ್‌ನಲ್ಲಿ ಎರಡು ಕೇಸ್‌ನಲ್ಲಿ ಬ್ಲಡ್ ಕೊಡುವಂಥ ಸಮಯದಲ್ಲಿ ರೀಯಾಕ್ಷನ್ ಆಗಿ ಇಬ್ಬರು ಬಾಣಂತಿಯರು ಸತ್ತಿರುವ ಇನ್ಸಿಡೆಂಟ್ ನಾವು ಕೋಟ್ ಮಾಡುವಂಥ ಪರಿಸ್ಥಿತಿ ಬಂತು. ಸನ್ಮಾನ್ಯ ಅಧ್ಯಕ್ಷರೇ, ಏಕೆ ಈ ನೋವಿನಿಂದ ಮಾತನ್ನು ಹೇಳುತ್ತಿದ್ದೇನೆಂದರೆ ಹತ್ತಾರು ಬಾಟಲ್ ಬ್ಲಡ್‌ನ್ನು ಇವೊತ್ತಿನ ದಿವಸ ತಾವು ಶೇಖರಣೆ ಮಾಡಿ ಜನಸಾಮಾನ್ಯರಿಗೆ ಕೊಡುತ್ತಿದ್ದೇವೆ ಎನ್ನುವ ಒಂದು ದೊಡ್ಡ ವಿಚಾರವನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳುತ್ತಿದ್ದೇವೆ, ಆದರೆ ಬ್ಲಡ್ ಬ್ಯಾಂಕ್‌ಗಳನ್ನು ನೋಡಿದಾಗ ಅಲ್ಲಿ ಬ್ಲಡ್ ಸುರಿಯುವಂಥ-ದ್ದನ್ನು ನೋಡಿದಾಗ ನನ್ನ ಮನಸ್ಸಿಗೆಷ್ಟು ನೋವಾಗಿದೆ ಎಂದರೆ ಹೇಳಲು ಸಾಧ್ಯವಿಲ್ಲ. ಆ ವಿಚಾರದಲ್ಲಿ ಹೇಳಬೇಕೆಂದರೆ ಬ್ಲಡ್ ಯಾವ ಆಸ್ಪತ್ರೆಯಿಂದ ಬಂದಿದೆ? ಎಷ್ಟು ತಿಂಗಳಾಗಿದೆ? ಯಾರು ಆ ಬ್ಲಡ್ ಅನ್ನು ಕೊಟ್ಟಿದ್ದಾರೆ ಎಂದು ಸರ್ಟಿಫಿಕೇಟ್ ಸಮೇತ ಅದರ ಮೇಲೆ ಅಂಟಿಸದೇ ಇರುವುದು ನನ್ನ ಮನಸ್ಸಿಗೆ ನೋವಾಗುವ ವಿಚಾರವಾಗಿದೆ. ಇವೊತ್ತು ಎಂತಹ ಪರಿಸ್ಥಿತಿ ಬಂದಿದೆ ಎಂದರೆ ಒಂದು ಬಾಟಲಿಗೆ ಮುನ್ನೂರು ರೂಪಾಯಿಗಳನ್ನು ಕೊಟ್ಟು ಒಂದು ಪೇಷಂಟ್‌ಗೆ ಬ್ಲಡ್ ಅನ್ನು ತರಿಸಿದ್ದಾರೆ ಆದರೆ ಅದನ್ನು ಅವರಿಗೆ ಕೊಡಲಿಲ್ಲ. ಏಕೆ ಕೊಡಲಿಲ್ಲ ಎಂದು ಕೇಳಿದರೆ ಒಂದು ಬಾಟಲ್ ಬ್ಲಡ್ ಕೊಡಬೇಕಾದರೆ ಮೂರರಿಂದ ನಾಲ್ಕು ಗಂಟೆಗಳ ಕಾಲ ಒಬ್ಬ ವೈದ್ಯರು ಅವರನ್ನು ಕಾಯ್ದುಕೊಂಡು ಕೂಡಬೇಕಾಗುತ್ತದೆ ಆದ್ದರಿಂದ ಆಗುವುದಿಲ್ಲ, ಎನ್ನುವಂಥ ಮಾತನ್ನು ಕೇಳಿ ಬಹಳ ನೋವಾಯಿತು.

ಇನ್ನೊಂದು ವಿಷಯ ಇದೆ, ಅದು ಸಚಿವರಿಗೆ ಗೊತ್ತಾದ ಮೇಲೆ ಕ್ಲೋಸ್ ಮಾಡಿದ್ದಾರೆ; ಎಂದು ಕಾಣುತ್ತದೆ. ಮೈಸೂರಿನ ಬ್ಲಡ್ ಬ್ಯಾಂಕಿನಲ್ಲಿ ಏಡ್ಸ್ ಸೋಂಕು ಇರುವಂಥ ವ್ಯಕ್ತಿಗಳೂ ಕೂಡ ಯಾವುದೇ ನಿಯಮ ಇಲ್ಲದೇನೇ ತಮ್ಮ ಬ್ಲಡ್‌ಅನ್ನು ಐವತ್ತು ರೂಪಾಯಿಗಳವರೆಗೆ ಮಾರಿಕೊಳ್ಳುತ್ತಿ-ದ್ದಾರೆ. ದಿನಾಲೂ ನಲವತ್ತು ಐವತ್ತು ಜನ ಕ್ಯೂ ನಿಂತು ಬ್ಲಡ್ಡನ್ನು ಕೊಟ್ಟು ಹೋಗುವಂಥದ್ದು ಎಲ್ಲಾ ಕಡೆ ಇತ್ತು. ಅದರ ಬಗ್ಗೆ ಒಂದು ಕಂಪ್ಲೇಂಟ್ ಮಾಡಿದ್ದೇವೆ. ಈಗ ಒಂದು ವಾರದಲ್ಲಿ ಆ ಬ್ಲಡ್ ಬ್ಯಾಂಕನ್ನು ಕ್ಲೋಸ್ ಮಾಡಿದ್ದಾರೆ. ಅಂದರೆ ಅದರ ಅರ್ಥ ಇವೊತ್ತು ಬ್ಲಡ್ ಬ್ಯಾಂಕಿನಲ್ಲಿ ಬ್ಲಡ್‌ಅನ್ನು ಕೊಂಡುಕೊಂಡು ಇವೊತ್ತು ರೋಗಿಗಳಿಗೆ ಕೊಡುವಂಥ ಆ ಒಂದು ವಿಚಾರದಲ್ಲಿ ರೋಗವನ್ನು ನಾವೇ ಹರಡಿಸುವಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಮುಖವಾಗಿ ಇದರಲ್ಲಿ ಯಾವ ಡೇಟಿನಲ್ಲಿ ಈ ಬ್ಲಡ್‌ಅನ್ನು ತೆಗೆದುಕೊಳ್ಳಲಾಗಿದೆ, ಯಾವ ಡೇಟ್‌ವರೆಗೆ ಸ್ಟೋರ್ ಮಾಡಿದ್ದಾರೆ ಎಂಬುದನ್ನು ಗಮ-ನಿಸಬೇಕು. ಜೊತೆಗೆ ನಾನು ಹೋದಾಗ ನಲವತ್ತೈದು ಬಾಟಲ್‌ಗಳನ್ನು ಇಟ್ಟಿರುವ ಬಗ್ಗೆ ಫೋಟೋ-ಗಳನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ.

(ಫೋಟೋಗಳು ಹಾಗೂ ಬ್ಲಡ್ ಬಾಟಲನ್ನು ಮಾನ್ಯ ಸಚಿವರಿಗೆ ಅಧ್ಯಕ್ಷರ ಮುಖಾಂತರ ಕಳುಹಿಸಿಕೊಡಲಾಯಿತು)

ಪ್ರಮುಖವಾಗಿ ಸನ್ಮಾನ್ಯ ಸಚಿವರಲ್ಲಿ ಒಂದು ವಿಚಾರವನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬ್ಲಡ್ ಬ್ಯಾಂಕಿನಿಂದ ಬ್ಲಡ್ಡನ್ನು ತಂದು ಇವೊತ್ತು ಕೊಡುವಂಥ ಸಮಯದಲ್ಲಿ ಒಂದು ಯೂನಿಟ್ ಬ್ಲಡ್-ಅನ್ನು ಯಾವುದೇ ರೋಗಿಗೆ ಕೊಟ್ಟರೆ ಅದರ ಉಪಯೋಗ ಆಗಿಲ್ಲ ಎಂದು ಎಷ್ಟೋ ರಿಪೋರ್ಟ್ಸ್ ಕೂಡ ಬಂದಿವೆ. ಆದರೆ ಇವತ್ತು ದೊಡ್ಡ ಹೈಟೆಕ್ ಆಸ್ಪತ್ರೆಗಳು ಏನು ಇವೆ ಅಲ್ಲಿ ಕೂಡ ಒಂದು ಯೂನಿಟ್ ರಕ್ತವನ್ನು ಕೊಡುತ್ತಿದ್ದಾರೆಯೇ ಹೊರತು ಅದನ್ನು ವಿಭಾಗವನ್ನಾಗಿ ಮಾಡಿ ಬ್ಲಡ್‌ಅನ್ನು ಕೊಡುವ ಪದ್ಧತಿ ಜಾರಿಯಲ್ಲಿ ಇಲ್ಲ. ದಯಮಾಡಿ ಒಂದು ಯೂನಿಟ್ ರಕ್ತವನ್ನು ಕೊಡುವ ಬದಲು, ಆ ಬ್ಲಡ್ಡನ್ನು ವಿಭಾಗ ಮಾಡಿ ಕೊಡುವಂಥ ಕೆಲಸವಾಗಬೇಕು ಎನ್ನುವ ಪ್ರಮುಖವಾದಂಥ ವಿಚಾರ-ವನ್ನು ಹೇಳುತ್ತೇನೆ.

ಜೊತೆಗೆ ಈ ಬ್ಲಡ್ ಬ್ಯಾಂಕುಗಳ ಮೇಲೆ ಸರ್ಕಾರದಿಂದ ಯಾವುದೇ ನಿಯಂತ್ರಣ ಇಲ್ಲ. ಖಾಸಗೀ ಬ್ಲಡ್ ಬ್ಯಾಂಕ್‌ಗಳಲ್ಲಿ ಯಾವ ಬ್ಲಡ್ಡನ್ನು ತೆಗೆದುಕೊಳ್ಳುತ್ತಾರೆ, ಅದರಲ್ಲಿ ಏಡ್ಸ್ ಟೆಸ್ಟ್ ಅಥವಾ ಇನ್ನಾವುದೇ ಟೆಸ್ಟ್ ಮಾಡಿದ್ದರ ಬಗ್ಗೆ ಅದರ ಮೇಲೆ ಸರ್ಟಿಫಿಕೇಟ್ ಇಲ್ಲದೇನೇ ಇವೊತ್ತು ಹೊರಗಡೆ ಬ್ಲಡ್‌ಅನ್ನು ಕೊಡುವ ಪದ್ಧತಿ ಇದೆ. ದಯಮಾಡಿ ಆ ಬ್ಲಡ್ ಬ್ಯಾಂಕಿನ ಬಗ್ಗೆ ಒಂದು ನಿಯಂತ್ರಣ ಮಾಡುವಂಥ ಕಾನೂನು ಇವೊತ್ತು ಅವಶ್ಯಕವಿದೆ ಎನ್ನುವಂಥ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಆರೋಗ್ಯ ಇಲಾಖೆಯೆಂದರೆ ತಕ್ಷಣ ಸಮೃದ್ಧಿಯಾದಂಥ ಒಂದು ಇಲಾಖೆ ಎನ್ನುವ ವಿಚಾರ ಕಣ್ಣಿಗೆ ಕಾಣಿಸುತ್ತದೆ. ಕಾರಣವೇನೆಂದರೆ ಇವೊತ್ತು ರಾಜ್ಯದಲ್ಲಿ ಮೂರು ಲಾಬಿಗಳನ್ನು

ನಾವು ಕಾಣುತ್ತೇವೆ. ಪ್ರಮುಖವಾದಂಥ ಲಾಬಿ ಎಂದರೆ ಲಿಕ್ಕರ್ ಲಾಬಿ. ಲಿಕ್ಕರ್ ಲಾಬಿ ನಂತರ ಎರಡನೇಯದು, ಅದನ್ನು ಮೀರಿಸುವ ಲಾಬಿ ಎಂದರೆ ವೈದ್ಯಕೀಯ ಲಾಬಿ. ಇವೊತ್ತು ಮೆಡಿಕಲ್ ಲಾಬಿ, ಏನು ಇದೆ ಅದು ಲಿಕ್ಕರ್ ಲಾಬಿ ಮತ್ತು ಬೇರೆ **ಬೇರೆ** ಯಾವ ಯಾವ ಲಾಬಿಗಳು ಇವೆ ಅವೆಲ್ಲವನ್ನು ಮೀರಿಸಿ ನಡೆಯುವಂಥ ಒಂದು ಪ್ರಸಂಗ ಇವೊತ್ತು ಬಂದಿದೆ. ಇದರಲ್ಲಿ ವಿಶೇಷವಾಗಿ ನಮಗೆ ಕಾಣುವಂಥದ್ದು ಔಷಧ ನಿಯಂತ್ರಣ ಇಲಾಖೆ, ಡ್ರಗ್ಸ್ ಕಂಟ್ರೋಲ್, ಇವೊತ್ತು ಅದರ ರಿಪೋರ್ಟ್ ನೋಡಿದಾಗ ನಮಗೆ ಬಹಳ ಸಂತೋಷವಾಗುತ್ತದೆ. ಡ್ರಗ್ ಕಂಟ್ರೋಲಿನಲ್ಲಿ ಇರುವಂಥ ವ್ಯವಸ್ಥೆ, ಆಡಳಿತ ವ್ಯವಸ್ಥೆ ಇವನ್ನೆಲ್ಲಾ ನೋಡಿದಾಗ ಬಹಳ ಸಂತೋಷವಾಗುತ್ತದೆ. ಆದರೆ ಇಂಥ ಒಂದು ಅಧಿಕಾರ ಇಟ್ಟುಕೊಂಡು ಇವೊತ್ತು ನಿಮ್ಮ ಅಚೀವ್‌ಮೆಂಟ್ ಇವೆಲ್ಲವನ್ನು ನೋಡಿದಾಗ, ಅಚೀವ್‌ಮೆಂಟ್ ಸರಿಯಾಗಿಲ್ಲ. ನನಗನಿಸುತ್ತದೆ ಯಾವುದೇ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನ್ನು ಉಳಿದ ಡಿಪಾರ್ಟ್‌ಮೆಂಟ್‌ಗಳಿಗೆ ಹೋಲಿಸಿದರೆ ಯಾವುದೇ ರೀತಿಯ ಅಚೀವ್‌ಮೆಂಟ್‌ನ್ನು ಮಾಡುತ್ತಿಲ್ಲ. ಇಂತಹ ಅನೇಕ ನಿದರ್ಶನಗಳು ನಮ್ಮ ಮುಂದೆ ಇವೆ. ಪ್ರಮುಖವಾಗಿ ವಿಶ್ವದಲ್ಲಿ ಮಾರಾಟವಾಗುವಂಥ ಡ್ರಗ್ಸ್‌ನ್ನು ನಾವು ನೋಡಿಕೊಂಡು ಬಂದಾಗ ವಿಶೇಷವಾಗಿ ಅಮೇರಿಕಾ ದೇಶದಲ್ಲಿ ಹತ್ತು ದಶ ಕೋಟಿ ಡಾಲರಿನ ಔಷಧಿ ಉತ್ಪತ್ತಿಯಾಗುತ್ತಿದ್ದರೆ, 11 ದಶಕೋಟಿ ಡಾಲರನ್ನು ಅವರು ಅಡ್ವರ್ಟೈಸ್‌ಮೆಂಟ್‌ಗಾಗಿ ಖರ್ಚು ಮಾಡಿತ್ತಿರುವುದನ್ನು ನಾವು ನೋಡುತ್ತಿದ್ದೇವೆ.

6.50 ಪಿ.ಎಂ

ಆದರೆ ನಮ್ಮ ರಾಜ್ಯದಲ್ಲಿ ಇವೊತ್ತಿನವರೆಗೂ ಕೂಡ ಜಾಹೀರಾತಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಮತ್ತು ಬೇರೆ ಬೇರೆ ಕಂಪನಿಗಳು ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ನಮ್ಮ ರಾಜ್ಯದಲ್ಲಾಗಲೀ ಅಥವಾ ನಮ್ಮ ದೇಶದಲ್ಲಾಗಲೀ ಮಾಹಿತಿಗಳು ಇಲ್ಲ. ಇವೊತ್ತು ನಾವು ಯಾವ ಉದ್ದೇಶ ಇಟ್ಟುಕೊಂಡು ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನ್ನು ಮಾಡಿದೆವೋ ಅದರಲ್ಲಿ ಪ್ರಮುಖವಾಗಿ ಬೆಲೆ ಏರಿಕೆಯನ್ನು ಕಂಟ್ರೋಲ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲದಂತೆ ಆಗಿದೆ. ಇಂದು ಪ್ರಮುಖವಾಗಿ ವೈದ್ಯಕೀಯ ಪದ್ಧತಿ ಮೇಲೆ ಅದರಲ್ಲೂ ವಿಶೇಷವಾಗಿ ಖಾಸಗಿ ಔಷಧಿಗಳ ಮೇಲೆ ನಿಯಂತ್ರಣದ ಬಗ್ಗೆ ಸರ್ಕಾರಕ್ಕೆ ಏನಾದರೂ ಅವಕಾಶವಿದೆಯೇ ಎಂಬುದನ್ನು ನಾವು ಅವಲೋಕನ ಮಾಡಿ ನೋಡಿದರೆ ನಮಗೆ ತಿಳಿಯುವುದೇನೆಂದರೆ ಇಂದು ಜಾಹೀರಾತಿನಲ್ಲಿ ಸುಮಾರು ಶೇಕಡ 32 ರಷ್ಟು ಜಾಹಿರಾತುಗಳು ಜನಗಳನ್ನು ತಪ್ಪು ದಾರಿಗೆ ಎಳೆಯುವಂಥವುಗಳೇ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಇಂದು ಬರುತ್ತಿರುವ ಜಾಹೀರಾತಿನಲ್ಲಿ ಶೇಕಡ 57 ರಷ್ಟು ಶೈಕ್ಷಣಿಕವಾದ ಮೌಲ್ಯಗಳನ್ನು ಹೊಂದದೇ ಇರುವಂಥವುಗಳನ್ನು ನಾವು ಕಾಣುತ್ತಿದ್ದೇವೆ. ಶೇಕಡ 44ರಷ್ಟು ಜಾಹೀರಾತುಗಳು ಅಸಮರ್ಪಕವಾದ ಔಷಧಿಗಳನ್ನು ಮಾರಾಟ ಮಾಡುವುದಕ್ಕೋಸ್ಕರ ಬರುತ್ತಿರುವುದನ್ನು ನಾವು ಗಮನಿಸಿದರೆ ಭಯದ ವಾತಾವರಣ ಸೃಷ್ಟಿಯಾಗುತ್ತದೆ ಎನ್ನುವ ಮನೋಭಾವ ಮೂಡುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಪ್ರಮುಖವಾಗಿ ನಾನು

ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಸರ್ಕಾರೀ ಆಸ್ಪತ್ರೆಯಲ್ಲಿ ಬರುವಂಥ ಔಷಧವನ್ನು ನೀವು ಪರೀಕ್ಷೆ ಮಾಡಿ ಅದಕ್ಕೆ ಬೆಲೆಯನ್ನು ನಿಯಂತ್ರಣ ಮಾಡಿ ಕೇವಲ ಅದನ್ನು ಕೊಡುವುದೊಂದೇ ರಾಜ್ಯ ಸರ್ಕಾರದ ನಿಯಂತ್ರಣವೇ ಎಂದು ಭಯವಾಗುತ್ತಿದೆ. ಇವೊತ್ತು ನಾವು ಬೇಕಾದಷ್ಟು ಜಾಹೀರಾತು-ಗಳನ್ನು ನೋಡುತ್ತೇವೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ ಯಾರಿಗೆ ಹೆಚ್ಚು ಆಯುಷ್ಯ ಬೇಕು ಎನಿಸುತ್ತದೆಯೋ, ಯಾರಿಗೆ ಚಿರಂಜೀವಿಯಾಗಿ ಬದುಕಬೇಕು ಎಂದು ಆಸೆ ಇರುತ್ತದೆಯೋ ಅಂಥ-ವರು ಇಂಥ ಜಾಹೀರಾತುಗಳನ್ನು ನೋಡಿದ ತಕ್ಷಣವೇ ಆಕರ್ಷಿತ ಆಗುತ್ತಾನೆ. ಆದರೆ ಈ ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟಿನಲ್ಲಿ ಮಾಡುತ್ತಿರುವ ಕೆಲಸವೇನು ಎನ್ನುವುದರ ಬಗ್ಗೆ ನಾವು ಇವೊತ್ತು ಯೋಚನೆ ಮಾಡಬೇಕಾಗಿದೆ. ಇಂದು ಗ್ರಾಹಕರ ಅಜ್ಞಾನವನ್ನು ದುರುಪಯೋಗ ಮಾಡಿಕೊಳ್ಳುತ್ತಿರು-ವಂಥ ಬಹು ರಾಷ್ಟ್ರೀಯ ಕಂಪನಿಗಳನ್ನು ನಾವು ಯಾವ ರೀತಿಯಾಗಿ ಕಂಟ್ರೋಲ್ ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಆ ದೃಷ್ಟಿಯಿಂದ ನಾನು ಒಂದು ಸಲಹೆಯನ್ನು ತಮ್ಮ ಮುಖಾಂತರ ಹೇಳುವುದೇನೆಂದರೆ, ತಾವು ಪ್ರಿಸ್ಕ್ರಿಪ್ಷನ್ ಆಡಿಟ್ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆ-ಯದು ಎಂದು ನನ್ನ ಭಾವನೆ. ಇಂದು ಯಾವುದೇ ಒಬ್ಬ ಖಾಸಗಿ ವೈದ್ಯರ ಹತ್ತಿರ ಅಥವಾ ಸರ್ಕಾರೀ ವೈದ್ಯರ ಹತ್ತಿರ ಒಬ್ಬ ರೋಗಿ ಹೋದಾಗ ಇಂದಿನ ಪರಿಸ್ಥಿತಿಯಲ್ಲಿ ರೋಗಿಗೆ ಯಾವ ರೋಗವಿದೆ ಎನ್ನುವುದನ್ನು ಆ ಪ್ರಿಸ್ಕ್ರಿಪ್ಷನ್ ಸ್ಲಿಪ್‌ನಲ್ಲಿ ಬರೆಯುತ್ತಿಲ್ಲ. ಕೇವಲ ವೈದ್ಯ ಕೊಡುವಂಥ ಔಷಧಿಯ ಹೆಸರು ಮಾತ್ರ ಅದರಲ್ಲಿ ಬರೆದಿರುತ್ತಾರೆ. ಅದನ್ನು ತಪ್ಪಿಸಿ ರೋಗಿಗೆ ಯಾವ ಕಾಯಿಲೆ ಎನ್ನುವುದನ್ನು ಬರೆಯುವಂತೆ ಮಾಡಬೇಕು ಮತ್ತು ಈಗಾಗಲೇ ಕೆಲವು ದೇಶಗಳಲ್ಲಿ ಜಾರಿಯಲ್ಲಿರುವ ಪ್ರಿಸ್ಕ್ರಿಪ್ಷನ್ ಆಡಿಟ್ ಸಿಸ್ಟಂ ಅನ್ನು ಇಲ್ಲಿಯೂ ಜಾರಿಯಲ್ಲಿ ತರಬೇಕು. ಈ ಸಿಸ್ಟಂನಲ್ಲಿ ಖಾಸಗೀ ವೈದ್ಯರಾಗಲೀ ಅಥವಾ ಸರ್ಕಾರೀ ವೈದ್ಯರಾಗಲೀ ಪ್ರಿಸ್ಕ್ರೈಬ್ ಮಾಡಿರುವಂಥ ಔಷಧಿಗಳು ಯಾವ್ಯಾವುದು ಮತ್ತು ನರ್ಸಿಂಗ್ ಹೋಂಗಳಲ್ಲಿ ಯಾವ್ಯಾವುದನ್ನು ಪ್ರಿಸ್ಕ್ರೈಬ್ ಮಾಡಿದ್ದಾರೆ ಮತ್ತು ಸರ್ಕಾರೀ ಆಸ್ಪತ್ರೆಗಳಲ್ಲಿ ಯಾವ್ಯಾವುದನ್ನು ಪ್ರಿಸ್ಕ್ರೈಬ್ ಮಾಡಿದ್ದಾರೆ ಎಂಬುದನ್ನು ಆಡಿಟ್ ಮಾಡಿದಾಗ ಸುಮಾರು ಶೇಕಡ 40 ರಿಂದ 50 ಭಾಗ ಉತ್ತಮವಾಗಿ ಯಶಸ್ವಿಯಾದ ಉದ್ದೇಶದ ಸಫಲತೆಯ ಬಗ್ಗೆ ಎಲ್ಲಾ ಕಡೆ ವರದಿ ಬಂದಿರುವುದರಿಂದ ನಮ್ಮಲ್ಲೂ ಕೂಡ ಈ ಪ್ರಿಸ್ಕ್ರಿಪ್ಷನ್ ಆಡಿಟ್ ಸಿಸ್ಟಂನ್ನು ತಂದರೆ ಒಳ್ಳೆಯದು. ಇದರ ಜೊತೆಯಲ್ಲೇ ನಾವೆಲ್ಲಾ ಒಂದು ಯೋಜನೆಯನ್ನು ಮಾಡಿದ್ದೇವೆ; 1995ರ ಸೆಪ್ಟೆಂಬರ್ ತಿಂಗಳಲ್ಲಿ ಕೇಂದ್ರ ಸರ್ಕಾರದಲ್ಲಿ ಘೋಷಣೆಯಾದಂಥ ಹೊಸ ಔಷಧ ಪದ್ಧತಿ ನಮಗೇನಾದರೂ ಸಹಾಯ ಮಾಡಬಹುದು ಎಂದು ತಿಳಿದುಕೊಂಡಿದ್ದೆವು. ಆದರೆ ಆ ಪದ್ಧತಿಯಿಂದ ನಮಗೆ ಅಂದರೆ ವಿಶೇಷವಾಗಿ ರೋಗಿಗಳಿಗೆ ಸಹಾಯ ಆಗುವುದಕ್ಕಿಂತ ವಿಶೇಷವಾಗಿ ಆ ಔಷಧಗಳ ಕಂಪನಿಗಳಿಗೆ ಸಹಾಯ ಆಗುವಂಥದ್ದನ್ನು ನಾವು ನೋಡಿದ್ದೇವೆ. ಇಂದು ಔಷಧಿಗಳ ಹೆಸರಿನಲ್ಲಿಯೂ ಕೂಡ ಸುಲಿಗೆಯಾಗುವಂಥ ಪದ್ಧತಿಯನ್ನು ನಾವು ನೋಡಿದಾಗ ಇದರಲ್ಲಿ ಚಿರಂಜೀವಿಯಾಗಿ ಇರಬೇಕಾದರೆ ಏನೇನು ಔಷಧಿಗಳು ಬೇಕಾಗುತ್ತವೆ ಎಂಬ ಬಗ್ಗೆ ದೊಡ್ಡ ದೊಡ್ಡ ಜಾಹೀರಾತಿನ ಮುಖಾಂತರವಾಗಿ ಔಷಧಿಗಳನ್ನು ಏನು ಮಾರಾಟ ಮಾಡುತ್ತಿದ್ದಾರೆ ಅಂಥವುಗಳ ಬಗ್ಗೆ ನಿಯಂತ್ರಣ ಮಾಡಲೇಬೇಕಾದ

ಅವಶ್ಯಕತೆ ಇವೊತ್ತು ನಮಗಿದೆ. ಇನ್ನೊಂದು ಪ್ರಮುಖವಾದಂಥ ವಿಚಾರವೆಂದರೆ ಇಡೀ ಪ್ರಪಂಚದಲ್ಲಿ ಮತ್ತು ವಿಶೇಷವಾಗಿ ನಮ್ಮ ದೇಶದಲ್ಲಿ ಮಾರಾಟವಾಗುತ್ತಿರುವಂಥ 'ಮೆಲಟೋನಿನ್' ಎನ್ನುವಂಥ ಟಾನಿಕ್ ರೂಪದ ಔಷಧಿ ಶೇಕಡ 50 ಭಾಗ ಜಾಹೀರಾತಿನ ಮುಖಾಂತರ ನಮ್ಮ ದೇಶದಲ್ಲಿ ಮಾರಾಟವಾಗುತ್ತಿದೆ. ಆದರೆ ಈ ಔಷಧಿಯನ್ನು ಯಾವುದೇ ಒಬ್ಬ ಮನುಷ್ಯ ಉಪಯೋಗಿಸಲಿಕ್ಕೆ ಯೋಗ್ಯವಲ್ಲವೆಂದು ತಿಳಿದು ಅಮೇರಿಕಾದಲ್ಲಿ ಅದನ್ನು ಬ್ಯಾನ್ ಮಾಡಿದ್ದಾರೆ. ಆದರೆ ಇಂಥ ಔಷಧಿ ನಮ್ಮ ರಾಜ್ಯದಲ್ಲಿ ಮಾರಾಟವಾಗುತ್ತಿರುವ ಬಗ್ಗೆ ನಾವು ಹೆಚ್ಚಿನ ಗಮನ ಕೊಡಬೇಕಾಗಿದೆ. ಇಂದು ನನ್ನಗನ್ನಿಸುತ್ತಿದೆ, ಎಲ್ಲೆಲ್ಲಿ ಬ್ಯಾನ್ ಆದ ಔಷಧಿಗಳಿವೆಯೋ ಅಂಥವುಗಳ ಡಂಪಿಂಗ್ ಗ್ರೌಂಡ್ ಆಗಿ ನಮ್ಮ ರಾಜ್ಯದಲ್ಲಿ ಇಡಲಾಗುತ್ತಿದೆಯೇನೋ ಎನ್ನುವ ವಿಚಾರ ನಮಗೆ ಕಂಡು ಬರುತ್ತದೆ. ಆದಕಾರಣ ಇಂಥವುಗಳ ಬಗ್ಗೆ ಕೂಡ ನಾವು ಗಮನ ಕೊಡಬೇಕಾಗಿದೆ. ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಇನ್ನೊಂದೇ ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ಕಳೆದ ಸಲ ಬೆಲೆ ನಿಯಂತ್ರಣದಲ್ಲಿ ಯಾವುದೋ ಈ ಕಾಂಟ್ರಾಕ್ಟ್ ವಿಚಾರದಲ್ಲಿ ನಮ್ಮಲ್ಲಿ ಸುಮಾರು ಎಂಟು–ಒಂಭತ್ತು ತಿಂಗಳುಗಳ ಕಾಲ ಔಷಧವನ್ನು ಹಾಗಾಗಿಯೇ ಪರ್ಚೇಸ್ ಮಾಡುವಂಥ ಪದ್ಧತಿ ನಮ್ಮಲ್ಲಿ ಜಾರಿಗೆ ಬಂತು. ನನಗೆ ಆಶ್ಚರ್ಯವಾಗುತ್ತದೆ, ಸರ್ಕಾರೀ ಆಸ್ಪತ್ರೆಗಳಲ್ಲಿ ಸರ್ಕಾರ ರೇಟ್ ಕಾಂಟ್ರಾಕ್ಟ್‌ನ್ನು ಮಾಡಿಕೊಳ್ಳುವಾಗ ಕಡಿಮೆ ಬೆಲೆ ಮತ್ತು ಒಳ್ಳೆಯ ಗುಣಮಟ್ಟದ ಉಪಯೋಗಕ್ಕೆ ಬರುವಂಥ ಔಷಧಿಗಳನ್ನು ತೆಗೆದು-ಕೊಳ್ಳುವಂಥ ಬಗ್ಗೆ ಒಂದು ಒಳ್ಳೆಯ ವಿಚಾರವಿದೆ. ಆದರೆ ಇವೊತ್ತು ಸರ್ಕಾರೀ ಆಸ್ಪತ್ರೆಗಳಿಗೆ ಮಾರಾ-ಟವಾಗಿರುವಂಥ ಔಷಧಿಗಳ ಬಗ್ಗೆ ತಮ್ಮ ಮುಂದೆ ಎರಡು ಉದಾಹರಣೆಗಳ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. 'ಮೆಫಥರೇನ್' ಎನ್ನುವ ಇಂಜಕ್ಷ್‌ನ್ ಬೆಲೆ ರೂ. 58-00, ಆದರೆ ಸರ್ಕಾರದವರು ಖರೀದಿ ಮಾಡಿರುವುದು ರೂ.155ಕ್ಕೆ. ಖಾಸಗೀ ಆಸ್ಪತ್ರೆಗಳಲ್ಲಿಯೇ ಇದು 58 ರೂ.ಗಳಿಗೆ ಸಿಗುತ್ತಿದೆ. ಇದನ್ನು ಗಮನಿಸಿದಾಗ ಸರ್ಕಾರ ರೂ.155 ರೂ.ಗಳಿಗೆ ಇದೇ ಔಷಧವನ್ನು ನಿಗದಿ ಮಾಡಿ ಖರೀದಿ ಮಾಡಿದೆ. ಈ ಔಷಧಿಯನ್ನು ತಮ್ಮ ವೀಕ್ಷಣೆಗಾಗಿ ಈಗ ಕಳುಹಿಸಿಕೊಡುತ್ತಿದ್ದೇನೆ.

(ಔಷಧಿಯನ್ನು ಸಭಾಧ್ಯಕ್ಷರಿಗೆ ಪರೀಕ್ಷೆಗಾಗಿ ಸದಸ್ಯರು ಕಳುಹಿಸಿಕೊಟ್ಟರು)

ಈ ಖರೀದಿ ರೇಟ್ ಕಾಂಟ್ರಾಕ್ಟ್ ಇಲ್ಲದೇ ಇರುವಂಥ ಸಂದರ್ಭದಲ್ಲಿ ಸುಮಾರು 32 ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎನ್ನುವ ವಿಚಾರ ಇದರಲ್ಲಿದೆ. ಆದ್ದರಿಂದ ಇದರ ಬಗ್ಗೆ ತನಿಖೆ-ಯಾಗಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಇದರ ಜೊತೆಗೆ ಒಂದೇ ಬ್ಯಾಚ್‌ನಲ್ಲಿ ಬಂದಂಥ 'ಪೆಂಥಾಲ್' ಎನ್ನುವಂಥ ಔಷಧಿ ಖಾಸಗಿ ಆಸ್ಪತ್ರೆಯಲ್ಲಿ ರೂ. 23-87 ಪೈಸೆಯಾದರೆ ಸರ್ಕಾರೀ ಆಸ್ಪತ್ರೆಯಲ್ಲಿ ಇದರ ಬೆಲೆ ರೂ. 43-41 ಪೈಸೆಯಾಗಿದೆ. ನಾನು ಈಗ ತಂದಿರುವ ಈ ಔಷಧಿ ಸರ್ಕಾರೀ ಆಸ್ಪತ್ರೆಯಿಂದಲೇ ತಂದಿದ್ದೇನೆ. ಇದರ ಮೇಲೆ ಆಸ್ಪತ್ರೆಯ ಚೀಟಿಯನ್ನೂ ಕೂಡ ಅಂಟಿಸ-ಲಾಗಿದೆ. ಇದನ್ನೂ ಕೂಡ ತಮ್ಮ ಪರೀಕ್ಷೆಗಾಗಿ ಕಳುಹಿಸುತ್ತಿದ್ದೇನೆ. ನನಗೆ ಬಂದಿರುವ ಮಾಹಿತಿಯ ಪ್ರಕಾರ ಸುಮಾರು 5 ಲಕ್ಷ ವೇಲ್‌ಗಳನ್ನು ಸರ್ಕಾರ ಖರೀದಿ ಮಾಡಿದೆ. ಇದನ್ನು ರೂ. 43.41

ದರದಂತೆ ಖರೀದಿ ಮಾಡಿದೆ. ಆ ದೃಷ್ಟಿಯಿಂದ ಎಷ್ಟು ಹಣ ಸರ್ಕಾರದಿಂದ ಇದರಲ್ಲಿ ದುರುಪ-ಯೋಗವಾಗಿದೆ ಎನ್ನುವ ಪರಿಸ್ಥಿತಿಯ ಅರಿವಿನ ಬಗ್ಗೆ ತಿಳಿದುಕೊಳ್ಳಲು ಇದಕ್ಕಾಗಿ ಸಮಗ್ರವಾದ ತನಿಖೆ ಆಗಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂದು ನಮ್ಮ ರಾಜ್ಯದಲ್ಲಿ ವೈದ್ಯ ವೃತ್ತಿ ಹೇಗೆ ಹಾಳಾಗುತ್ತಿದೆ ಎನ್ನುವ ಪ್ರಮುಖ ವಿಚಾರದಲ್ಲಿ ನಾನು ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ''ವೈದ್ಯಕೀಯ ಸಾಧನೆ ಸಮಾಜದಲ್ಲಿರುವ ಕಟ್ಟ ಕಡೆಯ ವ್ಯಕ್ತಿಗೂ ತಲುಪಲು ವಿಫಲವಾದರೆ ಅದನ್ನು ಸಾಧನೆ ಎಂದು ಕರೆಯಲು ಸಾಧ್ಯವಾಗದು'' ಎಂದು ತಾವೇ ಒಂದು ವಿಶ್ವ ಆರೋಗ್ಯ ಕಾರ್ಯ-ಕ್ರಮದಡಿಯಲ್ಲಿ ವಿಚಾರಗಳನ್ನು ಹೇಳುತ್ತಾ ಬಹಳ ನೋವಿನಿಂದ ಕೆಲವು ವಿಚಾರಗಳನ್ನು ಹೇಳುತ್ತಾ ಸಮಾಜ ಮೌಲ್ಯ ಇವೊತ್ತು ಯಾವ ರೀತಿಯಲ್ಲಿ ಕಡಿಮೆಯಾಗಿದೆ ಎನ್ನುವ ಬಗ್ಗೆ ತಿಳಿಸಿ, ಆರೋಗ್ಯ ಇಲಾಖೆಯಲ್ಲಿ ಸೇವೆಯ ಮನೋಭಾವನೆಯನ್ನು ಮರೆತು ನಾವು ಯಾವರೀತಿಯಲ್ಲಿ ಅಧೋಗತಿಗೆ ಇಳಿಯುತ್ತಿದ್ದೇವೆ ಎನ್ನುವಂಥ ತಮ್ಮ ವಿಚಾರಕ್ಕೆ ಹೆಚ್ಚು ಒತ್ತನ್ನು ನಾನು ಕೊಡುತ್ತ ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ಎಷ್ಟು ಜನ ಸರ್ಕಾರೀ ವೈದ್ಯರು ಇವೊತ್ತು ಹೊರಗಡೆ ಕೆಲಸ ಮಾಡುತ್ತಿದ್ದಾರೆ ಇವರ ಮೇಲೆ ಸರ್ಕಾರದ ನಿಯಂತ್ರಣ ಏನು? ಸುಮಾರು 600ಕ್ಕಿಂತ ಹೆಚ್ಚು ಸರ್ಕಾರೀ ವೈದ್ಯರು ನಾಲ್ಕೈದು ವರ್ಷಗಳ ಕಾಲ ಆಸ್ಪತ್ರೆಯಲ್ಲಿ ಕೆಲ-ಸವನ್ನೇ ಮಾಡದೇ ವಿದೇಶಗಳಿಗೆ ಹೋಗಿ ಅಲ್ಲಿ ಕೆಲಸವನ್ನು ಮಾಡಿ ಆ ನಂತರದಲ್ಲಿ ಇಲ್ಲಿಗೆ ಬಂದು ನ್ಯಾಯಾಲಯದಲ್ಲಿ ಮೊರೆ ಹೋಗಿ ಮತ್ತೆ ನಮ್ಮಲ್ಲಿ ಬಂದು ಕೆಲಸವನ್ನು ಮಾಡುತ್ತಿರುವಂಥ ಹಲ-ವಾರು ಪ್ರಸಂಗಗಳನ್ನು ನಾವು ಇಂದು ನೋಡುತ್ತಿದ್ದೇವೆ. ಇವೊತ್ತು ಸರ್ಕಾರೀ ವೈದ್ಯರಾಗಿ ಇದ್ದೂ ಕೂಡ ಸೇವೆಗೆ ಬರದೇ ಇರತಕ್ಕಂಥವರ ಮೇಲೆ ಯಾವ ರೀತಿಯಾಗಿ ಕ್ರಮವನ್ನು ಯಾರ್‍ಯಾರ ಮೇಲೆ ತೆಗೆದುಕೊಂಡಿದ್ದೇವೆ? ಇವೊತ್ತಿನವರೆಗೂ ನಮಗೆ ತಿಳಿದ ಹಾಗೆ ಯಾರೋ 14-15 ಜನ ಡಾಕ್ಟರ್-ಗಳಿಗೆ ನೋಟೀಸ್‌ನ್ನು ಕೊಟ್ಟು ಅವರ ಮೇಲೆ ಕ್ರಮವನ್ನು ಕೈಗೊಳ್ಳಲಿಕ್ಕೆ ಹೋಗಿ ಆಗ ಡಾಕ್ಟರ್‌ಗಳು ನ್ಯಾಯಾಲಯಕ್ಕೆ ಮೊರೆ ಹೋದಂಥ ವಿಚಾರ ಇವೊತ್ತು ಎಲ್ಲರ ಗಮನಕ್ಕೂ ಬಂದಿದೆ. ಆದಕಾರಣ ಇಂಥವರನ್ನು 'ಎಸೆನ್‌ಷಿಯಲ್ ಸರ್ವೀಸ್ ಆಕ್ಟ್'ನಡಿಯಲ್ಲಿ ತರುವಂಥ ಅಗತ್ಯ ನಮಗಿದೆ. ಇದರ ಜೊತೆಯಲ್ಲಿ ಗೈರು ಹಾಜರಾದಂಥವರನ್ನು ಕೆಲಸದಿಂದ ತೆಗೆದುಹಾಕಬೇಕಾದ ಕ್ರಮವನ್ನು ನಾವು ತೆಗೆದುಕೊಳ್ಳಬೇಕಾಗಿದೆ. ಇದರ ಜೊತೆಗೆ ಇದುವರೆಗೂ ನಾವು ಸರ್ಕಾರೀ ವೈದ್ಯರು ಖಾಸಗೀ ಪ್ರಾಕ್ಟೀಸ್ ಮಾಡಬಾರದು ಎಂದು ಹೇಳಿಕೊಂಡೇ ಬರುತ್ತಿದ್ದೇವೆಯೇ ಹೊರತು ಕಾರ್ಯರೂಪದಲ್ಲಿ ಇಲ್ಲ. ನಾನು ಕಳೆದ ಸಲ ಸ್ಯಾನಿಟೋರಿಯಂ ಆಸ್ಪತ್ರೆಗೆ ಭೇಟಿ ಕೊಟ್ಟ ಸಂದರ್ಭವನ್ನು ತಮ್ಮ ಮುಂದೆ ಇಟ್ಟಿದ್ದೆ. ಸರ್ಕಾರೀ ಆಸ್ಪತ್ರೆಯಲ್ಲಿ ಸಹಿ ಮಾಡಿ ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಂಥ ಆ ವೈದ್ಯರ ಹೆಸರನ್ನೂ ಕೂಡ ನಾನು ಇಲ್ಲಿ ಹೇಳಿದ್ದೆ. ಈ ರೀತಿಯಾಗಿ ಇರಬೇಕಾದರೆ, ಮೊದಲನೆಯ-ದಾಗಿ ನಾವು ಅವರಿಗೆ 5ನೇ ಪೇ ಕಮೀಷನ್ ಏನಿದೆ ಅದರ ಜೊತೆಯಲ್ಲೇ ನಾನ್–ಪ್ರಾಕ್ಟೀಸಿಂಗ್ ಅಲೋಯೆನ್ಸ್‌ನ್ನು ಕೊಟ್ಟು ಅದರ ಜೊತೆಯಲ್ಲೇ ಅವರನ್ನು ಕಾನೂನಿನಡಿಯಲ್ಲಿ ತರುವಂಥ ಕೆಲಸ-ವನ್ನು ಮಾಡಬೇಕಾಗಿದೆ. ಅಧ್ಯಕ್ಷರೇ, ಇಂದು ನಗರಪಾಲಿಕೆ ವ್ಯಾಪ್ತಿಯೊಳಗೆ ಅಥವಾ ಮುನಿಸಿಪಾಲಿಟಿ

ವ್ಯಾಪ್ತಿಯೊಳಗೆ ಒಂದು ಬೀಡಿ ಅಂಗಡಿ ತೆಗೆಯಬೇಕಾದರೂ ಕೂಡ ಸುಮಾರು ನಾಲ್ಕೈದು ಕಛೇರಿಗಳಿಗಾದರೂ ಹೋಗಿ ಲೈಸೆನ್ಸ್‌ನ್ನು ತೆಗೆದುಕೊಂಡು ಬರಬೇಕಾದ ಪರಿಸ್ಥಿತಿ ಇದೆ. ಆದರೆ ಒಂದು ನರ್ಸಿಂಗ್ ಹೋಂ ತೆಗೆಯ ಬೇಕಾದರೆ ಇವೊತ್ತು ಯಾವ ಲೈಸೆನ್ಸಿನ ಅವಶ್ಯಕತೆ ಇಲ್ಲ. ಆದರೆ ಸರ್ಕಾರದ ಯಾವುದೇ ನಿಯಂತ್ರಣ ಖಾಸಗಿ ವೈದ್ಯರ ಮೇಲಾಗಲಿ ಅಥವಾ ನರ್ಸಿಂಗ್ ಹೋಂ ಮೇಲಾಗಲಿ ಕಾಣಿಸುತ್ತಿಲ್ಲ. ಇವತ್ತು ಯಾರಾದರೂ ಬಂದು ಇನ್ಸ್‌ಪೆಕ್ಷನ್ ಮಾಡುವುದಾಗಿರಲಿ, ಅವರು ರೋಗಿಗಳಿಗೆ ಎಷ್ಟು ಚಾರ್ಜಸ್ ಮಾಡುತ್ತಿದ್ದಾರೆ ಎಂದು, ಅಲ್ಲಿ ಕೊಡುತ್ತಿರುವಂಥಹ ಸರ್ವೀಸ್ ಏನು ಎಂದು ಆರೋಗ್ಯ ಇಲಾಖೆಯ ಕಂಟ್ರೋಲ್ ಇಲ್ಲದೆ ಇರುವಂತಾದ್ದು ಕಾಣುತ್ತಿದ್ದೇವೆ. ಜೊತೆಗೆ ಪ್ರಮುಖವಾಗಿ ಉಪಕರಣಗಳ ಬಗ್ಗೆ ನಾವು ನೋಡಿದಾಗ ಇವತ್ತು ಏನು ಅನ್ನಿಸುತ್ತದೆ ಎಂದರೆ, ಆ ಉಪಕರಣಗಳಿಗೆ ಸರ್ಜರಿ ಆಗಬೇಕಾದಂತಹ ಅವಶ್ಯಕತೆ ಇದೆ. ನಮ್ಮ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಆರು ಎಕ್ಸ್‌ರೇ ಯೂನಿಟ್‌ಗಳಿವೆ. ಆ ಆರು ಯೂನಿಟ್‌ಗಳಲ್ಲಿ ಕೆಲಸ ಮಾಡುತ್ತಿರುವಂತಹದ್ದು ಒಂದೇ ಒಂದು. ಅದಕ್ಕೆ ರಿಪೇರಿಗಾಗಿ ಒಂದು ಲಕ್ಷ 86 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದನ್ನು ಸನ್ಮಾನ್ಯ ಸಚಿವರು ಹೋಗಿ ನೋಡಿಕೊಂಡು ಬಂದಿದ್ದಾರೆ. ಅದನ್ನು ಕೊಟ್ಟು ಒಂದು ವರ್ಷ ಆರು ತಿಂಗಳಾಯಿತು. ಇವತ್ತಿನವರೆಗೂ ಕೂಡ ಟ್ಯೂಬ್ ತೆಗೆದುಕೊಂಡು ಬಂದು ಅಲ್ಲಿ ಹಾಕಿಲ್ಲ. ಎಲ್ಲಾ ಆಸ್ಪತ್ರೆಗಳ ಪರಿಸ್ಥಿತಿ ಅಷ್ಟೇ. ಆಸ್ಪತ್ರೆಗಳ ಸುಧಾರಣೆಯ ಅವಶ್ಯಕತೆ ಇವತ್ತು ಇದೆ. ಮಾನ್ಯ ಸಚಿವರು ನಾಲ್ಕು ದಿವಸದ ಹಿಂದೆ ಮೈಸೂರಿನ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಆಗ ಅವರಿಗೆ ಜೂನಿಯರ್ ಡಾಕ್ಟರ್‌ಗಳು ಹೊರಗಡೆ ನಿಂತುಕೊಂಡು ನೋಡಿಕೊಂಡು ಹೋಗಬೇಡಿ ಒಳಗಡೆ ಬನ್ನಿ ಎಂದು ಬಲವಂತ ಮಾಡಿ ಕರೆದುಕೊಂಡು ಹೋದರು. ಹಾಗೆ ಒಳಗಡೆ ಬಂದಾಗ ಓ.ಟಿ. ಥಿಯೇಟರ್‌ನ್ನು ತೋರಿಸಿಕೊಂಡು ಹಾಗೂ ಅಲ್ಲಿ ಹಾಕಿರುವಂತಹ ಬೆಡ್ ಸ್ಪ್ರೇಯನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಏನು, ನಾನು ಬರುತ್ತೇನೆ ಎಂದು ಇದನ್ನೆಲ್ಲಾ ಹಾಕಿದ್ದೀರೋ ಎನ್ನುವ ಭಾವನೆ ಬಂತು. ಆದರೆ ಅಲ್ಲಿರುವಂತಹ ಸ್ಥಿತಿ ಇದೇ ರೀತಿ ಇದೆ ಎಂದು ಅವರಿಗೆ ವಿವರಣೆ ನೀಡಿದರು. ಕೊನೆಯಲ್ಲಿ ಕೆಳಗಡೆಗೆ ಇಳಿದು ಬರುವಾಗ ಮೇಲುಗಡೆಯಿಂದ ನೀರು ಸುರಿಯುತ್ತಾ ಇತ್ತು. ನಾಲ್ಕು ಹನಿ ನೀರು ಅವರ ಮೇಲೆ ಬಿತ್ತು. ಆಗ ಅವರು ಮೇಲೆ ಏನಾದರೂ ತೊಳೆಯುತ್ತಿದ್ದಾರೆಯೇ ಎಂದು ಕೇಳಿದರು. ಆಗ ಕಿರಿಯ ವೈದ್ಯಾಧಿಕಾರಿಗಳು, ಇಲ್ಲ ಮೇಲುಗಡೆ ಇರುವಂತಹ ಬಾತ್‌ರೂಂ ಒಡೆದು ಅಲ್ಲಿಂದ ನೀರಿನ ಹನಿಗಳು ವಾರ್ಡಿಗೆ ಬೀಳುತ್ತಿದೆ ಎಂದು ಹೇಳಿದರು. ಇದನ್ನು ಕಣ್ಣಾರೆ ನೋಡಿ ಬಂದಿದ್ದಾರೆ. ಈ ಸ್ಥಿತಿಯಲ್ಲಿ ಇವತ್ತು ಆಸ್ಪತ್ರೆಗಳು ಇರುವಂತಹ ಸಮಯದಲ್ಲಿ ಏನು ವರ್ಲ್ಡ್ ಬ್ಯಾಂಕಿನಿಂದ ಲೋನ್ ಬರುತ್ತದೆ ಇದರಲ್ಲಿ ಹೊಸಹೊಸದಾಗಿ ಆಸ್ಪತ್ರೆಗಳನ್ನು ಮಾಡಿ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಪ್ರಮುಖವಾಗಿ ಜನಸಾಮಾನ್ಯರಿಗೆ ಅವಶ್ಯವಾಗಿ ಬೇಕಾಗಿರತಕ್ಕಂಥಾದ್ದು ಔಷಧ ಮತ್ತು ಉಪಕರಣಗಳು, ಅವುಗಳನ್ನು ಒದಗಿಸುವಂತಹ ಕೆಲಸ ಇವತ್ತು ನಿರಂತರವಾಗಿ ಆಗಬೇಕಾಗಿದೆ. ಜೊತೆಗೆ ನಮ್ಮಲ್ಲಿ ಎಕ್ಸ್‌ರೇ ಸುರಕ್ಷಿತದ ಬಗ್ಗೆ ಕೂಡ ಇವತ್ತು ಕಾನೂನನ್ನು ಮಾಡುತ್ತೇವೆ ಎಂದು ಕಳೆದ ಸಲ ಹೇಳಿದ್ದರು. ಆದರೆ ಈ ಒಂದು ವಿಚಾರದಲ್ಲಿ ಕಾನೂನನ್ನು ತಕ್ಷಣದಲ್ಲಿ ಆಗಬೇಕಾಗಿದೆ

ಎನ್ನುವ ವಿಚಾರವನ್ನು ಆರೋಗ್ಯ ಇಲಾಖೆ ಬಗ್ಗೆ ಹೇಳುತ್ತಾ ಕೊನೆಯಲ್ಲಿ ಒಂದೇ ಒಂದು ವಿಚಾರವನ್ನು ವೈದ್ಯಕೀಯ ಶಿಕ್ಷಣದ ಬಗ್ಗೆ ಹೇಳುತ್ತೇನೆ. ವೈದ್ಯಕೀಯ ಶಿಕ್ಷಣವನ್ನು 1970ರಲ್ಲಿ ಆರೋಗ್ಯ ಇಲಾಖೆ-ಯಿಂದ ವಿಭಜನೆ ಮಾಡಿತು. ಆರೋಗ್ಯ ಇಲಾಖೆಯಲ್ಲಿ ಅದರಲ್ಲೂ ವಿಶೇಷವಾಗಿ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಆಗುತ್ತಿರುವಂತಹ ಬೆಳವಣಿಗೆಯನ್ನು ಏನು ಎಂದು ಅವಲೋಕನ ಮಾಡಿದಾಗ, ಕಳೆದ ಸಲ ನಾನು ಇಲ್ಲಿ ವೈದ್ಯಕೀಯ ಶಿಕ್ಷಣದ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದಾಗ ಪ್ರಮುಖವಾಗಿ ಕೆಲವು ಅವ್ಯವಹಾರಗಳ ಬಗ್ಗೆ ಹೇಳಿದ್ದೆ. ವೈದ್ಯಕೀಯ ಶಿಕ್ಷಣದಲ್ಲಿ ಇವತ್ತು ಆಗುತ್ತಿರುವಂತಹ ಅವ್ಯವಹಾರಗಳ ಬಗ್ಗೆ ಒಂದು ಪತ್ರವನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಕೇಂದ್ರ ಸರ್ಕಾರದ ಎಂ.ಸಿ.ಐ ರಾಜ್ಯ ಸರ್ಕಾರಕ್ಕೆ ಒಂದು ನೋಟೀಸ್‌ನ್ನು ಜಾರಿ ಮಾಡಿದೆ. ಪ್ರಮುಖವಾಗಿ ನಮ್ಮ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ಒಂದು ದೊಡ್ಡ ಮಾರಾಟದ ಕೇಂದ್ರವಾಗಿದ್ದುಕೊಂಡು ವಿಶೇಷವಾಗಿ ಯಾವ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಮತ್ತು ಸೆಂಟ್ರಲ್ ಗೌವರ್ನ್‌ಮೆಂಟ್‌ನಿಂದ ಪರ್ಮಿಷನ್ ಇಲ್ಲದೆ ಆಸ್ಪತ್ರೆಯಲ್ಲಿ ಅಥವಾ ಕಾಲೇಜುಗಳಲ್ಲಿ ಸೌಲಭ್ಯ ಇಲ್ಲದೆ ಒಬ್ಬ ವೈದ್ಯರಿಗೆ ಒಬ್ಬ ಪ್ರೊಫೆಸರ್ ಒಬ್ಬ ಟೀಚರ್‌ಗೆ ಒಬ್ಬ ಎಂ.ಡಿ. ಓದುವಂತಹ ವಿದ್ಯಾರ್ಥಿ ಇರುತ್ತಾನೆ. ಹಾಗೆಯೇ ಒಬ್ಬ ಎಂ.ಬಿ.ಬಿ.ಎಸ್. ಓದುವಂತಹ ಏಳು ಜನ ವಿದ್ಯಾರ್ಥಿಗಳಿಗೆ ಒಂದು ಬೆಡ್ ಇರಬೇಕು. ಆ ರೀತಿಯ ಒಂದು ನಾರ್ಮ್ಸ್ ಇದೆ. ಇವತ್ತು ಆ ನಾರ್ಮ್ಸ್ ಅನ್ನು ಮರೆತು ರಾಜ್ಯದಲ್ಲಿ ಸೀಟುಗಳನ್ನು ಮಾರಾಟ ಮಾಡುವಂತಹ ಪದ್ಧತಿಯನ್ನು ಇವತ್ತು ನಾವು ಕಂಡಿದ್ದೇವೆ. ದೆಹಲಿ ಸೆಕ್ರೆಟರಿ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ, ನ್ಯೂ ಡೆಲ್ಲಿ ಇವರು ನಮ್ಮ ಸೆಕ್ರೆಟರಿ, ಕರ್ನಾಟಕ ಸರ್ಕಾರಿ ಹೆಲ್ತ್ ಅಂಡ್ ಫ್ಯಾಮಿಲಿ ಎಜುಕೇಷನ್ ಡಿಪಾರ್ಟ್‌ಮೆಂಟ್ ಬೆಂಗಳೂರು ಇವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಪತ್ರದ ಪ್ರಕಾರದಲ್ಲಿ ರಾಜ್ಯಕ್ಕೆ ಎಷ್ಟು ಎಂ.ಬಿ.ಬಿ.ಎಸ್. ಮತ್ತು ಎಂ.ಡಿ ವಿದ್ಯಾರ್ಥಿಗಳನ್ನು ಇವತ್ತು ತೆಗೆದುಕೊಳ್ಳಬೇಕಾಗಿತ್ತು, ಆದರೆ ಈಗ ತೆಗೆದುಕೊಂಡಿರುವ ಸಂಖ್ಯೆ ಎಷ್ಟು ಎಂಬ ಬಗ್ಗೆ ಕೇಳಿದ್ದಾರೆ, ಇದರ ಜೊತೆಯಲ್ಲಿ ಉದಾಹರಣೆಗೆ ಜೆ.ಜೆ. ಮೆಡಿಕಲ್ ಕಾಲೇಜ್ ದಾವಣಗೆರೆ, ಇಲ್ಲಿ 245 ವಿದ್ಯಾರ್ಥಿಗಳನ್ನು ತೆಗೆದು-ಕೊಳ್ಳುವುದೋಸ್ಕರವಾಗಿ ಕೇಂದ್ರ ಸರ್ಕಾರದ ಎಂ.ಸಿ.ಐ. ನಿಂದ ಪರ್ಮಿಷನ್ ಸಿಕ್ಕಿತು. ಆದರೆ ಇವತ್ತು ರಾಜ್ಯ ಸರ್ಕಾರ ಎಲ್ಲಾ ನಾರ್ಮ್ಸ್ ಅನ್ನು ಬಿಟ್ಟು 328 ಜನರನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಪರ್ಮಿಷನ್ ಕೊಟ್ಟಿದ್ದಾರೆ. ಈ ರೀತಿಯಾಗಿ ಇಡೀ ರಾಜ್ಯದಲ್ಲಿ ಸುಮಾರು ಮೂರು ವರ್ಷಗಳ ಕಾಲದಿಂದ ಎರಡು ಸಾವಿರ ವಿದ್ಯಾರ್ಥಿಗಳನ್ನು ಹೆಚ್ಚಿಗೆ ಮಾಡಿಕೊಂಡು ಅದರಲ್ಲಿ ಸುಮಾರು 200 ಕೋಟಿ ರೂಪಾಯಿಗಳ ದೊಡ್ಡ ಹಗರಣ ಇದರಲ್ಲಿ ಆಗಿದೆ. ಇನ್ನೊಂದು ನೋವಿನ ಸಂಗತಿ ಎಂದರೆ ಇಲ್ಲಿರುವಂತಹ ಆ ವಿದ್ಯಾರ್ಥಿಗಳನ್ನು ಆ ಕಾಲೇಜಿನಿಂದ ತೆಗೆದು ಹಾಕಬೇಕು ಎನ್ನುವಂತಹ ಪತ್ರ ಕೂಡ ಕೇಂದ್ರ ಸರ್ಕಾರದಿಂದ ಬಂದಿದೆ. ಇದರಿಂದ ಇವತ್ತು ಎರಡು ಸಾವಿರ ವಿದ್ಯಾರ್ಥಿಗಳ ಭವಿಷ್ಯ ಏನಾಗುತ್ತದೆ ಎನ್ನುವುದು ನಮ್ಮ ಮುಂದೆ ಇರುವಂತಹ ಒಂದು ದೊಡ್ಡ ಪ್ರಶ್ನೆ. ಆ ಪತ್ರವನ್ನು ಕೂಡ ನಾನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಇನ್ನು ರಾಜೀವ್‌ಗಾಂಧಿ ಯೂನಿವರ್ಸಿಟಿ ಬಗ್ಗೆ ಕೊನೆಯ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಸಾಮಾನ್ಯ ಒಬ್ಬ ವ್ಯಕ್ತಿಯ ಮೂರನೇ ಅಥವಾ

ನಾಲ್ಕನೇ ದರ್ಜೆಯ ಒಬ್ಬ ನೌಕರ ಇವತ್ತು ಅವನನ್ನು ನೇಮಕಾತಿಯನ್ನು ಮಾಡಬೇಕಾದರೆ ಅಥವಾ ಅವನನ್ನು ನಾವೇನಾದರೂ ಕೂಡ ರೆಗ್ಯುಲರೈಸ್ ಮಾಡಬೇಕಾದರೆ ನಮ್ಮದೇ ಆದಂತಹ ಸರ್ಕಾರ ಒಂದು ಕಾನೂನನ್ನು ಹಾಕಿಕೊಂಡಿದೆ. ಆದರೆ ಈ ರಾಜ್ಯದ ಮುಖ್ಯಮಂತ್ರಿಯಾಗಿರುವಂಥವರು ಈ ದೇಶದ ಜವಾಬ್ದಾರಿಯನ್ನು ಹೊರುವಂತಹ ಸಂದರ್ಭದಲ್ಲಿ ಕೇವಲ ನಾಲ್ಕು ದಿವಸ ಇದೆ ಎನ್ನು-ವಂತಹ ಸಂದರ್ಭದಲ್ಲಿ ಜಯದೇವ ಇನ್ಸ್‌ಟಿಟ್ಯೂಟ್ ಆಫ್ ಕಾರ್ಡಿಯಾಲಾಜಿಯಲ್ಲಿ ಆ ಒಂದು ಇನ್ಸ್‌ಟಿಟ್ಯೂಟ್‌ನ ಅಧ್ಯಕ್ಷರೂ ಕೂಡ, ಈ ಅಧ್ಯಕ್ಷ ಸ್ಥಾನದಲ್ಲಿ ಅವರು ಅಲ್ಲಿರುವಂತಹ ನೌಕರರನ್ನು ಅಡ್‌ಹಾಕ್ ಆಗಿ ಯಾರು ಹಿಂದೆ ಇದ್ದರು ಅಂತಹವರನ್ನು ರೆಗ್ಯುಲರೈಸ್ ಮಾಡುವಂತಹ ಒಂದು ಕಾರಣವನ್ನು ಇಟ್ಟುಕೊಂಡು ಕೇವಲ ನಾಲ್ಕು ದಿವಸದ ಒಳಗಾಗಿ ಅಂದರೆ ಮೇ ತಿಂಗಳ 1996ರಲ್ಲಿ ನಾಲ್ಕು ಜನರನ್ನು ಏಪ್ರಿಲ್ ತಿಂಗಳ 1996ರಲ್ಲಿ 10 ಜನರನ್ನು ಹೀಗೆ ಒಟ್ಟು 63 ಜನರನ್ನು ನೇಮ-ಕಾತಿ ಮಾಡಿಕೊಂಡು ಕೇವಲ ನಾಲ್ಕು ದಿವಸದೊಳಗಾಗಿ ನೇಮಕಾತಿ ಆದಂತಹ ಅವರನ್ನು ರೆಗ್ಯುಲ-ರೈಸ್ ಮಾಡುವಂತಹ ಒಂದು ಆರ್ಡರ್‌ನ್ನು ಹೊರಡಿಸಿದ್ದಾರೆ. ಇವತ್ತು ಸುಪ್ರೀಂ ಕೋರ್ಟಿನ ಆರ್ಡ-ರ್ ವಿರುದ್ಧವಾಗಿ ಯಾವ ಈ ಒಂದು ನೇಮಕಾತಿಯನ್ನು ರೆಗ್ಯುಲರೈಸ್ ಮಾಡುವುದಕ್ಕೆ ಹೊರಟಿ-ದ್ದಾರೆ ಈ ವಿಚಾರದಲ್ಲಿಯೂ ಕೂಡ ಪ್ರಮುಖವಾಗಿ ಯಾವ ಕಾರಣದಿಂದ ಆಗಿದೆ ಎಂದು ನಾವು ನೋಡಬೇಕಾಗಿದೆ. ನೇಮಕಾತಿ ಆಗುವಂತಹ ಸಂದರ್ಭದಲ್ಲಿ ಯಾವುದೇ ಪ್ರಕಟಣೆಯಾಗಲಿ, ಯಾವುದೇ ರೀತಿಯಾದಂತಹ ಸಂದರ್ಶನವಾಗಲಿ ಆಗದೇ ನೇಮಕಾತಿ ಮಾಡಿದಂತಹ ನಿದರ್ಶನ-ವನ್ನು ನಾವು ಕಾಣುತ್ತಿದ್ದೇವೆ. ಹೀಗಾಗಿ ಕೇವಲ ನಾಲ್ಕು ದಿವಸದ ಒಳಗಾಗಿ 97 ಜನರನ್ನು ಏನು ನೇಮಕಾತಿ ಮಾಡಿ ಅವರನ್ನು ರೆಗ್ಯುಲರೈಸ್ ಮಾಡಿದ್ದಾರೆ, ಅದರಲ್ಲಿ ನನಗೆ ತಿಳಿದ ಪ್ರಕಾರ ಸುಮಾರು 14 ಜನ ಯಾರು ಅಲ್ಲಿ ಪ್ರಮುಖವಾಗಿ ಈ ಒಂದು ಕಾರ್ಯ ಮಾಡಿದ್ದಾರೆ ಅವರುಗಳು ಈ ರಾಜ್ಯದ ಜವಾಬ್ದಾರಿಯನ್ನು ಹೊತ್ತವರ ಸಂಬಂಧಿಗಳು ಎನ್ನುವಂತಹ ವಿಚಾರ ಇರುವುದರಿಂದ ಇದರ ಬಗ್ಗೆ, ಸಮಗ್ರವಾದಂತಹ ತನಿಖೆಯನ್ನು ಮಾಡಬೇಕಾದಂತಹ ಅವಶ್ಯಕತೆ ಇದೆ. ಬಹಳ ಪ್ರಮುಖವಾಗಿರ-ತಕ್ಕಂಥ ವಿಚಾರವೇನೆಂದರೆ ಕೇವಲ 4 ದಿವಸ ಒಳಗಾಗಿ 63 ಜನರನ್ನು ನೇಮಕಾತಿ ಮಾಡಿ ನಿಯಮ ಬಾಹಿರವಾಗಿ ಅವರನ್ನು ತೆಗೆದುಕೊಳ್ಳುವುದಲ್ಲದೆ ಪ್ರಮುಖವಾಗಿ ಅಡ್‌ಹಾಕ್ ಆಗಿ ತೆಗೆದು-ಕೊಂಡಂತಹವರನ್ನು ಇವತ್ತು ರೆಗ್ಯುಲರೈಸ್ ಮಾಡುವಂತಹ ಒಂದು ಕ್ರಮವನ್ನು ಯಾರು ಈ ರಾಜ್ಯದ ಜವಾಬ್ದಾರಿಯನ್ನು ಹೊತ್ತಿದ್ದಾರೆ ಅವರು ಮೇ 26ನೇ ತಾರೀಖು ಆ ಕ್ರಮವನ್ನು ತೆಗೆದು-ಕೊಂಡಿದ್ದಾರೆ. ಹಾಗೆ ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಅವರು ಒಂದು ಉನ್ನತ ಸ್ಥಾನಕ್ಕೆ ಹೋಗುವಂತಹ ನಿರ್ಧಾರವನ್ನು ಕೂಡ ಆಗಿತ್ತು. ಆ ದೃಷ್ಟಿಯಲ್ಲಿ ಇವತ್ತು ಪ್ರಮುಖವಾಗಿ ಇದಕ್ಕೆ ಸಿ.ಓ.ಡಿ. ಎನ್‌ಕ್ವೈರಿ ಆಗಬೇಕಾದಂತಹ ಅವಶ್ಯಕತೆ ಇದೆ. ಕಾರಣ ಸರ್ಕಾರದ ಸಂಪೂರ್ಣ ಸ್ವಾಮ್ಯ-ವನ್ನು ಹೊಂದಿರುವಂತಹ ಸರ್ಕಾರದ ನಿಯಂತ್ರಣದಲ್ಲಿ ಇರುವಂತಹ ಜಯದೇವ ಇನ್ಸ್‌ಟಿಟ್ಯೂಟ್ ಆಫ್ ಕಾರ್ಡಿಯಾಲಾಜಿಯಲ್ಲಿ ಆಗಿರುವಂತಹ ಅಕ್ರಮ ಏನಿದೆ ಅದರ ಬಗ್ಗೆ ಒಂದು ಸಮಗ್ರ-ವಾದಂತಹ ಸಿ.ಓ.ಡಿ. ತನಿಖೆಯ ಅವಶ್ಯಕತೆ ಇದೆ. ಕಾರಣ ಸುಪ್ರೀಂಕೋರ್ಟ್ 1987ರಲ್ಲಿ ನಿರ್ದೇ-

ಶನವನ್ನು ಕೊಟ್ಟಿತ್ತು, ಅದರ ವಿರುದ್ಧ ಯಾವುದೇ ನೇಮಕಾತಿಯನ್ನು ಮಾಡಿಕೊಂಡು ನಂತರದಲ್ಲಿ ಕನಿಷ್ಟಪಕ್ಷ 240 ದಿವಸಗಳ ಕಾಲ ಅವನು ನಿರಂತರವಾಗಿ ಕೆಲಸವನ್ನು ಮಾಡಿರಬೇಕು.

ನೇಮಕಾತಿಯ ಪದ್ಧತಿ ಯಾವ ರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಆಗಿರಬೇಕು. ವಿಶೇಷ-ವಾಗಿ ಇದರಲ್ಲಿ ಆಗಿರುವಂಥದ್ದು; ಯಾವುದು ಒಂದು ರೋಸ್ಟರ್ ಪದ್ಧತಿ ಇದೆ ಅದರ ಪ್ರಕಾರದಲ್ಲಿ ಎಸ್.ಸಿ/ ಎಸ್.ಟಿ.ಗಳಿಗೆ ಎಷ್ಟು ಕೊಡಬೇಕಾಗಿದೆ? ಯಾರು ಯಾರಿಗೆ ಎಷ್ಟೆಷ್ಟು? ಯಾವ್ಯಾವ ಹಿಂದುಳಿದ ವರ್ಗದವರಿಗೆ ಕೊಡಬೇಕಾಗಿದೆ? ಈ ಯಾವುದೇ ನಿಯಮವನ್ನು ಪಾಲನೆ ಮಾಡದೆಯೇ ಇದನ್ನು ಸನ್ಮಾನ್ಯ ಮುಖ್ಯಮಂತ್ರಿಯಾದಂತಹವರು, ಪ್ರಧಾನಮಂತ್ರಿಯಾಗಿ ನಿಯೋಜನೆ ಆದ ನಂತರದಲ್ಲಿ ಈ ಕೆಲಸ ಆಗಿದೆ. ಜೊತೆಗೆ ಆ ಒಂದು ಮೀಟಿಂಗ್ ಪ್ರೊಸೀಡಿಂಗ್ಸ್‌ನಲ್ಲೂ ಕೂಡ ಒಂದು ಮಾತನ್ನು ಹೇಳುತ್ತಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಹೇಳುತ್ತಾ ತ್ವರಿತವಾಗಿ ಆಗಬೇಕಾಂತಹದ್ದು ಈ ಕೆಲಸ ಎಂದು ಹೇಳಿ ಅವರ ಮುಂದೆ ವಿಚಾರವನ್ನು ಇಟ್ಟಿದ್ದಾರೆ. ಜೊತೆಗೆ ಅದೇ ಮೀಟಿಂಗ್‌ನಲ್ಲಿ ಒಂದು ವಿಚಾರವನ್ನು ಹೇಳುತ್ತಾ ವೀರಪ್ಪರೆಡ್ಡಿ ಎನ್ನುವಂತಹ ಒಬ್ಬರು, ಆ ಒಂದು ಸೇವೆಯಿಂದ ತೆಗೆದುಹಾಕಲ್ಪಟ್ಟಿದ್ದಂಥ ಒಬ್ಬ ವೈದ್ಯರನ್ನು ಹತ್ತು ಸಾವಿರ ರೂಪಾಯಿಗಳ ಸಂಬಳದ ಆಧಾರದ ಮೇಲೆ ಯಾವುದೇ ಜಾಹೀರಾತನ್ನು ಪ್ರಕಟಿಸದೆ ನೇಮಕಾತಿಯನ್ನು ಮಾಡಿ ಅದರ ಜೊತೆಯಲ್ಲೇ ಅವರಿಗೆ ಜಯದೇವ ಕಾರ್ಡಿಯಾಲಜಿಯಲ್ಲಿ ಕೆಲವು ಬೆಡ್ಡುಗಳನ್ನು ಕೊಟ್ಟು ಅದನ್ನು ನೋಡಿಕೊಳ್ಳುವಂಥ ಜವಾಬ್ದಾರಿಯನ್ನು ಕೂಡ ಇವೊತ್ತು ಆ ವಿಸಿಟಿಂಗ್ ಪ್ರೊಫೆಸರ್‌ಗೆ ಕೊಡಬೇಕು ಎನ್ನುವಂಥ ನಿರ್ಣಯವನ್ನು ಮಾಡಲಾಗಿದೆ. ಆ ದೃಷ್ಟಿಯಲ್ಲಿ ಎರಡೂ ವಿಚಾರದಲ್ಲಿ ಸಿ.ಓ.ಡಿ. ವಿಚಾರಣೆ ಆಗ-ಬೇಕಾಗಿದೆ, ಜೊತೆಗೆ 97 ಜನರನ್ನು ನೇಮಕಾತಿ ಮಾಡಿರುವಂತಹದ್ದರಲ್ಲಿ ರೋಸ್ಟರ್ ಪದ್ಧತಿ ಮತ್ತು ಸುಪ್ರಿಂಕೋರ್ಟಿನ ಏನು ಆದೇಶ ಇದೆ ಇದರ ವಿರುದ್ಧವಾಗಿ ಅಗಿರುವಂಥ ದೃಷ್ಟಿಯಲ್ಲಿ ಇದನ್ನು ವಿಚಾರಣೆ ಮಾಡಬೇಕು ಎಂದು ಹೇಳುತ್ತಾ ಇದರ ಮಾಹಿತಿಯನ್ನು ಸಂಪೂರ್ಣವಾಗಿ ತಮಗೆ ಕಳುಹಿಸಿಕೊಡುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯ ಬಗ್ಗೆ ಹೇಳುತ್ತಾ, ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಂದೇ ಒಂದು ಮಾತನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತಿದ್ದೇನೆ. ಶಾಸಕರು-ಗಳು ಇವೊತ್ತು ಕೆಲಸವನ್ನು ಮಾಡಿಸುವಂಥ ಸಮಯದಲ್ಲಿ ತಾವು 30 ಲಕ್ಷ ರೂಪಾಯಿಗಳ ಒಂದು ಕೆಲಸವನ್ನು ಕೊಟ್ಟು ಅಲ್ಲಿಯವರಿಗೆ ನಾವು ಸೂಚನೆಯನ್ನು ಮಾಡಬಹುದು ಎನ್ನುವಂಥ ವಿಚಾರವನ್ನು ಮಾಡಿದಿರಿ. ಅದರ ಪ್ರಕಾರ ನನ್ನ ಕ್ಷೇತ್ರದಲ್ಲೂ ಕೂಡ ಇದರ ಬಗ್ಗೆ ಯಾವ ಕೆಲಸ ಆಗಬೇಕಾಗಿದೆ ಎನ್ನುವಂತಹ ವಿಚಾರವನ್ನು ಪಿ.ಡಬ್ಲ್ಯೂ.ಡಿ. ಇಲಾಖೆಗೆ ನಾನು ಕೊಟ್ಟೆ. ಆದರೆ ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ ಆದಂತಹದ್ದು ಏನು? ಇಲ್ಲಿ ಪ್ರಶ್ನೆ 30 ಲಕ್ಷ ರೂಪಾಯಿಗಳ ಕೆಲಸ ಮಾಡಬೇಕು ಎಂದು ಏನು ಸರ್ಕಾರ ಕೊಟ್ಟಿತ್ತು, ಸರ್ಕಾರ ಏನು ಆದೇಶವನ್ನು ಕೊಟ್ಟಿರಿ ಆದರೆ ಆ ಆದೇಶದ ಪ್ರಕಾರದಲ್ಲಿ ಕೆಲಸವನ್ನು ಮಾಡಲಾಗಿದೆ ಎಂದು ಹೇಳಿ ಸರ್ಕಾರದಿಂದ ಬಿಲ್ಲನ್ನು ಕ್ಲೈಮ್ ಮಾಡಿದ್ದಾರೆ.

. . .

ಅಧ್ಯಕ್ಷರು:- ಇದು ಈಗ ಸದ್ಯಕ್ಕೆ ಬೇಡ ಅದನ್ನು ಮುಂದೆ ಇಲಾಖಾ ಬೇಡಿಕೆಗಳ ಮೇಲೆ ಬಂದಾಗ ತೆಗೆದುಕೊಳ್ಳೋಣ, ಮುಕ್ತಾಯ ಮಾಡಿಬಿಡಿ.

ಶ್ರೀ ಎ. ರಾಮದಾಸ್:- ಸನ್ಮಾನ್ಯ ಅಧ್ಯಕ್ಷರೆ, ಇಷ್ಟು ವಿಚಾರವನ್ನು ಹೇಳುತ್ತಾ, ರಾಜೀವ್ ಗಾಂಧಿ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಇವೊತ್ತು ನಾವು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದ್ದೇವೆ. ಅವೆಲ್ಲಾ ನಾರ್ಮ್ಸ್‌ನ್ನ ಇವೊತ್ತು ಮರೆತು, ವಿಶ್ವವಿದ್ಯಾನಿಲಯ ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ, ಅಸ್ತಿತ್ವಕ್ಕೆ ಬರದೆಹೋದರೂ ಕೂಡ ವಿಶ್ವವಿದ್ಯಾನಿಲಯದ ಉಪಕುಲಪತಿಗಳು ಯಾವುದೇ ಒಂದು ನಿಯಮವನ್ನು ಬಿಟ್ಟು ಅವರು ಅಲ್ಲಿ ಡೆಪ್ಯೂಟಿ ರಿಜಿಸ್ಟ್ರಾರ್‌ರನ್ನು, ರಿಜಿಸ್ಟ್ರಾರ್‌ರನ್ನು ಎಲ್ಲರನ್ನೂ ಕೂಡ ನೇಮಕ ಮಾಡಿಕೊಳ್ಳುವಂಥ ಕೆಲಸ ಮಾಡಿದ್ದಾರೆ, ಹಾಗೆಯೇ ನೇಮಕ ಆಗಿದೆ. ಯಾವುದೇ ಪತ್ರಿಕೆಯಲ್ಲಿ ಈ ಬಗ್ಗೆ ಜಾಹೀರಾತನ್ನು ನೀಡಿಲ್ಲ. ಈ ರೀತಿ ನೇಮಕಾತಿ ಮಾಡಬೇಕಾಗಿದ್ದರೆ ಕಾನೂನಿನ ಪ್ರಕಾರ ಸೆನೆಟ್, ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಈ ಮೂರರ ಅನುಮತಿಯನ್ನು ತೆಗೆದುಕೊಂಡ ನಂತರದಲ್ಲಿ ಅವರನ್ನು ನೇಮಕ ಮಾಡಬೇಕು ಎನ್ನುವಂಥದ್ದು ಇವೊತ್ತು ವಿಶ್ವವಿದ್ಯಾ-ನಿಲಯದಲ್ಲಿರುವಂಥ ಒಂದು ಸರ್ಕಾರೀ ಆದೇಶ. ಆದರೆ ಈ ಎಲ್ಲಾ ವಿಚಾರವನ್ನು ಗಾಳಿಗೆ ತೂರಿ ಇವೊತ್ತು ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬರದೆಹೋದರೂ ಕೂಡ ಅವರೆಲ್ಲರನ್ನು ನೇಮಕಾತಿ ಮಾಡಿ-ಕೊಂಡಿರುವ ವಿಚಾರದಲ್ಲಿ ಇವೊತ್ತು ಸರ್ಕಾರ ಯಾವ ನಾರ್ಮ್ಸ್‌ನ ಮೇಲೆ ಮಾಡಿದ್ದಾರೆ ಅದರ ಬಗ್ಗೆ ಸಮಗ್ರವಾದಂಥ ಉತ್ತರವನ್ನು ಸರ್ಕಾರ ಕೊಡಬೇಕಾಗಿದೆ. ಜೊತೆಗೆ ಈ ಒಂದು ವಿಶ್ವವಿದ್ಯಾನಿಲಯಕ್ಕೆ ಕೇಂದ್ರ ಸರ್ಕಾರದ ಅನುದಾನ ಬರುತ್ತದೆ ಎನ್ನುವಂಥ ವಿಚಾರವನ್ನು ಹೇಳಿದ್ದಾರೆ. ಇವೊತ್ತಿನವರೆಗೂ ಕೂಡ ನನಗೆ ತಿಳಿದ ಪ್ರಕಾರದಲ್ಲಿ ಕೇಂದ್ರಸರ್ಕಾರ ಅಥವಾ ಎಂ.ಸಿ.ಐ. ನಿಂದ ಆ ವಿಶ್ವದ್ಯಾನಿಲಯಕ್ಕೆ ಪರವಾನಿಗೆ ದೊರೆತಿಲ್ಲ, ಪರವಾನಿಗೆ ದೊರೆತಿಲ್ಲದೆ ಇರುವಂಥ ಸಮಯದಲ್ಲಿ ಅದರ ಕಾರ್ಯರೂಪ ಯಾವರೀತಿಯಲ್ಲಿ ಆಗುತ್ತದೆ ಎನ್ನುವಂಥ ಸಂಶಯವಾದಂಥ ವಿಚಾರ ಇವೊತ್ತು ಇದೆ. ಇದು ಎರಡನೆಯ ಆರ್ಡಿನೆನ್ಸ್ ಹೊರಡಿಸುವಂಥ ಸಮಯದಲ್ಲಿ ಈ ವಿಶ್ವವಿದ್ಯಾನಿಲಯ, ಈಗಾಗಲೇ ಹೇಳಿದ ರೀತಿಯಲ್ಲಿ ಬೆಂಗಳೂರಿನಲ್ಲಿ ಹೆಚ್ಚು ಕಾನ್ಸನ್‌ಟ್ರೇಷನ್ ಇರಬಾರದು ಎಂದು ಹೇಳಿ ಮೈಸೂ-ರಿನಲ್ಲಿ ಈ ವಿಶ್ವವಿದ್ಯಾನಿಲಯವನ್ನು ತೆರೆಯಲಿಕ್ಕೆ ಆಜ್ಞೆ ಆಗಿತ್ತು. ಆದರೆ ಇವೊತ್ತು ಸರ್ಕಾರ ಯಾರ ಹತ್ತಿರ ಕೂಡ ಸಲಹೆಗಳನ್ನು ಪಡೆಯದೇ ಒಂದು ಆರ್ಡಿನೆನ್ಸ್‌ನ ಪ್ರಕಾರದಲ್ಲಿ ಅದನ್ನು ಮೈಸೂರಿನಿಂದ ಮತ್ತೆ ಬೆಂಗಳೂರಿಗೆ ವರ್ಗಾಯಿಸಿ ಬೆಂಗಳೂರಿನಲ್ಲಿ ವಿಶ್ವವಿದ್ಯಾನಿಲಯವನ್ನು ಮಾಡಬೇಕೆನ್ನುವಂಥ ನಿರ್ಧಾರ ಏನು ಮಾಡಿದ್ದಾರೆ, ಇದು ಸರಿಯಲ್ಲ, ಇದನ್ನು ಮೈಸೂರಿನಲ್ಲೇ ಸ್ಥಾಪನೆ ಮಾಡಲಿಕ್ಕೆ ಏನು ನಿರ್ಧಾರ ಆಗಿತ್ತು ಆ ನಿರ್ಧಾರದ ಪ್ರಕಾರದಲ್ಲೇ ಮೈಸೂರಿನಲ್ಲೇ ಇವೊತ್ತು ಸ್ಥಾಪನೆಯಾಗಬೇಕು ಎಂದು ಕೇಳುತ್ತಾ ಇಲ್ಲಿ ಮಾತನಾಡಲು ಅವಕಾಶವನ್ನು ಒದಗಿಸಿಕೊಟ್ಟ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಿಜಯ್‌ಕುಮಾರ್ ಭೀಮಣ್ಣ ಖಂಡ್ರೆ (ಭಾಲ್ಕಿ):- ಮಾನ್ಯ ಸಭಾಧ್ಯಕ್ಷರೆ, ಸರ್ಕಾರವು 1996-97ನೇ ಸಾಲಿಗಾಗಿ 19 ಇಲಾಖೆಗಳ ಅನುದಾನದ ಬೇಡಿಕೆಗಳನ್ನು ಇವೊತ್ತು ಸಭೆಯ ಮುಂದಿಟ್ಟಿದ್ದಾರೆ. ನಾನು ಇದನ್ನು ವಿರೋಧಿಸಿ ಮಾತನಾಡಲಿಕ್ಕೆ ಬಯಸುತ್ತೇನೆ. ಮತ್ತು ಇಲಾಖೆಗಳ ಬಗ್ಗೆ ನನ್ನ ಸಲಹೆಗಳನ್ನು ಸಭೆಯ ಮುಂದಿಡಲಿಕ್ಕೆ ಬಯಸುತ್ತೇನೆ. ಯಾವುದೇ ದೇಶ ಮುಂದೆ ಬರ-ಬೇಕಾದರೆ ಅಲ್ಲಿ ಶಿಕ್ಷಣ ಬಹಳ ಮುಖ್ಯವಾದಂಥ ವಿಷಯ ಆದರೆ ನಮ್ಮ ದೇಶದಲ್ಲಿ ನಾವೇನು ನೋಡುತ್ತಿದ್ದೇವೆ ಅಂದರೆ, ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಸಹಿತ ಇವೊತ್ತಿನದಿನ ಗ್ರಾಮೀಣಪ್ರದೇಶಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರಿಲ್ಲ. ಉದಾಹರಣೆಗಾಗಿ ನಮ್ಮ ಬೀದರ್ ಜಿಲ್ಲೆ ಬಹಳ ಹಿಂದುಳಿದಂಥ ಜಿಲ್ಲೆ. ಇಲ್ಲಿ ಇವೊತ್ತಿನದಿನ 1200 ಶಿಕ್ಷಕರ ಕೊರತೆ ಇದೆ. ಈ ಪ್ರಮಾಣದಲ್ಲಿ ಶಿಕ್ಷಕರ ಕೊರತೆ ಇರುವಾಗ ನಮ್ಮ ದೇಶ ಹೇಗೆ ಮುಂದೆ ಬರುವುದಕ್ಕೆ ಸಾಧ್ಯ? ನಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ ಇದರ ಬಗ್ಗೆ ಅನೇಕಸಲ ಪ್ರಯತ್ನಗಳನ್ನು ನಾವೆಲ್ಲಾ ಮಾಡಿದರೂ ಸಹ ಶಿಕ್ಷಕರ ನೇಮಕಾತಿ ಯಾವಪ್ರಮಾಣದಲ್ಲಿ ಆಗಬೇಕು ಅದು ಆಗುತ್ತಿಲ್ಲ ಈಗ ಈ ರೀತಿಯ ವ್ಯವಸ್ಥೆ ಇದ್ದಾಗ ನಮ್ಮ ಮಕ್ಕಳಿಗೆ ಒಳ್ಳೆಯ ವಿಧ್ಯಾಭ್ಯಾಸ ಸಿಗಲಿಕ್ಕೆ ಸಾಧ್ಯವಿಲ್ಲ, ಮತ್ತು ಇವೊತ್ತು ಅಲ್ಲಿ ಏನು ನೋಡುತ್ತೇವೆ ಅಂದರೆ ಇದುವರೆಗೂ ಸಹ ಸರಿಯಾದ ಪ್ರಮಾಣದಲ್ಲಿ ನೇಮಕಾತಿ ಮಾಡಲಿಕ್ಕೆ ಸರ್ಕಾರದವರು ಸರಿಯಾದ ಯೋಜನೆ ಮಾಡಿಲ್ಲ. ಬೀದರ್ ಜಿಲ್ಲೆಯಲ್ಲಿ ಬಹಳಷ್ಟು ಕಡೆಗಳಲ್ಲಿ ಹೈಸ್ಕೂಲ್ ಟೀಚರ್ಸ್ ಇಲ್ಲ, ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಂಟಿ ನಿರ್ದೇಶಕರಿಗೆ ಮತ್ತೆ ಮೇಲಿನ ಅಧಿಕಾರಿಗಳನ್ನು ವಿಚಾರಿಸಿದಾಗ ಅವರು ಹೇಳಿದರು ಕಳೆದ ಒಂದೂವರೆ ವರ್ಷದಿಂದ ಬೋರ್ಡ್‌ಕೇಸ್ ನಡೆಯುವುದರಿಂದ ಶಿಕ್ಷಕರ ನೇಮಕಾತಿ ನಿಂತುಹೋಗಿದೆ ಅದನ್ನು ಸಾಧ್ಯವಾದಷ್ಟು ಬೇಗ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದರು. ಸರ್ಕಾರದವರು ಇಷ್ಟೊಂದು ಕಾಲದತನಕ ಏಕೆ ಸುಮ್ಮನೆ ಕುಳಿತಿದ್ದಾರೆ, ಆ ಬೋರ್ಡ್ ಕೇಸನ್ನು ಅವರು ಪರಿಹರಿಸಿ ಸಾಧ್ಯವಾದಷ್ಟು ಬೇಗ ಅಲ್ಲಿ ಶಿಕ್ಷಕರ ನೇಮಕಾತಿ ಮಾಡಲಿಕ್ಕೆ ಪ್ರಯತ್ನ ಮಾಡಬೇಕಾಗಿತ್ತು ಆದರೆ ಈ ದಿಸೆಯಲ್ಲಿ ಅವರು ಮಾಡಲಾರದ್ದಕ್ಕೆ ಇವೊತ್ತು ಬೀದರ್ ಜಿಲ್ಲೆಯಲ್ಲಿ ಬಹಳ ಕೆಟ್ಟ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಈಗ 1995-96ನೇ ವಾರ್ಷಿಕ ವರದಿಯಲ್ಲಿ ಒಂದು ವಿಷಯ ಏನು ಎದ್ದುಕಾಣುತ್ತಿದೆ ಅಂದರೆ ಅಲ್ಲಿನ ಪಿ.ಯು.ಸಿ ಫಲಿತಾಂಶ ಇವೊತ್ತು ಶೇಕಡ 22ಆಗಿದೆ. ಇಡೀ ರಾಜ್ಯ-ದಲ್ಲಿ ದಕ್ಷಿಣಕನ್ನಡದಲ್ಲಿ 65 ಪರ್ಸೆಂಟ್‌ಗಿಂತ ಹೆಚ್ಚಿನ ಫಲಿತಾಂಶ ಬರುತ್ತಿರುವಾಗ ಬೀದರ್ ಜಿಲ್ಲೆ-ಯಲ್ಲಿ ಕೇವಲ 22 ಪರ್ಸೆಂಟ್ ಆಗಿದೆ. ನನಗೇನು ಅನಿಸುತ್ತದೆ ಎಂದರೆ ಸರಿಯಾದ ಶಿಕ್ಷಕರ ನೇಮ-ಕಾತಿ ಆಗದೇ ಇರುವುದಕ್ಕೆ, ಆ ವಿದ್ಯಾರ್ಥಿಗಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಲಿಕ್ಕೆ ನಮ್ಮಿಂದ ಆಗದೇ ಇದ್ದುದಕ್ಕೆ ನಮಗೆ ಈ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರಕ್ಕೆ ನನ್ನದೊಂದು ಸಲಹೆ ಏನೆಂದರೆ, ತಾವು ಬೇರೆ ಎಲ್ಲಾ ವ್ಯವಸ್ಥೆಯನ್ನು ಮಾಡುವುದಕ್ಕೆ ಮೊದಲು ಶಿಕ್ಷಕರ ನೇಮಕಾತಿಗೆ ಬಹಳ ಒತ್ತು ಕೊಟ್ಟು ಸರಿಯಾದ ಪ್ರಮಾಣದಲ್ಲಿ ಶಿಕ್ಷಕರನ್ನು ಈ ಶಾಲೆಗಳಲಲ್ಲಾ ಒದಗಿಸುವ ಹಾಗೆ ಮಾಡಬೇಕು. ಇದೇ ವಿಷಯದ ಬಗ್ಗೆ ಒಂದು ಉದಾಹರಣೆಯನ್ನು ಹೇಳಬೇಕಾದರೆ, ಲಕ್ಕಣಗಾವ್

ಎಂಬುವ ಒಂದು ಗ್ರಾಮಕ್ಕೆ ನಾನು ಹೋಗಿದ್ದೆ, ಅಲ್ಲಿ ಎರಡು ವರ್ಷಗಳ ಹಿಂದೆ ಅಲ್ಲಿ ಶಿಕ್ಷಕರ ಕೊರತೆಯಿಂದಾಗಿ ಅಲ್ಲಿನ ಫಲಿತಾಂಶ ಕೇವಲ ಶೇಕಡ 15 ರಷ್ಟು ಆ ಹೈಸ್ಕೂಲ್‌ನಲ್ಲಿ ಬಂದಿತ್ತು, ನಂತರ ಊರಿನ ಮುಖಂಡರೆಲ್ಲಾ ಸೇರಿ 3-4 ಜನ ಟೀಚರುಗಳನ್ನು ಅವರು ಚಂದಾ ಹಣವನ್ನು ಕಲೆಕ್ಟ್ ಮಾಡಿ ಅವರು ಟೀಚರ್ಸನ್ನು ನೇಮಕ ಮಾಡಿದ ನಂತರ ಆ ಊರಿನಲ್ಲಿ ಫಲಿತಾಂಶ ಶೇಕಡ 65ಕ್ಕೆ ತಲುಪಿದೆ. ಅಲ್ಲೊಂದು ಗ್ರಾಫ್‌ಮಾಡಿದ್ದಾರೆ, ಅದಕ್ಕೆ ಸರ್ಕಾರದಲ್ಲಿ ನನ್ನದೊಂದು ವಿನಂತಿ ಇದೆ, ತಾವು ಗ್ರಾಮೀಣ ಪ್ರದೇಶದಲ್ಲಿ ಇರತಕ್ಕಂಥ ಈ ಶಾಲೆಗಳೇನಿವೆ ಈ ಶಾಲೆಗಳಲ್ಲಿ, ಕಳೆದ ಒಂದು 20 ವರ್ಷದ ರೆಕಾರ್ಡ್ಸನ್ನು ತಾವು ತೆಗಿಸಬೇಕು, ಯಾವ ಯಾವ ಶಾಲೆಗಳಲ್ಲಿ ಎಷ್ಟೆಷ್ಟು ಶಿಕ್ಷಕರು ಇದ್ದರು, ಮತ್ತು ಯಾವ ಶಾಲೆಗಳಲ್ಲಿ ಸರಿಯಾದ ಪ್ರಮಾಣದಲ್ಲಿದ್ದಂಥ ಶಿಕ್ಷಕರು ಇದ್ದರು, ಬೇರೆ ಕಡೆ ಎಲ್ಲಿ ಇರಲಿಲ್ಲ ಅಲ್ಲಿನ ರಿಸಲ್ಟ್ ಮುಂಬರುವ ವರ್ಷಗಳಲ್ಲೆಲ್ಲಾ ಹೇಗೆ ಆಗಿದೆ ಎಂದು ನೀವು ಏನಾದರೂ ಇಂತಹ ಒಂದು ಸರ್ವೆಯನ್ನು ಮಾಡಿದರೆ ನಾವು ಏನು ಒಂದು ವಿಷಯವನ್ನು ಹೇಳುತ್ತಿದ್ದೇವೆ ಅದು ನಿಮಗೆ ಎದ್ದು ಕಾಣಬಹುದು ಎಂದರೆ ಎಲ್ಲಿ ಸರಿಯಾದ ಪ್ರಮಾಣದಲ್ಲಿ ಶಿಕ್ಷಕರು ಇದ್ದಾರೆ ಅಲ್ಲಿ ರಿಸಲ್ಟ್ಸ್ ಇವೊತ್ತಿನದಿನ ಚೆನ್ನಾಗಿ ಬರುತ್ತಾ ಇದೆ ಎಂದು.

7.20 ಪಿ.ಎಂ.

ಎಲ್ಲಿ ಶಿಕ್ಷಕರ ಕೊರತೆ ಇದೆ ಆ ಊರಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಹಾಳಾಗಿದೆ. ಅವರ ಫ್ಯೂಚರ್ ಹಾಳಾಗಿದೆ. ಇದಕ್ಕೆಲ್ಲಾ ದುರಸ್ತಿ, ವ್ಯವಸ್ಥೆಯಾಗಬೇಕಾಗಿದೆ. ತಾವು ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಬಹಳ ಸಲ ಡಿ.ಡಿ.ಪಿ.ಐ ಆಫೀಸ್‌ನಿಂದ ಕಳುಹಿಸುವಂತಹ ಮಾಹಿತಿಗಳು ಸರಿಯಾಗಿ ಆ ಕಡೆಯಿಂದ ಈ ಕಡೆಗೆ ಬರುತ್ತಾ ಇಲ್ಲ. ಆದುದರಿಂದ ಡಿಪಾರ್ಟ್‌ಮೆಂಟ್ ಅನ್ನು ಕಂಪ್ಯೂಟರೈಸ್ ಮಾಡಬೇಕೆಂದು ಈ ವಿಷಯವನ್ನು ಸರ್ಕಾರದ ಮುಂದಿಡುತ್ತೇನೆ. ಇನ್ನು ಬೀದರ್ ಜಿಲ್ಲೆಯಲ್ಲಿ ಮುಖ್ಯೋಪಧ್ಯಾಯರುಗಳ ಹುದ್ದೆಗಳು ಸುಮಾರು 57 ಹುದ್ದೆಗಳು ಖಾಲಿ ಇವೆ. ಈ ಶಾಲೆಗಳನ್ನು ಸರಿಯಾದಂತಹ ರೀತಿಯಲ್ಲಿ ನಡೆಸಿಕೊಂಡು ಹೋಗುವಂತಹ ಜವಾಬ್ದಾರಿ ಯಾರ ಮೇಲೆ ಇರುತ್ತದೆಂದರೆ ಆ ಮುಖ್ಯೋಪಧ್ಯಾಯರುಗಳ ಮೇಲೆ ಇರುತ್ತದೆ. ಆದರೆ ಇಂತಹ ಹುದ್ದೆಗಳು ಹೆಚ್ಚಿನ ಪ್ರಮಾಣದಲ್ಲಿ ಪೋಸ್ಟ್‌ಗಳು ಇಲ್ಲದೆ ನಾವು ಶಾಲೆಗಳನ್ನು ನಡೆಸುತ್ತೇವೆಂದರೆ ಇದು ನಮ್ಮ ನಿರ್ಲಕ್ಷ್ಯತನವನ್ನು ತೋರಿಸುತ್ತದೆ, ಮತ್ತು ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಆದುದರಿಂದ ಮುಖ್ಯೋಪಧ್ಯಾಯರುಗಳ ಹುದ್ದೆ ಏನು ಖಾಲಿ ಇವೆ, ಅದನ್ನು ಸರ್ಕಾರದವರು ಭರ್ತಿ ಮಾಡಬೇಕು. ಈ ಶಾಲೆಗಳು ಸರಿಯಾದಂತಹ ರೀತಿಯಲ್ಲಿ ನಡೆಸಿಕೊಂಡು ಹೋಗುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಬಹಳಷ್ಟು ಹಳ್ಳಿಗಳಲ್ಲಿ ಮಹಿಳೆಯರು ದೂರ ದೂರದ ಊರುಗಳಿಗೆ ಓದಲು ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜುಗಳನ್ನು ಓದಲು ಹೋಗುವುದಕ್ಕೆ ತಯಾರಾಗುವುದಿಲ್ಲ. ಅವರು ಇನ್ನೂ ಹಳೇ ಸಂಪ್ರದಾಯದಲ್ಲಿರುವುದರಿಂದ ಆದಷ್ಟು ಮಟ್ಟಿಗೆ ಎಲ್ಲೆಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸಿಗುತ್ತಾರೆಂದು ಸರ್ಕಾರಕ್ಕೆ ಮಾಹಿತಿ ಇದೆ, ಅಂತಹ ಕಡೆಗಳಲ್ಲಿ ತಾವು ಹೆಚ್ಚಿನ ರೀತಿಯಲ್ಲಿ ಹೈಸ್ಕೂಲ್‌ಗಳನ್ನು

ಕಾಲೇಜುಗಳನ್ನು ತೆರೆದರೆ ಹೆಚ್ಚಿನ ಮಹಿಳೆಯರು ವಿದ್ಯಾಭ್ಯಾಸವನ್ನು ಮಾಡಲು ಸಾಧ್ಯವಾಗುತ್ತದೆ ಮತ್ತು ಮಹಿಳೆಯರಿಗಾಗಿ ಐ.ಟಿ.ಐ ಮತ್ತು ಪಾಲಿಟೆಕ್ನಿಕ್‌ಗಳನ್ನು ಹಿಂದುಳಿದ ಭಾಗಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ಇಂತಹ ಕಡೆಗಳಲ್ಲಿ ತೆಗೆಯಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಈಗ ಮೆಡಿಕಲ್, ಇಂಜಿನಿಯರ್, ಮತ್ತು ಪ್ರೊಫೆಷನಲ್ ಕೋರ್ಸ್ ಕಾಲೇಜುಗಳಲ್ಲಿ ಅಡ್ಮಿಷನ್ ಆಗಿರುವಂತಹ ವಿದ್ಯಾರ್ಥಿಗಳ ಪೈಕಿ ಗುಲ್ಬರ್ಗಾ ಡಿವಿಜನ್‌ನ ವಿದ್ಯಾರ್ಥಿಗಳು ಕಡಿಮೆ ಜನರು ಇಂತಹ ಕೋರ್ಸ್‌ಗಳಿಗೆ ಆಯ್ಕೆಯಾಗಿದ್ದಾರೆ. ಆದುದರಿಂದ ಸರ್ಕಾರದವರಲ್ಲಿ ನನ್ನ ಮನವಿ ಏನೆಂದರೆ ಹಿಂದುಳಿದ ಭಾಗದಲ್ಲಿರುವಂತಹ ವಿದ್ಯಾರ್ಥಿಗಳಿಗೆ ಪ್ರೊಫೆಷನಲ್ ಕೋರ್ಸ್‌ಗಳಲ್ಲಿ ಮತ್ತು ಮೆಡಿಕಲ್ ಮತ್ತು ಇಂಜನಿಯರಿಂಗ್‌ಗೆ ಅಡ್‌ಮಿಷನ್ ಮಾಡುತ್ತೀರಿ. ಅಡ್ಮಿಷನ್ ಮಾಡುವಂತಹ ಸಂದರ್ಭದಲ್ಲಿ ರೀಜನಲ್ ಮೆರಿಟ್ ಕಂ ರೋಸ್ಟರ್ ನೋಡಿ ಮಾಡಿದರೆ ಆ ಭಾಗದ ವಿಧ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಮತ್ತು ಅವರು ಇನ್ನು ಹೆಚ್ಚಿನ ರೀತಿಯಲ್ಲಿ ಮುಂದೆ ಬರುವುದಕ್ಕೆ ಸಾಧ್ಯವಾಗು-ತ್ತದೆ. ಹಿಂದುಳಿದ ಭಾಗಗಳಲ್ಲಿ ಅನೇಕ ಸಮಸ್ಯೆಗಳು ಮತ್ತು ಬಡತನವಿರುವುದರಿಂದ ಮತ್ತು ಅಲ್ಲಿ ಇಂತಹ ಶಾಲೆಗಳು ಇಲ್ಲದಿರುವುದರಿಂದ ಶಿಕ್ಷಕರ ಕೊರತೆ ಇರುವುದರಿಂದ ಅಲ್ಲಿನ ಜನರು ಒಳ್ಳೆಯ ಪರ್ಸಂಟೇಜ್ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ರೀಜನಲ್ ಮೆರಿಟ್ ಪ್ರಕಾರ ಏನಾದರೂ ಇಂತಹ ಸೆಲೆಕ್ಷನ್ ಮಾಡಿದರೆ ಹೆಚ್ಚಿನ ರೀತಿಯಲ್ಲಿ ಅಲ್ಲಿನ ವಿದ್ಯಾರ್ಥಿಗಳು ಇಂತಹ ಕೋರ್ಸ್‌ಗಳಿಗೆ ಪ್ರವೇಶ-ವನ್ನು ಪಡೆಯಲು ಅವಕಾಶವಾಗುತ್ತದೆ. ಆದುದರಿಂದ ಸರ್ಕಾರ ಈ ಕಡೆಗೆ ಗಮನಹರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಮತ್ತೊಂದು ಮುಖ್ಯವಾದಂತಹ ವಿಷಯವೇನೆಂದರೆ ಗುಲ್ಬರ್ಗಾದಲ್ಲಿ ಒಂದು ಯೂನಿವರ್ಸಿಟಿ ಇದೆ. ಆ ವಿಶ್ವವಿದ್ಯಾನಿಲಯದಲ್ಲಿ ಬಹಳಷ್ಟು ವರ್ಷದಿಂದ ಕುಲಪತಿಗಳು ನೇಮಕವಾಗುತ್ತಾ ಬಂದಿದ್ದಾರೆ. ಆದರೆ ಗುಲ್ಬರ್ಗಾದ ಡಿವಿಜನ್‌ನವರು ಒಬ್ಬರೂ ಕುಲಪತಿಗಳಾಗಿ ನೇಮಕವಾಗಿಲ್ಲ. ಆ ಭಾಗದಲ್ಲಿ ಯಾರು ಯೋಗ್ಯರು ಇಲ್ಲವೇ? ಅಲ್ಲಿ ಬಹಳಷ್ಟು ಜನರು ಯೋಗ್ಯರು ಇದ್ದಾರೆಂದು ನಾನು ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೀನೆ. ತಾವು ಕುಲಪತಿಗಳನ್ನು ನೇಮಕ ಮಾಡುವಾಗ ಆ ಭಾಗದ ಬಗ್ಗೆ ನಿರ್ಲಕ್ಷ್ಯಮಾಡಿದ್ದೀರೆಂದು ನಾನು ನೊಂದು ಹೇಳಬೇಕಾ-ಗುತ್ತದೆ. ಮುಂದೆ ಬರುವ ದಿವಸಗಳಲ್ಲಿ ಕುಲಪತಿಯವರನ್ನು ನೇಮಕ ಮಾಡುವಾಗ ಗುಲ್ಬರ್ಗಾ-ದವರನ್ನು ಸಹ ತಾವು ಗಣನೆಗೆ ತೆಗೆದುಕೊಂಡು ಅವರಿಗೆ ಅನ್ಯಾಯವಾಗದ ಹಾಗೆ ನೋಡಿಕೊಳ್ಳ-ಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿಸುತ್ತೇನೆ. ನಾನು ಇದನ್ನು ಏಕೆ ಹೇಳುತ್ತೇನೆಂದರೆ ಆ ಭಾಗದವರೇ ಕುಲಪತಿಗಳಾದರೆ ಇನ್ನು ಹೆಚ್ಚಿನ ಕಾಳಜಿಯನ್ನು ವಹಿಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಹೋದ ವರ್ಷ ನಾನು ಅಲ್ಲಿ ಗಮನಿಸಿದಂತಹ ವಿಷಯ ಏನು ಎಂದರೆ ಅಲ್ಲಿ ಒಂದು ಸೆಲೆಕ್ಷನ್ ನಡೆಯಿತು. ಗುಲ್ಬರ್ಗಾ ಯುನಿವರ್ಸಿಟಿಯ ಪೋಸ್ಟ್ ಗ್ರಾಜ್ಯುಯೇಟ್ ಆಗಿರುವಂತಹ ಒಬ್ಬ ವ್ಯಕ್ತಿಗೆ ಆ ಯೂನಿವರ್ಸಿಟಿಯಿಂದ ಗೋಲ್ಡ್ ಮೆಡಲ್ ಬಂದಿದ್ದರೂ ಸಹ ಗಣಿತ ವಿಭಾಗದಲ್ಲಿ ಕೆಲಸ ಸಿಗುವುದಕ್ಕೆ ಸಾಧ್ಯವಾಗಲಿಲ್ಲ. ಈ ಸಮಯದಲ್ಲಿ ಬೇರೆ ಭಾಗದ ಕುಲಪತಿಗಳು ಆಗಿದ್ದವರು ಇದ್ದುದರಿಂದ ಅವರು ಇಂಟರ್‌ವ್ಯೂನಲ್ಲಿ ಕ್ರೈಟೀರಿಯಾವನ್ನು ಬೇರೆ ರೀತಿಯಲ್ಲಿ ಮಾಡಿಕೊಂಡು ಆ

ಭಾಗದ ಜನರಿಗೆ ಇಂತಹ ಹುದ್ದೆ ಸಿಗುವುದಕ್ಕೆ ಅವರು ವಂಚಿತರನ್ನಾಗಿ ಮಾಡಿದ್ದಾರೆ. ಆ ಅಭ್ಯರ್ಥಿಗೆ ಅನ್ಯಾಯವಾಗಿದೆ. ಇಂತಹ ಅನ್ಯಾಯವಾಗದ ಹಾಗೆ ನೋಡಿಕೊಳ್ಳಬೇಕಾಗುತ್ತದೆ. ಆದುದರಿಂದ ಸರ್ಕಾರ ಆ ಭಾಗದ ಜನರನ್ನು ಕುಲಪತಿಗಳನ್ನಾಗಿ ನೇಮಕವಾಗುವಂತಹ ವಿಷಯದಲ್ಲಿ ಕನ್ಸಿಡರ್ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಇಲ್ಲಿ ಬಹಳಷ್ಟು ಸದಸ್ಯರು ಶಾಲೆಗಳ ಪ್ರವೇಶದ ಬಗ್ಗೆ ನಡೆಯುತ್ತಿರುವಂತಹ ವಿದ್ಯಾಮಾನಗಳ ಬಗ್ಗೆ ಮಾತನಾಡಿದರು. ಅದರಲ್ಲೂ ಮುಖ್ಯವಾಗಿ ಆಂಗ್ಲ ಮಾಧ್ಯಮ ಶಾಲೆಗಳ ಬಗ್ಗೆ ಚರ್ಚೆಯಾಗಿದೆ. ನನ್ನ ವಿಚಾರವೇನೆಂದರೆ ಈ ರೀತಿಯ ಒಂದು ವ್ಯವಸ್ಥೆ-ಯಾಗುವುದಕ್ಕೆ ಸರ್ಕಾರವೇ ಕಾರಣ, ನಾವೆಲ್ಲರೂ ಕಾರಣವಾಗುತ್ತೇವೆ. ಯಾವಾಗ ಹೊಸ ಶಾಲೆಗಳಿಗೆ ಅನುಮತಿಯನ್ನು ಕೊಡುವುದಿಲ್ಲವೆಂದರೆ ಅಲ್ಲಿ ಮನೋಪಲಿಯಾಗುವಂತಹ ಒಂದು ಸ್ಥಿತಿಯನ್ನು ನಾವು ತಯಾರು ಮಾಡುತ್ತಿದ್ದೇವೆ. ಈ ರೀತಿಯಲ್ಲಿ ಮನೊಪಲಿಯಾಗುವುದರಿಂದ ಎಕ್ಸ್‌ಪ್ಲಾಯಿ-ಟೇಷನ್ ಆಗುವುದು ಸಹಜ, ಫೇವರಿಟಿಸಂ, ನೆಪ್ರೋಟಿಸಂ ಆಗುವುದಕ್ಕೆ ಸಾಧ್ಯವಾಗುತ್ತದೆ; ಇಂತಹ ಶಾಲೆಗಳನ್ನು ನಡೆಸಲು ಯಾರೇ ಮುಂದೆ ಬಂದರೂ ಸರ್ಕಾರದವರು ಹೆಚ್ಚಿನ ಪ್ರಮಾಣದಲ್ಲಿ ಪರ್ಮಿಷನ್ ಕೊಡಬೇಕೆಂದು ನನ್ನ ಅನಿಸಿಕೆ, ತಾವು ಇಂತಹ ಶಾಲೆಗಳನ್ನು ತೆಗೆಯುವುದಕ್ಕೆ ಕಂಡೀ-ಷನ್ ಹಾಕಿ ಆದರೆ ಒಳ್ಳೆಯ ರೀತಿಯ ವಿದ್ಯಾಭ್ಯಾಸ ಕೊಡುವುದಕ್ಕೆ ಬೇಕಾದಂತಹ ಸವಲತ್ತುಗಳು ಮತ್ತು ಸೌಲಭ್ಯಗಳು ಇರಬೇಕು. ಆದರೆ ಅರ್ಜಿಗಳನ್ನು ಹಾಕುವವರದ್ದನ್ನೆಲ್ಲಾ ನಿರಾಕರಿಸುತ್ತಾ ಹೋದರೆ ಇಂತಹ ಶಾಲೆಗಳು ಬರುವುದಿಲ್ಲ. ಶಾಲೆಗಳ ಕೊರತೆಯಾದರೆ ಹತ್ತು ಸಾವಿರ, ಇಪ್ಪತ್ತು ಸಾವಿರ, ಐವತ್ತು ಸಾವಿರ ರೂಪಾಯಿಗಳ ಡೊನೇಷನ್ ಚರ್ಚೆ ನಡೆಯುತ್ತಾ ಇರುತ್ತದೆ. ಇದು ಕೇವಲ ಬೆಂಗಳೂರು ನಗರದಲ್ಲಿ ಅಷ್ಟೇ ಅಲ್ಲ. ಬೀದರ್ ನಗರದಲ್ಲೂ, ಭಾಲ್ಕಿ ಹೆಡ್ ಕ್ವಾರ್ಟರ್ಸ್‌ನಲ್ಲೂ ಈ ರೀತಿಯ ಡೊನೇಷನ್ ವ್ಯವಸ್ಥೆ ಶುರುವಾಗಿದೆ. ಆದುದರಿಂದ ಸರ್ಕಾರದಲ್ಲಿ ನನ್ನ ಮನವಿ ಏನೆಂದರೆ ಆದಷ್ಟು ಹೆಚ್ಚಿನ ರೀತಿಯಲ್ಲಿ ಶಾಲೆಗಳನ್ನು ತೆರೆಯಲು ಖಾಸಗಿಯವರು ಮುಂದೆ ಬಂದರೆ ಪರ್ಮಿ-ಷನ್ ಕೊಡಿ, ಅವರ ಮೇಲೆ ಕಂಟ್ರೋಲ್ ಇಡಿ, ರೆಗ್ಯುಲೇಟ್ ಮಾಡಿ, ಅವರು ಎಕ್ಸ್‌ಪ್ಲಾಯಿಟೇಷನ್ ಮಾಡದ ಹಾಗೆ ಒಂದು ವ್ಯವಸ್ಥೆಯನ್ನು ಮಾಡಿ, ಆದರೆ ಪರ್ಮಿಷನ್ ಕೊಟ್ಟರೆ ಇಂತಹ ಒಂದು ಮೊನೋಪಲಿ ಮುಂದುವರೆಯದ ಹಾಗೆ ಆಗುತ್ತದೆ, ಮತ್ತು ಡೊನೇಷನ್ ಪಿಡುಗು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿದ ಹಾಗೆ ಆಗುತ್ತದೆ. ಇವತ್ತು ಬಹಳಷ್ಟು ಜನರು ಓದು ಬರಹ ಕಲಿತು ನಿರುದ್ಯೋಗಿ-ಗಳು ಆಗಿದ್ದಾರೆ. ಇದಕ್ಕೆ ನಮ್ಮ ವಿದ್ಯಾಭ್ಯಾಸದ ಪದ್ಧತಿ ಕೂಡಕಾರಣವಾಗಿದೆ. ನಾವು ಸಾಧ್ಯವಾದಷ್ಟು ಮಟ್ಟಿಗೆ ವೃತ್ತಿಪರ ತರಬೇತಿಯನ್ನು ಕೊಟ್ಟರೆ ಒಳ್ಳೆಯದು. ವಿದ್ಯಾರ್ಥಿಗಳು ಓದಿ ಹೊರಗಡೆ ಬಂದರೆ ಕೆಲಸ ಸರಳವಾಗಿ ಸಿಗುವ ಹಾಗೆ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಬದಲಾವಣೆಯನ್ನು ತರಬೇಕಾಗಿದೆ. ಆದುದರಿಂದ ಸರ್ಕಾರದವರು ಸಾಧ್ಯವಾದಷ್ಟು ವೃತ್ತಿಪರ ತರಬೇತಿಗಳ ಕಡೆಗೆ ಹೆಚ್ಚಿನ ಗಮನಕೊಡ-ಬೇಕು. ಈ ಕೋರ್ಸ್‌ಗಳು ಹೆಚ್ಚಿಗೆ ಮಾಡಲು ಹಣವನ್ನು ಕೊಟ್ಟು ಇಂತಹ ಕೋರ್ಸ್‌ಗಳನ್ನು ತೆಗೆಯಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಡೆವಲಪಿಂಗ್ ಕಂಟ್ರೀಸ್‌ನಲ್ಲಿ ನಾವು ಏನು ನೋಡುತ್ತಿದ್ದೇವೆಂದರೆ ಡಿಗ್ರಿಗಳಿಗೆ ಮತ್ತು ಕೆಲಸಕ್ಕೂ ಡೀಲಿಂಕ್ ಮಾಡಿದ್ದಾರೆ. ಇಲ್ಲಿ

ಕೆಲಸಕ್ಕೆ ಹೋಗಬೇಕಾದರೂ ಡಿಗ್ರಿಯಾಗಿರಬೇಕು. ಇಂಟರ್‌ವ್ಯೂವನ್ನು ತೆಗೆದುಕೊಳ್ಳಬೇಕಾದರೆ ಡಿಗ್ರಿ ಬೇಕು ಎನ್ನುವ ವಿಚಾರ ಇರುವುದರಿಂದ ಇವತ್ತಿನ ದಿವಸ ಡಿಗ್ರಿಗಳು ಅವಶ್ಯಕತೆ ಇದೆ. ಇದನ್ನು ಸರ್ಕಾರ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಇದಾದ ನಂತರ ಆರೋಗ್ಯ ಖಾತೆಯ ಬಗ್ಗೆ ಹೇಳ-ಬೇಕಾದರೆ, ನಮ್ಮೆಲ್ಲರಿಗೂ ಗೊತ್ತಿದ್ದ ಹಾಗೆ ಬಹಳಷ್ಟು ಆಸ್ಪತ್ರೆಗಳಲ್ಲಿ ಇವತ್ತಿನದಿವಸ ವೈದ್ಯರಿಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ವೈದ್ಯರಿಲ್ಲ ನರ್ಸ್ ಇಲ್ಲ. ಇದರ ನೇಮಕಾತಿಯನ್ನು ಆದಷ್ಟು ಬೇಗ ಸರ್ಕಾರದವರು ಮಾಡಬೇಕು. ಮತ್ತೆ ಇನ್ನೊಂದು ವಿಷಯ ಎಲ್ಲೆಲ್ಲಿ ಈ ಪ್ರಾಥಮಿಕ ಆರೋಗ್ಯ ಕೇಂದ್ರಗಳಿರುತ್ತವೆ, ಅಲ್ಲಿ ಸರ್ಕಾರದವರು ರೆಸಿಡೆನ್‌ಷಿಯಲ್ ಕ್ವಾರ್ಟರ್ಸ್ ಅನ್ನು ಸಹ ತಾವು ಕಟ್ಟಿಸಿ-ಕೊಟ್ಟರೆ, ವೈದ್ಯರುಗಳು ಅಲ್ಲೇ ಇರುವಂತಹ ಒಂದು ವ್ಯವಸ್ಥೆ ಇರುತ್ತದೆ. ಇದರಿಂದ ಆ ಭಾಗದ ಜನರಿಗೆ ಆ ವೈದ್ಯರ ಸೇವೆ ಸದಾ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ, ನಾವು ಎಷ್ಟೋಸಲ ನಾವು ನೋಡುತ್ತಿರುತ್ತೇವೆ, ಹಳ್ಳಿಗಳಲ್ಲಿ ರಾತ್ರಿ ಹೊತ್ತು ಎಮರ್ಜೆನ್ಸಿ ಇರುತ್ತವೆ, ಹಾವು ಕಡಿದಂಥ ಕೇಸ್-ಗಳು ಇರುತ್ತವೆ, ಇನ್ನಾವುದೋ ಒಂದು ವಿಷಯವಿರುತ್ತದೆ. ಇಂಥ ಒಂದು ಸಮಯದಲ್ಲಿ ವೈದ್ಯರು ಒಂದು ವೇಳೆ ಪಟ್ಟಣಗಳಲ್ಲಿ ಇದ್ದು ಆ ಹಳ್ಳಿಗಳಿಗೆ ಅವರು ಹೋಗುವುದಕ್ಕೆ ತೊಂದರೆಗಳಿದ್ದರೆ ಜನರು ಇವರ ಸೇವೆಯಿಂದ ವಂಚಿತರಾಗುತ್ತಾರೆ. ಇಂತಹದ್ದು ಆಗಬಾರದು, ಜನರಿಗೆ ಒಳ್ಳೆಯ ಸೇವೆ ಸಿಗು-ವಂತಾಗಬೇಕಾದರೆ, ರೆಸಿಡೆನ್‌ಷಿಯಲ್ ಕ್ವಾರ್ಟರ್ಸ್ ಅನ್ನು ಆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜೊತೆಯಲ್ಲೇ ತಾವು ಕಟ್ಟುವ ಹಾಗೆ ಒಂದು ಯೋಜನೆಯನ್ನು ಮಾಡಿದರೆ ಒಳ್ಳೆಯದೆಂದು ನಾನು ಇವತ್ತು ಹೇಳುತ್ತಿದ್ದೇನೆ. ಇದರ ಜೊತೆಯಲ್ಲಿ ಕಳೆದ ವರ್ಷ, ಬಹಳಷ್ಟು ಆಸ್ಪತ್ರೆಗಳಲ್ಲಿ ಇದಕ್ಕಿಂತ ಮುಂಚೆ ನಾವು ಏನು ನೋಡಿದ್ದೇವೆ ಎಂದರೆ, ಅಲ್ಲಿ ಅನಸ್ತೇಟಿಸ್ಟ್ ಇದ್ದರೆ ಸರ್ಜನ್ ಇರುತ್ತಿರಲಿಲ್ಲ. ಸರ್ಜನ್ ಇದ್ದರೆ ಅನ್‌ಸ್ತೇಟಿಸ್ಟ್ ಇರಲಿಲ್ಲ. ಹೀಗೆ ಆರ್ತೋಪಿಡಿಷಿಯನ್ ಜಿಲ್ಲಾ ಆಸ್ಪತ್ರೆಗಳಲ್ಲೂ ಇಲ್ಲದಂಥ ಒಂದು ಸಮಯವೂ ಇತ್ತು. ಅಫ್ತಾಲ್ಮಾಲಜಿಸ್ಟ್ ಇಲ್ಲದಂಥ ಸಮಯ ಕೆಲವು ಕಡೆ ಇದೆ ಎಂದರೆ, ಎರಡೆರಡು, ಮೂರು ಮೂರು ಸ್ಪೆಷಲಿಸ್ಟ್‌ಗಳು ಇರುತ್ತಿದ್ದರು. ಇಂತಹ ಒಂದು ಸಮಸ್ಯೆ ಕೂಡ ಇತ್ತು. ಈಗ ತಾವು ಸ್ಪೆಷಲಿಸ್ಟ್ ಕೇಡರ್ ಎಂದು ಮಾಡಿ, ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಏನು ಒಂದು ವ್ಯವಸ್ಥೆಯನ್ನು ಮಾಡುತ್ತಿದ್ದೀರಿ, ಇದನ್ನು ಆದಷ್ಟು ಬೇಗ ತಾವು ಎಲ್ಲಾ ಫೀಲ್ಡ್‌ನಲ್ಲಿ ತರಬೇಕು ಕಾರ್ಯಗತದಲ್ಲಿ ತರಬೇಕು, ತಂದು, ಈ ರೀತಿಯ ಸ್ಪೆಷಲಿಸ್ಟ್ ಸೇವೆ ಜಿಲ್ಲಾ ಆಸ್ಪತ್ರೆಗಳಲ್ಲಿ ಎಲ್ಲಾ ಜನರಿಗೂ ಸಿಗುವ ಹಾಗೆ ಒಂದು ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಿ ಹೇಳುತ್ತಿದ್ದೇನೆ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ಇಲ್ಲಿ ಅನೇಕ ಸದಸ್ಯರು ಮಾತನಾಡುವಾಗ ಪ್ರೈವೇಟ್ ನರ್ಸಿಂಗ್ ಹೋಮ್ಸ್ ಬಗ್ಗೆ ಅವರು ಸ್ವಲ್ಪ, ಪ್ರಿಜುಡೇಸ್ ಆಗಿ ಮಾತನಾಡುತ್ತಿದ್ದಾರೆಂದು ನನಗನಿ-ಸುತ್ತದೆ. ಈಗ ಪ್ರೈವೇಟ್ ನರ್ಸಿಂಗ್ ಹೋಮ್ಸ್ ಬೇಕೇ ಬೇಕು ಕಾರಣ, ಪ್ರೈವೇಟ್ ನರ್ಸಿಂಗ್ ಹೋಮ್ಸ್ ಇದ್ದಾಗಲೇ ಸರ್ಕಾರಿ ಆಸ್ಪತ್ರೆಗಳ ಮೇಲೆ ಲೋಡ್ ಕಡಿಮೆ ಬೀಳುತ್ತದೆ ಮತ್ತು ಎಂಟು, ಹತ್ತು ಒಂದು ಕಡೆ ಕೂಡಿ ಕೆಲಸ ಮಾಡುವಾಗ ಯಾವ ರೀತಿ ಒಳ್ಳೆಯ ಸೇವೆ ಜನರಿಗೆ ಸಿಗುತ್ತದೆ, ವೈದ್ಯರು ತಮ್ಮಷ್ಟಕ್ಕೆ ತಾವೇ ಬೇರೆ ಬೇರೆ ಕಡೆ ಪ್ರಾಕ್ಟೀಸ್ ಮಾಡುತ್ತಾ ಹೋದರೆ ಅವರ ಪೂರ್ಣಸೇವೆ

ಜನರಿಗೆ ಸಿಗುವುದಕ್ಕಾಗುವುದಿಲ್ಲ. ಈಗ ನಾವೇನು ನೋಡುತ್ತಿದ್ದೇವೆಂದರೆ, ಈ ಗ್ರಾಹಕರ ಕಾಯಿದೆ ಬಂದ ಮೇಲೆ, ಬಹಳಷ್ಟು ವೈದ್ಯರು ಅವರು ಪ್ರಾಕ್ಟೀಸ್ ಮಾಡುವಾಗ, ಬಹಳಷ್ಟು ಟೆಸ್ಟ್ ಮಾಡಿಯೇ ಅವರು ರೋಗಿಗಳಿಗೆ ಔಷಧಿಗಳನ್ನು ಕೊಡುವುದಕ್ಕೆ ಮುಂದಾಗುತ್ತಾರೆ. ಹೀಗಿರುವಾಗ, ಟೆಸ್ಟ್ ಮಾಡುವುದಕ್ಕಾಗಲಿ, ಡಯಗ್ನೊಸಿಸ್‌ಗಾಗಲಿ ಬಹಳಷ್ಟು ಎಕ್ವಿಪ್‌ಮೆಂಟ್‌ಗಳು ಏನಿವೆ ಇದು ಬಹಳಷ್ಟು ಬೆಲೆಯಾಗಿರುವುದರಿಂದ ಇದರ ಬಗ್ಗೆ ಸರ್ಕಾರ ಸ್ವಲ್ಪ ವಿಚಾರ ಮಾಡಬೇಕೆಂದು ನನ್ನ ಒಂದು ಸಲಹೆ. ಅದೇನೆಂದರೆ, ತಾವು ಯಾವರೀತಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಜನರು ಮುಂದೆ ಬಂದಾಗ ಅವರಿಗೆ ಇಪ್ಪತ್ತು, ಇಪ್ಪತ್ತೈದು ಪರ್ಸೆಂಟ್ ಸಬ್ಸಿಡಿಯನ್ನೆಲ್ಲಾ ಕೊಟ್ಟು ಅವರಿಗೆ ಸಹಾಯ ಮಾಡುತ್ತೀರಿ ಅದೇ ರೀತಿ ಒಂದು ವೇಳೆ ವೈದ್ಯರುಗಳು ಮುಂದೆ ಬಂದು ಪಾಲಿಕ್ಲಿನಿಕ್ ಎಂದು ಅವರು ತೆರೆಯುವುದಕ್ಕೆ ಮುಂದೆ ಬಂದರೆ, ಅವರು ಆ ಪಾಲಿಕ್ಲಿನಿಕ್‌ಗಳಲ್ಲಿ, ಏನು ಕೆಲವು ಎಕ್ವಿಪ್‌ಮೆಂಟ್‌ಗಳನ್ನು ಅಲ್ಲಿ ತಂದು ಒಳ್ಳೆಯ ಸೇವೆಯನ್ನು ಜನರಿಗೆ ಕೊಡಬೇಕೆಂದು ಬಯಸುತ್ತಾರೆ. ಅಂತಹ ಸಮಯದಲ್ಲಿ ಅವರಿಗೆ ಈ ಎಕ್ವಿಪ್‌ಮೆಂಟ್‌ಗಾಗಿ ಶೇಕಡ 50ರಷ್ಟು ಸಬ್ಸಿಡಿಯನ್ನಾದರೂ ತಾವು ಕೊಟ್ಟು, ಅವರು ಇಂತಹ ಒಳ್ಳೆ ಒಳ್ಳೆಯ ಪಾಲಿಕ್ಲಿನಿಕ್‌ಗಳನ್ನು ತೆಗೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಸರ್ಕಾರದಲ್ಲಿ ಒಂದು ಮನವಿಯನ್ನು ಮಾಡುತ್ತೇನೆ. ಅದು ಈ ಗ್ರಾಮಾಂತರ ಪ್ರದೇಶಗಳಲ್ಲಿ ಅಂದರೆ ಹತ್ತು ಸಾವಿರದಿಂದ ಐವತ್ತು ಸಾವಿರ ಜನಸಂಖ್ಯೆ ಇರತಕ್ಕಂಥ ಕೆಲವು ಊರುಗಳೇನಿವೆ ಅಲ್ಲಿ ಇಂತಹ ಪಾಲಿಕ್ಲಿನಿಕ್‌ಗಳು ಸಾಧ್ಯವೋ, ಅಂತಹ ಕಡೆ ಒಂದು ವೇಳೆ ಪ್ರತಿಭಾವಂತ ವೈದ್ಯರು ಯಾರು ಪಾಲಿಕ್ಲಿನಿಕ್ ತೆರೆಯಲು ಮುಂದೆ ಬರುತ್ತಾರೆ ಅವರಿಗೆ ನಾವು ಪ್ರೋತ್ಸಾಹ ಕೊಡುವುದು ಬಹಳ ಅವಶ್ಯಕತೆ ಇದೆ. ಕಾರಣವೇನೆಂದರೆ, ಇವತ್ತು ನಾವು ನೋಡುತ್ತಿದ್ದೇವೆ, ಬಹಳಷ್ಟು ಕಾಲೇಜುಗಳು ಬಂದಿವೆ, ಪೋಸ್ಟ್ ಗ್ರಾಜುಯೇಟ್ ಕೋರ್ಸಸ್ ಮುಗಿಸಿಕೊಂಡು ಅನೇಕ ವೈದ್ಯರು ಕಾಲೇಜಿನಿಂದ ಹೊರಗಡೆ ಬಂದ ಮೇಲೆ, ಅವರು ಪಡೆದಿರತಕ್ಕಂಥ ವಿದ್ಯೆ ಏನಿದೆ, ಅವರು ಕಲಿತಿರತಕ್ಕಂಥದ್ದು ಒಂದು ವೇಳೆ ಸಮಾಜಕ್ಕೆ ಉಪಯೋಗವಾಗಬೇಕೆಂದರೆ, ಅವರು ಇಂತಹ ಎಲ್ಲಾ ಎಕ್ವಿಪ್‌ಮೆಂಟ್‌ಗಳನ್ನು ಇಟ್ಟುಕೊಂಡರೆ ಜನರಿಗೆ ಹೆಚ್ಚಿಗೆ ಒಳ್ಳೆಯ ರೀತಿಯಲ್ಲಿ ಸೇವೆ ಮಾಡುವುದಕ್ಕೆ, ಸಾಧ್ಯವಾಗುತ್ತದೆ. ಒಂದು ವೇಳೆ ನಾವು ಇಂತಹವಕ್ಕೆಲ್ಲಾ ಸ್ಕೋಪ್ ಮಾಡಿಕೊಡಬೇಕಾದರೆ, ಈ ಪ್ರತಿಭಾವಂತರಿಗೆ ಎಲ್ಲಿ ಅವರು ಇಂತಹ ಪಾಲಿಕ್ಲಿನಿಕ್‌ಗಳನ್ನು ಮಾಡುತ್ತಾರೋ, ಅಂತಹ ಕಡೆ ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು, ಸ್ವಲ್ಪ ಮಾರ್ಜಿನ್ ಮನಿ ಎಂದು ಕೈಗಾರಿಕೋದ್ಯಮಿಗಳಿಗೆ ಏನು ಕೊಡುತ್ತೀರಿ, ಆ ರೀತಿಯ ಮಾರ್ಜಿನ್ ಮನಿಯನ್ನು ಕೂಡಾ ಕೊಡುವ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಇವತ್ತಿನದಿವಸ ಕೇಳುತ್ತಿದ್ದೇನೆ. ಅದರ ಜೊತೆಯಲ್ಲಿ ತಾವು ಎಕ್ವಿಪ್‌ಮೆಂಟ್‌ಗಾಗಿ ಒಂದು ಐವತ್ತು ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡುವ ವ್ಯವಸ್ಥೆಯನ್ನು ತಾವು ಮಾಡಿದರೆ, ಹೆಚ್ಚಿನ ರೀತಿಯಲ್ಲಿ ಇಂತಹ ಪಾಲಿಕ್ಲಿನಿಕ್‌ಗಳು ಗ್ರಾಮಾಂತರ ಪ್ರದೇಶಗಳಲ್ಲಿ, ಅಂದರೆ ಹತ್ತು ಸಾವಿರದಿಂದ ಐವತ್ತು ಸಾವಿರದ ತನಕ ಜನಸಂಖ್ಯೆ ಇರತಕ್ಕಂಥ ಭಾಗಗಳಲ್ಲಿ ತೆರೆಯಲಿಕ್ಕೆ ಸಾಧ್ಯವಾಗುತ್ತದೆ. ನನ್ನ ದೃಷ್ಟಿಯಲ್ಲಿ ಆಗ, ಈಗೇನು ಟ್ರೀಟ್‌ಮೆಂಟ್ ಏನು

ದುಬಾರಿಯಾಗಿದೆ ಅದು ಸ್ವಲ್ಪಮಟ್ಟಿಗೆ ಕಡಿಮೆಯಾಗುವುದಕ್ಕೆ, ರೀಸನೇಬಲ್ ಆಗುವುದಕ್ಕೆ ಸಾಧ್ಯ-ವಾಗುತ್ತದೆ. ಇವತ್ತು ನಾವು ಅನೇಕ ಸಲ ಇಂತಹ ವಿಷಯಗಳನ್ನು ಕೇಳಿದ್ದೇವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಆಪರೇಷನ್‌ಗಳು ಆಗಬೇಕಾದರೆ ಸಾವಿರಗಟ್ಟಲೆ ಹಣವನ್ನು ಜನರು ಖರ್ಚು ಮಾಡಬೇಕಾದ ಒಂದು ಪರಿಸ್ಥಿತಿಯನ್ನೂ ಕೂಡಾ ನಾವು ಕೇಳುತ್ತಿದ್ದೇವೆ. ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲರಿಗೂ ಸೇವೆ ಸಿಗುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ಏನಾಗುತ್ತದೆ ಎಂದರೆ ಬಹಳಷ್ಟು ಜನ ಬಡವರು ಬಿಟ್ಟು ಹೋಗುತ್ತಾರೆ, ಅವರಿಗಿಂತ ಮಧ್ಯಮವರ್ಗದವರಿಗೆ ಯಾರಿಗೆ ಇನ್‌ಫ್ಲೂಯೆನ್ಸ್ ಇದೆ, ಅಂತಹವರಿ-ಗೆಲ್ಲಾ ಅಲ್ಲಿ ಸೇವೆ ಸಿಗುವ ಒಂದು ವ್ಯವಸ್ಥೆ ಇದೆ. ಇದನ್ನು ತಾವು ಸ್ವಲ್ಪ ಮಟ್ಟಿಗೆ ಬಗೆಹರಿಸಲಿಕ್ಕೆ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ ಇದರ ಜೊತೆಗೆ, ಬೀದರ್ ಜಿಲ್ಲೆ, ಬಹಳ ಹಿಂದುಳಿದಿರತಕ್ಕಂಥ ಒಂದು ಜಿಲ್ಲೆ, ಅಲ್ಲಿ ಸರ್ಕಾರದವರು ಒಂದು ಮೆಡಿಕಲ್ ಕಾಲೇಜ್ ಅನ್ನು ಕೂಡಾ ಸ್ಥಾಪನೆ ಮಾಡಬೇಕೆಂದು ನಾನು ಇವತ್ತು ಒತ್ತಾಯ ಮಾಡಿ ಹೇಳಬೇಕೆಂದಿದ್ದೇನೆ. ಕಾರಣ, ಮೆಡಿಕಲ್ ಕಾಲೇಜ್ ಆಗುವುದರಿಂದ ಆ ಭಾಗದ ಜನರಿಗೆ ಏಳು ನೂರರಿಂದ, ಒಂದು ಸಾವಿರ ಹಾಸಿಗೆಯ ಒಂದು ಆಸ್ಪತ್ರೆಯ ವ್ಯವಸ್ಥೆ ಸಿಗುತ್ತದೆ. ಇವತ್ತು ಅಲ್ಲಿ ಜಿಲ್ಲೆ ಹೆಡ್‌ಕ್ವಾರ್ಟರ್ ಇದ್ದರೂ ಸಹ ಕೇವಲ ಎರಡು ನೂರು ಹಾಸಿಗೆಯ ಆಸ್ಪತ್ರೆ ಇದೆ. ಮತ್ತು ಇವತ್ತು ಬೀದರ್ ಜಿಲ್ಲೆಯಲ್ಲಿ ಸ್ಪೆಷ-ಲಿಸ್ಟ್‌ಗಳು ಇರತಕ್ಕ ಒಂದು ಆಸ್ಪತ್ರೆ ಇದ್ದರೆ ಅವರ ಸೇವೆ ಜನರಿಗೆ ಸಿಗುತ್ತದೆ. ಇವತ್ತು ನಾವು ಏನು ನೋಡುತ್ತಿದ್ದೇವೆ ಎಂದರೆ, ಯಾವುದಾದರೂ ಒಂದು ಸೀರಿಯಸ್ ಕೇಸ್ ಇದ್ದರೆ ಬೀದರ್ ನಿಂದ ಜನ ಗುಲ್ಬರ್ಗಾ ಅಥವಾ ಹೈದರಾಬಾದ್‌ಗೆ ಹೋಗಬೇಕಾದಂಥ ಒಂದು ಪರಿಸ್ಥಿತಿ ಇದೆ. ಬಹಳಷ್ಟು ಜನ ಬಡವರಿದ್ದಾರೆ ಅವರಿಗೆ ಇಂತಹ ಕಡೆಯೆಲ್ಲಾ ಹೋಗುವುದಕ್ಕಾಗುವುದಿಲ್ಲ. ಆದುದರಿಂದ ಸರ್ಕಾರದವರು, ಮೆಡಿಕಲ್ ಕಾಲೇಜ್ ಕೊಡುವುದರ ಬಗ್ಗೆ, ಬೀದರ್‌ನಲ್ಲಿ ಒಂದು ಮೆಡಿಕಲ್ ಕಾಲೇಜ್ ಅನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಇವತ್ತು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಇದರ ಜೊತೆಗೆ, ಡ್ರಗ್ ಕಂಟ್ರೋಲರ್ ಬಗ್ಗೆ ಈಗಾಗಲೇ ಕೆಲವರು ಮಾತ-ನಾಡಿದರು. ನಾನು ಒಂದು ಮುಖ್ಯವಾದ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಬೀದರ್‌ನಲ್ಲಿ ಡ್ರಗ್ಸ್ ಕಾರ್ಖಾನೆಗಳು, ಈಗ ನಡೆಯುತ್ತಿದ್ದಾವೆ. ಈಗ ಡೆಕ್ಕನ್ ಹೆರಾಲ್ಡ್ ನಂತಹ ಒಂದು ಪ್ರಮುಖ ಪತ್ರಿಕೆಗಳಲ್ಲಿ, ಒಂದು ವರದಿ ಏನೆಂದು ಬಂದಿದೆ ಈ ಡ್ರಗ್ಸ್ ಕಾರ್ಖಾನೆಗಳು, ಯಾವ ಡ್ರಗ್ಸ್ ವೆಸ್ಟ್ರನ್ ಕಂಟ್ರಿಸ್, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅವರು ಅದನ್ನು ತಯಾರು ಮಾಡುವುದಕ್ಕೆ ತಯಾರಿಲ್ಲ ಅವುಗಳನ್ನು ಇಲ್ಲಿ ತಯಾರಿಸುತ್ತಿದ್ದಾರೆ ಎಂದು. ಕಾರಣವೇ-ನೆಂದರೆ, ಅದರಿಂದಾಗತಕ್ಕ ಮಾಲಿನ್ಯದಿಂದ ಅಲ್ಲಿಯ ಜನರಿಗೆ ಹಾನಿಯಾಗುತ್ತದೆ. ಒಂದು ವೇಳೆ ಮಾಲಿನ್ಯದಿಂದ ಅಲ್ಲಿಯ ಜನರಿಗೆ ಹಾನಿಯಾಗುತ್ತದೆ. ಒಂದು ವೇಳೆ ಮಾಲಿನ್ಯ ಚಿಕಿತ್ಸೆಗಾಗಿ ಏನಾ-ದರೂ ವ್ಯವಸ್ಥೆ ಮಾಡಬೇಕಾದರೆ, ಅದಕ್ಕೆ ನೂರಾರು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದು-ದರಿಂದ, ಅದನ್ನು ಅವರ ದೇಶದಲ್ಲಿ ತಯಾರು ಮಾಡುತ್ತಿಲ್ಲ, ಆ ಡ್ರಗ್ಸ್ ಅನ್ನು ಅವರು ಇಲ್ಲಿ ನಮ್ಮ ದೇಶದಲ್ಲಿ ತಯಾರು ಮಾಡಿ, ಇಲ್ಲಿಂದ ಆ ದೇಶಗಳಿಗೆ ಅವು ರಫ್ತಾಗಿ ಹೋಗುತ್ತಿದ್ದಾವೆ. ಈ ವಿಷಯದ

ಬಗ್ಗೆ ಸರ್ಕಾರದವರೇ ಒಂದು ಎನ್‌ಕ್ವೈರಿಯನ್ನು ಮಾಡಬೇಕು. ನಮ್ಮ ದೇಶ ಈ ರೀತಿ ಡಂಪಿಂಗ್ ಗ್ರೌಂಡ್ಸ್ ಆಗಬಾರದು, ಇವತ್ತಿನ ದಿವಸ ನಮ್ಮ ಜಿಲ್ಲೆ ಈ ರೀತಿಯಾಗಿದೆ ಎಂದು ಎಲ್ಲರೂ ಭಾವಿಸಿ-ದ್ದೇವೆ. ಅಲ್ಲಿ ಮಾಲಿನ್ಯದ್ದು ಇಷ್ಟೊಂದು ದೊಡ್ಡ ಸಮಸ್ಯೆಯಾಗಿದೆ. ಅಲ್ಲಿ ಸುಮಾರು ಸಾವಿರಕ್ಕಿಂತಲೂ ಹೆಚ್ಚಿನ ದನಗಳು ಸತ್ತಿವೆ. ಈ ಬಗ್ಗೆ ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ. ಅಲ್ಲಿ ಗರ್ಭಿಣಿಯಾಗಿರ-ತಕ್ಕದಂಥ ಒಬ್ಬ ಹೆಣ್ಣು ಮಗಳಿಗೆ ಅಬಾರ್ಷನ್ ಕೂಡ ಆಗಿದೆ, ಇದರ ಬಗ್ಗೆಯೂ ಸಹ ಪತ್ರಿಕೆಗಳ-ಲ್ಲೆಲ್ಲಾ ಬಂದಿದೆ. ಮುಖ್ಯವಾಗಿ ನಾನು ಏನು ಹೇಳಬೇಕೆಂದಿದ್ದೇನೆ ಎಂದರೆ, ನಮ್ಮ ಡ್ರಗ್ ಕಂಟ್ರೋ-ಲರ್ ಸರಿಯಾಗಿ ಒಂದು ವೇಳೆ ಕೆಲಸ ಮಾಡಿದ್ದಿದ್ದರೆ ಇಂತಹ ಅವ್ಯವಸ್ಥೆ ಆಗುತ್ತಿರಲಿಲ್ಲ. ಆದುದರಿಂದ ಈ ರೀತಿ ಪತ್ರಿಕೆಗಳಲ್ಲಿ ಏನು ಬಂದಿದೆ ಇದರ ಬಗ್ಗೆ ಒಂದು ತನಿಖೆಯಾಗಬೇಕು. ಸರ್ಕಾರದವರು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಇದರ ಬಗ್ಗೆ ತಾವು ತನಿಖೆ ಮಾಡಿಸಿ, ಒಂದು ವೇಳೆ ಇದು ಸತ್ಯವಿದೆ ಎಂದರೆ, ಇದನ್ನು ನಿಲ್ಲಿಸುವುದಕ್ಕೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡ-ಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳಬೇಕಾಗುತ್ತದೆ. ಇದಾದನಂತರ ಗೃಹ ಇಲಾಖೆಯ ಬಗ್ಗೆ ಹೇಳುವುದಾದರೆ, ಬೀದರ್ ಜಿಲ್ಲೆಯಲ್ಲಿ, ಕಳೆದ ಒಂದು ವರ್ಷದಲ್ಲಿ ಬಹಳಷ್ಟು ಎಜಿಟೇಷನ್‌ಗಳು ಆದವು. ಸರ್ಕಾರದ ವಿರುದ್ಧ ಎಜಿಟೇಷನ್‌ಗಳನ್ನು ಮಾಡುವಾಗ, ಬಹಳ ಶಾಂತಿ-ಯುತವಾಗಿ ಮಾಡಿದರೂ ಕೂಡಾ ಅಲ್ಲಿಯ ಪೋಲಿಸ್ ಇಲಾಖೆಯವರು ಈ ಎಜಿಟೇಷನ್ ಮಾಡತಕ್ಕಂಥ ಜನರ ಮೇಲೆ ಬಹಳಷ್ಟು ದೌರ್ಜನ್ಯವನ್ನು ಮಾಡಿದ್ದಾರೆ, ಇದರ ಬಗ್ಗೆ ಅನೇಕ ಬಂದ್‌ಗಳು ಕೂಡಾ ಬೀದರ್‌ನಲ್ಲಿ ಆಗಿದ್ದಾವೆ. ಆದರೆ ಇದುವರೆವಿಗೂ ಅದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಯಾವ ವ್ಯವಸ್ಥೆಯನ್ನು ಕೂಡ ಮಾಡಿಲ್ಲ, ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು. ಪೋಲಿಸ್ ಹೈ ಹ್ಯಾಂಡೆಡ್‌ನೆಸ್ ಏನಿದೆ, ಇದನ್ನು ತಾವು ತಡೆಗಟ್ಟಲೇ ಬೇಕು ಮತ್ತು ಎಲ್ಲಿ ಪೋಲಿ-ಸ್‌ನವರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಅದನ್ನು ಕೂಡಾ ನಾವು ಒಪ್ಪಬೇಕಾಗುತ್ತದೆ. ಅಲ್ಲಿ ಬಹಳಷ್ಟು ಡಕಾಯಿತಿಗಳಾಗುತ್ತಾ ಹೋದವು; ಕಳೆದ ವರ್ಷ ಎಂಟು, ಹತ್ತು ಡಕಾಯಿತಿಗಳಾಗಿವೆ. ಇದು ಯಾವಾಗ ನಿಂತಿತು ಎಂದರೆ, ಎರ್‌ಜರ್ಗಿ ಎಂದು ಒಬ್ಬರು ಡಿವೈಎಸ್‌ಪಿಯವರು ಇದ್ದಾರೆ ಹುಮ್ನಾಬಾದ್‌ನಲ್ಲಿ ಅವರ ನಾಯಕತ್ವದಲ್ಲಿ, ಬಸವ ಕಲ್ಯಾಣದ ಹತ್ತಿರ ಅವರು ಡಕಾಯಿತಿಗಳನ್ನು ಎದುರಿಸಿ, ಮೂರು ಜನ ಡಕಾಯಿತರನ್ನು ಅವರು ಶೂಟ್ ಮಾಡಿ ಕೊಂದ ನಂತರ ಡಕಾಯತಿಗಳು ಕಡಿಮೆಯಾದವು. ಇಂಥ ಒಬ್ಬ ಅಧಿಕಾರಿಯನ್ನು ಸರ್ಕಾರದವರು ರೆಕಗ್ನೈಸ್ ಮಾಡಬೇಕು. ಇವರಿಗೆ ಮೆಡಲ್ ಕೊಡಬೇಕು. ಅನೇಕ ಸಲ ನಾವು ಏನು ನೋಡುತ್ತೇವೆ ಎಂದರೆ ಬೀದರ್ ಜಿಲ್ಲೆಯಲ್ಲಿ ಏನು ಒಳ್ಳೆಯ ಕೆಲಸಗಳಾಗಿವೆ, ಅದೂ ಕೂಡ ಸರ್ಕಾರದ ಗಮನಕ್ಕೆ ಬರುವುದಿಲ್ಲ, ಸರ್ಕಾರ ಈ ಕಡೆ ಗಮನವಹಿಸಬೇಕು, ಯಾರು ಒಳ್ಳೆಯ ಕೆಲಸ ಮಾಡಿದ್ದಾರೆ ಅಂಥವರಿಗೆಲ್ಲಾ ತಾವು ರಿವಾರ್ಡ್ ಕೊಡಬೇಕು ಎನ್ನುವ ಉದ್ದೇಶದಿಂದ ಈ ಮಾತನ್ನು ನಾನು ಈ ಸದನದ ಮುಂದೆ ಹೇಳುತ್ತಿದ್ದೇನೆ. ಇನ್ನೊಂದು ಮುಖ್ಯವಾದಂಥ ಸಮಸ್ಯೆ ಬೀದರ್‌ದು ಎಂದರೆ ಕೆ.ಇ.ಬಿ. ಗೆ ಸಂಬಂಧಪಟ್ಟಿರುವಂಥಾದ್ದು. ಬೀದರ್ ಜಿಲ್ಲೆಯಲ್ಲಿ 30 ಸಾವಿರಕ್ಕಿಂತಲೂ ಹೆಚ್ಚಿನ ಪಂಪ್‌ಸೆಟ್‌ಗಳಿವೆ. ಅಲ್ಲಿ ಒಂದು ದಿನಕ್ಕೆ

ಮೂರುವರೆ ಟನ್ ಕ್ರಷ್ ಮಾಡತಕ್ಕಂಥ ಒಂದು ದೊಡ್ಡ ಶುಗರ್ ಫ್ಯಾಕ್ಟರಿ ಇದೆ ಮತ್ತು 10 ಖಂಡ-ಸಾರಿಗಳಿವೆ ಲಿಫ್ಟ್ ಇರಿಗೇಷನ್ ಮುಖಾಂತರ ಬಾವಿ ನೀರಿನಿಂದ ಇರಿಗೇಟ್ ಆಗತಕ್ಕಂಥ ಕಬ್ಬಿನ ಬೆಳೆ ಆದರ ಮೇಲೆ ಅವಲಂಬಿಸಿ ನಡೆಯುತ್ತಿದೆ. ಕಳೆದ ಬೇಸಿಗೆ ಸಮಯದಲ್ಲಿ ಆ ಭಾಗದ ರೈತರಿಗೆ, ಯಾರು ಕಬ್ಬನ್ನು ಬೆಳೆಸುತ್ತಾರೆ ಅಂಥವರಿಗೆ ಬಹಳ ದೊಡ್ಡ ಸಮಸ್ಯೆಯಿತ್ತು ಅದೇನೆಂದರೆ, ಟ್ರಾನ್ಸ್‌ಫಾರ್ಮರ್‌-ಗಳು ಸುಟ್ಟಾಗ ಅದನ್ನು ರಿಪೇರಿ ಮಾಡಿಸಲು ಸರ್ಕಾರದವರು ಒಂದೊಂದು ತಿಂಗಳು, ಎರಡೆರಡು ತಿಂಗಳ ಕಾಲ ತೆಗೆದುಕೊಂಡಿದ್ದಾರೆ. ಏಕೆ ಎಂದು ನಾವು ಸಂಬಂಧಪಟ್ಟಂಥ ಅಧಿಕಾರಿಗಳನ್ನು ಕೇಳಿದರೆ ಅವರು ಏನು ಹೇಳಿದರು ಎಂದರೆ, ನಮ್ಮಲ್ಲಿ ಟ್ರಾನ್ಸ್‌ಫಾರ್ಮರ್ ರಿಪೇರಿಂಗ್ ಸೆಂಟರ್ ಮೊದಲು ಏನಿತ್ತು ಅದನ್ನು ಗುಲ್ಬರ್ಗಾಕ್ಕೆ ವರ್ಗಾಯಿಸಿದ್ದಾರೆ. ಇವತ್ತಿನ ದಿವಸ ಟ್ರಾನ್ಸಫಾರ್ಮರ್‌ಗಳು ರಿಪೇರಿ-ಯಾಗಬೇಕಾದರೆ ನಾವು ಗುಲ್ಬರ್ಗಾಕ್ಕೆ ಕಳುಹಿಸಿ ಅಲ್ಲಿಂದ ರಿಪೇರಿ ಮಾಡಿಸಿ ತರಿಸಬೇಕಾಗಿದೆ. ಇದಕ್ಕೆ ಬಹಳ ಸಮಯ ಹಿಡಿಯುತ್ತಿದೆ ಎಂದು ಇಂಥ ಒಂದು ವ್ಯವಸ್ಥೆ ಆಗಿರುವುದರಿಂದ ಟ್ರಾನ್ಸಫಾರ್ಮರ್-ಗಳು ರಿಪೇರಿಯಾಗಲು ತಿಂಗಳುಗಟ್ಟಲೆ ಕಾಲ ಹಿಡಿಯುತ್ತಿದೆ. ಹೀಗೆ ತಿಂಗಳುಗಟ್ಟಲೆ ಡಿಲೇಯಾದ್ದ-ರಿಂದ ಈ ಮಧ್ಯದಲ್ಲಿ ರೈತರು ಯಾರು ಮೋಟಾರುಗಳ ಮುಖಾಂತರ ಬಾವಿಯಿಂದ ನೀರನ್ನು ಎತ್ತಿ ಕಬ್ಬನ್ನು ಬೆಳೆಸುತ್ತಿದ್ದರು ಅವರಿಗೆ ಆದಂಥ ಹಾನಿ ಏನೆಂದರೆ ಸುಮಾರು ನಾಲ್ಕರಿಂದ ಐದು ಕೋಟಿ ರೂಪಾಯಿಗಳಷ್ಟು ಬೆಳೆ ಹಾನಿಯಾಗಿದೆ. ಇದರ ಬಗ್ಗೆ ಕೆ.ಇ.ಬಿ.ಯವರು ಮಾಹಿತಿ ಕೂಡ ತರಿಸಿ-ಕೊಳ್ಳಬಹುದು. ಅಲ್ಲಿ ಟ್ರಾನ್ಸಫಾರ್ಮರ್‌ಗಳ ರಿಪೇರಿಯಾಗಲಿಕ್ಕೆ ಆವರೇಜ್ ಪಿರಿಯಡ್ ಎಷ್ಟು ಇದೆ ಎನ್ನುವುದನ್ನು ಕೂಡಾ ತರಿಸಿಕೊಳ್ಳಬಹುದು. ಇದರ ಬಗ್ಗೆ ಕಳೆದ 6-7 ತಿಂಗಳಿಂದ ಸರ್ಕಾರಕ್ಕೆ ನಾವು ಆ ಭಾಗದ ಶಾಸಕರೆಲ್ಲಾ ಬಹಳಷ್ಟು ಪ್ರಯತ್ನ ಮಾಡಿದರೂ ಸಹ ಸರ್ಕಾರ ಆ ಟ್ರಾನ್ಸಫಾರ್ಮರ್ ರಿಪೇರಿಂಗ್ ಸೆಂಟರ್‌ಅನ್ನು ಪುನಃ ಬೀದರ್‌ಗೆ ಕಳುಹಿಸಿಲ್ಲ. ಏನೋ ತಾಂತ್ರಿಕ ಕಾರಣಗಳನ್ನು ಹೇಳಿ-ಕೊಂಡು ಅದನ್ನು ಹಾಗೇ ಪೆಂಡಿಂಗ್ ಇಟ್ಟಿದ್ದಾರೆ. ಆದ್ದರಿಂದ ಇವತ್ತಿನ ದಿನ ಒಂದು ವಿಷಯ ಹೇಳ-ಬೇಕು ಎಂದರೆ, ತಾವು ಈ ರೀತಿ ವಿಳಂಬ ಮಾಡಿದ್ದಕ್ಕಾಗಿ ಕೋಟ್ಯಾಂತರ ರೂಪಾಯಿ ಹಾನಿ ಅಲ್ಲಿ ರೈತರಿಗೆ ಆಗಿದೆ. ಇದರ ಬಗ್ಗೆ ತಾವು ಗಂಭೀರವಾಗಿ ವಿಚಾರ ಮಾಡಬೇಕು. ಸಾಧ್ಯವಾದಷ್ಟು ಮಟ್ಟಿಗೆ, ಆದಷ್ಟು ಬೇಗ ಆ ಟ್ರಾನ್ಸ್‌ಫಾರ್ಮರ್ ರಿಪೇರಿಂಗ್ ಸೆಂಟರ್‌ಅನ್ನು ಪುನಃ ಬೀದರ್‌ಗೆ ಕೊಡಬೇಕು ಮತ್ತು ಹೆಚ್ಚಿನ ರೀತಿಯಲ್ಲಿ ರೈತರು ಟ್ರಾನ್ಸಫಾರ್ಮರ್‌ಗಳನ್ನು ಕೂಡ ಬೆಂಗಳೂರು ಅಲ್ಲಿಗೆಲ್ಲಾ ಕಳುಹಿಸಿ ಈ ರೀತಿಯ ಸಮಸ್ಯೆಯನ್ನು ಎದುರಿಸದ ರೀತಿಯಲ್ಲಿ ತಾವು ಒಂದು ವ್ಯವಸ್ಥೆ ಮಾಡಬೇಕು ಎಂದು ಒತ್ತಿ ಹೇಳುತ್ತೇನೆ. ಇನ್ನೊಂದು ವಿಷಯವೆಂದರೆ ಕೆ.ಇ.ಬಿ.ಯಲ್ಲಿ ಇಂಥ ಸಮಸ್ಯೆಗಳು ಬಂದಾಗ ಅಲ್ಲಿನ ಅಧಿಕಾರಿಗಳನ್ನು ನಾವು ಈ ಬಗ್ಗೆ ವಿಚಾರಿಸಿದಾಗ ಅವರು ಏನು ಹೇಳುತ್ತಾರೆ ಎಂದರೆ, ರೆಕ್ರೂಟ್-ಮೆಂಟ್ ನಿಂತು ಬಹಳ ದಿನಗಳಾದವು, ವರ್ಷಗಳೇ ಆಗಿಹೋಗಿವೆ, ಏನಿದ್ದರು, ಅವರಲ್ಲಿ ಸುಮಾರು ಶೇ.20-25ರಷ್ಟು ಜನ ರಿಟೈರ್ ಆಗಿದ್ದಾರೆ, ಬಹಳಷ್ಟು ಜನ ಎಲೆಕ್ಟ್ರಿಸಿಟಿ ಪೋಲುಗಳನ್ನು ಹತ್ತುವಾಗ ಕೈಕಾಲು ಮುರಿದುಕೊಂಡು ಕ್ರಿಪಲ್ ಆಗಿದ್ದಾರೆ. ಇನ್ನೂ ಕೆಲವರಿಗೆ ವಯಸ್ಸು ಆಗಿರುವುದಾದರೂ ಸ್ಟ್ರೀಟ್ ಲೈಟಿಂಗ್ ಮಾಡಿಕೊಡುವ ಕೆಲಸವಾಗಲೀ, ಭಾಗ್ಯಜ್ಯೋತಿ ಯೋಜನೆಯನ್ನು ಬೇಗ ಇಂಪ್ಲಿ-

ಮೆಂಟ್ ಮಾಡುವುದಾಗಲೀ ಇವೆಲ್ಲಾ ಬಹಳ ಡಿಲೇಯಾಗುತ್ತಿದೆ. ನಾವು ಬಡಜನರಿಗೆ ನ್ಯಾಯ ಒದಗಿಸಿ ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕು ಮತ್ತು ಕೆ.ಇ.ಬಿ. ಯಲ್ಲಿ ಸಾಧ್ಯವಾದಷ್ಟು ಬೇಗ ಖಾಲಿ ಇರತಕ್ಕಂಥ ಹುದ್ದೆಗಳನ್ನು ಭರ್ತಿ ಮಾಡಿ ಜನರಿಗೆ ಪವರ್ ಸಪ್ಲೈ ಸರಿಯಾಗಿ ಮುಟ್ಟುವ ಹಾಗೆ ವ್ಯವಸ್ಥೆ ಮಾಡಬೇಕು- ಎಂದು ನಾನು ಸರ್ಕಾರದಲ್ಲಿ ಮನವಿ ಮಾಡು-ತ್ತೇನೆ. ಇಷ್ಟು ಹೇಳಿ; ಇನ್ನೂ ಬಹಳಷ್ಟು ವಿಷಯಗಳ ಬಗ್ಗೆ ಮಾತನಾಡಲು ಸಮಯ ಕಡಿಮೆ ಇರು-ವುದರಿಂದ ನಾನು ಇಷ್ಟು ಸಲಹೆಗಳನ್ನು ಸರ್ಕಾರಕ್ಕೆ ಹೇಳಿ ನನ್ನ ಒಂದೆರಡು ಮಾತುಗಳನ್ನು ಮುಗಿ-ಸುತ್ತೇನೆ.

ಅಧ್ಯಕ್ಷರು:- ಅಭಿನಂದನೆಗಳು, ಚೆನ್ನಾಗಿ ಮಾತನಾಡಿದಿರಿ. ಈಗ ಕಾಟ್ವೆಯವರು, ನಿಮಗೆ ಎಷ್ಟು ಹೊತ್ತು ಬೇಕಾಗಬಹುದು? ಶಿವಶಂಕರಪ್ಪನವರ ಸರದಿ ಕಾಟ್ವೆಯವರದು ಆದಮೇಲೆ ಬರುತ್ತದೆ; ದಯಮಾಡಿ ಸಹಕರಿಸಬೇಕು.

+ **ಶ್ರೀ ಅಶೋಕ ಎಸ್. ಕಾಟ್ವೆ (ಹುಬ್ಬಳ್ಳಿ):-** ಸನ್ಮಾನ್ಯ ಅಧ್ಯಕ್ಷರೇ, 19 ಬೇಡಿಕೆಗಳ ಬಗ್ಗೆ ನಾನು ನನ್ನ ಕೆಲವು ವಿಚಾರಗಳನ್ನು ಹೇಳಲು ಇಚ್ಛಿಪಡುತ್ತೇನೆ. ನಾವು ಬಾಂಬೆ ಕರ್ನಾಟಕದಿಂದ 1956ನೇ ಇಸವಿಯಲ್ಲಿ ಮೈಸೂರು ಪ್ರಾಂತ್ಯಕ್ಕೆ ಬಂದೆವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಶಿವಶಂಕರಪ್ಪನವರು ಬಹಳ ಹೊತ್ತಿನಿಂದ, ನಾಲ್ಕು ತಾಸಿ-ನಿಂದ ಕುಳಿತಿದ್ದಾರೆ ಮಾತನಾಡಬೇಕು ಎಂದು. ಅದಕ್ಕೆ ಅವರಿಗೆ ತಮ್ಮ ಅನುಕಂಪಬೇಕು.

ಅಧ್ಯಕ್ಷರು:- ಶಿವಶಂಕರಪ್ಪನವರಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ನಾನು ನೋಡಿಕೊಳ್ಳು-ತ್ತೇನೆ. ನೀವು ಯೋಚನೆ ಮಾಡಬೇಡಿ.

ಶ್ರೀ ಅಶೋಕ್ ಎಸ್. ಕಾಟ್ವೆ:- ಸನ್ಮಾನ್ಯ ಅಧ್ಯಕ್ಷರೇ, ನಾವು ಮುಂಬೈ ಪ್ರಾಂತ್ಯದಲ್ಲಿದ್ದೆವು. 1956ನೇ ಇಸವಿಯಲ್ಲಿ ಮುಂಬೈ ಪ್ರಾಂತ್ಯದಿಂದ ಕರ್ನಾಟಕ ಏಕೀಕರಣ ಸಮಿತಿಯ ಒಂದು ಹೋರಾಟದಿಂದ ನಾವು ಕರ್ನಾಟಕಕ್ಕೆ ಅಂದರೆ ಮೈಸೂರು ಪ್ರಾಂತ್ಯಕ್ಕೆ ಬಂದೆವು. ಇವತ್ತು 40 ವರ್ಷಗಳು ಕಳೆದರೂ ಸಹ ನಮ್ಮ ಆ ಭಾಗದ ಜನರನ್ನು ಏನೋ ಒಂದು ತಾತ್ಸಾರ ಭಾವನೆಯಿಂದ ನೋಡುತ್ತಿದ್ದಾರೆ ಎನ್ನುವ ಭಾವನೆ ಉತ್ತರ ಕರ್ನಾಟಕ ಜನರಿಗೆ ಆಗುತ್ತಿದೆ. ಆ ಭಾಗದ ಜನ ತೀರ ಹತಾಶ ಭಾವನೆಯಿಂದ ತಮ್ಮ ಗೋಳುಗಳನ್ನು ಹೇಳುತ್ತಿದ್ದಾರೆ. ಉತ್ತರ ಕರ್ನಾಟಕದ ಜನ ಆ ಭಾಗ-ದಲ್ಲಿ ನೈರುತ್ಯ ವಲಯ ಆಗಬೇಕು ಎಂದು ಕಳೆದ 30 ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿ-ದ್ದಾರೆ. ಬ್ರಿಟಿಷರ ಕಾಲದಿಂದಲೂ ಸಹ, ಹುಬ್ಬಳ್ಳಿ ಮಹಾನಗರದಲ್ಲಿ ರೈಲ್ವೆ ವಲಯ ಆಗಬೇಕು ಎಂದು 1966ನೇ ಇಸವಿಯಲ್ಲಿ ಎಸ್.ಕೆ. ಪಾಟೀಲರು ರೈಲ್ವೆ ಮಂತ್ರಿಯಾಗಿ ದ್ದಾಗ, ಆ ಭಾಗದ ಜನ ಅಲ್ಲಿ ಒಂದು ವಲಯ ಆಗಬೇಕು ಎಂದು ಕೇಳಿದ್ದರು. ಬ್ರಿಟೀಷರ ಕಾಲದಲ್ಲಿ ಆ ಭಾಗದಲ್ಲಿ ಸದರನ್ ಮರಾಠ ಜೋನ್ ಎಂದು ಒಂದು ರೈಲ್ವೆ ವಲಯ ಇತ್ತು. ಅದು ನಾಲ್ಕು ರಾಜ್ಯಗಳ ಕೇಂದ್ರವಾಗಿ,

ಹುಬ್ಬಳ್ಳಿ ಮಹಾನಗರದಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನ ಗ್ರೌಂಡಿನಲ್ಲಿ ಇತ್ತು. ಅಂಥ ಒಂದು ವಲಯ ಹುಬ್ಬಳ್ಳಿ ಮಹಾನಗರದಲ್ಲಿ ಆಗಬೇಕು ಹುಬ್ಬಳ್ಳಿ ಮಹಾನಗರ ಹಾಗೂ ಧಾರವಾಡದಲ್ಲಿ ವಲಯ ಆದದ್ದೇ ಆದರೆ ಆ ಭಾಗದಲ್ಲಿರುವಂಥ 8-10 ಜಿಲ್ಲೆಗಳ ಜನರಿಗೆ ಹಾಗೂ ಕರ್ನಾಟಕದ ಜನರಿಗೆ ಅನುಕೂಲವಾಗುತ್ತದೆ ಎಂದು ಆ ಭಾಗದ ಜನ ಮೇಲಿಂದ ಮೇಲೆ ಹೋರಾಟ ಮಾಡುತ್ತಾ ಬಂದಿದ್ದಾರೆ. ಹುಬ್ಬಳ್ಳಿ, ಕರ್ನಾಟಕ ರೈಲ್ವೆ ಜಾಲದ ಒಂದು ಮಧ್ಯವರ್ತಿ ಸ್ಥಳವಾಗಿದೆ. ಅಲ್ಲದೆ ಒಂದು ರೈಲ್ವೆ ವರ್ಕ್ ಶಾಪನ್ನೂ ಸಹ ಪಡೆದಿದೆ. ಈ ಎರಡೂ ಸೌಲಭ್ಯಗಳು ಬೆಂಗಳೂರಿನಲ್ಲಿ ಇಲ್ಲ. ಬೆಂಗಳೂರು ಕರ್ನಾಟಕದ ಒಂದು ಮೂಲೆಯಲ್ಲಿದ್ದರೂ ಸಹ, ಇನ್ನೊಂದು ವಿಷಯವೆಂದರೆ ಅಲ್ಲಿ ರೈಲ್ವೆ ವರ್ಕ್‌ಶಾಪ್ ಇಲ್ಲ. ಕರ್ನಾಟಕದ ರೈಲ್ವೆ ವಿಭಾಗದಲ್ಲಿ ಹುಬ್ಬಳ್ಳಿ ಹೆಚ್ಚು ಲಾಭದಾಯಕ ಹಾಗೂ ಶ್ರೀಮಂತ ವಿಭಾಗವಾಗಿದೆ ಎಂದು ತಾಂತ್ರಿಕರು ತಮ್ಮ ವಿಚಾರವನ್ನು ಹೇಳುತ್ತಾರೆ. ಅದೂ ಅಲ್ಲದೆ ರೈಲ್ವೆ ವಲಯ ಬೆಂಗಳೂರಿನಲ್ಲಿ ಆದರೆ, ಮಿತಿಮೀರಿದ ಜನ ಸಂಖ್ಯೆಯಿಂದ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಕಷ್ಟ ಎನಿಸುವ ಮಟ್ಟಿಗೆ ಈ ಬೆಂಗಳೂರು ನಗರ ಹೆಚ್ಚು ಬೆಳೆಯುತ್ತದೆ ಎಂದು ಪರಿಸರವಾದಿಗಳು ಪ್ರತಿರೋಧ ಮಾಡುತ್ತಿದ್ದಾರೆ ಹಾಗೂ ಆಡಳಿತಗಾರರು ಹೆಚ್ಚಿನ ಕಾರ್ಖಾನೆಗಳು, ಉದ್ದಿಮೆಗಳು ಬೆಂಗಳೂರಿನಲ್ಲಿ ಬರಲು ಅನುಕೂಲವಾದ ಅಭಿಪ್ರಾಯವನ್ನು ಹೊಂದಿಲ್ಲ. ಈಗಾಗಲೇ ಇರುವ ಉದ್ದಿಮೆಗಳು ಬೆಂಗಳೂರಿನಿಂದ ಹೊರಗೆ ಹೋಗಬೇಕು ಎನ್ನುವ ವಿಚಾರವನ್ನೂ ಸಹ ಅಭಿಪ್ರಾಯಪಟ್ಟಿದ್ದಾರೆ. ಪರಿಸರವನ್ನು ಕಲುಷಿತಗೊಳಿಸುತ್ತಿರುವ ಉದ್ದಿಮೆಗಳನ್ನು ದಿಲ್ಲಿಯಿಂದ ಹೊರಕ್ಕೆ ಹಾಕಬೇಕು ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದ್ದರಿಂದ ಇಂಥ ಬೆಳವಣಿಗೆ ಬೆಂಗಳೂರಿನಲ್ಲಿ ಅತಿ ಹೆಚ್ಚಾಗಿದೆ ಎಂದು ಬೆಂಗಳೂರಿನ ಶಾಸಕರಾದಂಥ ಶ್ರೀಮಾನ್ ರಾಜಣ್ಣನವರು, ಮುನಿಯಪ್ಪನವರು ಹಾಗೂ ಇತರ 8-10 ಜನ ಶಾಸಕರು ಸಹ ಬೆಂಗಳೂರು ನಗರದಲ್ಲಿ ಉದ್ದಿಮೆಗಳು ಬೇಡ ಎಂದು ಹೇಳುತ್ತಿರುವಾಗಲೂ ಸಹ ನಮ್ಮ ನೈರುತ್ಯ ವಲಯ ಬೆಂಗಳೂರಿನಲ್ಲಿ ಆಗಬೇಕು ಎಂದು ಕೆಲವು ಜನ ಪ್ರಯತ್ನ ಮಾಡುತ್ತಿದ್ದಾರೆ. ಹುಬ್ಬಳ್ಳಿ ಮಹಾನಗರದಲ್ಲಿ ನೈರುತ್ಯ ವಲಯಕ್ಕೆ ಬೇಕಾದಂಥ ಸ್ಥಳ, ನಮ್ಮ ರೈಲ್ವೆ ವರ್ಕ್‌ಶಾಪ್ ಹತ್ತಿರ ಇರುವಂಥ ರೈಲ್ವೆಗೆ ಸಂಬಂಧ ಪಟ್ಟಂಥ ಜಾಗ ಸಹ ಬೇಕಾದಷ್ಟು ಹುಬ್ಬಳ್ಳಿ ಮಹಾನಗರದಲ್ಲಿ ಇದೆ. ನೂರಾರು ಎಕರೆ ಜಾಗ ಇರುವುದರಿಂದ ಆ ಭಾಗದ ಜನರ ಕುಂದುಕೊರತೆಯನ್ನು ನಮ್ಮ ಸಚಿವರಿಗೆ ಅರಿಕೆ ಮಾಡಿಕೊಂಡು, ಇವತ್ತು ಕೇಂದ್ರ ಸರ್ಕಾರಕ್ಕೆ ಒಕ್ಕೊರಲಿನಿಂದ ಈ ಒಂದು ನೈರುತ್ಯ ವಲಯ ಹುಬ್ಬಳ್ಳಿಯಲ್ಲಿ ಆಗಬೇಕು ಎಂದು ತನ್ಮೂಲಕ ನಾನು ಮುಖ್ಯಮಂತ್ರಿಗಳಿಗೆ ಇದನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಕಳೆದ 20 ವರ್ಷಗಳಿಂದ ಹುಬ್ಬಳ್ಳಿ ಮಹಾನಗರದಲ್ಲಿ ಹೈಕೋರ್ಟ್ ಪೀಠದ ಒಂದು ಬೆಂಚ್ ಆಗಬೇಕು ಎಂದು ಸಮಾಜದ ಎಲ್ಲಾ ವರ್ಗದ ಜನ ಇವತ್ತು ಹೋರಾಟ ಮಾಡುತ್ತಿದ್ದಾರೆ. ಕಳೆದ 20 ದಿವಸಗಳಿಂದ ಹುಬ್ಬಳ್ಳಿ ನಗರದಲ್ಲಿರುವ ಕೋರ್ಟ್, ಅಲ್ಲಿನ ವಕೀಲರು ಬಹಿಷ್ಕಾರ ಮಾಡಿ ರಸ್ತೆಗೆ ಇಳಿದಿದ್ದಾರೆ. ರಸ್ತೆ ಬಂದ್, ರಸ್ತೆ ರೋಕೋ, ರೈಲ್ ರೋಕೋ, ಇತರ ಬಂದ್‌ಗಳನ್ನು ಮಾಡಿ ಹುಬ್ಬಳ್ಳಿಯಲ್ಲಿ ಒಂದು ಹೈಕೋರ್ಟ್ ಬೆಂಚ್ ಆಗಬೇಕು ಎಂದು ಒಂದೇ ಸಮನೆ 20 ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ.

7.50 ಪಿ.ಎಂ

ದೇಶದ ಬೇರೆ ಬೇರೆ ಭಾಗಗಳಲ್ಲಿ ನಾವು ಹೈಕೋರ್ಟು ಬೆಂಚ್‌ಗಳನ್ನು ನೋಡುತ್ತಿದ್ದೇವೆ. ಮಹಾರಾಷ್ಟ್ರದಲ್ಲಿ, ತಮಿಳುನಾಡಿನಲ್ಲಿ ಮತ್ತು ಉತ್ತರ ಪ್ರದೇಶಗಳಲ್ಲಿ ಹೈಕೋರ್ಟ್ ಬೆಂಚ್‌ಗಳು ಇರುವುದನ್ನು ನಾವು ನೋಡುತ್ತಿದ್ದೇವೆ. ಅದೇ ರೀತಿಯಾಗಿ ಕರ್ನಾಟಕದೊಳಗೆ ಹುಬ್ಬಳ್ಳಿಯಲ್ಲಿ ಏಕೆ ಹೈಕೋರ್ಟ್ ಪೀಠ ಆಗುತ್ತಿಲ್ಲವೆಂದು ಸರ್ಕಾರಕ್ಕೆ ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಆದ್ದರಿಂದ ಈ ಹೈಕೋರ್ಟ್ ಪೀಠ ಆದಷ್ಟು ಬೇಗನೆ ಹುಬ್ಬಳ್ಳಿಯಲ್ಲಿ ಆಗಬೇಕು, ಮಾಡಲೇಬೇಕು ಎಂದು ಉತ್ತರ ಕರ್ನಾಟಕದ ಜನರ ಪರವಾಗಿ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ಆದಷ್ಟು ಬೇಗನೆ ಹೈಕೋರ್ಟ್ ಪೀಠ ಸಹಿತ ಹುಬ್ಬಳ್ಳಿಗೆ ಬರಬೇಕು, ಮತ್ತು ಆ ಭಾಗದ ಜನರಿಗೆ ನ್ಯಾಯ ಒದಗಿಸಬೇಕು, ನ್ಯಾಯ ಮನೆ ಹತ್ತಿರಕ್ಕೆ ಬರಬೇಕು, ನ್ಯಾಯ ಬಡವರಿಗೆ ಸಿಗಬೇಕೆಂದು ಹೇಳುತ್ತಿರುವಂಥ, ಈ ಸರ್ಕಾರ, ಇವತ್ತು ನಾವು 5-10 ಸಾವಿರ ಖರ್ಚು ಮಾಡಿ ಬೆಂಗಳೂರಿಗೆ ಬಂದು ನ್ಯಾಯ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇವತ್ತಿನ ಈ ವೇಳೆಯಲ್ಲಿ ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಬೆಂಚ್ ಆದದ್ದೇ ಆದರೆ, ಬಡವರಿಗೆ ನ್ಯಾಯ ಸುಲಭವಾಗಿ ಸಿಕ್ಕುವಂಥ ಒಂದು ಕಾರಣವಿರುವುದರಿಂದ ಹೈಕೋರ್ಟ್ ಬೆಂಚ್ ಹುಬ್ಬಳ್ಳಿಯಲ್ಲಿ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಸರ್ಕಾರವನ್ನು ಕೋರುತ್ತಿದ್ದೇನೆ. ಅದೇ ರೀತಿಯಲ್ಲಿ ಈ ಒಂದು ಜಿಲ್ಲೆಯ ಪುನರ್‌ವಿಂಗಡಣೆಯಾಗಬೇಕು. ಧಾರವಾಡ ಜಿಲ್ಲೆಯಾಗಲಿ, ಬಿಜಾಪುರ ಜಿಲ್ಲೆಯಾಗಲಿ, ಬೆಳಗಾಂ ಜಿಲ್ಲೆಯಾಗಲಿ ಈ ರೀತಿಯ ಜಿಲ್ಲೆಗಳು ಇಷ್ಟೊಂದು ದೊಡ್ಡದಾದರೆ, ಯಾವುದಾದರೂ ಮುಖ್ಯವಾದ ಕೆಲಸಕ್ಕೆ ಹೋಗಿ ಬರಬೇಕಾದರೆ ಬಹಳ ಕಷ್ಟವಾಗುತ್ತದೆ. ನಮ್ಮ ಧಾರವಾಡ ಜಿಲ್ಲೆಯಲ್ಲಿರುವ ಗಜೇಂದ್ರಗಡದಿಂದ ಹಿರೇಕೆರೂರು ಮುಟ್ಟಬೇಕಾದರೆ ರಾಣಿಬೆನ್ನೂರು ಕಾರ್ನರ್ ಮುಟ್ಟಬೇಕಾದರೆ 180 ರಿಂದ 190 ಕಿ. ಮೀ. ದೂರ ಹೋಗಬೇಕಾಗುತ್ತದೆ. ಇಲ್ಲಿಗೆ ಒಬ್ಬರೇ ಡಿ.ಸಿ. ಇದ್ದಾರೆ. ಅಲ್ಲಿಂದ ಇಲ್ಲಿತನಕ ಎಲ್ಲಾ ಹಳ್ಳಿಗಳನ್ನು ತಿರುಗಿ ನೋಡಿದ್ದಾರೋ ಇಲ್ಲವೋ, ಅದೂ ಸಹ ನಮಗೆ ಅನುಮಾನ ಬರುತ್ತಿದೆ. ಆದ್ದರಿಂದ ಅಧಿಕಾರ ವಿಕೇಂದ್ರೀಕರಣ ಆಗಬೇಕು. ಅಧಿಕಾರ ವಿಕೇಂದ್ರೀಕರಣ ತಂದು ಸಣ್ಣ ಸಣ್ಣ ಜಿಲ್ಲೆಗಳನ್ನಾಗಿ ಮಾಡಬೇಕೆಂದು ನಾವು ಪ್ರತಿಪಾದಿಸುತ್ತಾ ಬಂದಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿ ಈಗಾಗಲೇ ಸಣ್ಣ ಸಣ್ಣ ಜಿಲ್ಲೆಗಳನ್ನಾಗಿ ಮಾಡಿದ್ದಾರೆ. ತಮಿಳುನಾಡಿನಲ್ಲಿ 13 ಜಿಲ್ಲೆಗಳಿದ್ದವು. ಈಗ ಅದನ್ನು 31 ಜಿಲ್ಲೆಗಳನ್ನಾಗಿ ಮಾಡಿದ್ದಾರೆ. ಆಂಧ್ರಪ್ರದೇಶದಲ್ಲಿ 29 ಜಿಲ್ಲೆಗಳಿದ್ದವು ಅದನ್ನು 34 ಜಿಲ್ಲೆಗಳನ್ನಾಗಿ ಮಾಡಿದ್ದಾರೆ. ಬಿಹಾರ್ ರಾಜ್ಯದಲ್ಲಿ 37 ಜಿಲ್ಲೆಗಳನ್ನು ಮಾಡಿದ್ದಾರೆ. ಉತ್ತರ ಪ್ರದೇಶದಲ್ಲಿ ಜಿಲ್ಲೆಗಳ ಸಂಖ್ಯೆ ಹೆಚ್ಚು ಮಾಡಿದ್ದಾರೆ. ಈ ರೀತಿ ಬೇರೆ ಬೇರೆ ರಾಜ್ಯಗಳಲ್ಲಿ ಜಿಲ್ಲೆಗಳನ್ನು ಪುನರ್‌ವಿಂಗಡಣೆ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಹುಂಡೇಕರ್ ಸಮಿತಿ ಎಂದು ನಾವು ಮಾಡಿದ್ದೇವೆ. ಆ ಸಮಿತಿ ಬಗ್ಗೆ ಸರ್ಕಾರ ಇವತ್ತು ಏನು ಯೋಚನೆ ಮಾಡಿದೆ? ಇದೇ ರೀತಿ ಬೇರೆ ಬೇರೆ ಸಮಿತಿಗಳನ್ನು ಮಾಡಿದ್ದೇವೆ. ಅದರ ಬಗ್ಗೆ ಸರ್ಕಾರ ಏನು ವಿಚಾರ ಮಾಡಿತು? ಈ ನಮ್ಮ ಧಾರವಾಡ ಜಿಲ್ಲೆಯನ್ನು 3 ಜಿಲ್ಲೆಗಳನ್ನಾಗಿ ವಿಂಗಡಿಸಬೇಕು. ಬಿಜಾಪುರ ಜಿಲ್ಲೆಯನ್ನು 2-3 ಜಿಲ್ಲೆಗಳನ್ನಾಗಿ ವಿಂಗಡಿಸಬೇಕು. ಬೆಳಗಾಂ

ಜಿಲ್ಲೆಯನ್ನು 2 ರಿಂದ 3 ಜಿಲ್ಲೆಗಳನ್ನಾಗಿ ವಿಂಗಡಿಸಿ ನಮ್ಮ ಜಿಲ್ಲೆಗಳನ್ನು ಸಣ್ಣದಾಗಿ ಮಾಡಿ ಜನರ ಒಂದು ಕಷ್ಟಕಾರ್ಪಣ್ಯ, ಜನರ ಕೆಲಸಗಳಿಗೆ ಮುಂದಾಗಬೇಕು. ಆದ್ದರಿಂದ ಮುಂದಿನ ತಿಂಗಳೊಳಗಾಗಿ ನಾವು ಹೆಚ್ಚು ಜಿಲ್ಲೆಗಳನ್ನು ಮಾಡಿ, ಆದಷ್ಟು ಜಿಲ್ಲಾ ಕೇಂದ್ರವನ್ನು ಬೇರೆ ಬೇರೆ ಮಾಡುತ್ತೇವೆ ಎಂದು ಹೇಳಿ; ಮತ್ತು ಇದನ್ನು ಮುಂದಿನ ತಿಂಗಳು ಅನೌನ್ಸ್ ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಂಗಣ್ಣ ಅಮರಪ್ಪ ಕರಡಿ (ಕೊಪ್ಪಳ):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಜಿಲ್ಲೆಗಳ ವಿಂಗಡಣೆ ಬಗ್ಗೆ ಹೇಳುವಾಗ ರಾಯಚೂರು ಜಿಲ್ಲೆಯ ಬಗ್ಗೆಯೂ ಕೂಡ ಹೇಳುವುದು ಸೂಕ್ತ ಎಂದು ತೋರುತ್ತದೆ.

ಅಧ್ಯಕ್ಷರು:- ಕೊಪ್ಪಳವನ್ನು ಸಪರೇಟ್ ಮಾಡಬೇಕೆಂದು ಹೇಳುವುದು ಅಲ್ಲವೇ ಬಿಡಿ. ಅದನ್ನು ನಾನು ಹೇಳುತ್ತೇನೆ.

ಶ್ರೀ ಅಶೋಕ್ ಎಸ್. ಕಾಟ್ವೆ:- ಹುಬ್ಬಳ್ಳಿ ಧಾರವಾಡ ಮಹಾನಗರದ ಸಮಸ್ಯೆಗಳ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ಕುಡಿಯುವ ನೀರಿನ ಸಮಸ್ಯೆ. ಕುಡಿಯುವ ನೀರಿನ ಸಮಸ್ಯೆ ಹುಬ್ಬಳ್ಳಿ ಧಾರವಾಡದಲ್ಲಿ ದಿನೇ ದಿನೇ ಹೆಚ್ಚಾಗುತ್ತಿದೆ. ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಮೊದಲು ನಾವು ಪ್ರತಿ ದಿವಸ ನೀರು ಕುಡಿಯುತ್ತಿದ್ದೆವು. ಆ ನಂತರ ಒಂದು ದಿವಸ ಬಿಟ್ಟು ಒಂದು ದಿವಸ ನೀರು ಕುಡಿಯುತ್ತಿದ್ದೆವು. ಈಗ 3 ದಿವಸ ಆದರೂ ಸಹ ಕುಡಿಯುವ ನೀರು ಸಿಗುತ್ತಿಲ್ಲ. ಒಂದೊಂದು ಸಲ 8 ದಿವಸವಾದರೂ ಕುಡಿಯುವ ನೀರು ಸಿಗುತ್ತಿಲ್ಲ. ಆದ್ದರಿಂದ ಈ ಭಾಗದ ಜನರ ನೀರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸರ್ಕಾರ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಸರ್ಕಾರ 2ನೇ ಮಲಪ್ರಭಾ ಯೋಜನೆ ಮುಗಿದು ಹೋಗಿದೆ ಎಂದು ಹೇಳುತ್ತಿದೆ. ಆದರೆ 2ನೇ ಮಲಪ್ರಭಾ ಯೋಜನೆ ಮುಗಿಯಬೇಕಾದರೆ ಆ ಒಂದು ಯೋಜನೆಯಲ್ಲಿ ಕಳಪೆ ದರ್ಜೆಯ ಪೈಪುಗಳು ಹಾಗೂ ಇತರೇ ಅವ್ಯವಹಾರದಿಂದಾಗಿ ಆ ಒಂದು ಯೋಜನೆ ಸಂಪೂರ್ಣವಾಗಿ ಕೊಲ್ಯಾಪ್ಸ್ ಆಗಿದೆ. ಅಂದರೆ ಹುಬ್ಬಳ್ಳಿಗೆ ಎಷ್ಟು ನೀರು ಬೇಕೋ, ಎಷ್ಟು ನೀರು ಕೊಡಬೇಕಾಗಿತ್ತೋ ಅಷ್ಟು ನೀರನ್ನು ಇವತ್ತು ಆ ಭಾಗದ ಜಲಮಂಡಳಿಯವರು ನಮಗೆ ಕೊಡುತ್ತಿಲ್ಲ. ಈ ಮಳೆಗಾಲದ ಸಮಯದಲ್ಲಿಯೂ ಸಹಿತ ನಮಗೆ 2-3 ದಿವಸಕ್ಕೆ ಒಂದು ಸಲ ನೀರು ಬರುತ್ತಾ ಇದೆ. ಮಲಪ್ರಭಾ ಯೋಜನೆ ಅಥವಾ ಕಾಳಿನದಿ ಯೋಜನೆ ಯಾವುದಾದರೂ ಸರಿ, ಆದಷ್ಟು ತ್ವರಿತವಾಗಿ ಮೂರನೇಯ ಯೋಜನೆ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಮಹಾನಗರದಲ್ಲಿ ದಿನೇ ದಿನೇ ಜನದಟ್ಟಣಿ ಹೆಚ್ಚಾಗುತ್ತಿದೆ. ಹುಬ್ಬಳ್ಳಿ ಟ್ರಾಫಿಕ್ ಐಲೆಂಡ್‌ನಲ್ಲಿ, ಕಿತ್ತೂರು ಚೆನ್ನಮ್ಮ ಸರ್ಕಲ್‌ನಲ್ಲಿ ವಾಹನಗಳ ಓಡಾಟ, ಜನರ ಓಡಾಟ ಹೆಚ್ಚಾಗಿರುವುದರಿಂದ ಅಲ್ಲಿ ಓವರ್‌ಬ್ರಿಡ್ಜ ಆಗಲಿ, ಅಥವಾ ಅಂಡರ್ ಬ್ರಿಡ್ಜ್ ಆಗಲಿ ಆಗಬೇಕೆಂದು ಅಲ್ಲಿಯ ಮಹಾನಗರದ ಜನರ ಅಭಿಲಾಷೆ ಹೆಚ್ಚಿರುವುದರಿಂದ ಸರ್ಕಾರ ಇದರ

ಬಗ್ಗೆ ಕಾಳಜಿಯಿಂದ ಓವರ್‌ಬ್ರಿಡ್ಜ್ ಅಥವಾ ಅಂಡರ್‌ಬ್ರಿಡ್ಜ್ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅದೇ ರೀತಿ ಹುಬ್ಬಳ್ಳಿ ನಗರದಲ್ಲಿ ಅಶೋಕ ನಗರವೆಂದು ಇದೆ. ಅಲ್ಲಿ ನಮ್ಮ ಕೇಂದ್ರ ಮಂತ್ರಿಗಳಾದ ಎಸ್.ಆರ್. ಬೊಮ್ಮಾಯಿಯವರ ಮನೆ-ಯಿದೆ. ಸಿದ್ದನಗೌಡರ ಮನೆಯಿದೆ. ಆ ಭಾಗದಲ್ಲಿ ನಾವು ನೀವು ಹೋಗಬೇಕಾದರೆ ಅಲ್ಲಿ ಒಂದು ನಡುಗಡ್ಡೆ ಆದಹಾಗೆ ಆಗಿದೆ. ಒಂದು ಗೇಟಿನಿಂದ ಇನ್ನೊಂದು ಗೇಟಿಗೆ ಹೋಗಬೇಕಾದರೆ ಮೈಲಿಗಟ್ಟಲೆ ವಾಹನಗಳು ಆ ರಸ್ತೆಯಲ್ಲಿ ನಿಂತಿರುತ್ತವೆ. ಅಲ್ಲಿ ಒಂದು ಅಂಡರ್ ಬ್ರಿಡ್ಜ್ ಆಗಬೇಕೆಂದು ಹೇಳಿ 25-30 ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ಈ ಸಲ ನಮ್ಮ ಮಾನ್ಯ ಸಚಿವರು ಅಲ್ಲಿ ಅಂಡರ್ ಬ್ರಿಡ್ಜ್‌ನ್ನು ಆದಷ್ಟು ಬೇಗನೆ ಮಾಡಿಸುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಅಶೋಕ ನಗರ ಗೇಟಿನ ಬಗ್ಗೆಯೂ ಸಹ ಸಚಿವರು ತೀವ್ರವಾಗಿ ಗಮನಕ್ಕೆ ತೆಗೆದುಕೊಂಡು ಕೆಲಸವನ್ನು ಮಾಡಿಸ-ಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಹುಬ್ಬಳ್ಳಿ ಮಹಾನಗರ ಕರ್ನಾಟಕ ರಾಜ್ಯದೊಳಗೆ 2ನೇ ದೊಡ್ಡ ಮಹಾನಗರವಾಗಿದೆ. ಈ ಮಹಾನಗರದಲ್ಲಿ ಕೆ.ಎಂ.ಸಿ. ಅಂದರೆ ಕರ್ನಾಟಕ ಮೆಡಿಕಲ್ ಕಾಲೇಜ್ ಇದೆ. ಆ ಒಂದು ಆಸ್ಪತ್ರೆಯಲ್ಲಿ ಎಷ್ಟೊಂದು ಅವ್ಯವಹಾರ ನಡೆಯುತ್ತಿದೆಯೆಂದರೆ ಅದನ್ನು ಹೇಳುವುದಕ್ಕಾಗುವುದಿಲ್ಲ. ಇವತ್ತು ಅಲ್ಲಿಗೆ ಒಬ್ಬ ಬಡವ ಏನಾದರೂ ಅಪರೇಷನ್ಸ್ ಮಾಡಿಸುವುದಕ್ಕೆ ಹೋದರೆ ಅವನು ಸತ್ತು ಸ್ವರ್ಗಕ್ಕೆ ಹೋಗುತ್ತಾನೆಯೇ ಹೊರತು ವಾಪಸ್ಸು ಆತ ಊರಿಗೆ ಬರುವ ಹಾಗಿಲ್ಲ. ಏಕೆಂದರೆ ಯಾವ ರೀತಿಯಾಗಿ ಖಾಸಗಿ ಇನ್ಸ್ಟಿಟ್ಯೂಟ್‌ಗಳು ಇವೆ. ಅದೇ ರೀತಿಯಾಗಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿಯೂ ಸಹ ಜನ ಇವತ್ತು ಅಪರೇಷನ್ಸ್ ಮಾಡಿಸಬೇಕಾದರೆ ಡಾಕ್ಟರುಗಳೂ ಸಹ ಜನರಿಂದ ದುಡ್ಡು ಕೇಳುತ್ತಾರೆ. ನಂತರ ಅಲ್ಲಿ ಸರಿಯಾಗಿ ಔಷಧಿಗಳು ಸಿಗುವ ಹಾಗಿಲ್ಲ. ಅಲ್ಲಿಗೆ ಚಿಕಿತ್ಸೆಗೆ ಹೋದಂಥ ಸಾಧಾರಣ ಜನ ಅಲ್ಲಿಂದ ತಿರುಗಿ ಬರುವಾಗ ಯಾವುದಾದರೂ ರೋಗ ಅಂಟಿ-ಸಿಕೊಂಡು ಬರುತ್ತಾರೆ. ಆ ರೀತಿಯಲ್ಲಿ ಅವ್ಯವಸ್ಥೆ ಆ ಆಸ್ಪತ್ರೆಯಲ್ಲಿದೆ. ಆದ್ದರಿಂದ ಮಾನ್ಯ ಸಚಿವರು ಅದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಇವತ್ತು ಹುಬ್ಬಳ್ಳಿ ಹಾಗೂ ಬಳ್ಳಾರಿಯಲ್ಲಿ ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಅಂದರೆ ಕಿಮ್ಸ್ ಎಂಬ ಸ್ವಾಯತ್ತ ಸಂಸ್ಥೆಯೆಂದು ಹೇಳಿ ತಾವು ಪ್ರಾರಂಭ ಮಾಡಿದ್ದೀರಿ. ಆ ಕಿಮ್ಸ್ ಎಂಬ ಸ್ವಾಯತ್ತ ಸಂಸ್ಥೆಯನ್ನು ಮಾಡಿದ ಮೇಲೆ ಜನ ಅಲ್ಲಿಗೆ ಹೋಗಲು ಹೆದರುತ್ತಾರೆ. ಕಿಮ್ಸ್ ಅಂದರೆ ಒಂದು ಖಾಸಗಿ ದವಾಖಾನೆ ಇದ್ದಹಾಗೆ ಆಗುತ್ತದೋ ಹೇಗೆ ಎಂದು ಹೇಳಿ ಅಲ್ಲಿಗೆ ಹೋಗಲು ಜನ ಹೆದರುತ್ತಾರೆ. ಇದರ ಬಗ್ಗೆ ಜನರಿಗೆ ತಿಳುವಳಿಕೆ ತಾವು ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯಲ್ಲಿ ಇರುವಂಥ ಅಧಿಕಾರಿವರ್ಗದ ಬಗ್ಗೆ ಕೆಲವೊಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆ ಒಂದು ಮಹಾನಗರ ಸಭೆಯೊಳಗೆ ಸುಮಾರು 25-30 ವರ್ಷಗಳಿಂದ ಮಹಾ-ನಗರ ಸಭೆಯ ಅಧಿಕಾರಿಗಳಿಗೆ ಯಾವುದೇ ರೀತಿಯ ವರ್ಗಾವಣೆಯಿಲ್ಲದೆ ಒಂದೇ ಕಡೆ ಕುಳಿತಿದ್ದಾರೆ. ಅವರಿಗೆ ಆದಷ್ಟು ಬೇಗನೆ ಒಂದು ಕಾರ್ಪೋರೇಷನ್‌ನಿಂದ ಇನ್ನೊಂದು ಕಾರ್ಪೋರೇಷನ್‌ನಿಗೆ ವರ್ಗಾವಣೆ ಮಾಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಹುಬ್ಬಳ್ಳಿ ನಗರದಲ್ಲಿ 1905ನೇ

ಇಸವಿಯಿಂದ ಒಂದೇ ಒಂದು ತಹಶೀಲ್ದಾರರ ಕಛೇರಿ ಇದೆ. 1947ನೇ ಇಸವಿಯಲ್ಲಿ ಬ್ರಿಟೀಷರ ಕಾಲದಲ್ಲಿ ಆ ನಗರದಲ್ಲಿ ಒಂದು ಲಕ್ಷ ಜನಸಂಖ್ಯೆ ಇದ್ದಾಗ್ಯೂ ಒಂದೇ ಒಂದು ತಹಶೀಲ್ದಾರರ ಕಛೇರಿ ಇತ್ತು. ಈಗ ಹುಬ್ಬಳ್ಳಿ ಮಹಾನಗರದಲ್ಲಿ ಆರೂವರೆ ಲಕ್ಷ ಜನಸಂಖ್ಯೆ ಇದ್ದರೂ ಸಹ ಈಗಲೂ ಒಂದೇ ಒಂದು ತಹಶೀಲ್ದಾರರ ಕಛೇರಿ ಇದೆ. ಅಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಹುಬ್ಬಳ್ಳಿ ಪಟ್ಟಣ, ಹುಬ್ಬಳ್ಳಿ ಗ್ರಾಮಾಂತರ ಮತ್ತು ನಮ್ಮ ಶ್ರೀ ಸಿದ್ಧನಗೌಡರು ಸ್ಪರ್ಧಿಸುವ ಕ್ಷೇತ್ರದಿಂದ ಸ್ವಲ್ಪ ಭಾಗ ಬರುತ್ತದೆ, ನವಲುಗುಂದ ಕ್ಷೇತ್ರದಿಂದ ಕೆಲವು ಭಾಗ ಇಲ್ಲಿಗೆ ಸೇರಿಕೊಳ್ಳುವುದರಿಂದ ಇದು ದೊಡ್ಡನಗರವಾಗಿರುತ್ತದೆ. ಮತ್ತು ಹುಬ್ಬಳ್ಳಿ ಮಹಾನಗರದಲ್ಲಿ 1947ನೇ ಇಸವಿಯಿಂದ ಒಂದೇ ಒಂದು ತಹಶೀಲ್ದಾರರ ಕಛೇರಿ ಇರುವುದರಲ್ಲಿ ಆಗ ಎಷ್ಟು ಜನ ಕೆಲಸ ಮಾಡುತ್ತಿದ್ದರೋ ಅಷ್ಟೇ ಜನ ಈಗಲೂ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ತಹಶೀಲ್ದಾರರ ಕಛೇರಿಯನ್ನು ಹುಬ್ಬಳ್ಳಿ ದಕ್ಷಿಣ ಹಾಗೂ ಹುಬ್ಬಳ್ಳಿ ಉತ್ತರ ಎಂದು ಎರಡು ಭಾಗಗಳನ್ನಾಗಿ ಮಾಡಿ ಅಲ್ಲಿಯ ಜನರ ಕೆಲಸ ಮಾಡಲಿಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಅದೇ ರೀತಿಯಾಗಿ ಆ ಮಹಾನಗರದಲ್ಲಿ ಸಬ್ ರಿಜಿಸ್ಟ್ರಾರ್‌ರವರ ಕಛೇರಿಯೂ ಸಹ ಒಂದೇ ಒಂದು ಇದೆ. ಆ ಕಛೇರಿಯಲ್ಲಿ ಕುಳಿತುಕೊಳ್ಳುವುದಕ್ಕೆ ಸರಿಯಾದ ಒಂದು ಕುರ್ಚಿ ಸಹ ಇಲ್ಲ. ಅಲ್ಲಿಗೆ ಫೋನ್ ಸಹ ಇಲ್ಲ. ಒಟ್ಟಿನಲ್ಲಿ ಯಾವುದೇ ರೀತಿಯಾದಂಥ ಸೌಕರ್ಯ ಆ ಸಬ್ ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎರಡು ವಿಚಾರವನ್ನು ಬಹಳ ಪ್ರಮುಖವಾಗಿ ಹೇಳಿದ್ದಾರೆ. 6 ಲಕ್ಷ ಜನ ಸಂಖ್ಯೆ ಇರತಕ್ಕಂತಹ ಕಡೆ ಒಬ್ಬರೇ ತಹಸೀಲ್ದಾರ್ ಇದ್ದಾರೆ, ಒಬ್ಬ ಸಬ್ ರಿಜಿಸ್ಟ್ರಾರ್ ಇದ್ದಾರೆ. ಇದರ ಕಡೆ ಸ್ವಲ್ಪ ಸರ್ಕಾರದವರು ಗಮನವನ್ನು ಕೊಡ-ಬೇಕು.

ಶ್ರೀ ಅಶೋಕ ಕಾಟ್ವೆ:- ಮಾನ್ಯ ಅಧ್ಯಕ್ಷರೆ, ಅದ್ದರಿಂದ ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಗಮನವನ್ನು ಹರಿಸಬೇಕು. ಇವತ್ತು ಸಭಾಧ್ಯಕ್ಷರು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದ-ಕ್ಕಾಗಿ ಅವರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಾಮನೂರು ಶಿವಶಂಕರಪ್ಪ (ದಾವಣಗೆರೆ):- ಮಾನ್ಯ ಅಧ್ಯಕ್ಷರೆ, ನಮ್ಮ ಸದನದ ಸದಸ್ಯರು ಈಗ ಸದನದಲ್ಲಿ ಬಹಳ ಕಡಿಮೆ ಜನರು ಇದ್ದಾರೆ, ನನಗೆ ಮಾತನಾಡಲು ಸ್ಫೂರ್ತಿ ಬರ-ಬೇಕು ಎಂದರೆ ನಮ್ಮ ಸಹ ಸದಸ್ಯರುಗಳು ಜಾಸ್ತಿ ಇದ್ದಾರೆ ಮಾತನಾಡಲಿಕ್ಕೆ ಚೆನ್ನಾಗಿರುತ್ತದೆ. ಆದುದ-ರಿಂದ ನಾನು ಮಾತನಾಡಲಿಕ್ಕೆ ನಾಳೆ ದಿವಸ ಅವಕಾಶವನ್ನು ಕೊಟ್ಟರೆ ನಾನು ಅರ್ಧ ಗಂಟೆಯಾದರೂ ಮಾತನಾಡಬೇಕೆಂದು ಇದ್ದೇನೆ.

ಶ್ರೀ ಜಿ.ಬಿ. ಶಿವಕುಮಾರ್:- ಅವರು ಹೇಳುತ್ತಿರುತ್ತಿರುವುದು ಆಗಬಹುದು ಅಧ್ಯಕ್ಷರೆ, ದಯ ಮಾಡಿ ನಾಳೆ ಇನ್ನು ಕೆಲವು ಜನರು ಮಾತನಾಡುವವರು ಇದ್ದಾರೆ.

ಅಧ್ಯಕ್ಷರು:- ಹೌದು ನಾಳೆ ಜನರೆಲ್ಲರಿಗೂ ಸ್ಫೂರ್ತಿ ಬರುವ ಹಾಗೆ ಮಾತನಾಡಿ, ಆದರೆ ನಾಳೆ ಮತ್ತೊಬ್ಬರು ಇದೇ ರೀತಿಯಲ್ಲಿ ಕೇಳಿದರೆ ಹೇಗೆ ಅವಕಾಶವನ್ನು ಮಾಡಿಕೊಡಲಿ? ಇವತ್ತಿಗೆ ಚರ್ಚೆ-ಯು ಮುಕ್ತಾಯವಾಗಬೇಕು, ನಾಳೆ ಉತ್ತರವನ್ನು ಕೊಡುವುದು ಇದೆ; ನೀವುಗಳು ಮಾತನಾಡುತ್ತೀ-ರೆಂದು ಪತ್ರಿಕೆಗಳವರು ಕಾಯುತ್ತಿದ್ದಾರೆ.

ಶ್ರೀ ಶಾಮನೂರು ಶಿವಶಂಕರಪ್ಪ:- ನಾಳೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಅಧ್ಯಕ್ಷರು:- ಆಯಿತು ಅವರೊಬ್ಬರಿಗೆ ಅವಕಾಶವನ್ನು ಮಾಡಿಕೊಡೋಣ. ಪುಟ್ಟೇಗೌಡರು ಮಾತನಾಡುವಂತಹ ವಿಚಾರಗಳನ್ನೆಲ್ಲವನ್ನೂ ಅವರು ನನ್ನ ಹತ್ತಿರ ಹೇಳಿದ್ದಾರೆ. ನಾನೇ ಬರೆದು ಕೊಡು-ತ್ತೇನೆ. ಶ್ರೀ ಶಿವಶಂಕರಪ್ಪನವರೇ, ನಾಳೆ ನಿಮ್ಮೊಬ್ಬರಿಗೆ ಅವಕಾಶವನ್ನು ಕೊಟ್ಟರೆ ವಿರೋಧಪಕ್ಷದ ಕಡೆ 2-3 ಜನರು ನಮಗೂ ನಾಳೆ ಅವಕಾಶವನ್ನು ಕೊಡಿ ಎಂದು ಕೇಳುತ್ತಾರೆ.

ಶ್ರೀ ಜಿ.ಬಿ. ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಒಂದು ಕೋರಿಕೆಯನ್ನು ನಿಮ್ಮ ಮುಂದೆ ಇಡುತ್ತೇನೆ. ನಾವುಗಳು ಆಗಲೇ ಪ್ರಸ್ತಾಪವನ್ನು ಮಾಡಿದ್ದೇನೆ. ಪ್ರತಿಯೊಂದು ಅಧಿವೇಶನದಲ್ಲಿಯೂ ಆಯಾಯ ಪಕ್ಷದವರು ಯಾರ್‍ಯಾರು ಇದರಲ್ಲಿ ಮಾತನಾಡುತ್ತಾರೆಂಬುದರ ಬಗ್ಗೆ ನಾವು ಪಟ್ಟಿಯನ್ನು ಮಾಡಿಕೊಂಡು ಬಂದಿಲ್ಲ. ಪಕ್ಷದ ಅಧ್ಯಕ್ಷರಾಗಿ ಮಾತನಾಡಲು ಹೆಚ್ಚಿನ ಅವಕಾಶ ಸಿಗುತ್ತದೆ. ಎಲ್ಲಾ ಪಕ್ಷದಲ್ಲಿಯೂ ಇರತಕ್ಕಂತಹ ಹೊಸ ಸದಸ್ಯರುಗಳಿಗೆ ಮಾತನಾಡಲು ತಾವೇ ಪ್ರೋತ್ಸಾಹವನ್ನು ಕೊಡುತ್ತಿದ್ದೀರಿ. ಅದೇ ರೀತಿಯಲ್ಲಿ ನನ್ನ ಪಕ್ಷದ ಸದಸ್ಯರುಗಳೂ ಸಹ ಮಾತನಾಡಬೇಕೆಂದು ಇಚ್ಛೆ-ಯನ್ನು ವ್ಯಕ್ತ ಮಾಡಿದ್ದಾರೆ. ನಾಳೆ ದಿವಸ ಪ್ರಶ್ನೋತ್ತರ ವೇಳೆಯು ಇಲ್ಲದೇ ಇರುವುದರಿಂದ ಮಧ್ಯಾಹ್ನ ಒಂದು ಗಂಟೆಯೊಳಗೆ ಚರ್ಚೆಯನ್ನೆಲ್ಲಾ ಮುಕ್ತಾಯ ಮಾಡಿ, ಸರ್ಕಾರದಿಂದ ಉತ್ತರವನ್ನು ಸಹ ಕೊಡಲಿಕ್ಕೆ ಸರಿಯಾಗಿರುತ್ತದೆ. ಆ ರೀತಿಯಾಗಿ ಮಾಡುವುದು ಹೆಚ್ಚು ಉತ್ತಮ ಎಂದು ತಮಗೆ ಸಲಹೆ-ಯನ್ನು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಮುಖ್ಯಮಂತ್ರಿಗಳಿಗೂ ಹುಷಾರ ಇಲ್ಲ. ಅವರೂ ಸಹ ಇಲ್ಲಿ ಇಲ್ಲ.

ಅಧ್ಯಕ್ಷರು:- ಅವರ ಆರೋಗ್ಯದ ವಿಚಾರದಲ್ಲಿರತಕ್ಕಂತಹ ಕಾಳಜಿ ನನಗೂ ಗೊತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವೇ ಇವತ್ತು ಮಾತನಾಡುವಾಗ ನೋಡಿದರಲ್ಲಾ. ಅವ-ರಿಗೆ ಮಾತನಾಡಲೂ ಕೂಡ ಸರಿಯಾಗಿ ಆಗುತ್ತಿರಲಿಲ್ಲ. ಅದಕ್ಕೆ ಶನಿವಾರ ಮತ್ತು ಭಾನುವಾರ ಅವ-ರಿಗೂ ಸ್ವಲ್ಪ ಟೈಮ್ ಸಿಗುತ್ತದೆ. ವಾರಮ್‌ಅಪ್ ಅಗಿ ಬರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬೇಕಾ-ದರೆ ಶನಿವಾರ ಉತ್ತರವನ್ನು ಕೊಟ್ಟು ಬೇರೆಯವರು ಸೋಮವಾರ ಕೊಡಲಿ. Monday, he can make a statement. ತಮಗೆ ಗೊತ್ತಿರುವಂತೆಯೇ 9 ಮಂತ್ರಿಗಳು ಉತ್ತರವನ್ನು ಕೊಡಬೇಕು. ಒಬ್ಬೊಬ್ಬ ಸಚಿವರು ಅರ್ಧ ಗಂಟೆಗಳ ಕಾಲಾವಕಾಶವನ್ನು ತೆಗೆದುಕೊಂಡರೂ 4½ ಗಂಟೆಯಾಗುತ್ತದೆ. ಮತ್ತು ಕ್ಲಾರಿಫಿಕೇಷನ್ ಕೇಳಿದರೆ 1½ ಗಂಟೆಯಾಗುತ್ತದೆ, ಹೀಗೆ ಒಟ್ಟು 6 ಗಂಟೆಯಾಗುತ್ತದೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):- ಮಾನ್ಯ ಮುಖ್ಯಮಂತ್ರಿಗಳು ಮದ್ರಾಸ್‌ಗೆ ಹೋಗಿ ಕಾವೇರಿ ನೀರಿನ ಬಗ್ಗೆ ಮಾತನಾಡಿ, ನಂತರ ಆಲಮಟ್ಟಿ ವಿಷಯದ ಬಗ್ಗೆ ಮಾತನಾಡಲು ದೆಹಲಿಗೆ ಬೇರೆ ಹೋಗಬೇಕು. ಸೋಮವಾರ, ಮಂಗಳವಾರ ಆಗುವುದಿಲ್ಲ.

ಅಧ್ಯಕ್ಷರು:- ನಾಳೆ ದಿವಸ ಒಂದು ಗಂಟೆಗಳ ಕಾಲ ಹೆಚ್ಚು ಸದನವನ್ನು ನಡೆಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದು ಬೆಳಿಗ್ಗೆ 9.30ಕ್ಕೆ ಸೇರೋಣ. ಮೊದಲ ಒಂದು ಗಂಟೆಗಳ ಕಾಲ ಬೇಡಿಕೆ ಮೇಲೆ ಚರ್ಚೆಯನ್ನು ಮಾಡೋಣ. ಇಬ್ಬರೇ ಮಾತನಾಡಬೇಕಾಗಿದೆ. 10 ನಿಮಿಷ ಅವಕಾಶವನ್ನು ಕೊಡುತ್ತೇನೆ. ಇದಕ್ಕೆ ಸಹಕರಿಸಬೇಕು. ವಿದ್ಯುಚ್ಛಕ್ತಿ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ ಆಮೇಲೆ ಸಂಸದೀಯ ವ್ಯವಹಾರ ಸಚಿವರು ನಾವು ವಿಚಾರದಲ್ಲಿ ಸದನದ ಸಮಿತಿಯನ್ನು ರಚಿಸಬೇಕಾಗಿದೆ, ತಾವು ಮತ್ತು ವಿರೋಧ ಪಕ್ಷದ ನಾಯಕರು ಮತ್ತು ಸಹ ಸದಸ್ಯರು ಸಹಕರಿಸಬೇಕು.

(8) ಮಂತ್ರಿಗಳ ಹೇಳಿಕೆ

ವಿಷಯ:- ವಿದ್ಯುತ್‌ದರ ಪರಿಷ್ಕರಣೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಈ ವಿದ್ಯುತ್ ದರವನ್ನು ಸರ್ಕಾರ 1.7.1996ರಿಂದ ಅದನ್ನು ಪರಿಷ್ಕರಣೆಯನ್ನು ಮಾಡಿ ಸುಮಾರು 25 ಪರ್ಸೆಂಟ್‌ನಿಂದ 43 ಪರ್ಸೆಂಟ್‌ವರೆಗೆ ಹೆಚ್ಚಿಸಿ ಆದೇಶವನ್ನು ಹೊರಡಿಸಿತ್ತು. ಇದರ ಬಗ್ಗೆ ಮಾನ್ಯ ಸದಸ್ಯರುಗಳು, ವಿರೋಧ ಪಕ್ಷದ ನಾಯಕರುಗಳು, ನಮ್ಮ ಪಕ್ಷದ ಸದಸ್ಯರುಗಳೂ ಕೂಡ ಇದು ಹೆಚ್ಚಾಯಿತು ಇದನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಒತ್ತಾಯ ಬಂದಿದ್ದರ ಹಿನ್ನೆಲೆಯಲ್ಲಿ ಸದನ ಸಮಿತಿಯನ್ನು ಮಾಡಬೇಕೆಂದು ತೀರ್ಮಾನವಾಗಿ ತಾವು ಮತ್ತು ವಿಧಾನ ಪರಿಷತ್ತಿನ ಸಭಾಪತಿಗಳು ಜಂಟಿ ಸದನ ಸಮಿತಿಯನ್ನು ರಚನೆಯನ್ನು ಮಾಡಿ, ದರ ಮೇರೆಗೆ ಅವರು ಒಂದು ವರದಿಯನ್ನು ಸದನ ಮುಂದೆ ಇಟ್ಟಿದ್ದಾರೆ. ನಾವು ಹೆಚ್ಚು ಮಾಡಿದಂತಹ ದರಗಳ ಬಗ್ಗೆ ಪೂರ್ಣವಾಗಿ ಪರಿಶೀಲನೆಯನ್ನು ಮಾಡಿ ಪರಿಷ್ಕರಣ ದರವನ್ನು ಕೊಟ್ಟಿದ್ದಾರೆ. ಸುಮಾರು 13 ಪರ್ಸೆಂಟ್‌ನಿಂದ 40 ಪರ್ಸೆಂಟ್‌ವರೆಗೆ ಬೇರೆ ರೀತಿಯಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದಾರೆ. ನಾವು ಸರ್ಕಾರದ ನಿರ್ಣಯದ ಪ್ರಕಾರ 873 ಕೋಟಿ ಒಂದು ವರ್ಷಕ್ಕೆ ಹೆಚ್ಚು ತರುವಂತಹ ರೀತಿಯಲ್ಲಿ ನಿರ್ಣಯವನ್ನು ಮಾಡಿದ್ದೆವು. ಈಗ ಸದನ ಸಮಿತಿಯವರು 243 ಕೋಟಿ ರೂಪಾಯಿಗಳನ್ನು ರಿಯಾಯಿತಿ ಕೊಟ್ಟಿದ್ದಾರೆ. ರೈತರಿಗೆ, ಗೃಹ ಬಳಕೆಯವರಿಗೆ, ಎ.ಇ.ಹೆಚ್. ಬಳಕೆದಾರರಿಗೆ, ಎಲ್.ಟಿ. ಉಪಯೋಗಿಸುವಂಥವರಿಗೆ, ಸಣ್ಣ ಕೈಗಾರಿಕೆಯವರಿಗೆ, ಮತ್ತು ಪಂಪ್ ಸೆಟ್‌ಗಳವರಿಗೆ ಎಲ್ಲರಿಗೂ ರೈತರು ಉಪಯೋಗಿಸುವಂತಹ ಪಂಪ್‌ಸೆಟ್‌ಗಳಿಗೆ ಒಂದು ಹೆಚ್.ಪಿ.ಗೆ ಸರ್ಕಾರದವರು ತೆಗೆದುಕೊಂಡಂತಹ ನಿರ್ಣಯ 300 ರೂಪಾಯಿಗಳು. ಆದರೆ ಸದನದ ಸಮಿತಿಯವರು ಅದನ್ನು 300 ರೂಪಾಯಿಗಳಿಂದ 100